₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 19.01.2025 ಸಂಪುಟ: 10 ಸಂಚಿಕೆ: 05 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಮಯಾಂಕ ಪಡೆ ಮುಡಿಗೆ ವಿಜಯ್ ಹಜಾರೆ ಟ್ರೋಫಿ
ಐದನೇ ಬಾರಿ ಟ್ರೋಫಿ ಗೆದ್ದ ಕರ್ನಾಟಕ ತಂಡ

ಮೈಸೂರು ವಿಶ್ವವಿದ್ಯಾಲಯದಲ್ಲಿ ಶನಿವಾರ ನಡೆದ 105ನೇ ಘಟಿಕೋತ್ಸವದಲ್ಲಿ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ, ಮಾಜಿ ಸಂಸದ ಎ.ಸಿ.ಷಣ್ಮುಗಂ ಹಾಗೂ ಉದ್ಯಮಿ ಶಾಹೀನ್ ಮಜೀದ್ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಪುಟ ತೆರೆದಂತೆ...

ಕೇವಲ ಒಬ್ಬ ಶಾಲಾ ಬಾಲಕಿಗಾಗಿ ಮೂರು ವರ್ಷ ಓಡಿದ ರೈಲು!
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6



ಉದಾರಚರಿತರ ಮಹೌದಾರ್ಯವೆಂದರೆ ಇದೇನಾ?
ವಿದ್ಯಮಾನ
ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ
ಸಂ.ಗಮ | 7

ದಾರಿದೀಪೋಕ್ತಿ

ಸುತ್ತಲಿನ ನೀರಿನಿಂದಾಗಿ ಹಡಗು ಮುಳುಗುವುದಿಲ್ಲ. ಆದರೆ ಸುತ್ತಲಿನ ನೀರು ಹಡಗಿನ ಒಳ ಸೇರಿದರೆ ಅದು ಮುಳುಗುತ್ತದೆ. ನಿಮ್ಮ ಸುತ್ತಲಿನ ಸಂಗತಿಗಳು ನಿಮ್ಮ ಭಾರವನ್ನು ಹೆಚ್ಚಿಸಿ ನಿಮ್ಮನ್ನು ಮುಳುಗಿಸದಂತೆ ಎಚ್ಚರವಹಿಸಬೇಕು.

ವಕ್ರತುಂಡೋಕ್ತಿ

ಬಾಸ್ ಚಿಕ್ಕ ಮಗು ಇದ್ದ ಹಾಗೆ. ಪ್ರತಿ ಅರ್ಧ ಗಂಟೆಗೊಮ್ಮೆ ಆಫೀಸಿನಲ್ಲಿ ಮಲಗಿರುವವರನ್ನು ಎಬ್ಬಿಸುತ್ತಲೇ ಇರುತ್ತಾನೆ.

ಖೊಖೊ ವಿಶ್ವಕಪ್: ಫೈನಲ್‌ಗೆ ಭಾರತ

ದೆಹಲಿ: ಭಾರತದ ಪುರುಷರ ಮತ್ತು ಮಹಿಳೆಯರ ತಂಡಗಳು ಇಲ್ಲಿ ನಡೆಯುತ್ತಿರುವ ಖೊಖೊ ವಿಶ್ವಕಪ್ ಟೂರ್ನಿಯಲ್ಲಿ ಫೈನಲ್ ಪ್ರವೇಶಿಸಿವೆ. ದೆಹಲಿಯ ಇಂದಿರಾ ಗಾಂಧಿ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸೆಮಿಫೈನಲ್‌ನಲ್ಲಿ ಪುರುಷರ ತಂಡವು ದಕ್ಷಿಣ ಆಫ್ರಿಕಾ ತಂಡವನ್ನು ಮಣಿಸಿತು. ಭಾರತದ ಮಹಿಳೆಯರ ತಂಡವು 66-16ರಿಂದ ದಕ್ಷಿಣ ಆಫ್ರಿಕಾ ತಂಡವನ್ನು ಸೋಲಿಸಿತು.

ವೈದ್ಯ ವಿದ್ಯಾರ್ಥಿನಿ ಕೊಲೆ: ರಾಯ್ ತಪ್ಪಿತಸ್ಥ

ಕೋಲ್ಕತ್ತ: ಆರ್.ಜಿ.ಕರ್ ವೈದ್ಯಕೀಯ ಆಸ್ಪತ್ರೆಯಲ್ಲಿ ವೈದ್ಯ ವಿದ್ಯಾರ್ಥಿನಿಯ ಮೇಲೆ ನಡೆದ ಅತ್ಯಾಚಾರ ಹಾಗೂ ಕೊಲೆ ಪ್ರಕರಣದಲ್ಲಿ ಸಂಜಯ್ ರಾಯ್ ತಪ್ಪಿತಸ್ಥ ಎಂದು ನ್ಯಾಯಾಲಯ ಶನಿವಾರ ತೀರ್ಪು ಪ್ರಕಟಿಸಿದೆ. ಸಿಯಾಲ್ದಾ ನ್ಯಾಯಾಲಯದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಅನಿರ್ಬನ್ ದಾಸ್ ಅವರು ಶನಿವಾರ ತೀರ್ಪು ನೀಡಿದ್ದು, ಶಿಕ್ಷೆಯ ಪ್ರಮಾಣವನ್ನು ಸೋಮವಾರ ಪ್ರಕಟಿಸಲಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ಡಿನ್ನರ್ ಬಳಿಕ ಕಾಂಗ್ರೆಸ್‌ನಲ್ಲಿ ದುಬೈ ಟೂರ್ ಪಾಲಿಟಿಕ್ಸ್



ವಿಜಯೇಂದ್ರ ಬಚ್ಚಾ: ರಮೇಶ್ ಜಾರಕಿಹೊಳಿ

ಬಿಜೆಪಿ ಬೇಗುದಿ ಏಕವಚನ ದಾಳಿ

ಅಧ್ಯಕ್ಷನಾಗಿ ಸುಡುಗಾಡೂ ಮಾಡಿಲ್ಲ: ಯತ್ನಾಳ್

● ವಿಶ್ವವಾಣಿ ಸುದ್ದಿಮನೆ

ಬೆಂಗಳೂರು: ರಾಜ್ಯ ಬಿಜೆಪಿಯಲ್ಲಿನ ಬಣ ಬಡಿದಾಟ ತಾರಕ್ಕೇರಿದ್ದು, ಭಿನ್ನ ಬಣದ ನಾಯಕರು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಏಕವಚನದಲ್ಲೇ ವಾಗ್ದಾಳಿ ಮುಂದುವರಿಸಿದ್ದಾರೆ.

'ರಮೇಶ ಜಾರಕಿಹೊಳಿ ಅವರು ಬಾಯಿ ಹಿಡಿತದಲ್ಲಿಟ್ಟುಕೊಳ್ಳಬೇಕು. ಹೀಗೆ ಬಹಿರಂಗವಾಗಿ ಮಾತನಾಡುವುದರಿಂದ ಯಡಿಯೂರಪ್ಪ ಅವರ ಲಕ್ಷಾಂತರ ಅಭಿಮಾನಿಗಳಿಗೆ ನೋವಾಗುತ್ತದೆ. ಕಾರ್ಯಕರ್ತರು ಅಸಮಾಧಾನಗೊಂಡರೆ ರಮೇಶ ಓಡಾಡುವುದೇ ಕಷ್ಟವಾಗುತ್ತದೆ' ಎಂದು ಹೇಳಿದ್ದ ವಿಜಯೇಂದ್ರ ವಿರುದ್ಧ ರಮೇಶ್ ಜಾರಕಿಹೊಳಿ ಏಕವಚನದಲ್ಲೇ ಹರಿಹಾಯ್ದಿದ್ದಾರೆ.

ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಅಂಕಲಗಿಯಲ್ಲಿ ಮಾತನಾಡಿದ ಅವರು, 'ನಾನು ನಿಮ್ಮಪ್ಪನ್ನೇ ಸಿಎಂ ಮಾಡೋದಕ್ಕೆ ಬಿಜೆಪಿಗೆ ಬಂದಿದ್ದು ವಿಜಯೇಂದ್ರಾ,' ಎಂದು ಹರಿಹಾಯ್ದಿದ್ದಾರೆ.

ವಿಜಯಪುರದಲ್ಲಿ ಮಾತನಾಡಿರುವ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, 'ವಿಜಯೇಂದ್ರ ಕಲೆಕ್ಷನ್ ಮಾಸ್ಟರ್, ರಾಜ್ಯಾಧ್ಯಕ್ಷರಾಗಿ ಸುಡುಗಾಡೂ ಮಾಡಿಲ್ಲ. ಧೀಮಂತ ಪೂಜ್ಯ ತಂದೆಯನ್ನು ಜೈಲಿಗೆ ಕಳುಹಿಸಿರುವ ಮಹಾನಾಯಕ' ಎಂದು ಬಸನಗೌಡ ಪಾಟೀಲ್ ಯತ್ನಾಳ್ ವಾಗ್ದಾಳಿ ನಡೆಸಿದ್ದಾರೆ.



ಶಿಕಾರಿಪುರಕ್ಕೆ ಬರುವೆ

'ವಿಜಯೇಂದ್ರ ನೀನು ಇನ್ನೂ ಬಚ್ಚಾ ಇದ್ದೀಯಾ ರಾಜ್ಯಾಧ್ಯಕ್ಷ ಆಗುವುದಕ್ಕೆ ನಿನಗೆ ಯೋಗ್ಯತೆಯಿಲ್ಲ. ಯಡಿಯೂರಪ್ಪ ಬಗ್ಗೆ ನನಗೆ ಈಗಲೂ ಗೌರವವಿದೆ. ಅಗೌರವದಿಂದ ಮಾತನಾಡಿಲ್ಲ, ಈಗಲೂ ಯಡಿಯೂರಪ್ಪ ನಮ್ಮ ನಾಯಕ. ವಿಜಯೇಂದ್ರ ನೀನೇ ಡೇಟ್ ಫಿಕ್ಸ್ ಮಾಡು, ನಾನು ಶಿಕಾರಿಪುರದಲ್ಲಿ ಪ್ರವಾಸ ಮಾಡುತ್ತೇನೆ. ನಿನ್ನ ಸವಾಲನ್ನು ನಾನು ಸ್ವೀಕಾರ ಮಾಡಿರುವೆ, ನಾನು ಬರುವಾಗ ಪೊಲೀಸರು, ಗನ್ ಮ್ಯಾನ್ ತರಲ್ಲ, ಒಬ್ಬನೆ ಬರುತ್ತೇನೆ, ತಾಕತ್ತಿದ್ದರೆ ತಡಿ ನೋಡೋಣ' ಎನ್ನುವ ಮೂಲಕ ವಿಜಯೇಂದ್ರಗೆ ರಮೇಶ್ ಜಾರಕಿಹೊಳಿ ಸವಾಲು ಹಾಕಿದ್ದಾರೆ.

ಚುನಾವಣೆ ತಯಾರಿ

ಬಿಜೆಪಿಯಲ್ಲಿ ಬಣ ಬಡಿದಾಟ ತಾರಕಕ್ಕೇರಿರುವ ನಡುವೆಯೇ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆಯಲಿದೆ. ಬೂತ್ ಸಮಿತಿ ಅಧ್ಯಕ್ಷದಿಂದ ರಾಜ್ಯ ಘಟಕದವರೆಗೂ ಚುನಾವಣೆ ನಡೆಯಲಿದೆ ಎಂದು ಕೇಂದ್ರ ಕೃಷಿ ಸಚಿವ ಹಾಗೂ ರಾಜ್ಯ ಬಿಜೆಪಿ ಆಂತರಿಕ ಚುನಾವಣೆ ಉಸ್ತುವಾರಿ ಶಿವರಾಜ್ ಸಿಂಗ್ ಚೌಹಾಣ್ ಹೇಳಿದ್ದಾರೆ. ಇದು ಬಿ.ವೈ.ವಿಜಯೇಂದ್ರ ಬಣದಲ್ಲಿ ತಳಮಳ ಸೃಷ್ಟಿಸಿದೆ. ಹೀಗಾಗಿ ಭಿನ್ನ ಬಣದಿಂದ ಸಮರ್ಥ ಅಭ್ಯರ್ಥಿಯನ್ನು ಕಣಕ್ಕಿಳಿಸಲು ಸಿದ್ಧತೆ ನಡೆದಿದೆ. ಈ ಕುರಿತು ಶುಕ್ರವಾರ ಮಾಜಿ ಶಾಸಕ ಕುಮಾರ ಬಂಗಾರಪ್ಪ ಅವರ ಮನೆಯಲ್ಲಿ ಯತ್ನಾಳ ಬಣದ ಸದಸ್ಯರು ಮಹತ್ವದ ಸಭೆ ನಡೆಸಿದ್ದಾರೆ. ಆದರೆ ಅಭ್ಯರ್ಥಿ ಯಾರಾಗಬೇಕು ಎಂಬ ಅಂತಿಮ ನಿರ್ಧಾರಕ್ಕೆ ಬಂದಿಲ್ಲ ಎಂದು ಮೂಲಗಳು ತಿಳಿಸಿವೆ. ಇನ್ನೊಂದೆಡೆ ವಿಜಯೇಂದ್ರ ಅವರನ್ನೇ ಮುಂದುವರಿಸಲು ಬಿವೈವಿ ಬಣ ಒತ್ತಾಯ ಮಾಡಿದೆ.

ನಾನು ಓಡಾಡುವುದಕ್ಕೆ ಆಗಲ್ಲ ಎಂದಿರುವೆ. ಆದರೆ, ನಿನ್ನನ್ನು ಓಡಾಟ ಮಾಡದ ಹಾಗೆ ಮಾಡುವ ತಾಕತ್ತಿದೆ. ಆದರೆ, ನಾನು ಹಾಗೆ ಮಾಡುವುದಿಲ್ಲ. ಇವತ್ತು ನಾನು ಯಡಿಯೂರಪ್ಪಗೆ ಸಲಹೆ ಕೊಡುವೆ. ಯಡಿಯೂರಪ್ಪ ನೀವು ವಿಜಯೇಂದ್ರ ಬೆನ್ನು ಹತ್ತಿ ಹಾಳಾಗುತ್ತಿದ್ದೀರಿ. ಒಳ್ಳೆಯ ಅಧ್ಯಕ್ಷರನ್ನು ನೇಮಕ ಮಾಡುವುದಕ್ಕೆ ಸಹಕಾರ ಕೊಡಿ, ಪದೇ ಪದೆ ಸೈಕಲ್ ನಲ್ಲಿ ಓಡಾಟ ಮಾಡಿದ್ದೇನೆ ಎನ್ನಬೇಡಿ. ಪಕ್ಷದಿಂದ ಅದರ ಸಾವಿರ ಪಟ್ಟು ಲಾಭ ಪಡೆದಿರುವಿರಿ.

- **ರಮೇಶ್ ಜಾರಕಿಹೊಳಿ**, ಶಾಸಕ

ರಮೇಶ ಜಾರಕಿಹೊಳಿ ಸೇರಿ 17 ಜನ ಬಿಜೆಪಿಗೆ ಬರದಿದ್ದರೆ ಯಡಿಯೂರಪ್ಪ ಸಿಎಂ ಆಗುತ್ತಿದ್ದರಾ ವಿಜಯೇಂದ್ರ ಅವರೇ? ಯಡಿಯೂರಪ್ಪ ಸಿಎಂ ಆಗಲು, ನೀವು ಇಷ್ಟು ದುಡ್ಡು ಮಾಡಲು ರಮೇಶ ಜಾರಕಿಹೊಳಿ ಅವರೇ ಕಾರಣ. ಅವರ ಬಗ್ಗೆ ಹಗುರವಾಗಿ ಮಾತನಾಡಬೇಡಿ. ಅವರು ಎಸ್‌ಟಿ ಸಮುದಾಯದ ನಾಯಕರು, ನೀರಾವರಿ ಮಂತ್ರಿಯಾಗಿ ಅವರು ಉತ್ತಮ ಕೆಲಸ ಮಾಡುತ್ತಿದ್ದರು. ಅವರನ್ನು ಬಲಿ ಕೊಡುವಲ್ಲಿ ನಿಮ್ಮ ಪಾಲು ಎಷ್ಟಿದೆ ಗೊತ್ತಿದೆ.

- **ಬಸನಗೌಡ ಯತ್ನಾಳ್**, ಶಾಸಕ

ರಾಜ್ಯದಲ್ಲಿ ಬಿಜೆಪಿಯನ್ನು ಕಟ್ಟಿ ಬೆಳೆಸಿದ ಪ್ರಮುಖರಲ್ಲಿ ಯಡಿಯೂರಪ್ಪ ಮೊದಲಿಗರು. ಅವರ ವಿರುದ್ಧ ರಮೇಶ ಜಾರಕಿಹೊಳಿ ಸೇರಿದಂತೆ ಯಾರೇ ಮಾತನಾಡಿದರೂ ನಾವು ಸುಮ್ಮನೆ ಕೂರುವುದಿಲ್ಲ. ಇದೇ ಕೊನೇ, ನಾಲಿಗೆ ಹರಿಬಿಟ್ಟರೆ ಹುಷಾರ್. ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರು ಸಮರ್ಥರಿದ್ದಾರೆ, ದುರ್ಬಲರಲ್ಲ. ವಿಜಯೇಂದ್ರ ಅವರನ್ನು ಪ್ರಶ್ನಿಸುವುದು ಎಂದರೆ ಪಕ್ಷದ ವರಿಷ್ಠರ ತೀರ್ಮಾನಕ್ಕೆ ಸವಾಲು ಹಾಕಿದಂತೆ ಎಂಬುದನ್ನು ತಿಳಿದುಕೊಳ್ಳಿ.

- **ರೇಣುಕಾಚಾರ್ಯ**, ಮಾಜಿ ಸಚಿವ

ಪಕ್ಷದ ಹಿರಿಯರು, ವರಿಷ್ಠರು ರಾಜ್ಯಾಧ್ಯಕ್ಷನಾಗಿ ಮಾಡಿದ್ದಾರೆ. ನಾನು ಜವಾಬ್ದಾರಿ ಸ್ವೀಕಸಿರಿದ ದಿನದಿಂದಲೂ ರಾಜ್ಯ ಸರಕಾರದ ವಿರುದ್ಧ ಸತತ ಹೋರಾಟ ಮಾಡುತ್ತಿದ್ದೇನೆ. ನನ್ನ ನೇತೃತ್ವದಲ್ಲಿ ಪಕ್ಷ ಸಂಘಟನೆ ಮಾಡುತ್ತಿರುವ ಬಗ್ಗೆ ಕಾರ್ಯಕರ್ತರಲ್ಲಿ ಸಮಾಧಾನ ಇದೆ. ಆದರೆ ನಮ್ಮ ಪಕ್ಷದ ಕೆಲ ಹಿರಿಯ ಮುಖಂಡರು ಅಲ್ಲೊಂದು ಇಲ್ಲೊಂದು ನನ್ನ ವಿರುದ್ಧ ಹೇಳಿಕೆ ಕೊಡುತ್ತಿದ್ದಾರೆ, ಇದನ್ನು ನಾನು ಇಲ್ಲ ಅಂತ ಹೇಳಲ್ಲ.

- **ವಿಜಯೇಂದ್ರ**, ಬಿಜೆಪಿ ರಾಜ್ಯಾಧ್ಯಕ್ಷ

ಸಂಶೋಧನಾ ವರದಿ ಶೀಘ್ರವೇ ಸುಪ್ರೀಂಕೋರ್ಟ್‌ಗೆ ಸಲ್ಲಿಕೆ: ಕೇಂದ್ರ ಸಚಿವ ಶಿವರಾಜ ಸಿಂಗ್ ಚೌಹಾಣ್

ಅಡಕೆ ಕ್ಯಾನ್ಸರ್‌ಗೆ ಕಾರಣವೇ ಅಲ್ಲ



ಶಿವಮೊಗ್ಗದ ಸಂತೆ ಮೈದಾನದಲ್ಲಿ ಸಾಗರ ಪ್ರಾಂತ್ಯ ಅಡಕೆ ಬೆಳೆಗಾರರ ಸಂಘ ಶನಿವಾರ ಹಮ್ಮಿಕೊಂಡಿದ್ದ ಅಡಕೆ ಬೆಳೆಗಾರರ ಸಮಾವೇಶದಲ್ಲಿ ಭಾಗವಹಿಸಿದ್ದ ಕೇಂದ್ರ ಸಚಿವ ಶಿವರಾಜ ಸಿಂಗ್ ಚೌಹಾಣ್ ಅವರು ಬೇಯಿಸಿದ ಅಡಕೆಯನ್ನು ಹೊರತೆಗೆದು ಪ್ರದರ್ಶಿಸಿದರು.

ಸಾಗರ: ಅಡಕೆ ಕ್ಯಾನ್ಸರ್‌ಕಾರಕ ಅಲ್ಲ. ಅಡಕೆ ಬಗ್ಗೆ ಗಾಳಿ ಸುದ್ದಿಗಳು ಹರಡಬಾರದು. ಅಡಕೆಗೆ ಕಲಬೆರಕೆ ಮಾಡಿದಾಗ ಕ್ಯಾನ್ಸರ್‌ಕಾರಕ ಆಗಬಹುದು. ಆದರೆ ಅಡಕೆಯೇ ಕ್ಯಾನ್ಸರ್‌ಕಾರಕ ಅಲ್ಲ. ಈ ಬಗ್ಗೆ ಅಧಿಕೃತ ಸಂಶೋಧನಾ ವರದಿಗಳು ಬಂದ ಮೇಲೆ ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗುವುದು ಎಂದು ಕೇಂದ್ರ ಕೃಷಿ, ರೈತರ ಕಲ್ಯಾಣ ಮತ್ತು ಗ್ರಾಮೀಣಾಭಿವೃದ್ಧಿ ಸಚಿವ ಶಿವರಾಜ ಸಿಂಗ್ ಚೌಹಾಣ್ ಭರವಸೆ ನೀಡಿದರು.

ಶಿವಮೊಗ್ಗದ ಸಂತೆ ಮೈದಾನದಲ್ಲಿ ಸಾಗರ ಪ್ರಾಂತ್ಯ ಅಡಕೆ ಬೆಳೆಗಾರರ ಸಂಘ ಶನಿವಾರ ಹಮ್ಮಿಕೊಂಡಿದ್ದ ಅಡಕೆ ಬೆಳೆಗಾರರ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಅಡಕೆ ಪುರಾತನ ಕಾಲದಿಂದಲೂ ಬಳಕೆಯಲ್ಲಿದೆ. ಅದು ಕ್ಯಾನ್ಸರ್‌ಕಾರಕ ಎಂಬ ಮಾತುಗಳು ಇತ್ತೀಚೆಗೆ ಕೇಳಿ ಬರುತ್ತಿವೆ. ವಿಶ್ವ ಆರೋಗ್ಯ ಸಂಸ್ಥೆ ನೀಡಿದ ವರದಿಯಲ್ಲೂ ಅದು ಪ್ರಸ್ತಾಪವಾಗಿದೆ. ಈ ಸಂಬಂಧ ಸುಪ್ರೀಂಕೋರ್ಟ್‌ನಲ್ಲಿ ಪ್ರಕರಣವಿದೆ. ಇದನ್ನೆಲ್ಲ ಮನಗಂಡ ಕೇಂದ್ರ ಸರಕಾರ, ದೇಶದ ಅತಿ ಉನ್ನತ 16 ಸಂಶೋಧನಾ ಕೇಂದ್ರಗಳಲ್ಲಿ ಅಡಕೆ ಬಗ್ಗೆ ಸಂಶೋಧನೆ ಮಾಡಿಸುತ್ತಿದೆ. ಸಂಶೋಧನಾ ಕೇಂದ್ರಗಳ ಬಗ್ಗೆಯೂ ಸರಕಾರ ತೀವ್ರ ಗಮನ ಹರಿಸಿದೆ. ಇವುಗಳಿಂದ ಸಕಾರಾತ್ಮಕ ವರದಿಗಳು ಬರುವುದು ಖಚಿತ. ಬಂದ ತಕ್ಷಣವೇ ಸುಪ್ರೀಂಕೋರ್ಟ್‌ಗೆ ಸಲ್ಲಿಸಲಾಗುವುದು ಎಂದರು. → 4

- ದೆಹಲಿಗೆ ಮರಳಿದ ನಂತರ ಸೀಮಾ ಶುಲ್ಕ ಮಂಡಳಿ ಜತೆ ಸಭೆ ನಡೆಸಿ, ಕಳ್ಳ ಮಾರ್ಗದಲ್ಲಿ ದೇಶದೊಳಗೆ ಅಡಿಕೆ ಸಾಗಣೆ ತಡೆಯಲು ಕಠಿಣ ಕ್ರಮ ಕೈಗೊಳ್ಳಲು ಸೂಚಿಸುವೆ.
- ಚುನಾವಣೆ ಸಂದರ್ಭದಲ್ಲಿ ರಾಜಕಾರಣ ಮಾಡೋಣ. ಅಡಿಕೆ ಬೆಳೆಗಾರರ ಸಂಕಷ್ಟ ಪರಿಹರಿಸಲು ರಾಜ್ಯ ಸರಕಾರವೂ ಕೈಜೋಡಿಸಲಿ.

ಅಡಕೆ ಪರ್ಯಾಯ ಬಳಕೆ ಇತ್ಯಾದಿ ಕುರಿತು ಇನ್ನಷ್ಟು ಸಂಶೋಧನೆಗಳು ಆಗಬೇಕಿದೆ. ಮುಂಬರುವ ಬಜೆಟ್‌ನಲ್ಲಿ ಇದಕ್ಕಾಗಿ ಹೆಚ್ಚಿನ ಅನುದಾನ ಮೀಸಲಿಡಲಾಗುವುದು. ಅಡಕೆ ಬೆಳೆಗಾರರ ಹಿತಕಾಪಾಡಲು ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟಾಗಿ ಕೆಲಸ ಮಾಡಬೇಕಿದೆ. ಈ ವರ್ಷ ಜಲಾನಯನ ಅಭಿವೃದ್ಧಿ ಕೆಲಸಗಳಿಗೆ ಕರ್ನಾಟಕಕ್ಕೆ ಹೆಚ್ಚುವರಿಯಾಗಿ 97 ಕೋಟಿ ರು. ಅನುದಾನ ನೀಡಲಾಗಿದೆ.

- **ಶಿವರಾಜ ಸಿಂಗ್ ಚೌಹಾಣ್**, ಕೇಂದ್ರ ಸಚಿವ

ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ವಿಷಯಕ್ಕೆ ಅಲ್ಪವಿರಾಮ

ಖರ್ಗೆ ವಾರ್ನಿಂಗ್: ಸಚಿವ, ಶಾಸಕರು ಗಪ್‌ಚುಪ್

ಬೆಂಗಳೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಎಚ್ಚರಿಕೆ ನೀಡಿದ ನಂತರ ಹುದ್ದೆ ಹಾಗೂ ಪಕ್ಷದ ರಾಜ್ಯಾಧ್ಯಕ್ಷರ ಬದಲಾವಣೆ ಸೇರಿದಂತೆ ಹಲವು ವಿಚಾರಗಳಲ್ಲಿ ಕಾಂಗ್ರೆಸ್ ನಾಯಕರು ನೀಡುತ್ತಿದ್ದ ಹೇಳಿಕೆಗಳಿಗೆ ತಡೆ ಬಿದ್ದಿದೆ.

ರಾಜ್ಯ ಕಾಂಗ್ರೆಸ್‌ನಲ್ಲಿನ ಬಣ ಬಡಿದಾಟವನ್ನು ಶಮನಗೊಳಿಸಲು ಪ್ರವೇಶ ಮಾಡಿದ್ದ ಖರ್ಗೆ ಅವರು 'ಬಾಯಿ ಮುಚ್ಚಿಕೊಂಡು ಕೆಲಸ ಮಾಡಿ, ಹೈಕಮಾಂಡ್ ಎಲ್ಲವನ್ನೂ ನೋಡಿಕೊಳ್ಳುತ್ತದೆ' ಎಂದು ಶುಕ್ರವಾರ ಹೇಳಿರುವ ಬೆನ್ನಲ್ಲೇ ಕಾಂಗ್ರೆಸ್ ಶಾಸಕರು, ಸಚಿವರು ಗಪ್‌ಚುಪ್ ಆಗಿದ್ದಾರೆ.

ಬೆಳಗಾವಿಯಲ್ಲಿ ಈ ಕುರಿತು ಮಾತನಾಡಿರುವ ಡಿಸಿಎಂ ಡಿ.ಕೆ.ಶಿವಕುಮಾರ್, ನನ್ನನ್ನೂ ಸೇರಿದಂತೆ ಎಲ್ಲರೂ ಬಾಯಿಗೆ ಬೀಗ ಹಾಕಿಕೊಳ್ಳಬೇಕು ಎಂದು ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದು, ಅವರ ಮಾರ್ಗದರ್ಶನದಲ್ಲಿ ನಡೆಯುತ್ತೇವೆ. ಮಲ್ಲಿಕಾರ್ಜುನ ಖರ್ಗೆ ಅವರು ನಮ್ಮ ರಾಷ್ಟ್ರೀಯ ನಾಯಕರು. ಅವರ ಹಾಗೂ ಪಕ್ಷದ ವರಿಷ್ಠರ ಮಾರ್ಗದರ್ಶನದಲ್ಲಿ ನಾವೆಲ್ಲರೂ ಕಾರ್ಯಕರ್ತರಾಗಿ ದುಡಿಯುತ್ತೇವೆ ಎಂದು ಸ್ಪಷ್ಟಪಡಿಸಿದ್ದಾರೆ.

ಸತೀಶ್ ಜಾರಕಿಹೊಳಿ ಸೇರಿದಂತೆ 30ಕ್ಕೂ ಹೆಚ್ಚು ಶಾಸಕರು ವಿದೇಶ ಪ್ರವಾಸಕ್ಕೆ ಹೋಗಲು ತಯಾರಿ ನಡೆಸಿದ್ದಾರೆ ಎಂಬ ವಿಷಯದ ಕುರಿತು ನನಗೆ ಹೆಚ್ಚು ತಿಳಿದಿಲ್ಲ. ನಾನು ಇದರ ಬಗ್ಗೆ ಮಾತನಾಡಲು ಹೋಗುವುದಿಲ್ಲ. ಏನಿದ್ದರೂ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಸಾಹೇಬರನ್ನು ಕೇಳಿ. ನನ್ನದೇನಿದ್ದರೂ ಸಮಾವೇಶ, ಪಕ್ಷ ಸಂಘಟನೆ.

- **ಡಿ.ಕೆ.ಶಿವಕುಮಾರ್** ಡಿಸಿಎಂ

ಸಚಿವ ಆರ್.ಬಿ.ತಿಮ್ಮಾಪುರ ಅವರ ದಲಿತ ಸಿಎಂ ಹೇಳಿಕೆ ಹಾಗೂ ಸಿದ್ದರಾಮಯ್ಯ ಅವರೇ ನಮ್ಮ ನಾಯಕರು ಎನ್ನುವ ಹೇಳಿಕೆ ಕುರಿತು ಮಾತನಾಡಿ, ಏನೇನೋ ಹೇಳುವ ನಿಮ್ಮ (ಮಾಧ್ಯಮ) ಮಾತುಗಳಿಗೆ ನಾನು ಉತ್ತರ ನೀಡಲು ಸಿದ್ಧನಿಲ್ಲ ಎಂದಿದ್ದಾರೆ.

ಪಕ್ಷ, ಪದವಿ ಹಾಗೂ ಡಿನ್ನರ್ ಪಾರ್ಟಿ ಸೇರಿದಂತೆ ಹಲವು ವಿಚಾರಗಳಿಗೆ ಪದೇ ಪದೆ ಮಾತನಾಡುತ್ತಿದ್ದ ಸಚಿವರಾದ ಡಾ.ಜಿ.ಪರಮೇಶ್ವರ, ಎಂ.ಬಿ.ಪಾಟೀಲ್, ಸತೀಶ್ ಜಾರಕಿಹೊಳಿ ಸೇರಿದಂತೆ ಹಲವರು ಮಲ್ಲಿಕಾರ್ಜುನ ಖರ್ಗೆ ಅವರ ಒಂದೇ ಎಚ್ಚರಿಕೆಗೆ ಸುಮ್ಮನಾಗಿದ್ದು, ಪಕ್ಷ ಸಂಘಟನೆಯತ್ತ ಗಮನಹರಿಸಿ ತಮ್ಮ ಕೆಲಸದಲ್ಲಿ ಸದ್ಯಕ್ಕೆ ಮಗ್ನರಾಗಿದ್ದಾರೆ.

ಕಪೋಲಕಲ್ಪಿತ ಪತ್ರಿಕೋದ್ಯಮ ಅಪಾಯ

ಪತ್ರಕರ್ತರ 39ನೇ ರಾಜ್ಯಮಟ್ಟದ ಸಮ್ಮೇಳನ ಉದ್ಘಾಟಿಸಿದ ಸಿಎಂ

ತುಮಕೂರು: ವಸ್ತು ಸ್ಥಿತಿ ಜತೆಗೆ ಮೌಲ್ಯಾಧಾರಿತ ಸುದ್ದಿ ಅಗತ್ಯವಾಗಿದ್ದು, ಕಪೋಲಕಲ್ಪಿತ ಪತ್ರಿಕೋದ್ಯಮ ಅಪಾಯಕಾರಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ನಗರದ ಸಿದ್ಧಾರ್ಥ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಕಾರ್ಯನಿರತ ಪತ್ರಕರ್ತರ ಸಂಘ ಆಯೋಜಿಸಿದ್ದ ರಾಜ್ಯ ಪತ್ರಕರ್ತರ 39ನೇ ರಾಜ್ಯಮಟ್ಟದ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ವಿಜ್ಞಾನ ಬೆಳವಣಿಗೆಯಾದಂತೆ ಮಾಧ್ಯಮ ಕೂಡ ಬೆಳವಣಿಗೆ ಕಾಣುತ್ತಿದೆ. ಅಮೆರಿಕದಲ್ಲಿ ಬೆಂಕಿ ಬಿದ್ದರೆ ತಕ್ಷಣ ಇಲ್ಲಿ ಸುದ್ದಿ ಬರುತ್ತದೆ. ಪತ್ರಿಕೋದ್ಯಮ ವೃತ್ತಿಯಾಗಿಯೇ ಉಳಿಯಬೇಕು. ಕೆಲ ವರ್ಷಗಳಿಂದ ಇದು ಉದ್ಯಮವಾಗಿಬಿಟ್ಟಿದೆ. ವೃತ್ತಿಯಾಗಿದ್ದಾಗ ದೇಶದ ಹಿತ, ಸಮಾಜದ ಹಿತ ಮುಖ್ಯವಾಗಿತ್ತು. ಉದ್ಯಮವಾದಾಗ ಅದ್ಯಾವುದೂ ಮುಖ್ಯವಾಗುವುದಿಲ್ಲ ಎಂದು ವಿಷಾದಿಸಿದರು. ವರದಿ ಪುಟ → 5



ರಾಜ್ಯ ಪತ್ರಕರ್ತರ 39ನೇ ರಾಜ್ಯಮಟ್ಟದ ಸಮ್ಮೇಳನವನ್ನು ಸಿಎಂ ಸಿದ್ದರಾಮಯ್ಯ ಉದ್ಘಾಟಿಸಿದರು. ಗೃಹ ಸಚಿವ ಡಾ.ಜಿ.ಪರಮೇಶ್ವರ, ಸಚಿವ ರಾಜಣ್ಣ, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಶಾಸಕರಾದ ಟಿ.ಬಿ.ಜಯಚಂದ್ರ, ಮಾಜಿ ಸಚಿವ ಸೊಗಡು ಶಿವಣ್ಣ ಮತ್ತಿತರರು ಇದ್ದರು.

ಸೋಮವಾರ ಟ್ರಂಪ್ ಪ್ರಮಾಣವಚನ | ಮೊದಲ ದಿನವೇ 10 ಆದೇಶಗಳಿಗೆ ಅಂಕಿತ ಸಾಧ್ಯತೆ

ನಾಳೆ ಟ್ರಂಪ್ 2.0 ಸರಕಾರ ಶುರು

ವಾಷಿಂಗ್ಟನ್: ಅಮೆರಿಕದ 47ನೇ ಅಧ್ಯಕ್ಷರಾಗಿ ಡೊನಾಲ್ಡ್ ಟ್ರಂಪ್ ಸೋಮವಾರ ಅಧಿಕಾರ ಸ್ವೀಕರಿಸಲಿದ್ದು, ಟ್ರಂಪ್ 2.0 ಸರಕಾರದ ಆರಂಭಕ್ಕೆ ಕ್ಷಣಗಣನೆ ಶುರುವಾಗಿದೆ.

ಮೊದಲ ಅಧಿಕಾರವಧಿಯಲ್ಲಿ ಪ್ರಮಾಣವಚನ ಸ್ವೀಕರಿಸಿದ ಮೊದಲ ದಿನ ಒಂದು ಆದೇಶಕ್ಕಷ್ಟೇ ಅಂಕಿತ ಹಾಕಿ ಜಾರಿಗೊಳ್ಳುವಂತೆ ಮಾಡಿದ್ದರು. ಈ ಬಾರಿ ಜ.20ರಂದು ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ಟ್ರಂಪ್ 10 ಮಹತ್ವದ ಆದೇಶಗಳನ್ನು ಹೊರಡಿಸಲಿದ್ದಾರೆ ಎಂದು ಹೇಳಲಾಗಿದೆ.

ಅವುಗಳಲ್ಲಿ ಬಹಳ ಮುಖ್ಯವಾಗಿರುವುದು ಜನನ ಮಾತ್ರದಿಂದಲೇ ನೀಡಲಾಗುತ್ತಿದ್ದ ಅಮೆರಿಕದ ಪೌರತ್ವ ನಿಯಮ ರದ್ದುಗೊಳಿಸುವ ಆದೇಶವಾಗಿದೆ. ಉಳಿದಂತೆ ಕ್ರಿಮಿನಲ್ ಹಿನ್ನೆಲೆಯವರ ಸಾಮೂಹಿಕ ಗಡಿಪಾರಿಗೆ ಆದೇಶ, ಮೆಕ್ಸಿಕೊ ಮತ್ತು ಕೆನಡಾ ದೇಶಗಳಿಂದ ಆಮದಾಗುವ ಸರಕುಗಳ ಮೇಲಿನ ಆಮದು ತೆರಿಗೆಯಲ್ಲಿ ಗಣನೀಯ ಏರಿಕೆ, ವಾಹನೋದ್ಯಮ ಕ್ಷೇತ್ರದಲ್ಲಿ 'ಮೇಡ್ ಇನ್ ಅಮೆರಿಕ' ನೀತಿ ಘೋಷಣೆ ಮೊದಲಾದ ಆದೇಶಗಳೂ ಸೇರಿವೆ. ರಷ್ಯಾ-ಉಕ್ರೇನ್ ನಡುವಿನ ಯುದ್ಧ ಕೊನೆಗೊಳಿಸುವ ಯತ್ನವೂ ಟ್ರಂಪ್ ಅವರ ಆದ್ಯತೆಯ ವಿಷಯಗಳಲ್ಲೊಂದಾಗಿದೆ.

ಜೋ ಬೈಡನ್ ಆಡಳಿತ ಜಾರಿಗೊಳಿಸಿದ್ದ 'ಜಂಡರ್ ಅಫರ್ಮಿಂಗ್ ಕೇರ್' ನೀತಿಯನ್ನು ರದ್ದುಗೊಳಿಸಲಾಗುವುದು ಎಂದು ಟ್ರಂಪ್ ಅದಾಗಲೇ ಹೇಳಿದ್ದಾರೆ. ಇದು ಎಲ್‌ಜಿಬಿಟಿಕ್ಯು ಪ್ಲಸ್ ಸಮುದಾಯದವರಲ್ಲಿ ಆತಂಕ ಮೂಡಿಸಿದೆ.

ಕ್ರೀಡಾ ಕ್ಷೇತ್ರಕ್ಕೆ ಸಂಬಂಧಿಸಿ ಮಹತ್ವದ ನಿರ್ಧಾರವೊಂದನ್ನೂ ಟ್ರಂಪ್ ಮೊದಲ ದಿನವೇ ಪ್ರಕಟಿಸುವ ಸಾಧ್ಯತೆ ಇದೆ. ಸಲಿಂಗಿಗಳು, ತೃತೀಯ ಲಿಂಗಿಗಳು ಇನ್ನು ಮುಂದೆ ಮಹಿಳಾ ವಿಭಾಗದಲ್ಲಿ ಸ್ಪರ್ಧೆ ಮಾಡಲು ಅವಕಾಶ ನೀಡುವುದಿಲ್ಲ ಎಂಬುದೂ ಟ್ರಂಪ್ ನಿರ್ಧಾರವಾಗಿದೆ. 'ಅಮೆರಿಕ ಫಸ್ಟ್' ಎಂಬುದು ಚುನಾವಣೆ ಪ್ರಚಾರ ಕಾಲದಲ್ಲೇ ಟ್ರಂಪ್ ಹೇಳುತ್ತಿದ್ದ ಮಾತು.

ಒಳಾಂಗಣದಲ್ಲಿ ಪ್ರಮಾಣವಚನ

ಜನವರಿ 20ರಂದು ವಾಷಿಂಗ್ಟನ್‌ನಲ್ಲಿ ವಿಪರೀತ ಚಳಿ ಇರಲಿದೆ ಎಂದು ಮುನ್ಸೂಚನೆ ಸಿಕ್ಕಿರುವ ಹಿನ್ನೆಲೆಯಲ್ಲಿ ಕ್ಯಾಪಿಟಲ್ ಕಟ್ಟಡದಲ್ಲಿ ಪ್ರಮಾಣವಚನ ಸ್ವೀಕರಿಸಲಿದ್ದಾರೆ. ಅಮೆರಿಕ ಅಧ್ಯಕ್ಷರ ಪದಗ್ರಹಣವು ಈ ರೀತಿ ಒಳಾಂಗಣದಲ್ಲಿ ಆಗುತ್ತಿರುವುದು 40 ವರ್ಷಗಳಲ್ಲಿ ಇದೇ ಮೊದಲು. 1985ರಲ್ಲೂ ರಿಪಬ್ಲಿಕನ್ ಪಕ್ಷದಿಂದ ಅಧ್ಯಕ್ಷರಾಗಿ ಚುನಾಯಿತರಾಗಿದ್ದ ರೊನಾಲ್ಡ್ ರೇಗನ್ ಅವರು ತೀವ್ರ ಚಳಿಯಿಂದಾಗಿ ಪದಗ್ರಹಣ ಕಾರ್ಯಕ್ರಮವನ್ನು ಸ್ಥಳಾಂತರಿಸಿದ್ದರು.

21ರಂದು ಕ್ವಾಡ್ ರಾಷ್ಟ್ರಗಳ ಸಭೆ

ಡೊನಾಲ್ಡ್ ಟ್ರಂಪ್ ಅವರು ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡ ಮರುದಿನ (ಜನವರಿ 21ರಂದು) ಕ್ವಾಡ್ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆ ನಡೆಯಲಿದೆ. ಇದು ವಿದೇಶಾಂಗ ನೀತಿಗೆ ಸಂಬಂಧಿಸಿದಂತೆ, ಹೊಸ ಸರಕಾರದ ಮೊದಲ ಕಾರ್ಯಕ್ರಮವಾಗಲಿದೆ. ಆಸ್ಟ್ರೇಲಿಯಾ, ಭಾರತ, ಜಪಾನ್ ಮತ್ತು ಅಮೆರಿಕ ಕ್ವಾಡ್ ಸದಸ್ಯ ರಾಷ್ಟ್ರಗಳಾಗಿವೆ.

ಬ್ರಾಹ್ಮಣ ಮಹಾಸಭಾದ ಸುವರ್ಣ ಸಂಭ್ರಮ ಸಮ್ಮೇಳನದಲ್ಲಿ ವಿಧುಶೇಖರ ಭಾರತೀ ಶ್ರೀ

ಹಿಂದೂಗಳಲ್ಲಿ ಏಕತೆ ಭಾವ ಇರಲಿ

ಬೆಂಗಳೂರು: ಸನಾತನ ಧರ್ಮವಾಗಿರುವ ಹಿಂದೂ ಧರ್ಮದಲ್ಲಿ ಏಕತೆಯ ಅಗತ್ಯವಿದೆ ಎಂದು ಶೃಂಗೇರಿ ಶಾರದಾ ಪೀಠಾಧ್ಯಕ್ಷರ ಶ್ರೀ ವಿಧುಶೇಖರ ಭಾರತೀ ಶ್ರೀಗಳು ಅಭಿಪ್ರಾಯಪಟ್ಟರು.

ಅರಮನೆ ಮೈದಾನದಲ್ಲಿ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸುವರ್ಣ ಸಂಭ್ರಮ ಸಮ್ಮೇಳನದಲ್ಲಿ ಮಾತನಾಡಿದ ಅವರು, ಐಕಮತ್ಯ ಕಾರ್ಯಕ್ರಮ ಬ್ರಾಹ್ಮಣ ಸಮಾಜದಲ್ಲಿ ಮಾತ್ರವಲ್ಲದೆ ಎಲ್ಲ ಧರ್ಮಗಳಲ್ಲಿ ನಿರಂತರವಾಗಿ ನಡೆಯುತ್ತಿರಬೇಕು. ಧರ್ಮ ಮತ್ತು ದೇಶ ಮನುಷ್ಯನ ಎರಡು ಕಣ್ಣಾಗಿರಬೇಕು. ಒಂದೇ ಕಣ್ಣಿನಿಂದ ಸಂಪೂರ್ಣವಾಗಿ ಎಲ್ಲವನ್ನೂ ನೋಡಲು ಆಗುವುದಿಲ್ಲ. ಧರ್ಮಕ್ಕಾಗಿ ಎಲ್ಲರೂ ಕಟಿಬದ್ಧರಾಗಿರಬೇಕು ಎಂದರು.

ಬ್ರಾಹ್ಮಣ ಸಮುದಾಯದಲ್ಲಿ ಹಲವು ಸಮಸ್ಯೆಗಳಿವೆ. ಧರ್ಮದ ವಿಶೇಷ ಆಚರಣೆಯ ಮೂಲಕ ಬ್ರಾಹ್ಮಣ್ಯದ ರಕ್ಷಣೆ ಮಾಡಿಕೊಳ್ಳಬೇಕಾಗಿದೆ. ಭೂಮಿಯ ಮೇಲೆ ಭಗವಂತ ದಶಾವತಾರ ತಾಳಿರುವ ಉದ್ದೇಶ ಧರ್ಮೋದ್ಧಾರವಾಗಿದೆ. ಆಯಾ ಕಾಲಘಟ್ಟದಲ್ಲಿ ರಾಮ, ಕೃಷ್ಣ, ನರಸಿಂಹ, ಗೋವಿಂದ ಹೀಗೆ ಹಲವು ಹೆಸರಿನ ಅವತಾರಗಳಲ್ಲಿ ಸನಾತನ ಕಾಲದಿಂದಲೂ ಧರ್ಮ ರಕ್ಷಣೆ ಮಾಡಿಕೊಂಡು ಭಗವಂತ ಬಂದಿದ್ದಾರೆ. ಅವರ ಮಾರ್ಗದಲ್ಲಿ ನಾವು ನಡೆದುಕೊಂಡು ಧರ್ಮಾಚರಣೆ, ಪರಂಪರೆ ಉಳಿಸಬೇಕು ಎಂದರು.



ಬೆಂಗಳೂರಿನ ಅರಮನೆ ಮೈದಾನದಲ್ಲಿ ಹಮ್ಮಿಕೊಂಡಿರುವ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸುವರ್ಣ ಸಂಭ್ರಮ ಸಮ್ಮೇಳನಕ್ಕೆ ಚಾಲನೆ ನೀಡಲಾಯಿತು.

ಬದುಕಿನ ಹೆಜ್ಜೆ ಸರಿಯಾಗಿರಬೇಕು ಎಂದರೆ ಧರ್ಮದ ಮಾರ್ಗದಲ್ಲಿ ನಡೆಯಬೇಕಾಗಿದೆ. ನಾವುಗಳು ಭೂಮಿಯ ಮೇಲೆ ಪಡುವ ಕಷ್ಟ ಕ್ಷಣಿಕ, ಮೋಕ್ಷದ ನಂತರ ಪಡೆಯುವ ಸುಖ ಶಾಶ್ವತವಾಗಿದೆ ಎಂಬುದನ್ನು ಎಲ್ಲರೂ ಅರಿತುಕೊಳ್ಳುವುದು ಅವಶ್ಯಕವಾಗಿದೆ.

- **ವಿಶ್ವಪ್ರಸನ್ನ ತೀರ್ಥರು** ಪೇಜಾವರ ಮಠ

ವಿವಿಧ ಕೃತಿಗಳ ಲೋಕಾರ್ಪಣೆ

ಅರಮನೆ ಮೈದಾನ ತ್ರಿಪುರವಾಸಿನಿ ಸಭಾಂಗಣದಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸುವರ್ಣ ಸಂಭ್ರಮ ಸಮ್ಮೇಳನದಲ್ಲಿ 'ಸಂಯುಕ್ತ ಕರ್ನಾಟಕ ಪತ್ರಿಕೆ' ಸಂಪಾದಕ ಮಹಾಬಲ ಸೀತಾಳಭಾವಿ ಅವರು ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ 'ಚಾಣಕ್ಯ ನೀತಿ' ಪುಸ್ತಕ ಸೇರಿದಂತೆ ಹಲವು ಲೇಖಕರ ಕೃತಿಗಳನ್ನು ಬಿಡುಗಡೆ ಮಾಡಲಾಯಿತು.

ಸಮಾಚಾರ ಸಣ್ಣದಲ್ಲ

ಸಿಇಟಿ ಪರೀಕ್ಷೆ ಪಠ್ಯಕ್ರಮ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು: ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕಾಗಿ 2025ನೇ ಸಾಲಿನಲ್ಲಿ ನಡೆಸುವ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಗೆ ಪಠ್ಯಕ್ರಮವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ವೆಬ್ ಸೈಟ್‌ನಲ್ಲಿ ಪ್ರಕಟಿಸಿದೆ. ಪ್ರಾಧಿಕಾರದ ಕಾರ್ಯ ನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಮಾತನಾಡಿ, ಪ್ರಥಮ ಮತ್ತು ದ್ವಿತೀಯ ಪಿಯುಸಿ ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಮತ್ತು ಜೀವವಿಜ್ಞಾನ ವಿಷಯಗಳ ಪಠ್ಯಕ್ರಮವನ್ನು ವೆಬ್ ಸೈಟ್‌ನಲ್ಲಿ ಹಾಕಿದ್ದು, ಅದನ್ನು ನೋಡಿಕೊಂಡೇ ಪರೀಕ್ಷೆಗೆ ತಯಾರಿ ನಡೆಸಿಕೊಳ್ಳಬೇಕು. ಎನ್‌ಸಿಇಆರ್‌ಟಿ ಪಠ್ಯಕ್ರಮ ಹಾಗೂ ಶಾಲಾ ಶಿಕ್ಷಣ (ಪಿಯು) ಇಲಾಖೆ ಪ್ರಕಟಿಸಿರುವ ಪಠ್ಯ ಪುಸ್ತಕಗಳನ್ನು ಆಧಾರವಾಗಿ ಇಟ್ಟುಕೊಂಡೇ ಈ ಪಠ್ಯಕ್ರಮ ರಚಿಸಲಾಗಿದೆ. ಇದನ್ನು ಪಿಯು ಕಾಲೇಜುಗಳ ವಿಷಯ ತಜ್ಞರಿಂದಲೂ ಪರಿಶೀಲನೆ ಮಾಡಿಸಲಾಗಿದೆ ಎಂದು ವಿವರಿಸಿದರು.

ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ದೂರದರ್ಶನ ಕೇಂದ್ರ ಹಿರಿಯ ಪ್ರತಿನಿಧಿ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ. ಪೂರ್ಣಾವಧಿ ಹಂಗಾಮಿಯಾಗಿ ಕಾರ್ಯ ನಿರ್ವಹಿಸಲು ನುರಿತ ಹಾಗೂ ಅನುಭವುಳ್ಳ ಅರ್ಹ ಅಭ್ಯರ್ಥಿಗಳು ಹಿಂದಿ ಹಾಗೂ ಇಂಗ್ಲೀಷ್ ನೈಪುಣ್ಯತೆಯೊಂದಿಗೆ ಕನ್ನಡ ಭಾಷೆಯ ಜ್ಞಾನ ಹೊಂದಿರಬೇಕು.ಅರ್ಜಿಗಳನ್ನು https://applications.prasarbharati.org ಜಾಲತಾಣದಲ್ಲಿ ಜ.30 ರೊಳಗೆ ಸಲ್ಲಿಸಲು ಕೊನೆ ದಿನಾಂಕ ಎಂದು ಬೆಂಗಳೂರು ದೂರದರ್ಶನ ಕೇಂದ್ರ, ಸುದ್ದಿ ವಿಭಾಗದ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರೇವಣ್ಣ ವಿರುದ್ಧ ಆರೋಪ ನಿಗದಿ ಬೇಡ

ಬೆಂಗಳೂರು: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರಿಂದ ಲೈಂಗಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ ಎನ್ನಲಾದ ಸಂತ್ರಸ್ತೆಯನ್ನು ಅಪಹರಣ ಆರೋಪ ಪ್ರಕರಣದಲ್ಲಿ ಶಾಸಕ ಎಚ್.ಡಿ.ರೇವಣ್ಣ ವಿರುದ್ಧ ದಾಖಲಾಗಿದ್ದ ಪ್ರಕರಣ ಸಂಬಂಧ ಜ. 30ರವರೆಗೂ ಆರೋಪ ನಿಗದಿ ಮಾಡದಂತೆ ಹೈಕೋರ್ಟ್ ನಿರ್ದೇಶನ ನೀಡಿದೆ. ಮಹಿಳೆ ಅಪಹರಣ ಆರೋಪ ಸಂಬಂಧ ಕೆ.ಆರ್.ನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣ ರದ್ದು ಕೋರಿ ರೇವಣ್ಣ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಪೀಠ ಈ ಸೂಚನೆ ನೀಡಿ ವಿಚಾರಣೆ ಮುಂದೂಡಿದೆ. ಅಲ್ಲದೆ, ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ ವಕೀಲರು, ಪ್ರಕರಣ ಸಂಬಂಧ ವಿಚಾರಣಾ ನ್ಯಾಯಾಲಯದಲ್ಲಿ ಆರೋಪ ನಿಗದಿ ಮಾಡುವ ಕುರಿತು ವಿಚಾರಣೆ ಆರಂಭವಾಗಿದೆ. ವಿಚಾರಣೆ ಮುಂದುವರಿಸಿದರೂ, ಆರೋಪ ನಿಗದಿ ಮಾಡದಂತೆ ಕೋರಿದ್ದಾರೆ. ಈ ಹಿನ್ನೆಲೆ ಜ. 30ರವರೆಗೂ ಆರೋಪ ನಿಗದಿ ಮಾಡದಂತೆ ಆದೇಶಿಸಿರುವುದಾಗಿ ತಿಳಿಸಿದೆ. ಸಂತ್ರಸ್ತೆಯ ಮಗ ನೀಡಿದ ದೂರಿನ ಮೇರೆ ಎಫ್‌ಐಆರ್ ದಾಖಲಾಗಿತ್ತು.

ಎಸ್‌ಐಟಿ ಅರ್ಜಿ ವಜಾ: ನಮ್ಮ ತಾಯಿ (ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆ) ರೇವಣ್ಣ ಮನೆಯಲ್ಲಿ 6 ವರ್ಷಗಳ ಕಾಲ ಕೆಲಸ ಮಾಡಿಕೊಂಡಿದ್ದರು. ಪ್ರಜ್ವಲ್ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಬಾಬಣ್ಣ ಎಂಬುವರು ರೇವಣ್ಣ ಅವರ ಸೂಚನೆ ಮೇರೆಗೆ ಅಪಹರಣ ಮಾಡಿದ್ದರು. ಅಲ್ಲದೆ ಪ್ರಜ್ವಲ್ ರೇವಣ್ಣ ಅವರಿಂದ ದೌರ್ಜನ್ಯಕ್ಕೆ ಒಳಗಾಗಿರುವ ಸಂಬಂಧ ತಾಯಿಯ ಕೆಲವು ವಿಡಿಯೊಗಳಲ್ಲಿ ವೈರಲ್ ಆಗಿರುವುದಾಗಿ ಸ್ನೇಹಿತರು ತಿಳಿಸಿದ್ದರು. ತಕ್ಷಣ ಬಾಬಣ್ಣ ಅವರಿಗೆ ಮನವಿ ಮಾಡಿ ತನ್ನ ತಾಯಿಯನ್ನು ವಾಪಸ್ ಕಳುಹಿಸುವಂತೆ ಮನವಿ ಮಾಡಲಾಗಿತ್ತು. ಆದರೆ, ಕಳುಹಿಸಿರಲಿಲ್ಲ ಎಂದು ಆರೋಪಿಸಿ 2024ರ ಮೇ 2 ರಂದು ಕೆ.ಆರ್.ನಗರದ ಪೊಲೀಸ್ ಠಾಣೆಗೆ ನೀಡಿರುವ ದೂರಿನಲ್ಲಿ ಉಲ್ಲೇಖಿಸಿದ್ದರು. ಪ್ರಕರಣ ಸಂಬಂಧ ವಿಚಾರಣಾ ನ್ಯಾಯಾಲಯ ರೇವಣ್ಣ ಅವರಿಗೆ ಮೇ 13ರಂದು ಜಾಮೀನು ಮಂಜೂರು ಮಾಡಿತ್ತು. ಜಾಮೀನು ರದ್ದು ಮಾಡುವಂತೆ ಕೋರಿ ವಿಶೇಷ ತನಿಖಾ ದಳ (ಎಸ್‌ಐಟಿ) ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿ ಆದೇಶಿಸಿತ್ತು.

ವಿರಾಮ
ಪ್ರತಿ ಭಾನುವಾರ

ವಿವಿ ಮರಗಳಿಗಿನ್ನು ಶುದ್ಧೀಕರಿಸಿದ ನೀರು!

ವೃಷಭಾವತಿ, ಬೆಂಗಳೂರು ವಿವಿ ತ್ಯಾಜ್ಯ ನೀರಿನ ಸಂಸ್ಕರಣೆಗೆ ಸಿದ್ಧತೆ। ಸಾವಿರಾರು ಮರಗಳಿರುವ ವಿವಿಯ ಬಯೋಪಾರ್ಕ್‌ಗೆ ನೀರು। ಈ ಸಂಬಂಧ ಜಲಮಂಡಳಿ ಹಾಗೂ ಬಿಬಿಎಂಪಿಗೆ ಪ್ರಸ್ತಾವನೆ ಸಲ್ಲಿಕೆ

ಅಪರ್ಣಾ. ಎ.ಎಸ್ ಬೆಂಗಳೂರು

ಸರಿ ಸುಮಾರು 900 ಎಕರೆ ವ್ಯಾಪ್ತಿಯಲ್ಲಿರುವ ಬೆಂಗಳೂರು ವಿಶ್ವವಿದ್ಯಾಲಯದ ಹಸಿರನ್ನು ಉಳಿಸಲು ಹಾಗೂ ಸಸ್ಯ, ಪ್ರಾಣಿ ಸಂಪತನ್ನು ಬೆಳೆಸುವ ನಿಟ್ಟಿನಲ್ಲಿ ಮತ್ತೊಂದು ಚಿಂತನೆಯನ್ನು ವಿಶ್ವವಿದ್ಯಾಲಯ ಅಧಿಕಾರಿಗಳು ಸಿದ್ಧತೆ ನಡೆಸಿದ್ದಾರೆ.

ಕೆಲ ತಿಂಗಳ ಹಿಂದೆ ಕಲುಷಿತ ವೃಷಭಾವತಿ ನದಿಯ ಸಂಸ್ಕರಿಸುವ ಯೋಜನೆ ಸಿದ್ಧಪಡಿಸಿದ್ದ ವಿವಿ ಇದೀಗ, ಈ ಸಂಸ್ಕರಿಸಿದ ನೀರನ್ನು ಬೆಂಗಳೂರು ವಿಶ್ವವಿದ್ಯಾಲಯದ ಮರ, ಗಿಡಗಳಿಗೆ ಬಳಸಿಕೊಳ್ಳುವ ಚಿಂತನೆ ನಡೆಸಿದೆ.

ಬೆಂಗಳೂರು ವಿವಿಯ ಹಲವು ಭಾಗದಲ್ಲಿ ಹರಿದು ಹೋಗುವ ವೃಷಭಾವತಿ ನೀರನ್ನು ಸಂಸ್ಕರಿಸಿ, ಬಳಿಕ ನೈಸರ್ಗಿಕವಾಗಿ 2ನೇ ಹಂತದಲ್ಲಿ ಸಂಸ್ಕರಿಸಿದ ಬಳಿಕ ಅದನ್ನು ಬೆಂಗಳೂರು ವಿಶ್ವವಿದ್ಯಾಲಯದ ಗಿಡ-ಮರಗಳಿಗೆ ನೀರುಣಿಸಲು ತೀರ್ಮಾನಿಸ ಲಾಗಿದೆ. ಕೇವಲ ವೃಷಭಾವತಿ ಮಾತ್ರವಲ್ಲದೇ, ವಿವಿಯಲ್ಲಿ ಉತ್ಪಾದನೆಯಾಗುವ ತ್ಯಾಜ್ಯ ನೀರನ್ನು ಸಂಸ್ಕರಿಸಲು ತೀರ್ಮಾನಿಸಲಾಗಿದೆ.

ಯಾವುದೇ ಚೆಕ್ ಡ್ಯಾಮ್‌ಗಳನ್ನು ನಿರ್ಮಿಸುವುದಕ್ಕಿಂತ ನಿರ್ವಹಣೆ ಮುಖ್ಯವಾಗುತ್ತದೆ. ನಿರ್ವಹಣೆ ಮಾಡದಿದ್ದರೆ, ನಿರ್ಮಿಸಿದ ಐದು ಹತ್ತು ವರ್ಷದಲ್ಲಿ ಹೂಳು ತುಂಬಿ, ಚೆಕ್ ಡ್ಯಾಮ್‌ಗಳು ಸಮತಟ್ಟಾಗುವ ಸಾಧ್ಯತೆಯಿರುತ್ತದೆ. ಈ ನಿಟ್ಟಿನಲ್ಲಿ ಜಲಮಂಡಳಿ ಹಾಗೂ ಬಿಬಿಎಂಪಿಯೊಂದಿಗೆ ಚರ್ಚಿಸಿ ಕ್ರಮವಹಿಸಲಾಗುವುದು.

-ಪ್ರೊ.ಅಶೋಕ್ ಡಿ.ಹಂಜರಗಿ
ಡೀನ್, ವಿಜ್ಞಾನ ವಿಭಾಗ, ಬೆಂಗಳೂರು ವಿವಿ, ನಿರ್ದೇಶಕರು ಪಿಎಂಇಬಿ



ಈ ಯೋಜನೆ ಯಶಸ್ವಿಯಾದರೂ ಕೂಡಾ ವೃಷಭಾವತಿಯ ನೀರನ್ನು ಕುಡಿಯಲು ಬಳಸಲಾಗುವುದಿಲ್ಲ. ಈ ನೀರನ್ನು ಕ್ಯಾಂಪಸ್‌ನಲ್ಲಿರುವ ಬಯೋಪಾರ್ಕ್‌ಗೆ ಬಳಸಲಾಗುವುದು. ಇದರಿಂದ ವಿವಿಯಲ್ಲಿ ಹಸಿರಿನ ಪ್ರಮಾಣವು ಹೆಚ್ಚಳವಾಗಲಿದೆ. ಬದಲಾಗಿ ಗಿಡಗಳಿಗೆ, ಶೌಚಾಲಯ ಸೇರಿದಂತೆ ಬಾಹ್ಯ ಬಳಕೆಗಾಗಿ ಉಪಯೋಗಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಲಮಂಡಳಿ ಹಾಗೂ ಬಿಬಿಎಂಪಿಗೆ ಪ್ರಸ್ತಾವನೆ: ಇನ್ನು ಸಂಸ್ಕರಣೆಗೆ ಸಂಬಂಧಿಸಿದಂತೆ ಈಗಾಗಲೇ ವಿಶ್ವವಿದ್ಯಾಲಯದ ವತಿಯಿಂದ ಬಿಬಿಎಂಪಿ ಆಯುಕ್ತರು ಹಾಗೂ ಜಲಮಂಡಳಿಯ ಅಧ್ಯಕ್ಷರಿಗೆ ಚೆಕ್‌ಡ್ಯಾಮ್‌ನಲ್ಲಿ ನೀರಿನ ಸಂಸ್ಕರಣೆ ಹಾಗೂ ಶುದ್ಧೀಕರಣದ ಯೋಜನೆಗೆ ಅನುಮತಿ ನೀಡುವಂತೆ ಹಾಗೂ ಬೆಂಗಳೂರು ವಿವಿ ಜತೆಗೆ ಕೈಜೋಡಿಸಿ ಈ ಯೋಜನೆಗೆ ಸಹಕಾರ ನೀಡಲು ತಂತ್ರಜ್ಞರ ಸಹಕಾರವನ್ನು ನೀಡುವಂತೆ ಪತ್ರ ಬರೆದು ಮನವಿ ಮಾಡಲಾಗಿದ್ದು, ಪ್ರತಿಕ್ರಿಯೆಗೆ ಕಾಯಲಾಗುತ್ತಿದೆ. ಅವರಿಂದ ಪ್ರತಿಕ್ರಿಯೆಗಾಗಿ ಸಲಹೆಗಾಗಿ ಕಾಯುತ್ತಿದ್ದೇವೆ. ಸಭೆ ನಡೆಸಿ ಕರೆದು ಎಂಪ್ರಿ, ಆರ್ಟ್ ಆಫ್ ಲಿವಿಂಗ್ ಹಾಗೂ ಬೆಂಗಳೂರು ವಿವಿ ಒಟ್ಟಾಗಿ ಜಲಮಂಡಳಿ ಹಾಗೂ ಬಿಬಿಎಂಪಿ ಅಧಿಕಾರಿಗಳ ಜತೆಗೆ ಈ ಯೋಜನೆಯ ಕುರಿತು ವಿವರವಾಗಿ ಚರ್ಚಿಸಿ ತರಬೇತಿ ಕಾರ್ಯಾಗಾರವನ್ನು ನಡೆಸಲು ಚಿಂತನೆ ನಡೆಸಿದ್ದೇವೆ. ವಿವಿಯಿಂದ ಯಾವುದೇ ಹಣಕಾಸಿನ ವ್ಯವಸ್ಥೆ ಬಳಸಿಕೊಳ್ಳಲಾಗುವುದಿಲ್ಲ. ಆರ್ಟ್ ಆಫ್ ಲಿವಿಂಗ್‌ನವರು ಸಹಾಯ ಹಸ್ತ ನೀಡುವ ಕುರಿತು ಹೇಳಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನೈಸರ್ಗಿಕವಾಗಿಯೇ ಸ್ವಚ್ಛಗೊಳಿಸುವ ಪ್ರಯತ್ನ

ಜ್ಞಾನ ಭಾರತಿ ಕ್ಯಾಂಪಸ್‌ನಲ್ಲಿ ವಿವಿಧ ಹಂತಗಳಲ್ಲಿ ನದಿ ನೀರನ್ನು ಸ್ವಚ್ಛಗೊಳಿಸಲು ಮುಂದಾಗಿದ್ದು, ಮೊದಲ ಹಂತದಲ್ಲಿ ಮೆಷ್ ನೆಟ್‌ಗಳನ್ನು ಬಳಸಿಕೊಂಡು ಘನತ್ಯಾಜ್ಯಗಳನ್ನು ತೆಗೆಯಲಾಗುವುದು, ಬಳಿಕ ಈ ನೀರನ್ನು ಸಣ್ಣ ಸಣ್ಣ ತಡೆಗೋಡೆಗಳ ಮಾದರಿಯನ್ನು ನಿರ್ಮಿಸಿದರೆ ಸಣ್ಣ ಪ್ರಮಾಣದಲ್ಲಿ ನೀರನ್ನು ಶುದ್ಧವಾಗುವುದು, ಕಲ್ಲು,ಮರಳುಗಳನ್ನು ಬಳಸಿಕೊಂಡು ಸ್ವಚ್ಛತೆಗೆ ಕೈಗೊಳ್ಳಲಾಗುವುದು. ಈ ವ್ಯವಸ್ಥೆಯ ಮೂಲಕ ನೀರನ್ನು ಸ್ವಚ್ಛಗೊಳಿಸಲಾಗುವುದು ಈ ಕುರಿತಂತೆ ಹಲವು ವಿಧಾನಗಳನ್ನು ಸಿದ್ಧಗೊಳಿಸಲಾಗುತ್ತಿದ್ದು, ಖರ್ಚು ವೆಚ್ಚಗಳ ಮೂಲದ ಕುರಿತು ಚಿಂತನೆ ನಡೆಸಲಾಗುತ್ತಿದೆ.

ತನ್ನದೇ ರಾಸಲೀಲೆ ವಿಡಿಯೊ ವೀಕ್ಷಿಸಿದ ಪ್ರಜ್ವಲ್ ರೇವಣ್ಣ

ಬೆಂಗಳೂರು: ಅತ್ಯಾಚಾರ ಪ್ರಕರಣ ಸಂಬಂಧ ಮುಚ್ಚಿದ ಕೋರ್ಟ್‌ನಲ್ಲಿ ಶನಿವಾರ ಹಾಸನದ ಮಾಜಿ ಸಂಸದ ಪ್ರಜ್ವಲ್ ರೇವಣ್ಣ, ಪ್ರಜ್ವಲ್ ವಕೀಲರು ಮತ್ತು ತಾಂತ್ರಿಕ ತಜ್ಞರ ತಂಡ ವಿಡಿಯೋವನ್ನು ವೀಕ್ಷಣೆ ಮಾಡಿದ್ದಾರೆ.

ಶನಿವಾರ ಬೆಳಗ್ಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಪರಪ್ಪನ ಅಗ್ರಹಾರ ಜೈಲಿನಿಂದ ಪ್ರಜ್ವಲ್ ಅವರನ್ನು ಪೊಲೀಸರು ಕರೆ ತಂದ ಬಳಿಕ ವಿಚಾರಣೆ ಆರಂಭವಾಯಿತು. ಈ ವೇಳೆ ಮಾಧ್ಯಮದವರಿಗೆ ಸುದ್ದಿಗಳನ್ನು ಪ್ರಕಟ ಮಾಡದಂತೆ ನಿರ್ದೇಶಿಸಬೇಕೆಂದು ಪ್ರಜ್ವಲ್ ಪರ ವಕೀಲ ಅರುಣ್ ಮನವಿ ಮಾಡಿದರು. ಇದಕ್ಕೆ ನ್ಯಾಯಧೀಶರು ಮಾಧ್ಯಮವರಿಗೆ ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಹೇಳಿದರು. ಈ ವೇಳೆ ಎಸ್‌ಪಿಪಿ ಮೀಡಿಯಾದವರು ಇಂಜಕ್ಷನ್ ತಂದಿರುವ ವಿಚಾರ ಕೋರ್ಟ್ ಗಮನಕ್ಕೆ ತಂದರು.

ನಂತರ ತಾಂತ್ರಿಕ ತಜ್ಞರು ಬಂದಿಲ್ಲ. ಹೀಗಾಗಿ ವಿಡಿಯೊ ವೀಕ್ಷಣೆಗೆ ಮತ್ತೊಂದು ದಿನಾಂಕ ನೀಡಬೇಕೆಂದು ಪ್ರಜ್ವಲ್ ಪರ ವಕೀಲ ಅರುಣ್ ಮನವಿ ಮಾಡಿದರು. ಇದಕ್ಕೆ ಗರಂ ಆದ ಜಡ್ಜ್, ಸಮಯ ವಿಸ್ತರಣೆ ಮಾಡಲು ಏನು ಮಾಡಬೇಕು ಅದನ್ನು ಮಾಡುತ್ತಾ ಇದ್ದೀರಿ ಎಂದರು. ಕೊನೆಗೆ ಪ್ರಜ್ವಲ್ ರೇವಣ್ಣ, ವಕೀಲರು ಮತ್ತು ತಾಂತ್ರಿಕ ತಜ್ಞರ ತಂಡ ಮುಚ್ಚಿದ ಕೋರ್ಟ್‌ನಲ್ಲಿ ವಿಡಿಯೊವನ್ನು ವೀಕ್ಷಣೆ ಮಾಡಲು ತೆರಳಿದರು. ಈ ವೇಳೆ ಎಸ್‌ಪಿಪಿ, ಪ್ರಕರಣದ ತನಿಖಾಧಿಕಾರಿ ಹೊರತು ಪಡಿಸಿ ಬೇರೆ ಯಾರಿಗೂ ಮುಚ್ಚಿದ ಕೋರ್ಟ್ ಒಳಗಡೆ ಪ್ರವೇಶಕ್ಕೆ ಅನುಮತಿ ನೀಡಲಿಲ್ಲ.

ಕಾನೂನು ಬದಲಾವಣೆ ಮಾಡಲು ಸಾಧ್ಯವಿಲ್ಲ

ತನ್ನ ಮೇಲೆ ದಾಖಲಾಗಿರುವ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಮುಖ ಸಾಕ್ಷಿಯಾಗಿರುವ ತನ್ನ 2,000 ವಿಡಿಯೊ ಹಾಗೂ 15 ಸಾವಿರ ಫೋಟೊಗಳು ಇರುವ ಮೊಬೈಲ್ ಅನ್ನು ವಾಪಸ್ ಕೊಡುವಂತೆ ಹಾಗೂ ಪ್ರಕರಣದಿಂದ ತನ್ನನ್ನು ಖುಲಾಸೆ ಮಾಡುವಂತೆ ಪ್ರಜ್ವಲ್ ರೇವಣ್ಣ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿ ವಿಚಾರಣೆ ನಡೆಸಿದ್ದ ಕೋರ್ಟ್, ಇತರೇ ಮಹಿಳೆಯರ ಖಾಸಗಿತನ ಉಲ್ಲಂಘಿಸುವ ದಾಖಲೆಗಳು ನಿಮಗೆ ಏಕೆ ಬೇಕು? ಎಲ್ಲವೂ ಅಶ್ಲೀಲವಾಗಿದೆ. ಅಶ್ಲೀಲತೆಗೆ ಒಂದು ಮಿತಿ ಇರಬೇಕು ಎಂದು ಅಭಿಪ್ರಾಯಪಟ್ಟು ಚಾಟಿ ಬೀಸಿತ್ತು. ಮೊಬೈಲ್ ಕೊಡಲಾಗುವುದಿಲ್ಲ. ಆದರೆ ನಿಮ್ಮ ವಿಡಿಯೊ ಹಾಗೂ ಫೋಟೊಗಳನ್ನು ಕೋರ್ಟ್‌ನಲ್ಲಿಯೇ ವೀಕ್ಷಣೆ ಮಾಡುವುದಕ್ಕೆ ಅವಕಾಶ ನೀಡಲಾಗುವುದು. ಪ್ರಕರಣ ದಾಖಲು ಮಾಡಿದವರ ವಿಡಿಯೊ ಮಾತ್ರ ನೀಡಿ ಎಂದು ಕೋರ್ಟ್ ಸೂಚಿಸಿತ್ತು. ಮಹಿಳೆಯರ ಖಾಸಗಿತನ ಗೌರವಿಸುವುದು ಎಲ್ಲರ ಕರ್ತವ್ಯ. ಪ್ರಜ್ವಲ್ ರೇವಣ್ಣ ಅಂದ ಕೂಡಲೇ ಕಾನೂನು ಬದಲಾವಣೆ ಮಾಡಲು ಸಾಧ್ಯವಿಲ್ಲ ಎಂದು ಅಭಿಪ್ರಾಯಪಟ್ಟ ಕೋರ್ಟ್ ಈ ಅರ್ಜಿಯನ್ನು ಇತ್ಯರ್ಥ ಮಾಡಿತ್ತು.

ಬಿಬಿಎಂಪಿ ಶಾಲಾ ಮಕ್ಕಳಿಗೆ ಹೆಲ್ಮೆಟ್ ವಿತರಣೆ

ಬೆಂಗಳೂರು: ಬಿಬಿಎಂಪಿ ಶಾಲಾ ಮಕ್ಕಳಿಗೆ ಸುರಕ್ಷತೆ ಕುರಿತು ಜಾಗೃತಿ ಮೂಡಿಸುವುದರ ಜತೆಗೆ 10ನೇ ತರಗತಿ ವಿದ್ಯಾರ್ಥಿಗಳಿಗೆ ಹೆಲ್ಮೆಟ್ ವಿತರಣೆ ಮಾಡಲಾಯಿತು. ಪಿಳ್ಳಣ್ಣ ಗಾರ್ಡನ್‌ನಲ್ಲಿರುವ ಬಿಬಿಎಂಪಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಹಮಿಕೊಳ್ಳಲಾಗಿದ್ದ ಅಂತರ ಶಾಲಾ ವಿಜ್ಞಾನ ಪ್ರದರ್ಶನದಲ್ಲಿ ಸ್ವಯಂ ಸೇವಾ ಸಂಘಟನೆ ವತಿಯಿಂದ ಬಿಬಿಎಂಪಿ ಶಾಲೆಯಲ್ಲಿ 10 ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಹೆಲ್ಮೆಟ್ ವಿತರಿಸಲಾಯಿತು. ಜತೆಗೆ ದ್ವಿಚಕ್ರ ವಾಹನ ಚಲಾಯಿಸುವ ಮತ್ತು ಸವಾರಿ ಮಾಡುವಾಗ ಕಡ್ಡಾಯವಾಗಿ ಹೆಲ್ಮೆಟ್ ಧರಿಸಬೇಕು ಮತ್ತು ಟ್ರಾಫಿಕ್ ನಿಯಮಗಳನ್ನು ಪಾಲಿಸಬೇಕು ಹಾಗೂ ಕೆಂಪುದೀಪ ತೋರಿದಾಗ ವಾಹನ ನಿಲ್ಲಸಬೇಕು, ಹಸಿರು ದೀಪ ತೋರಿದಾಗ ವಾಹನ ಸಾಗಬೇಕು ಎಂದು ಅರಿವು ಮೂಡಿಸಲಾಯಿತು. ಪೂರ್ವ ವಲಯ ಸಹಾಯಕ ವಿದ್ಯಾಧಿಕಾರಿ ಎಚ್.ಜೆ. ಕುಮಾರ್, ಪ್ರಾಂಶುಪಾಲ ಸೋಮಶೇಖರ್ ಎನ್. ಎಸ್, ಚೈಲ್ಡ್ ರೈಟ್ಸ್ ಆಂಡ್ ಯೂ ಸಾಮಾಜಿಕ ಸೇವಾ ಸಂಘಟನೆ ಪದಾಧಿಕಾರಿಗಳು ಇದ್ದರು.

ಆತ್ಮಹತ್ಯೆ ಕಥೆ ಕಟ್ಟಿದ್ದ ಪ್ರಿಯಕರನ ಬಂಧನ

ಬೆಂಗಳೂರು: ಬೇರೊಬ್ಬನೊಂದಿಗೆ ವಿವಾಹಕ್ಕೆ ಸಿದ್ಧವಾಗಿದ್ದ ಪ್ರಿಯತಮೆ ಹತ್ಯೆ ಮಾಡಿ ತಾನೂ ಸಹ ಆತ್ಮಹತ್ಯೆಗೆ ಯತ್ನಿಸಿದ್ದ ವ್ಯಕ್ತಿಯನ್ನು ಎಚ್‌ಎಎಲ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡಿಸೆಂಬರ್ 31ರಂದು ಕುಂದಲಹಳ್ಳಿಯ ದೀಪಂ ನಿವಾಸ್ ಅಪಾರ್ಟ್‌ಮೆಂಟ್‌ನಲ್ಲಿ ನಡೆದಿದ್ದ ಉಜ್ಮಾ ಖಾನ್ (45) ಎಂಬ ಮಹಿಳೆಯ ಹತ್ಯೆ ಮಾಡಿದ ಆರೋಪದ ಮೇಲೆ ಆಕೆಯ ಪ್ರಿಯಕರ ಇಮಾದ್ ಬಾಷಾ ಎಂಬಾತನನ್ನು ಬಂಧಿಸಲಾಗಿದೆ ಎಂದು ವೈಟ್‌ಫೀಲ್ಡ್ ವಿಭಾಗದ ಡಿಸಿಪಿ ಡಾ.ಶಿವಕುಮಾರ್ ಗುಣಾರೆ ಮಾಹಿತಿ ನೀಡಿದ್ದಾರೆ.

ಏನಿದು ಪ್ರಕರಣ..?: ಹತ್ಯೆಯಾದ ಉಜ್ಮಾ ಖಾನ್ ಹಾಗೂ ಆರೋಪಿ ಇಮಾದ್ ಬಾಷಾ ಸಂಬಂಧಿಕರಾಗಿದ್ದು, ಇಬ್ಬರಿಗೂ ಬೇರೆ ಬೇರೆ ಮದುವೆಯಾಗಿತ್ತು. ಮುಂಬೈನಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದ ಇಮಾದ್, 2017ರಲ್ಲಿ ಹೆಂಡತಿಯನ್ನು ತೊರೆದು ಬೆಂಗಳೂರಿಗೆ ಬಂದಿದ್ದ. ಇತ್ತ ಗಂಡನನ್ನು ತೊರೆದಿದ್ದ ಉಜ್ಮಾ, ಇಮಾದ್‌ನನ್ನು ಪ್ರೀತಿಸಲಾರಂಭಿಸಿದ್ದಳು. ಆರಂಭದಲ್ಲಿ ಥಣಿಸಂದ್ರದ ಅಪಾರ್ಟ್‌ಮೆಂಟ್‌ನಲ್ಲಿ ಪ್ರತ್ಯೇಕ ಫ್ಲ್ಯಾಟ್‌ನಲ್ಲಿ ಇಮಾದ್ ಹಾಗೂ ಉಜ್ಮಾ ವಾಸವಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆಯ ಮೊಬೈಲ್ ಕ್ಲೋನ್ ಮಾಡಿದ್ದ ಆರೋಪಿ: 10 ತಿಂಗಳ ಬಳಿಕ ಮತ್ತೆ ಮುಂಬೈಗೆ ವಾಪಸಾಗಲು ನಿರ್ಧಾರ ಮಾಡಿದ್ದ ಇಮಾದ್, ಎರಡೂ ಫ್ಲ್ಯಾಟ್ ಖಾಲಿಮಾಡಿದ್ದ. ಹೀಗಾಗಿ, ಉಜ್ಮಾ ಎಚ್‌ಬಿಆರ್ ಲೇಔಟ್‌ನಲ್ಲಿರುವ ತನ್ನ ತಾಯಿಯ ಮನೆ ಸೇರಿಕೊಂಡಿದ್ದಳು. ಇದಾದ ಕೆಲ ತಿಂಗಳುಗಳ ಬಳಿಕ ಪುನಃ ಬೆಂಗಳೂರಿಗೆ ಮರಳಿದ್ದ ಇಮಾದ್, ಕುಂದಲಹಳ್ಳಿಯ ದೀಪಂ ನಿವಾಸ್ ಅಪಾರ್ಟ್‌ಮೆಂಟ್‌ನಲ್ಲಿ ವಾಸಿಸಲಾರಂಭಿಸಿದ್ದ. ಉಜ್ಮಾ ಸಹ ಆಗಾಗ ಇಮಾದ್ ಮನೆಗೆ ಬಂದು ಹೋಗಿ ಬರುತ್ತಿದ್ದಳು. ಆದರೆ, 2024ರಲ್ಲಿ ಉಜ್ಮಾಗೆ ಬೇರೊಂದು ಮದುವೆ ಮಾಡಲು ನಿರ್ಧರಿಸಿದ್ದರು. ಮೊದಲೇ ಉಜ್ಮಾಳ ಮೊಬೈಲ್ ಫೋನ್ ಕ್ಲೋನ್ ಮಾಡಿಕೊಂಡಿದ್ದ ಇಮಾದ್‌ಗೆ ಈ ವಿಚಾರಗಳು ಗೊತ್ತಾಗಿದ್ದವು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪ್ರಿಯಕರನೊಂದಿಗೆ ಹೊಸ ವರ್ಷಾಚರಣೆಗೆ ಹೋದವಳ ಹತ್ಯೆ

ಘಟನೆ ವಿವರ: 2024ರ ಡಿಸೆಂಬರ್ 31ರಂದು ತಾನೇ ಮಾಡಿರುವ ಅಡುಗೆಯ ಫೋಟೋವನ್ನು ಉಜ್ಮಾಳಿಗೆ ಕಳಿಸಿದ್ದ ಇಮಾದ್, ಆಕೆಯನ್ನು ತನ್ನ ಮನೆಗೆ ಆಹ್ವಾನಿಸಿದ್ದ. ಕೊನೆಯದಾಗಿ THAT LOOKS SIZZLING ಎಂದು ಮೆಸೇಜ್ ಮಾಡಿದ್ದ ಉಜ್ಮಾ, ರಾತ್ರಿ 9.30ರ ಸುಮಾರಿಗೆ ಇಮಾದ್‌ನ ಮನೆ ತಲುಪಿದ್ದಳು. ರಾತ್ರಿ 12:30ರ ಸುಮಾರಿಗೆ ಮನೆಯಲ್ಲಿ ಗಲಾಟೆಯ ಸದ್ದು ಕೇಳಿದ್ದ ಅಪಾರ್ಟ್‌ಮೆಂಟ್‌ನ ಸೆಕ್ಯೂರಿಟಿ ಗಾರ್ಡ್ ಬಂದು ಬಾಗಿಲು ಬಡಿದಾಗ ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಆದರೆ ಜನವರಿ 1ರಂದು ಮಧ್ಯಾಹ್ನ 12 ಗಂಟೆ ಸುಮಾರಿಗೆ 'ನಮ್ಮ ಎರಡನೇ ಮದುವೆಗೆ ನನ್ನ ಮೊದಲ ಪತ್ನಿ ಅಡ್ಡ ಬರುತ್ತಿದ್ದಾಳೆ, ಹೀಗಾಗಿ ನಾವಿಬ್ಬರೂ ಆತ್ಮಹತ್ಯೆಗೆ ಶರಣಾಗುತ್ತಿದ್ದೇವೆ ಎಂದು ಸಂಬಂಧಿಕರಿಗೆ ಇಮಾದ್ ಸಂದೇಶ ಕಳುಹಿಸಿದ್ದ. ತಕ್ಷಣ ಆತನ ಸಂಬಂಧಿ ಪೊಲೀಸ್ ಸಹಾಯವಾಣಿಗೆ ಕರೆಮಾಡಿ ವಿಷಯ ತಿಳಿಸಿದ್ದರು. ಮಧ್ಯಾಹ್ನ 1 ಗಂಟೆಯ ಸುಮಾರಿಗೆ ಎಚ್‌ಎಎಲ್ ಠಾಣೆ ಪೊಲೀಸರು ಸ್ಥಳಕ್ಕೆ ತೆರಳಿ ನೋಡಿದಾಗ ಉಜ್ಮಾ ಖಾನ್ ಮೃತಪಟ್ಟಿದ್ದಳು. ಅಸ್ವಸ್ಥನಾಗಿದ್ದ ಇಮಾದ್‌ನನ್ನು ತಕ್ಷಣ ಪೊಲೀಸರು ಆಸ್ಪತ್ರೆಗೆ ದಾಖಲಿಸಿದ್ದರು.

ಎಚ್‌ಎಎಲ್ ಠಾಣೆ ಪೊಲೀಸರು ಅಸಹಜ ಸಾವು ಪ್ರಕರಣ ದಾಖಲಿಸಿಕೊಂಡು ಪರಿಶೀಲಿಸಿದಾಗ ಉಜ್ಮಾ ಖಾನ್ ಮೃತಪಟ್ಟು ಅದಾಗಲೇ 10ರಿಂದ 12 ಗಂಟೆ ಆಗಿದೆ ಎಂಬುದು ತಿಳಿದು ಬಂದಿತ್ತು. ಅಲ್ಲದೆ, ಆಕೆಯ ಮೊಬೈಲ್ ಫೋನ್‌ನಲ್ಲಿದ್ದ ಕೆಲ ಚಾಟ್ ಹಿಸ್ಟರಿ ಸಹ ಡಿಲೀಟ್ ಮಾಡಲಾಗಿತ್ತು. ಅನುಮಾನಗೊಂಡ ಪೊಲೀಸರು ಇಮಾದ್‌ನನ್ನು ತೀವ್ರ ವಿಚಾರಣೆಗೊಳಪಡಿಸಿದಾಗ ಹತ್ಯೆಯ ಕಹಾನಿ ಬಯಲಾಗಿದೆ. ಉಜ್ಮಾ ಖಾನ್ ಮದುವೆಯ ವಿಚಾರ ತಿಳಿದು ಹತ್ಯೆ ಮಾಡಿರುವುದಾಗಿ ಆಕೆಯ ಕುಟುಂಬಸ್ಥರು ಎಚ್‌ಎಎಲ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಇಮಾದ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಉಜ್ಮಾಳ ಸಾವಿಗೆ ನಿಖರ ಕಾರಣವೇನು ಎಂಬುದು ಮರಣೋತ್ತರ ಪರೀಕ್ಷೆಯ ವರದಿಯ ಬಳಿಕ ತಿಳಿಯಬೇಕಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಡ್ರಗ್ಸ್ ಪೆಡ್ಲರ್ ವಿಡಿಯೊ ಸೆರೆಹಿಡಿದ ವಕೀಲನಿಗೆ ಜೀವ ಬೆದರಿಕೆ: ಎಫ್‌ಐಆರ್

ಬೆಂಗಳೂರು: ಮಾದಕವಸ್ತುಗಳನ್ನು ಸೇವಿಸಿ ಸಾರ್ವಜನಿಕ ಸ್ಥಳಗಳಲ್ಲಿ ಅಸಭ್ಯವಾಗಿ ವರ್ತನೆ ಮಾಡುತ್ತಿದ್ದ ಗುಂಪಿನ ವಿಡಿಯೊ ಸೆರೆಹಿಡಿದು ಸಾಮಾಜಿಕ ಜಾಲತಾಣಗಳ ಮೂಲಕ ಪೊಲೀಸರಿಗೆ ದೂರು ಸಲ್ಲಿಸಿದ್ದ ವಕೀಲ ಹುಸೇನ್ ಉವೈಸ್‌ಗೆ ದುಷ್ಕರ್ಮಿಗಳು ಜೀವ ಬೆದರಿಕೆವೊಡ್ಡಿದ್ದು ಈ ಸಂಬಂಧ ಸಂಜಯನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಜ.10ರಂದು ಶಿವಾಜಿನಗರದ ಸುಲ್ತಾನ್ ಶಾ ಮಸೀದಿ ಬಳಿ ಐದಾರು ಯುವಕರ ಗುಂಪು ಮಾದಕ ವಸ್ತುಗಳನ್ನು ಸೇವಿಸಿ ಯುವತಿಯರೊಂದಿಗೆ ಅಸಭ್ಯ ವಾಗಿ ವರ್ತಿಸುತ್ತಿದ್ದರು ಎಂದು ಉಲ್ಲೇಖಿಸಿ ವಕೀಲ ಹುಸೇನ್ ಉವೈಸ್ ವಿಡಿಯೊ ಸೆರೆಹಿಡಿದು ಸಾಮಾಜಿಕ ಜಾಲತಾಣಗಳ ಮೂಲಕ ಪೊಲೀಸರಿಗೆ ದೂರು ಸಲ್ಲಿಸಿದ್ದರು. ಆನಂತರ, ಸ್ಥಳೀಯ ಪೊಲೀಸರು ಈ ವ್ಯಾಪ್ತಿಯಲ್ಲಿ ಹೆಚ್ಚಿನ ನಿಗಾ ಇರಿಸಿ ಗುಂಪು ಸೇರಿ ಕಾನೂನು ಬಾಹಿರ ಚಟುವಟಿಕೆಗಳನ್ನು ನಡೆಸದಂತೆ ಅಲ್ಲಿನ ಯುವಕರಿಗೆ ಎಚ್ಚರಿಕೆ ನೀಡಿದ್ದಾರೆ. ಇದಾದ ಬಳಿಕ ಕೆಲವರು ವಕೀಲ ಹುಸೇನ್ ಉವೈಸ್‌ನನ್ನು ಮೊಬೈಲ್ ಮೂಲಕ ಸಂಪರ್ಕಿಸಿ ತಮ್ಮನ್ನು ಡ್ರಗ್ಸ್ ಪೆಡ್ಲರ್ ಎಂದು ಪರಿಚಯ ಮಾಡಿಕೊಂಡು ಅವಾಚ್ಯ ಶಬ್ದಗಳಿಂದ ನಿಂದನೆ ಮಾಡಿದಲ್ಲದೆ, ಜೀವ ಬೆದರಿಕೆ ಹಾಕಿದ್ದಾರೆ.

ರಕ್ಷಣೆಗೆ ವಕೀಲನ ಮನವಿ: ಪದೇ ಪದೇ ಮೊಬೈಲ್ ಕರೆ ಮೂಲಕ ಸಾಮಾಜಿಕ ಜಾಲತಾಣದಲ್ಲಿರುವ ವಿಡಿಯೊ ಅಳಿಸಿ ಹಾಕುವಂತೆ ಒತ್ತಡ ಹೇರಿದ್ದಾರೆ. ಈ ಕುರಿತು ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಸಂಜಯನಗರ ಪೊಲೀಸರಿಗೆ ಹುಸೇನ್ ಉವೈಸ್ ದೂರು ಸಲ್ಲಿಸಿ ಮನವಿ ಮಾಡಿದ್ದಾರೆ. ಅದೇ ರೀತಿ, ಘಟನೆ ಸಂಬಂಧ ನಗರ ಪೊಲೀಸ್ ಆಯುಕ್ತ ದಯಾನಂದ್ ಹಾಗೂ ಹೈಕೋರ್ಟಿನ ಮುಖ್ಯ ನ್ಯಾಯಮೂರ್ತಿಗಳಿಗೆ ಲಿಖಿತ ರೂಪದಲ್ಲಿ ಮನವಿ ಪತ್ರ ಸಲ್ಲಿಕೆ ಮಾಡಿದ್ದು, ತಮಗೆ ರಕ್ಷಣೆ ನೀಡುವಂತೆ ಅವರು ಕೋರಿದ್ದಾರೆ.

ತ್ಯಾಗರಾಜ ಆರಾಧನೆ, ಸಂಗೀತೋತ್ಸವ

ಬೆಂಗಳೂರು: ತ್ಯಾಗರಾಜರ 178ನೇ ಆರಾಧನಾ ಮಹೋತ್ಸವ ಮತ್ತು ರಾಷ್ಟ್ರೀಯ ಸಂಗೀತೋತ್ಸವ ಕಾರ್ಯಕ್ರಮ ಚಾಮರಾಜಪೇಟೆಯ ಶೃಂಗೇರಿ ಮಠದಲ್ಲಿ ಶ್ರೀ ತ್ಯಾಗಬ್ರಹ್ಮ ಆರಾಧನಾ ಕೈಂಕರ್ಯ ಟ್ರಸ್ಟ್ ವತಿಯಿಂದ ಯಶಸ್ವಿಯಾಗಿ ನಡೆಯಿತು.

ವಿದ್ವಾನ್ ತ್ಯಾಗರಾಜನ್ ಮತ್ತು ತಂಡದವರಿಂದ ಪಂಚರತ್ನ ಕೃತಿ ಗೋಷ್ಠಿ, ಗಾಯನ ವಿದುಷಿ ನಾಗಮಣಿ ಶ್ರೀನಾಥ್ ಮತ್ತು ಶಿಷ್ಯವೃಂದದಿಂದ ಗಾನ ಪ್ರಸ್ತುತಿ, ವೇಣುಗೋಪಾಲ್ ಮತ್ತು ತಂಡದಿಂದ ವೀಣೆ ಪಿಟೀಲು ವಾದನ, ವಿದ್ವಾನ್ ಸುಚೇತನ್ ರಂಗಸ್ವಾಮಿ ಮತ್ತು ತಂಡ ಹಾಗೂ ನಾಗೇಂದ್ರ ಶಾಸ್ತ್ರಿ ಮತ್ತು ತಂಡದಿಂದ ಭಾವಪೂರ್ಣ ಹಾಡುಗಳ ಮೂಲಕ ತ್ಯಾಗರಾಜರಿಗೆ ನಮನ ಸಲ್ಲಿಸಿದರು.ನೂರಾರು ಭಕ್ತರು ಕಾರ್ಯಕ್ರಮದಲ್ಲಿ ಭಾಗಿಯಾಗಿ ತ್ಯಾಗರಾಜರ ಆರಾಧನೆಯ ಜತೆಗೆ ಸಂಗೀತ ರಸ ಸವಿದರು.

ಕೆಪಿಟಿಸಿಎಲ್ ಎಇ, ಜೆಇ ನೇಮಕ: ಕನ್ನಡ ಪರೀಕ್ಷೆ ನಡೆಸಲು ಹೈ ಸೂಚನೆ

ಬೆಂಗಳೂರು: ಕಳೆದ 2017ರ ಆಗಸ್ಟ್‌ನಲ್ಲಿಅಧಿಸೂಚನೆ ಹೊರಡಿಸಲಾಗಿರುವ ಸಹಾಯಕ ಎಂಜಿನಿಯರ್ (ಎಇ) ಮತ್ತು ಕಿರಿಯ ಎಂಜಿನಿಯರ್ (ಜೆಇ) ನೇಮಕ ಸಂಬಂಧ 2024ರ ಫೆಬ್ರವರಿಯಲ್ಲಿ ನಡೆಸಲಾಗಿದ್ದ ಕನ್ನಡ ಪರೀಕ್ಷೆಯನ್ನು ಹೊಸದಾಗಿ ನಡೆಸುವಂತೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್)ಗೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವಿಜಯಪುರ ಜಿಲ್ಲೆಯ ಚಡಚಣದ ವಾಸಿ, ಜೆಇ ಹುದ್ದೆಯ ಆಕಾಂಕ್ಷಿ ಗೀತಾ ಚವ್ಹಾಣ್ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಶಂಕರ್ ಮಗದಂ ಅವರಿದ್ದ ನ್ಯಾಯಪೀಠ ಈ ಆದೇಶ ಮಾಡಿದೆ. ಅಲ್ಲದೇ, ಕೆಪಿಸಿಎಲ್ ಕನ್ನಡ ಭಾಷಾ ಪರೀಕ್ಷೆ ಮುಕ್ತಾಯಗೊಂಡ ನಂತರ ಕನಿಷ್ಠ ಅಂಕಗಳನ್ನು ನಿಗದಿ ಮಾಡಿದೆ, ಇದು ಕಾನೂನು ಬಾಹಿರ ಕ್ರಿಯೆಯಾಗಿದೆ. ಜತೆಗೆ ನಿಯಮದಲ್ಲೂ ಅದಕ್ಕೆ ಅವಕಾಶವಿಲ್ಲ, ಹಾಗಾಗಿ ಕೆಪಿಸಿಎಲ್ ಕ್ರಮ ಒಪ್ಪಲಾಗದು ಎಂದು ಪೀಠ ಹೇಳಿದೆ.

ಕೆಪಿಸಿಎಲ್ ವೃಂದ ಮತ್ತು ನೇಮಕ ನಿಯಮಗಳಲ್ಲಿಕನ್ನಡ ಪರೀಕ್ಷೆಗೆ 100 ಅಂಕಗಳನ್ನು ಮಾತ್ರ ನಿಗದಿಪಡಿಸಬೇಕು ಎಂದು ಹೇಳಲಾಗಿದೆ ಎಂಬುದನ್ನು ಗಮನಿಸಿದ ನ್ಯಾಯಾಲಯ, ಅದರಂತೆ ನಿಗಮ ಹೊಸದಾಗಿ ಕನ್ನಡ ಪರೀಕ್ಷೆಯನ್ನು 100 ಅಂಕಗಳಿಗೆ ಮಾತ್ರ ನಡೆಸಬೇಕು. ಆ ನೂರು ಅಂಕಗಳಿಗೆ ಕನಿಷ್ಠ ಅಂಕಗಳೆಷ್ಟು ಎಂಬುದನ್ನು ಪರೀಕ್ಷೆಗೆ ಮೊದಲೇ ನಿಗದಿಪಡಿಸಬೇಕು ಎಂದು ಪೀಠ ಆದೇಶಿಸಿದೆ. ಅಲ್ಲದೇ, ನಿಗಮ ನೇಮಕ ಪರೀಕ್ಷೆಗಳನ್ನು ನಡೆಸುತ್ತಿರುವುದು ತಾಂತ್ರಿಕ ಹುದ್ದೆಗಳಿಗೆ, ಹಾಗಾಗಿ ಅದಕ್ಕೆ ಯಾವುದೇ ರೀತಿಯಲ್ಲೂ ಕನ್ನಡ ಭಾಷೆ ಅಡ್ಡಿಯಾಗುವುದಿಲ್ಲ ಎಂದೂ ಸಹ ನ್ಯಾಯಾಲಯ ಹೇಳಿದೆ.

ಪ್ರಕರಣದ ಹಿನ್ನೆಲೆ

ಕೆಪಿಸಿಎಲ್ 2017ರ ಆ.3ರಂದು ಸಿವಿಲ್, ಮೆಕ್ಯಾನಿಕಲ್ ಮತ್ತು ಎಲೆಕ್ಟ್ರಿಕಲ್ ಎಇ ಮತ್ತು ಜೆಇ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಿತ್ತು. ಅದಕ್ಕಾಗಿ ತಾಂತ್ರಿಕ ಪತ್ರಿಕೆ ಹಾಗೂ ಕನ್ನಡ ಪತ್ರಿಕೆ ಎರಡನ್ನೂ ಸಹ 2018ರ ಜನವರಿಯಲ್ಲಿ ನಡೆಸಲಾಗಿತ್ತು. ಆ ಕನ್ನಡ ಪರೀಕ್ಷೆಯಲ್ಲಿ ಅರ್ಜಿದಾರರು 71 ಅಂಕಗಳನ್ನು ಪಡೆದಿದ್ದರು. ಆದರೆ, ಕೆಪಿಸಿಎಲ್ 2018ರಲ್ಲಿ ನಡೆಸಿದ ಎಲ್ಲ ಪರೀಕ್ಷೆಗಳನ್ನು ರದ್ದುಗೊಳಿಸಿ ಹೊಸದಾಗಿ ನೇಮಕಾತಿ ಪರೀಕ್ಷೆಗಳನ್ನು ನಡೆಸುವ ಹೊಣೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ)ಗೆ ವಹಿಸಿತ್ತು.

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 923/2024
ಅರ್ಜಿದಾರರು: 1. ಶ್ರೀಮತಿ ಬೀರಮ್ಮ ಕೋಂ ಲೇಟ್ ಅಂಕದಾಸಪ್ಪ ವಯಸ್ಸು 76 ವರ್ಷ ವಾಸ: ಸಾತನೂರು ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇತರರು
ವಿರುದ್ಧ
ಎದುರುದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್, ಕನಕಪುರ ತಾಲ್ಲೂಕು ಕನಕಪುರ 2. ಗ್ರಾಮ ಲೆಕ್ಕಾಧಿಕಾರಿಗಳು, ಸಾತನೂರು ವೃತ್ತ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1ನೇ ಅರ್ಜಿದಾರರ ಗಂಡ, 2 ರಿಂದ 7ನೇ ಅರ್ಜಿದಾರರ ತಂದೆಯವರಾದ ಶ್ರೀ ಅಂಕದಾಸಪ್ಪ ಬಿನ್ ಲೇಟ್ ಅಂಕಯ್ಯ ರವರು, ದಿನಾಂಕ 14.01.2017 ರಂದು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಸಾತನೂರು ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂ-ದರೆ, 21-02-2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಏಕಪಕ್ಷೀಯವಾಗಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ 17ನೇ ಜನವರಿ 2025 ರಂದು ಈ ದಿನ ನನ್ನ ಸ್ವಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನಿಂದ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಸಿ.ಎಂ.ಜಗದೀಶ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ:

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 916/2024
ಅರ್ಜಿದಾರರು: 1. ಶ್ರೀ ಮುತ್ತಯ್ಯ .ಕೆ ಬಿನ್ ಲೇಟ್ ಮುತ್ತಯ್ಯ @ ಕರಿಯಯ್ಯ ವಯಸ್ಸು 75 ವರ್ಷ ವಾಸ: 1ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಉದಯಗಿರಿ ಮಂಡ್ಯ ಟೌನ್ ಮಂಡ್ಯ ಜಿಲ್ಲೆ ಮತ್ತು ಇತರರು
ವಿರುದ್ಧ
[illegible]

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕನಕಪುರ
ಸಿ.ಮಿಸ್.ನಂ. 915/2024
ಅರ್ಜಿದಾರರು: 1. ಶ್ರೀ ಮುತ್ತಯ್ಯ .ಕೆ ಬಿನ್ ಲೇಟ್ ಮುತ್ತಯ್ಯ @ ಕರಿಯಯ್ಯ ವಯಸ್ಸು 75 ವರ್ಷ ವಾಸ: 1ನೇ ಮುಖ್ಯ ರಸ್ತೆ, 2ನೇ ಕ್ರಾಸ್, ಉದಯಗಿರಿ ಮಂಡ್ಯ ಟೌನ್ ಮಂಡ್ಯ ಜಿಲ್ಲೆ ಮತ್ತು ಇತರರು
ವಿರುದ್ಧ
ಎದುರುದಾರರು: 1. ಜನನ ಮತ್ತು ಮರಣ ನೊಂದಣಿ
[illegible]

ಮಾನ್ಯ ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಸಿ.ಮಿಸ್.ನಂ.763/2024
ಅರ್ಜಿದಾರರು: ಶ್ರೀ ಸಿದ್ದೇಗೌಡ ಬಿನ್ ಲೇಟ್ ಸಿದ್ದೇಗೌಡ @ ಹೊಟ್ಟಪ್ಪ ವಯಸ್ಸು 55 ವರ್ಷ ವಾಸ: ಕಾಳೇಗೌಡನದೊಡ್ಡಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು
ವಿರುದ್ಧ
ಪ್ರತಿ ಅರ್ಜಿದಾರರು: 1. ಮಾನ್ಯ ತಹಶೀಲ್ದಾರ್ ರವರು ಜನನ ಮತ್ತು ಮರಣ ನೊಂದಣಿ ಇಲಾಖೆ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ ಮತ್ತು ಇನ್ನೊಬ್ಬರು.
ಪ್ರಕಟಣೆ
ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 8ನೇ ಅರ್ಜಿದಾರರ ಅಜ್ಜಿ ಶ್ರೀಮತಿ ತಿಮ್ಮಮ್ಮ ಕೋಂ ಲೇಟ್ ಚನ್ನೇಗೌಡ @ ಚೆನ್ನಯ್ಯ ರವರು, ಇದೇ ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಕಾಳೇಗೌಡನದೊಡ್ಡಿ ಗ್ರಾಮದಲ್ಲಿ ದಿನಾಂಕ 10-01-1994 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ನ್ಯಾಯಾಲಯದ ಆದೇಶವನ್ನು ಈ ಮೇಲ್ಕಂಡ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರಿಗಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, 15-03-2025 ರ ಬೆಳಿಗ್ಗೆ ಸರಿಯಾಗಿ 11=00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾರದ್ದೂ ತಕರಾರೂ ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರೆಸಿ ಇತ್ಯರ್ಥಗೊಳಿಸಲಾಗುವುದು.
ದಿನಾಂಕ 17-01-2025 ರಂದು ನನ್ನ ಹಸ್ತಾಕ್ಷರ ಮತ್ತು ನ್ಯಾಯಾಲಯದ ಮೊಹರಿನೊಂದಿಗೆ ನೀಡಲಾಗಿದೆ.
ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಕನಕಪುರ
ಅರ್ಜಿದಾರರ ಪರ ವಕೀಲರು
ಶ್ರೀ. ಎಸ್.ಪ್ರಸನ್ನಕುಮಾರ್
ವಕೀಲರು, ಕನಕಪುರ
ಸ್ಥಳ : ಕನಕಪುರ
ದಿನಾಂಕ: 15-01-2025

ಮಾನ್ಯ ಗೌರವಾನ್ವಿತ 3ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಕನಕಪುರ
ಸಿ.ಮಿಸ್.ನಂ.762/2024
ಅರ್ಜಿದಾರರು: ಶ್ರೀ ಸಿದ್ದೇಗೌಡ ಬಿನ್ ಲೇಟ್ ಸಿದ್ದೇಗೌಡ @ ಹೊಟ್ಟಪ್ಪ ವಯಸ್ಸು 55 ವರ್ಷ ವಾಸ: ಕಾಳೇಗೌಡನದೊಡ್ಡಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು
ವಿರುದ್ಧ
[illegible]

ಸಮಾಚಾರ ಸಣ್ಣದಲ್ಲ

ಜ.22ಕ್ಕೆ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ

ಬೆಂಗಳೂರು: ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಜ.22ರಂದು ಕೊಪ್ಪಳದಲ್ಲಿ ಆಯೋಜಿಸಲಾಗಿದೆ. 2022 ಸಾಹಿತ್ಯ ಪ್ರಶಸ್ತಿ ಹಾಗೂ ಪುಸ್ತಕ ಬಹುಮಾನ 2021ರ ಪ್ರಶಸ್ತಿ ಸಚಿವ ಶಿವರಾಜ್.ಎಸ್. ತಂಗಡಗಿ ಪ್ರದಾನ ಮಾಡಲಿದ್ದಾರೆ. ಕಾರ್ಯಕ್ರಮದಲ್ಲಿ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ್, ಬಸವರಾಜ ರಾಯರೆಡ್ಡಿ, ಕೆ. ರಾಘವೇಂದ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಹಿರಿಯ ಸಾಹಿತಿ ಪ್ರೊ.ಅಲ್ಲಮಪ್ರಭು ಬೆಟ್ಟದೂರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಪ್ರೊ. ಆರ್.ಕೆ.ಹುಡಗಿ, ಅಗ್ರಹಾರ ಕೃಷ್ಣಮೂರ್ತಿ, ಡಾ. ಇಂದಿರಾ ಹೆಗಡೆ, ರಂಜಾನ್ ದರ್ಗಾ ತುಂಬಾಡಿ ರಾಮಯ್ಯ ಅವರಿಗೆ 2022ನೇ ಸಾಲಿನ ಗೌರವ ಪ್ರಶಸ್ತಿ, ಡಾ. ಬಂಜಗೆರೆ ಜಯಪ್ರಕಾಶ್ ಡಾ. ಎಂ.ಜಿ. ಮಂಜುನಾಥ, ಬಿ. ಮಹೇಶ್, ಡಾ. ರಾಜಶೇಖರ್ ಹತಗುಂದಿ, ದಾಸನೂರು ಕೂಸಣ್ಣ, ಡಾ. ಅನುಸೂಯ ಕಾಂಬಳೆ, ಎಚ್.ಎನ್.ಆರತಿ, ಚಲಂ ಹಾಡ್ಲಹಳ್ಳಿ, ರೂಮಿ ಹರೀಶ್, ಡಾ. ಸಾರಿಕಾದೇವಿ, ಎಲ್. ಕಾಳಗಿ ಅವರಿಗೆ 2022ನೇ ಸಾಲಿನ ಸಾಹಿತ್ಯಶ್ರೀ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಇದೇ ಸಂದರ್ಭದಲ್ಲಿ 2021ನೇ ಸಾಲಿನ ಪುಸ್ತಕ ಬಹುಮಾನ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಮೂರು ಪುಸ್ತಕ ಲೋಕಾರ್ಪಣೆ

ಬೆಂಗಳೂರು: ಅಮಟೆ...ಎಸ್, ಚಿತ್ತ ಬಕ್ಕ, ಐಸ್ ಪೈಸ್ ಪುಸ್ತಕಗಳ ಲೋಕಾರ್ಪಣೆ ಸಮಾರಂಭವನ್ನು ಎನ್.ಆರ್.ಕಾಲೋನಿಯ ಅಶ್ವಥ್ ಕಲಾಭವನದಲ್ಲಿ ಭಾನುವಾರ ಆಯೋಜಿಸಲಾಗಿದೆ. ನ್ಯೂ ವೇವ್ ಬುಕ್ಸ್ ಆಯೋಜಿಸಿರುವ ಕಾರ್ಯಕ್ರಮದಲ್ಲಿ ಪ್ರಬಂಧಕಾರ ಬಿ.ಆರ್.ಲಕ್ಷ್ಮಣ್ ರಾವ್ ಅಧ್ಯಕ್ಷತೆ ವಹಿಸಲಿದ್ದು, ಹಾಸ್ಯಲೇಖಕಿಯರಾದ ಸುಮಾ ರಮೇಶ್, ನಳಿನಿ ಟಿ.ಭೀಮಪ್ಪ, ಲೇಖಕಿ ಭುವನೇಶ್ವರಿ ಹೆಗಡೆ, ರಂಗಕರ್ಮಿ ಧಾರಿಣಿ ಮಾಯಾ, ಅಂಕಣಕಾರ ಅಣುಕು ರಾಮನಾಥ್ ಭಾಗಿಯಾಗಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಜ.23ರಿಂದ ಜಾಗತಿಕ ಉತ್ಪಾದಕ ಸಮಾವೇಶ

ಬೆಂಗಳೂರು: ಯಂತ್ರೋಪಕರಣ ಮತ್ತು ಉತ್ಪಾದನಾ ತಂತ್ರಜ್ಞಾನ ಪ್ರದರ್ಶನಗಳಲ್ಲಿ ಒಂದಾದ ಐಎಂಟೆಕ್ಸ್ 2025ರಲ್ಲಿ ಚಿನ್ನದ ಪ್ರಾಯೋಜಕರಾಗಿ ಭಾಗವಹಿಸಲು ಸ್ಯಾಂಡ್ವಿಕ್ ಗ್ರೂಪ್‌ನ ಪ್ರಮುಖ ಜಾಗತಿಕ ಉತ್ಪಾದಕ ಮತ್ತು ಪೂರೈಕೆದಾರ ಡಾರ್ಮರ್ ಪ್ರಾಮೆಟ್ ಕಾರ್ಯಕ್ರಮದಲ್ಲಿ ಬೆಂಗಳೂರು ಅಂತಾರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ಜ.23 ರಿಂದ ಫೆ.2ರ ವರೆಗೆ ನಡೆಯಲಿದೆ. ಡಾರ್ಮರ್ ಪ್ರಾಮೆಟ್‌ನ ಸ್ವಾಲ್ವಿಂಗ್ ಬ್ರಾಂಡ್ ಉದ್ದೇಶ ಹೈಲೈಟ್ ಮಾಡುವ ಮೂಲಕ, ಕಳೆದ ವರ್ಷ ಅನಾವರಣಗೊಂಡ ಕಂಪನಿಯ ನವೀಕರಿಸಿದ ದೃಶ್ಯ ಗುರುತನ್ನು ಸಹ ಒಳಗೊಂಡಿದೆ. ಹೊಸ ನೋಟ ಉತ್ಪಾದನಾ ಪರಿಸರ ವ್ಯವಸ್ಥೆಯ ಅಗತ್ಯತೆಗಳಿಗೆ ಖಚಿತತೆ ಒದಗಿಸುವ ಪಾಲುದಾರರ ಕಡೆಗೆ ಡಾರ್ಮರ್ ಪ್ರಮೆಟ್ ಅವರ ಬದ್ಧತೆ ಸಂಕೇತಿಸುತ್ತದೆ. ಇದು ಗ್ರಾಹಕರು, ಉದ್ಯೋಗಿಗಳು, ಪೂರೈಕೆದಾರರು ಮತ್ತು ಪರಿಸರದ ಪರಿಸರ ವ್ಯವಸ್ಥೆಯನ್ನು ವಿಶ್ವಾಸಾರ್ಹ, ನವೀನ ಮತ್ತು ಸುಸ್ಥಿರ ಪರಿಹಾರಗಳ ಮೂಲಕ ನೋಡಿಕೊಳ್ಳುವ ಕಂಪನಿಯ ಪ್ರತಿಜ್ಞೆ ಬಲಪಡಿಸುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಏರ್ ಶೋ: ಮಾಂಸ ಮಾರಾಟ ನಿಷೇಧ

ಬೆಂಗಳೂರು: ಯಲಹಂಕ ವಾಯುನೆಲೆಯಲ್ಲಿ ಏರ್ ಶೋ-2025 ರ ಪ್ರಯುಕ್ತ 23ನೇ ಜನವರಿಯಿಂದ ಫೆ.17ರ ವರೆಗೆ ಮಾಂಸ ಮಾರಾಟ ನಿಷೇಧಿಸಲಾಗಿದೆ ಎಂದು ಪಾಲಿಕೆಯ ಯಲಹಂಕ ವಲಯ ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿನ್ ಹೇಳಿದರು.

ಯಲಹಂಕ ಏರ್ ಪೋರ್ಸ್ ಸ್ಟೇಷನಲ್ಲಿ ಫೆ.10 ರಿಂದ 14 ರವರೆಗೆ ಅಂತಾರಾಷ್ಟ್ರೀಯ ಏರ್ ಶೋ ನಡೆಯಲಿರುವುದರಿಂದ ಯಲಹಂಕ ವಲಯದ ಏರ್‌ಪೋರ್ಸ್ ಸ್ಟೇಷನ್‌ನಿಂದ 13 ಕಿ.ಮೀ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಮಾಂಸ ಮಾರಾಟದ ಉದ್ದಿಮೆಗಳು ಮುಚ್ಚಬೇಕು ಹಾಗೂ ಹೋಟೆಲ್ ಮತ್ತು ಡಾಬಾಗಳಲ್ಲಿ ಮಾಂಸಾಹಾರ ತಯಾರಿಕೆ ಮತ್ತು ಮಾರಾಟ ಬಂದ್ ಮಾಡಬೇಕು ಎಂದು ಸೂಚನೆ ನೀಡಿದ್ದಾರೆ. ಏರ್ ಶೋ ಹಿನ್ನೆಲೆ ಜ.23 ರಿಂದ ಫೆ.17 ರವರೆಗೆ ಎಲ್ಲಾ ಮಾಂಸಾಹಾರ ಮಾರಾಟ ಉದ್ದಿಮೆಗಳನ್ನು ಮುಚ್ಚಲು ಸೂಚನೆ ನೀಡಲಾಗಿದ್ದು, ಉಲ್ಲಂಘಿಸಿದಲ್ಲಿ ಬಿಬಿಎಂಪಿ ಕಾಯಿದೆ 2020 ಮತ್ತು ಏರ್ ಕ್ರಾಫ್ಟ್ ನಿಯಮ 1937 ರ ರೂಲ್ 91 ಮತ್ತು ಇತರ ಕಾನೂನಿನ ರೀತಿಯಲ್ಲಿ ಕ್ರಮ ಜರುಗಿಸಲಾಗುವುದು ಎಂದು ಹೇಳಿದ್ದಾರೆ.

ವಿರಾಮ ಪ್ರತಿ ಭಾನುವಾರ

{ಎಚ್.ಸಿ.ಬಾಲಕೃಷ್ಣ} ಶಾಸಕ

ಮುಡಾ ವಿಷಯದಲ್ಲಿ ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ಮಾಡುವ ಅಗತ್ಯವಿಲ್ಲ. ಹಣಕಾಸಿನ ವ್ಯವಹಾರದಲ್ಲಿ ವ್ಯತ್ಯಾಸವಾದಾಗ ಮಾತ್ರ ಅವರು ಪ್ರವೇಶಿಸಬೇಕು. ಆದರೆ, ಕೇಂದ್ರ ಬಿಜೆಪಿ ಸರಕಾರವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಹಣಿಯಲು ಇ.ಡಿ.ಯನ್ನು ಅಸ್ತ್ರವಾಗಿ ಬಳಸಿಕೊಳ್ಳುತ್ತಿದೆ. ಇದರಲ್ಲಿ ಬಿಜೆಪಿ ಸಫಲವಾಗುವುದಿಲ್ಲ.

ಬ್ರಾಹ್ಮಣ ಮಹಾಸಭಾದ ಸುವರ್ಣ ಸಂಭ್ರಮ ಸಮ್ಮೇಳನದಲ್ಲಿ ಪೇಜಾವರ ಶ್ರೀ | ಹಿಂದೂಗಳಿಂದಲೇ ಸನಾತನ ಧರ್ಮದ ರಕ್ಷಣೆ

ಧರ್ಮದ ಮಾರ್ಗದಲ್ಲಿ ನಡೆಯಬೇಕು

ವಿಶ್ವವಾಣಿ ಸುದ್ದಿಮನೆ, ಬೆಂಗಳೂರು

ಬೆಂಗಳೂರಿನ ಅರಮನೆ ಮೈದಾನದಲ್ಲಿ ಶನಿವಾರ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥರು, ಶೃಂಗೇರಿ ಶಾರದಾ ಪೀಠಾಧ್ಯಕ್ಷರ ವಿಧುಶೇಖರ ಭಾರತೀ ಶ್ರೀಗಳು, ಆವನಿ ಶೃಂಗೇರಿ ಮಠಾಧೀಶ ಶ್ರೀ ಅದ್ವೈತಾನಂದ ಭಾರತೀ ಮಹಾಸ್ವಾಮೀಜಿ ಹಾಗೂ ಇತರ ಮಠಾಧೀಶರು ಪಾಲ್ಗೊಂಡಿದ್ದರು.

ಸನಾತನ ಧರ್ಮದ ರಕ್ಷಣೆ ಕೇವಲ ಒಂದೇ ಧರ್ಮಕ್ಕೆ ಅಲ್ಲ, ಎಲ್ಲ ಹಿಂದೂ ಧರ್ಮದವರಿಂದ ಆಗಬೇಕು. ನಮ್ಮಲ್ಲಿ ಜಾತಿಗಳ ಕೋಟೆ ಇದೆ. ಆದರೆ, ಒಂದಕ್ಕೂ ಅದು ವಿರೋಧವಿಲ್ಲ. ಎಲ್ಲರ ಉದ್ದೇಶ ಕೋಟೆಯ ಒಳಗಿನ ಗರ್ಭಗುಡಿಯ ರಕ್ಷಣೆಯಾಗಿದೆ. ಅದರಂತೆ ಭಾರತ, ನಮ್ಮ ಸಂಸ್ಕೃತಿಯ ರಕ್ಷಣೆಗಾಗಿ ಎಲ್ಲರ ಒಗ್ಗಟ್ಟು ಅಷ್ಟೇ ಮುಖ್ಯವಾಗಿದೆ ಎಂದು ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥರು ಅಭಿಪ್ರಾಯ ಪಟ್ಟಿದ್ದಾರೆ.

ಅರಮನೆ ಮೈದಾನದಲ್ಲಿ ನಡೆದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ 50ನೇ ವರ್ಷದ ಸುವರ್ಣ ಸಂಭ್ರಮ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಬ್ರಾಹ್ಮಣ ಸಮಾಜ ಎಲ್ಲರನ್ನು ಒಗ್ಗೂಡಿಸಿಕೊಂಡು ಹೋಗುತ್ತಿದೆ ಎಂದರೆ ಅದುವೇ ಬ್ರಾಹ್ಮಣ್ಯದ ಸಂಕೇತವಾಗಿದೆ. ಬ್ರಾಹ್ಮಣನಾಗಿ ಹುಟ್ಟಿದ ಮೇಲೆ ಏನು ಮಾಡಬೇಕು ಎಂಬ ಪ್ರಶ್ನೆ ಬಂದಾಗ ತಪಸ್ಸು ಮಾಡಬೇಕು. ಋಷಿ ಮುನಿಗಳು ಲೋಕಕಲ್ಯಾಣಕ್ಕಾಗಿ ಕಾಡಿಗೆ ಹೋಗಿ ತಪಸ್ಸು ಮಾಡುತ್ತಿದ್ದರು, ನಾವು ಕಷ್ಟ ಪಡುತ್ತಿರುವುದು ನಮ್ಮ ಸಾರ್ಥಕ್ಕಾಗಿ. ಆದ್ದರಿಂದ ಎಲ್ಲರಿಗಾಗಿ ತಾಪತ್ರೆಯ ಪಟ್ಟಾಗ ಮಾತ್ರ ನಾವು ಧರ್ಮದ ಮಾರ್ಗದಲ್ಲಿ ನಡೆಯುತ್ತಿದ್ದೇವೆ ಎಂದರ್ಥ ಎಂದು ಹೇಳಿದರು.

ಧರ್ಮರಕ್ಷಣೆ ಜತೆಗೆ ವಿಪ್ರ ಸಮುದಾಯದ ರಕ್ಷಣೆ ಅಗತ್ಯ: ಶೃಂಗೇರಿ ಶಾರದಾ ಪೀಠಾಧ್ಯಕ್ಷರ ವಿಧುಶೇಖರ ಭಾರತೀ ಶ್ರೀಗಳು ಮಾತನಾಡಿ, ಧರ್ಮರಕ್ಷಣೆ ಸಂದರ್ಭದಲ್ಲಿ ಅನೇಕ ತಾಪತ್ರಯಗಳು ಬರುತ್ತವೆ. ಅವುಗಳನ್ನು ಎದುರಿಸಿ ಸತ್ಯದ ಮಾರ್ಗದಲ್ಲಿ ನಡೆಯಬೇಕು. ಅದರ ಜತೆಗೆ ಬ್ರಾಹ್ಮಣ ಸಮುದಾಯ ಸಂರಕ್ಷಣೆ ಮಾಡಿಕೊಳ್ಳುವುದು ನಮ್ಮ ಆದ್ಯ ಕರ್ತವ್ಯವಾಗಿದೆ. ಬಿಡುವಿಲ್ಲದ ಜೀವನದಲ್ಲಿ ಧರ್ಮದ ಕಾರ್ಯವನ್ನು ಮರೆಯುತ್ತಿದ್ದೇವೆ. ದಿನದ ಅಷ್ಟು ಸಮಯದಲ್ಲಿ ಕೆಲ ನಿಮಿಷಗಳ ಕಾಲ ಉಪನಯನ, ಸಂಧ್ಯಾವಂದನೆ, ಗಾಯತ್ರಿ ಮಂತ್ರ ಪಠಣಕ್ಕೆ ಮೀಸಲಿಡಬೇಕು. ಆಚರಣೆ ಎಂಬುದು ಕೇಲವ ನಂಬಿಕೆ ಅಲ್ಲ, ಮೂಲ ಪರಂಪರೆಯ ಮಾರ್ಗಗಳನ್ನು ಸತ್ಯದ ಮಾರ್ಗದಲ್ಲಿ ಅನುಷ್ಠಾನ ಮಾಡಬೇಕು. ಇತ್ತೀಚೆಗೆ ಯಾವುದೇ ಆಚರಣೆಗಳಿಗೆ ವೈಜ್ಞಾನಿಕ ಕಾರಣ ಕೇಳುತ್ತಿದ್ದಾರೆ. ಆದರೆ, ನಮ್ಮ ಪೂರ್ವಜರು ಎಲ್ಲ ಆಚಾರ, ವಿಚಾರಗಳಿಗೆ ವೈಜ್ಞಾನಿಕ ಕಾರಣಗಳನ್ನು ಕಂಡುಕೊಂಡಿದ್ದರು. ಈಗ ನಮಗೆ ಎಲ್ಲದಕ್ಕೂ ಕಾರಣ ನೀಡಲು ಕಷ್ಟವಾಗುತ್ತಿದೆ. ಆದರೆ, ಧರ್ಮದ ಅಧ್ಯಯನ ಹಾಗೂ ಆಧುನಿಕ ಜಗತ್ತಿನಲ್ಲಿ ಧರ್ಮದ ಅಗತ್ಯ ಎಲ್ಲರಿಗೂ ಇದೆ ಎಂದರು.

ಸ್ವಧರ್ಮದ ಆಚರಣೆ ಅತ್ಯಗತ್ಯ: ಧರ್ಮದ ಹೆಸರಿನಲ್ಲಿ ಕೆಲವರು ತಪ್ಪು ಮಾರ್ಗದಲ್ಲಿ ನಡೆಯುತ್ತಿದ್ದಾರೆ. ಗುರು-ಹಿರಿಯರ ಮಾರ್ಗದರ್ಶನದಲ್ಲಿ ಜೀವನ ನಡೆಸಬೇಕು. ಸಮಾಜದ ಒಳಿತಾಗಿ, ನಮ್ಮೆಲ್ಲರ ಹಿತ ಕಾಪಾಡುವವರ ಮಾತು ಕೇಳಿದಾಗ ಧರ್ಮರಕ್ಷಣೆಗೆ ಅರ್ಥ ಬರುತ್ತದೆ. ಲೌಖಿಕವಾಗಿ ಬದುಕು ಕಟ್ಟಿಕೊಂಡಿರುವ ನಾವುಗಳು ಕೇವಲ ಉದ್ಯೋಗ, ಹಣ ಸಂಪಾದನೆಗೆ ಮುಂದಾಗುತ್ತಿದ್ದೇವೆ. ಆ ಸಂಪತ್ತು ಶರೀರ ಇರುವ ತನಕ ನಮ್ಮೊಂದಿಗೆ ಇರುತ್ತದೆ. ಶಾಶ್ವತವಾಗಿರುವುದು ಏಕಮಾತ್ರ ಜ್ಞಾನ,ಪುಣ್ಯ, ಸ್ವಧರ್ಮದ ಆಚರಣೆಯಾಗಿದೆ ಎಂದು ಶ್ರೀಗಳು ನುಡಿದರು.

ಆವನಿ ಶೃಂಗೇರಿ ಮಠಾಧೀಶ ಶ್ರೀ ಅದ್ವೈತಾನಂದ ಭಾರತೀ ಮಹಾಸ್ವಾಮಿಗಳು ಮಾತನಾಡಿ, ಭರತ ಭೂಮಿಯಲ್ಲಿ ಎಲ್ಲ ಜೀವಿಗಳಂತೆ ಜೀವಿಸಿ ಹೋಗುವುದರಲ್ಲಿ ಪ್ರಯೋಜನವಿಲ್ಲ. ಉತ್ಕೃಷ್ಟ ಜ್ಞಾನ ಸಂಪಾದನೆಗೆ ವೇದಾಧ್ಯಯನ ಮುಖ್ಯವಾಗಿದೆ. ಪ್ರಪಂಚದ ಯಾವುದೇ ಮೂಲೆಯಲ್ಲಿ ಸಿಗದ ಜ್ಞಾನ ವೇದಗಳಲ್ಲಿ ದೊರೆಯುತ್ತದೆ. ಆದ್ದರಿಂದ ಬ್ರಾಹ್ಮಣ ಸಮುದಾಯದಲ್ಲಿ ಜನಿಸಿದ ಪ್ರತಿಯೊಬ್ಬರೂ ವೇದಾ ಧ್ಯಯನ ಮಾಡಬೇಕು. ಪ್ರಪಂಚವನ್ನು ಸುಭೀಕ್ಷೆ ಯಲ್ಲಿ ಇಟ್ಟುಕೊಂಡು ಹೋಗುವುದಕ್ಕೆ ವೇದಗಳ ಅವಶ್ಯಕತೆ ಇದೆ. ಹಿಂದೂ ಧರ್ಮ ಶಾಸ್ತಗಳು, ಆಚರಣೆಗಳು ಪ್ರಕೃತಿಯ ಜತೆಗೆ ಸಮ್ಮಿಲನ ಗೊಂಡಿವೆ. ಪಾಶ್ಚಿಮಾತ್ಯರ ಸಂಸ್ಕೃತಿಯಿಂದ ದೂರವಿದ್ದು, ಸ್ವಧರ್ಮದ ಆಚರಣೆ ಮಾಡಬೇಕು. ಬೇರೆ ಬೇರೆ ಧರ್ಮಗಳಿಗೆ ಒಂದೇ ಧರ್ಮಗ್ರಂಥವಿದೆ. ಆದರೆ, ಹಿಂದೂ ಧರ್ಮದಲ್ಲಿ ಹಲವು ಗ್ರಂಥಗಳಿವೆ ಎಂದು ಕೆಲವು ಪ್ರಶ್ನೆ ಮಾಡುತ್ತಾರೆ. ಸನಾತನ ಧರ್ಮದ ಚರಿತ್ರೆಯನ್ನು ಒಂದೇ ಗ್ರಂಥದ ಮೂಲಕ ತಿಳಿಸಲು ಆಗುವುದಿಲ್ಲ. ಆದ್ದರಿಂದ ಹತ್ತು ಹಲವು ಧರ್ಮ ಗ್ರಂಥ, ನೀತಿಗಳ ಮೂಲಕ ತಿಳಿಸಲಾಗಿದೆ ಎಂದರು.

ಬ್ರಾಹ್ಮಣ ನಿಗಮಕ್ಕೆ 100 ಕೋಟಿ ನೀಡಿದ್ದ ಬಿಎಸ್‌ವೈ

ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮಾತನಾಡಿ, ಭಾರತ ಭಾರತವಾಗಿ ಉಳಿಯಲು ಆಚಾರ್ಯತ್ರೇಯರು ಮನುಕುಲದ ಕಣ್ಣು ತೆರೆಸಿದ್ದಾರೆ. ಹಿಂದೂ ಧರ್ಮದ ಕುರಿತು ತಿಳಿ ಹೇಳಿ ಆಧ್ಯಾತ್ಮದ ಬೆಳಕು ಪ್ರಜ್ವಲಿಸುವಂತೆ ಮಾಡಿ ಹೋಗಿದ್ದಾರೆ. ಬ್ರಾಹ್ಮಣ ಸಮಾಜ ಈ ದೇಶಕ್ಕೆ ನೀಡಿರುವ ಕೊಡುಗೆ ಅಪಾರವಾಗಿದೆ. ರಾಮಕೃಷ್ಣ ಹೆಗಡೆ, ಎಸ್.ಎಂ.ವಿಶ್ವೇಶ್ವರಯ್ಯ, ಸಿ.ವಿ.ರಾಮನ್ ರಂತಹ ಮಹನೀಯರ ಕೊಡುಗೆಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳಬೇಕು. ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ಯಡಿಯೂರಪ್ಪ ಬ್ರಾಹ್ಮಣ ಅಭಿವೃದ್ಧಿ ನಿಗಮ ಸ್ಥಾಪಿಸಿ 100 ಕೋಟಿ ರು. ನೀಡಿದ್ದಾರೆ. ಮಂತ್ರಾಲಯಕ್ಕೆ 25 ಕೋಟಿ ಸೇರಿದಂತೆ ಎಲ್ಲ ಮಠ, ಮಾನ್ಯಗಳಿಗೆ ಅನುದಾನ ಬಿಡುಗಡೆ ಮಾಡಿದ್ದರು. ಅದರಂತೆ ಸಮಾಜದ ಅಭಿವೃದ್ಧಿ, ಒಗ್ಗಟ್ಟಿಗಾಗಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಅಶೋಕ ಹಾರನಹಳ್ಳಿ ಸಮಾವೇಶ ನಡೆಸುವ ಮೂಲಕ ಎಲ್ಲರನ್ನು ಒಂದುಗೂಡಿಸುವ ಕಾರ್ಯ ಮಾಡುತ್ತಿದ್ದಾರೆ ಎಂದು ಹೇಳಿದರು.

ವಿವಿಧ ಕೃತಿಗಳ ಲೋಕಾರ್ಪಣೆ

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಸುವರ್ಣ ಸಂಭ್ರಮ ಸಮ್ಮೇಳನದಲ್ಲಿ 'ಸಂಯುಕ್ತ ಕರ್ನಾಟಕ ಪತ್ರಿಕೆ' ಸಂಪಾದಕ ಮಹಾಬಲ ಸೀತಾಳಭಾವಿ ಸಂಸ್ಕೃತದಿಂದ ಕನ್ನಡಕ್ಕೆ ಅನುವಾದಿಸಿದ 'ಚಾಣಕ್ಯ ನೀತಿ' ಪುಸ್ತಕ ಸೇರಿದಂತೆ ಹಲವು ಲೇಖಕರ ಕೃತಿಗಳನ್ನು ಬಿಡುಗಡೆ ಮಾಡಲಾಯಿತು. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಅಧ್ಯಕ್ಷ ಅಶೋಕ ಹಾರನಹಳ್ಳಿ ಅವರು ಸಮ್ಮೇಳದ ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು. ಲೇಖಕ ಸ್ವಾಮಿ ಶಿವಪ್ರಕಾಶಾನಂದ ಸರಸ್ವತೀ ಅವರ 'ವೇದಾಂತ ತತ್ವ ಚಿಂತನ' ಕೃತಿ, ಛಾಯಾಪತಿ ಕೆ.ಎನ್ ಅವರ 'ಸ್ವಾತಂತ್ರ ಹೋರಾಟದಲ್ಲಿ ಬ್ರಾಹ್ಮಣರ ಪಾತ್ರ', ಸುರೇಶ್ ಮೂನ ಅವರ 'ಮರೆಯಲಾಗದ ಮಹನೀಯರು', ಹಾನಗಲ್ ವಿರೂಪಾಕ್ಷ ಶಾಸ್ತ್ರಿ ಅವರ 'ಧ್ಯಾನಬಿಂದೂಪನಿಷದರ್ಥವು' ಸೇರಿದಂತೆ ಇತರೆ ಪುಸ್ತಕಗಳು ಲೋಕಾಪಣೆಗೊಂಡವು. ವಾಣಿಜ್ಯ ಮೇಳ, ಆಹಾರ ಮೇಳವನ್ನು ಇದೇ ಸಂದರ್ಭದಲ್ಲಿ ಉದ್ಘಾಟನೆ ಮಾಡಲಾಯಿತು.

ದರೋಡೆಕೋರರ ಕೈಯಲ್ಲಿ ಆಧುನಿಕ ಶಸ್ತಾಸ್ತ್ರಗಳು: ಆರ್. ಅಶೋಕ

ಗೂಂಡಾ ರಾಜ್ಯವಾಗಿದೆ ಕರ್ನಾಟಕ

ಬೆಂಗಳೂರು: ಕರ್ನಾಟಕ ದರೋಡೆ ರಾಜ್ಯವಾಗಿ ಬದಲಾಗಿದ್ದು, ಜನರು ಆತಂಕದಲ್ಲಿ ಬದುಕುತ್ತಿದ್ದಾರೆ. ಜನರ ರಕ್ಷಣೆ ಮಾಡುವವರೇ ಇಲ್ಲ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಬೀದರ್‌ನ ಬ್ಯಾಂಕ್ ಹಣದ ದರೋಡೆ ಹಾಗೂ ಸಿಬ್ಬಂದಿ ಕೊಲೆ ನಡೆದಿದೆ.

ಮಂಗಳೂರಿನಲ್ಲಿ ಸಿನಿಮಾ ಶೈಲಿಯಲ್ಲಿ 15 ಕೋಟಿ ರೂ. ಬ್ಯಾಂಕ್ ಹಣ ಲೂಟಿಯಾಗಿದೆ. ರಾಜ್ಯದ ಪೊಲೀ ಸರ ಬಗ್ಗೆ ಯಾರಿಗೂ ಭಯವಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಪೊಲೀಸ್ ಅಧಿಕಾರಿಗಳ ಮೇಲೆ ಎಷ್ಟು ಹಿಡಿತ ಇದೆ ಎಂದು ಇದರಿಂದ ತಿಳಿಯುತ್ತದೆ. ರಾಜ್ಯದ ಕಾನೂನು ವ್ಯವಸ್ಥೆ ಎಷ್ಟು ಹದಗೆಟ್ಟಿದೆ ಎಂದು ಗೊತ್ತಾಗಿದೆ ಎಂದರು.

ಬೇರೆ ರಾಜ್ಯಗಳಿಂದ ಕಳ್ಳರು ಬಂದು ದರೋಡೆ ಮಾಡಿಕೊಂಡು ಬಸ್ಸು, ರೈಲಿನಲ್ಲಿ ಹೋಗುತ್ತಿದ್ದಾರೆ. ಜನರು ಅವರ ರಕ್ಷಣೆಯನ್ನು ಅವರೇ ಮಾಡಿಕೊಳ್ಳುವ ಪರಿಸ್ಥಿತಿ ಬಂದಿದೆ. ಪೊಲೀಸರ ಕೈಯಲ್ಲಿ ಪಿಸ್ತೂಲ್ ಇಲ್ಲ. ಆದರೆ ದರೋಡೆ ಮಾಡುವವರ ಕೈಯಲ್ಲಿ ಆಧುನಿಕ ಶಸ್ತ್ರಾಸ್ತ್ರಗಳಿವೆ ಎಂದರು.

> **ಬಸವರಾಜ ಬೊಮ್ಮಾಯಿ ಅವಧಿಯಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಿದ್ದಾರೆ. ಸಿಎಂ ಸಿದ್ದರಾಮಯ್ಯ ಎಷ್ಟು ಅನುದಾನ ನೀಡಿದ್ದಾರೆ ಎಂದು ಶ್ವೇತಪತ್ರ ಬಿಡುಗಡೆ ಮಾಡಲಿ. ಬಿಜೆಪಿ ಅವಧಿಯಲ್ಲಿ ಎಷ್ಟು ಸಾಲ ಮಾಡಲಾಗಿದೆ, ಕಾಂಗ್ರೆಸ್ ಅವಧಿಯಲ್ಲಿ 60 ವರ್ಷಗಳಲ್ಲಿ ಎಷ್ಟು ಸಾಲ ಮಾಡಲಾಗಿದೆ ಎಂದು ಕೂಡ ತಿಳಿಸಲಿ.**
>
> **-ಆರ್.ಅಶೋಕ,** ಪ್ರತಿಪಕ್ಷದ ನಾಯಕ

ಕ್ಲೀನ್‌ಚಿಟ್‌ಗೆ ಸಿದ್ಧತೆ

ಮುಡಾಗೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ನನಗೆ ಉತ್ತರ ನೀಡಿಲ್ಲ. ಲೋಕಾಯುಕ್ತ ಪೊಲೀಸರು ತನಿಖೆ ಮಾಡಲು ಆಸಕ್ತಿ ತೋರದೆ ಕ್ಲೀನ್‌ಚಿಟ್ ನೀಡಲು ಸಿದ್ಧತೆ ಮಾಡಿಕೊಂಡಿರುವಂತಿದೆ. ಜಾರಿ ನಿರ್ದೇಶನಾಲಯ ಮಧ್ಯವರ್ತಿಗಳ ಹಣ ವಶಕ್ಕೆ ಪಡೆದಿದೆ. ಆದರೆ ಲೋಕಾಯುಕ್ತ ಪೊಲೀಸರು ಏನೂ ಮಾಡಿಲ್ಲ. ಆದ್ದರಿಂದ ಸಿಬಿಐ ತನಿಖೆಗೆ ವಹಿಸಿ ಎಂದು ಒತ್ತಾಯಿಸಿದ್ದೇವೆ ಎಂದರು.

ರಾಜ್ಯದಲ್ಲಿ 2,57,246 ಮನೆಗಳ ನಿರ್ಮಾಣಕ್ಕೆ ಒಪ್ಪಿಗೆ

ಅನುದಾನದ ಸದ್ಬಳಕೆಗೆ ಚೌಹಾಣ್ ಸಲಹೆ

ಕುಮಾರಕೃಪಾ ಅತಿಥಿ ಗೃಹದಲ್ಲಿ ಸಚಿವರಾದ ಕೃಷ್ಣಭೈರೇಗೌಡ, ಪ್ರಿಯಾಂಕ್ ಖರ್ಗೆ, ಚಲುವರಾಯಸ್ವಾಮಿ ಅವರು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌವ್ಹಾನ್ ವರನ್ನು ಭೇಟಿ ಮಾಡಿ ಮನವಿ ರಾಜ್ಯದ ಬೇಡಿಕೆಗಳ ಬಗ್ಗೆ ಮನವಿ ಸಲ್ಲಿಸಿದರು. ಸಂಸದ ಬಿ.ವೈ.ರಾಘವೇಂದ್ರ ಉಪಸ್ಥಿತರಿದ್ದರು.

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಕರ್ನಾಟಕದ ವಿಕಾಸಕ್ಕೆ ಆದ್ಯತೆ ನೀಡುತ್ತಿದ್ದೇವೆ. ಈಗಾಗಲೇ ಬಿಡುಗಡೆ ಮಾಡಿರುವ ಅನುದಾನದ ಸದ್ಬಳಕೆ ಆಗಬೇಕಿದೆ ಎಂದು ಕೇಂದ್ರ ಸಚಿವ ಶಿವರಾಜ್ ಸಿಂಗ್ ಚೌಹಾಣ್ ತಿಳಿಸಿದ್ದಾರೆ.

ರಾಜ್ಯದ ಕೃಷಿ, ಗ್ರಾಮೀಣಾಭಿವೃದ್ಧಿ, ಕಂದಾಯ ಸಚಿವರ ಜೊತೆ ಕೇಂದ್ರ ಸರಕಾರದ ಯೋಜನೆಗಳ ಸಾಧನೆ ಪರಿಶೀಲಿಸಿದ ನಂತರ ಮಾತನಾಡಿದ ಅವರು, ಅನುದಾನ ಕೇಳದೇ ಇದ್ದರೂ ನಾವೇ ಘೋಷಣೆ ಮಾಡಿದ್ದೇವೆ. ಬಹಳಷ್ಟು ಅನುದಾನ ಈಗಾಗಲೇ ಕೊಟ್ಟಿದ್ದು, ಅದನ್ನು ಇನ್ನೂ ಕರ್ನಾಟಕ ಸರಕಾರ ಖರ್ಚು ಮಾಡಿಲ್ಲ ಎಂದರು. ಪ್ರತಿ ಬಡವನಿಗೂ ಮನೆ ಸಿಗಬೇಕು ಎಂಬುದು ಮೋದಿಯವರ ಸಂಕಲ್ಪ. ಪ್ರಧಾನಮಂತ್ರಿ ಆವಾಸ್ ಯೋಜನೆಯಡಿ ಕಳೆದ ಸೆಪ್ಟೆಂಬರ್‌ನಲ್ಲಿ ಕರ್ನಾಟಕಕ್ಕೆ 2,57,246 ಮನೆಗಳ ನಿರ್ಮಾಣಕ್ಕೆ ಒಪ್ಪಿಗೆ ಹಾಗೂ ಅನುದಾನ ಕೊಟ್ಟಿದ್ದೇವು. ಕರ್ನಾಟಕದ ಬಡಜನರಿಗೆ ಮನೆ ಕಟ್ಟಲು ಇರುವ ಗುರಿ ಹೆಚ್ಚಿಸಲಾಗಿದೆ ಎಂದು ವಿವರಿಸಿದರು.

4,67,580 ಮನೆಗಳನ್ನು ಕಟ್ಟಲು ಒಪ್ಪಿಗೆ ಕೊಟ್ಟಿದ್ದೇವೆ. ಬಡವರ ಸೇವೆಯೇ ಭಗವಂತನ ಸೇವೆ ಎಂಬ ಚಿಂತನೆ ನಮ್ಮದು. ಎಲ್ಲ ಬಡವರಿಗೆ ಮನೆ ನಿರ್ಮಿಸಿ ಕೊಡುವ ಉದ್ದೇಶ ಈಡೇರಿಸಬೇಕಿದೆ. ಅದಕ್ಕಾಗಿ ಮನೆಗಳ ನಿರ್ಮಾಣ ಕಾರ್ಯಕ್ಕೆ ವೇಗ ಕೊಡಲು ಸೂಚಿಸಲಾಗಿದೆ. ಹಿಂದೆ ನೀಡಿದ್ದ ಅನುದಾನ ಪೂರ್ತಿ ಬಳಕೆ ಮಾಡಲು ತಿಳಿಸಲಾಗಿದೆ. ಆತ್ಮ ಯೋಜನೆಯಡಿ ಹೆಚ್ಚುವರಿ ಸಿಬ್ಬಂದಿ ನೀಡಲು ಒಪ್ಪಿಗೆ ಕೊಡಲಾಗಿದೆ. ವಿಕಸಿತ ಭಾರತ ನಿರ್ಮಾಣದ ಸಂಕಲ್ಪ ನಮ್ಮದು. ವಿಕಸಿತ ಭಾರತಕ್ಕಾಗಿ ವಿಕಸಿತ ಕರ್ನಾಟಕ ಎಂಬುದು ನಮ್ಮ ಚಿಂತನೆ ಎಂದು ವಿವರಿಸಿದರು. ರಾಜ್ಯ ಸರಕಾರ ಸಕಾಲದಲ್ಲಿ ಅನುದಾನ ಬಳಸಿ, ಬಳಕೆ ಸಂಬಂಧಿತ ದೃಢಪತ್ರ ಕಳಿಸಬೇಕು ಎಂದು ಸೂಚಿಸಿದರು.

> **ಆರೋಪ ಪ್ರತ್ಯಾರೋಪದ ರಾಜಕಾರಣ ನಮ್ಮದಲ್ಲ. ನಮ್ಮದು ವಿಕಾಸದ-ಅಭಿವೃದ್ಧಿಯ ರಾಜಕಾರಣ. ಹಲವು ಯೋಜನೆಗಳಲ್ಲಿ ಕರ್ನಾಟಕ ಅನುದಾನ ಖರ್ಚು ಮಾಡಿಲ್ಲ.**
>
> **ಶಿವರಾಜ್ ಸಿಂಗ್ ಚೌಹಾಣ್,** ಕೇಂದ್ರ ಸಚಿವ

ಮುಖ್ಯಮಂತ್ರಿಗೆ ಬಿ.ವೈ.ವಿಜಯೇಂದ್ರ ಆಗ್ರಹ

ರಾಜೀನಾಮೆ ಕೊಟ್ಟು, ಸಿಬಿಐ ತನಿಖೆಗೆ ನೀಡಿ

ಬೆಂಗಳೂರು: ಮೈಸೂರು ಮುಡಾ ಹಗರಣ ಸಂಬಂಧ ಮುಖ್ಯಮಂತ್ರಿಯ ವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು. ರಾಜೀನಾಮೆಗೆ ಮೊದಲು ಸಿಬಿಐ ತನಿಖೆಗೆ ಪ್ರಕರಣ ಹಸ್ತಾಂತರಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆಗ್ರಹಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಮುಡಾ ಹಗರಣ ಮಹತ್ವದ ತಿರುವು ಪಡೆದುಕೊಂಡಿದೆ. ಜಾರಿ ನಿರ್ದೇಶನಾಲಯವು (ಇ.ಡಿ.) 300 ಕೋಟಿಗೂ ಹೆಚ್ಚು ಬೆಲೆಬಾಳುವ ಸ್ಥಿರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಂಡಿದೆ. ಮುಡಾ ಹಗರಣದಲ್ಲಿ ಮುಖ್ಯಮಂತ್ರಿಗಳು ತಮ್ಮ ಕುಟುಂಬಕ್ಕೆ ಅಕ್ರಮವಾಗಿ 14 ನಿವೇಶನ ಪಡೆದುಕೊಂಡಿದ್ದಾರೆ ಎಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿದೆ. ಹಗರಣದಿಂದ ಮುಡಾಕ್ಕೆ ಕೋಟಿಗಟ್ಟಲೆ ನಷ್ಟವಾಗಿದೆ ಎಂದರು.

ಪ್ರಕರಣ ಬಯಲಿಗೆ ಎಳೆದ ಸ್ನೇಹಮಯಿ ಕೃಷ್ಣ ಅವರ ಧ್ವನಿ ಹತ್ತಿಕ್ಕುವ ಕೆಲಸ ರಾಜ್ಯ ಸರಕಾರ ಮಾಡಿತ್ತು ಎಂದು ವಿಜಯೇಂದ್ರ ಟೀಕಿಸಿದರು. ಸ್ನೇಹಮಯಿ ಕೃಷ್ಣ ಮೇಲೆ ಆರೋಪ ಹೊರಿಸಿ ಅವರನ್ನು ಬಂಧಿಸುವ ಹಂತಕ್ಕೂ ಸರಕಾರ ಹೋಗಿತ್ತು. ಇ.ಡಿ. ಕೈಗೊಂಡ ಕ್ರಮಗಳಿಂದ ಸಿದ್ದರಾಮಯ್ಯ ಮತ್ತೊಮ್ಮೆ ಅಪರಾಧಿ ಸ್ಥಾನದಲ್ಲಿ ನಿಂತಿದ್ದಾರೆ. ನಮಗೆ ಸಿದ್ದರಾಮಯ್ಯನವರ ಬಗ್ಗೆ ದ್ವೇಷವಿಲ್ಲ. ಆದರೆ, ಅಪರಾಧ ಆದ ಸಂದರ್ಭದಲ್ಲಿ, ತಪ್ಪಾಗಿರುವ ಸಂದರ್ಭದಲ್ಲಿ ಮುಖ್ಯಮಂತ್ರಿಗಳು ಈಗಾಗಲೇ ರಾಜೀನಾಮೆ ಕೊಡಬೇಕು. ಮುಖ್ಯಮಂತ್ರಿ ಸ್ವಯಂಪ್ರೇರಿತರಾಗಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕಿತ್ತು ಎಂದರು.

ಹೊಸ ಮಳಿಗೆ ಆರಂಭ

ಬೆಂಗಳೂರು: ಆಭರಣ ಮಳಿಗೆಯಾದ ಲೈಮ್ಲೈಟ್ ಡೈಮಂಡ್ಸ್ ತನ್ನ 25ನೇ ಹೊಸ ಮಳಿಗೆಯನ್ನು ಜಯನಗರದಲ್ಲಿ ಸ್ಥಾಪಿಸಲಾಗಿದೆ. ದೇಶಾದ್ಯಂತ 25-ಮಳಿಗೆಗಳ ಮೈಲಿಗಲ್ಲನ್ನು ಯಶಸ್ವಿಯಾಗಿ ಸಾಧಿಸಿದ ಬ್ರ್ಯಾಂಡ್ ಕಳೆದ ಎರಡು ವರ್ಷಗಳಲ್ಲಿ ತ್ವರಿತ ಬೆಳವಣಿಗೆ ಕಂಡಿದೆ ಮತ್ತು ಮುಂಬೈ, ಕೋಲ್ಕತಾ, ದೆಹಲಿ, ಜೈಪುರ, ವಾರಣಾಸಿ, ಹೈದರಾಬಾದ್, ರಾಜ್‌ಕೋಟ್, ಬೆಂಗಳೂರು, ಚೆನ್ನೈ ಸೇರಿದಂತೆ 35ಕ್ಕೂ ಹೆಚ್ಚು ನಗರಗಳಲ್ಲಿ ಅಸ್ತಿತ್ವದೊಂದಿಗೆ ಎಲ್‌ಜಿಡಿ ಆಭರಣಗಳಿಗೆ ದೇಶದಲ್ಲಿ ವ್ಯಾಪಕ ವ್ಯಾಪ್ತಿ ಹೊಂದಿದೆ.

ಎಂಡಿ ಪೂಜಾ ಶೇತ್ ಮಾಧವನ್ ಮಾತನಾಡಿ, ನಮ್ಮ ಬ್ರಾಂಡ್‌ನ ಮೊದಲ ಮಳಿಗೆಯನ್ನು ಬೆಂಗಳೂರಿನಲ್ಲಿ ತೆರೆಯಲು ನನಗೆ ತುಂಬಾ ಸಂತೋಷ ಮತ್ತು ಹೆಮ್ಮೆ ಇದೆ. ಭಾರತದ ಸಿಲಿಕಾನ್ ವ್ಯಾಲಿ ಎಂದು ಕರೆಯಲ್ಪಡುವ ಬೆಂಗಳೂರು, ನಾವು ಇಲ್ಲಿ ನಮ್ಮ ಅಸ್ತಿತ್ವವನ್ನು ಸ್ಥಾಪಿಸುವಾಗ ಸಂಪ್ರದಾಯವನ್ನು ಆಧುನಿಕ ಐಷಾರಾಮದೊಂದಿಗೆ ಸಂಯೋಜಿಸಲಿದೆ ಎಂದು ತಿಳಿಸಿದ್ದಾರೆ.

ಪಿಳ್ಳಪ್ಪ ಗ್ರಾಮಾಂತರ ಮಂಡಲ ಅಧ್ಯಕ್ಷ

ಮಹದೇವಪುರ: ಮಹದೇವಪುರ ವಿಧಾನಸಭಾ ಕ್ಷೇತ್ರದ ಗ್ರಾಮಾಂತರ ಮಂಡಲದ ನೂತನ ಅಧ್ಯಕ್ಷರಾಗಿ ಎಚ್.ಎಸ್.ಪಿಳ್ಳಪ್ಪ ಅವರು ಆಯ್ಕೆಯಾಗಿದ್ದಾರೆ. ಕ್ಷೇತ್ರದ ಕಾಟಂನಲ್ಲೂರಿನ ಸಮೃದ್ಧಿ ಕನ್ವೆಂಷನ್ ಹಾಲ್‌ನಲ್ಲಿ ಗ್ರಾಮಾಂತರ ಮಂಡಲದ ನೂತನ ಅಧ್ಯಕ್ಷರ ಘೋಷಣಾ ಕಾರ್ಯಕ್ರಮದಲ್ಲಿ ಪಿಳ್ಳಪ್ಪ ಅವರನ್ನು ನೂತನ ಅಧ್ಯಕ್ಷರಾಗಿ ಮಾಜಿ ಸಚಿವ ಅರವಿಂದ ಲಿಂಬಾವಳಿ ಘೋಷಿಸಿದರು.

ಮಹದೇವಪುರ ವಿಧಾನಸಭಾ ಕ್ಷೇತ್ರದ ಪಕ್ಷ ಸಂಘಟನೆ ಮತ್ತು ಅಭಿವೃದ್ಧಿ ಕಾರ್ಯಗಳಲ್ಲಿ ವಿಶೇಷ ಮುತುವರ್ಜಿ ವಹಿಸಿ ತಮ್ಮ ಜವಾಬ್ದಾರಿಯನ್ನು ಉನ್ನತ ಮಟ್ಟದಲ್ಲಿ ನಿರ್ವಹಿಸುವಂತೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಸಲಹೆ ನೀಡಿದರು.

ಅಧಿಕಾರ ಸ್ವೀಕರಿಸಿದ ನಂತರ ಮಾತನಾಡಿದ ನೂತನ ಗ್ರಾಮಾಂತರ ಮಂಡಲ ಅಧ್ಯಕ್ಷ ಎಚ್.ಎಸ್.ಪಿಳ್ಳಪ್ಪ, ನನಗೆ ಬಹುದೊಡ್ಡ ಜವಾಬ್ದಾರಿ ವಹಿಸಲಾಗಿದೆ. ಎಲ್ಲರ ಸಹಕಾರದಿಂದ ಈ ಜವಾಬ್ದಾರಿ ನಿರ್ವಹಣೆ ಮಾಡಲಾಗುವುದು. ಮುಂದಿನ ದಿನಗಳಲ್ಲಿ ಎಲ್ಲರನ್ನು ಒಳಗೊಂಡು ಕಾರ್ಯಕ್ರಮಗಳನ್ನು ರೂಪಿಸಲಾಗುವುದು.

ಕ್ಷೇತ್ರದ ನಮ್ಮ ನಾಯಕ ಅರವಿಂದ ಲಿಂಬಾವಳಿಯರವ ಪಕ್ಷ ಸಂಘಟನೆ ಹಾಗೂ ನಮ್ಮ ನೆಚ್ಚಿನ ಪ್ರಧಾನಿ ನರೇಂದ್ರ ಮೋದಿ ಅವರ ಜನಪರ ಕಾರ್ಯಕ್ರಮಗಳನ್ನು ಮನೆಮನೆಗೆ ತಲುಪಿಸುವಲ್ಲಿ ಆದ್ಯತೆ ನೀಡಲಾಗುವುದು ಎಂದರು.



ಮಹದೇವಪುರ ಕ್ಷೇತ್ರದ ಬಿಜೆಪಿ ಗ್ರಾಮಾಂತರ ಮಂಡಲದ ನೂತನ ಅಧ್ಯಕ್ಷರನ್ನಾಗಿ ಎಚ್.ಎಸ್.ಪಿಳ್ಳಪ್ಪರವರು ಮಾಜಿ ಸಚಿವ ಅರವಿಂದ ಲಿಂಬಾವಳಿ ಹಾಗೂ ಶಾಸಕಿ ಮಂಜುಳಾ ಲಿಂಬಾವಳಿ ನೇತೃತ್ವದಲ್ಲಿ ಆಯ್ಕೆಯಾದರು.

ಈ ಸಂದರ್ಭದಲ್ಲಿ ಶಾಸಕಿ ಮಂಜುಳಾ ಲಿಂಬಾವಳಿ, ಬೆಂಗಳೂರು ಕೇಂದ್ರ ಜಿಲ್ಲಾ ಉಪ ಚುನಾವಣಾ ಅಧಿಕಾರಿ ಮಂಜುನಾಥ್ ಮಲ್ಲತಹಳ್ಳಿ, ನಿಕಟಪೂರ್ವ ಗ್ರಾಮಾಂತರ ಮಂಡಲ ಅಧ್ಯಕ್ಷ ಹಾಗೂ ರಾಜ್ಯ ಪರಿಷತ್ ಸದಸ್ಯರಾಗಿ ಆಯ್ಕೆಯಾದ ಬಿ ಎನ್ ನಟರಾಜ್, ಮುಖಂಡರಾದ, ಪಾಪಣ್ಣ, ರಾಜೇಶ್, ಅಶೋಕ್, ಮಂಜುನಾಥ್, ನಾಗರಾಜ್ ಹಾಗೂ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ

ಡಾ. ಆನಂದ್ ಕೆ.ಜೆ.ಅವರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ನೀಡಿ ಗೌರವಿಸಿದರು.

ಬೆಂಗಳೂರು: ಡಾ.ಆನಂದ್ ಕೆ.ಜೆ. ಅವರಿಗೆ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಅರಣ್ಯ ಸಚಿವ ಈಶ್ವರ್ ಖಂಡ್ರೆ ನೀಡಿ ಗೌರವಿಸಿದರು. ಕರ್ನಾಟಕ ಪಶು ವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ(ಬೀದರ್) ದಿಂದ ನೀಡಲಾಗುವ ಈ ಗೌರವವನ್ನು ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.

ಸಮಾರಂಭದಲ್ಲಿ ಕುಲಸಚಿವ ಕೆ.ಸಿ.ವೀರಣ್ಣ, ಸಚಿವರಾದ ಪ್ರಿಯಾಂಕ್ ಖರ್ಗೆ, ಕೆ. ವೆಂಕಟೇಶ್, ಎನ್. ಚೆಲುವರಾಯಸ್ವಾಮಿ, ರಹೀಂ ಖಾನ್, ಮಂಕಾಳ ವೈದ್ಯ, ಮಲ್ಲಿಕಾರ್ಜುನ, ಶಾಸಕರಾದ ಶೈಲೇಂದ್ರ ಬೆಲದಾಳೆ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು.

ಡಾ. ಆನಂದ್ ಕೆ.ಜೆ. ಅವರು ಪಶುವೈದ್ಯಕೀಯ ಮಹಾವಿದ್ಯಾಲಯ ಹೆಬ್ಬಾಳ, ಪಶು ವೈದ್ಯಕೀಯ ಪರವಾಲಂಬಿ ವಿಭಾಗದಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ಇವರು ಅಮೆರಿಕ, ಮಲೇಶಿಯಾ, ಡೆನ್ಮಾರ್ಕ್ ದೇಶಗಳಲ್ಲಿ ನಡೆದ ಸಮ್ಮೇಳನಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. ಕಳೆದ 20 ವರ್ಷಗಳಿಂದ ಅವರು ಮಾಡಿರುವ ನಿಸ್ವಾರ್ಥ ಸೇವೆ ಹಾಗೂ ಹಲವಾರು ಸಂಶೋಧನೆಗಳನ್ನು ಪರಿಗಣಿಸಿ 20ನೇ ಸಂಸ್ಥಾಪನಾ ದಿನಾಚರಣೆ ಅಂಗವಾಗಿ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.

ಗುತ್ತಿಗೆದಾರನ ಆತ್ಮಹತ್ಯೆ: ಆರೋಪಿಗಳಿಗೆ 14 ದಿನ ನ್ಯಾಯಾಂಗ ಬಂಧನ

ಬೀದರ್: ಡಿ.26 ರಂದು ಆತ್ಮಹತ್ಯೆ ಮಾಡಿಕೊಂಡ ಯುವ ಗುತ್ತಿಗೆದಾರ ಸಚಿನ್ ಪಾಂಚಾಳ್ ಪ್ರಕರಣದ ಆರೋಪಿಗಳಾದ ಸಚಿವ ಪ್ರಿಯಾಂಕ್ ಖರ್ಗೆ ಆಪ್ತ, ಕಲಬುರಗಿಯ ಮಾಜಿ ಕಾರ್ಪೊರೇಟರ್ ರಾಜು ಕಪನೂರು ಸೇರಿದಂತೆ ಐವರಿಗೆ ಬೀದರ್‌ನ ಜೆಎಂಎಫ್‌ಸಿ ನ್ಯಾಯಾಲಯವು ಶನಿವಾರ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಸಿಐಡಿ ಅಧಿಕಾರಿಗಳು ರಾಜು ಕಪನೂರು, ಜಿಲ್ಲಾ ಪಂಚಾಯಿತಿ ಮಾಜಿ ಉಪಾಧ್ಯಕ್ಷ ಗೋರಖನಾಥ ಸಜ್ಜನ್, ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ನಂದಕುಮಾರ ನಾಗಭುಜಂಗೆ, ಕಲಬುರಗಿಯ ಪ್ರಥಮ ದರ್ಜೆ ಗುತ್ತಿಗೆದಾರ ರಾಮನಗೌಡ ಪಾಟೀಲ ಹಾಗೂ ಸತೀಶ ರತ್ನಾಕರ ದುಬಲಗುಂಡಿ ಅವರನ್ನು ಜ. 10ರಂದು ಬಂಧಿಸಿದ್ದರು. ಬಳಿಕ ನ್ಯಾಯಾಲಯವು ಐದು ದಿನಗಳ ವರೆಗೆ ಸಿಐಡಿ ಕಸ್ಟಡಿಗೆ ಒಪ್ಪಿಸಿತ್ತು.

ಜ.15ರಂದು ನ್ಯಾಯಾಲಯವು ಪುನಃ ಮೂರು ದಿನಗಳ ವರೆಗೆ ಸಿಐಡಿ ಕಸ್ಟಡಿ ಅವಧಿ ವಿಸ್ತರಿಸಿತ್ತು. ಕಸ್ಟಡಿ ಅವಧಿ ಕೊನೆಗೊಂಡಿದ್ದರಿಂದ ನ್ಯಾಯಾಲಯದ ಎದುರು ಐವರು ಆರೋಪಿಗಳನ್ನು ಹಾಜರುಪಡಿಸಲಾಗಿತ್ತು. ಜೆಎಂಎಫ್‌ಸಿ ನ್ಯಾಯಾಲಯದ ನ್ಯಾಯಾಧೀಶ ರಾಮಮೂರ್ತಿ ಅವರು ಸಿಐಡಿ ಹಾಗೂ ಆರೋಪಿಗಳ ಪರ ವಕೀಲರ ವಾದ- ಪ್ರತಿವಾದ ಆಲಿಸಿದ ನಂತರ ಆರೋಪಿಗಳಿಗೆ 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದರು. ಕೊಲೆ ಬೆದರಿಕೆ ಇದೆ ಎಂದು ಡೆತ್‌ನೋಟ್ ಬರೆದಿಟ್ಟು ಸಚಿನ್ ಪಾಂಚಾಳ್ ಡಿ.26ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು. ಒಂಬತ್ತು ಜನರ ವಿರುದ್ಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಜಾರಕಿಹೊಳಿ, ಸಿದ್ದು ಇಬ್ಬರೂ ಒಂದೇ

ವಿಜಯಪುರ: ಸತೀಶ್ ಜಾರಕಿಹೊಳಿ, ಸಿದ್ದರಾಮಯ್ಯ ಇಬ್ಬರೂ ಒಂದೇ. ಕಳೆದ ವರ್ಷವೇ ದುಬೈಗೆ ಹೋಗುವ ಕಾರ್ಯಕ್ರಮ ಇತ್ತು. ಸಿದ್ದರಾಮಯ್ಯನವರ ನಿರ್ದೇಶನದಂತೆ ಎಲ್ಲವೂ ನಡೆದಿದೆ. ಕಾಂಗ್ರೆಸ್‌ನಲ್ಲಿ ಗುಂಪು ರಾಜಕೀಯ ಇದೆ. ರಾಷ್ಟ್ರೀಯ ಅಧ್ಯಕ್ಷರು ಎಚ್ಚರಿಕೆ ಕೊಟ್ಟರೂ ಲೆಕ್ಕಿಸದಷ್ಟು ಅಸಮಾಧಾನ ಇದೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ವ್ಯಂಗ್ಯವಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಕಾಂಗ್ರೆಸ್ ಶಾಸಕರೇ ನಮ್ಮನ್ನು ಸಂಪರ್ಕಿಸಿ, ಇಂತಿಷ್ಟು ಜನ ಬರುತ್ತೇವೆ. ಈ ಸರಕಾರ ತೆಗೆದು ಹಾಕೋಣ ಎಂದಿದ್ದರು. ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಆಗುತ್ತಿಲ್ಲ. ಕ್ಷೇತ್ರಕ್ಕೆ ಅನುದಾನ ಸಿಗುತ್ತಿಲ್ಲ ಎಂದು ಕಾಂಗ್ರೆಸ್ ಶಾಸಕರೇ ನಮ್ಮ ಬಳಿ ಅಲವತ್ತುಕೊಂಡಿದ್ದರು. ಕಾಂಗ್ರೆಸ್‌ನ 40– 50 ಶಾಸಕರನ್ನು ತೆಗೆದುಕೊಂಡು ಮತ್ತೆ ಅದೇ ಹೊಲಸು ಕೆಲಸ ಮಾಡುವುದು ಬೇಡ. ಜನರು ಅವರಿಗೆ ಐದು ವರ್ಷ ಅಧಿಕಾರ ಕೊಟ್ಟಿದ್ದಾರೆ. ತೊಂದರೆ ಮಾಡುವುದು ಬೇಡ ಎಂದು ಯಾವುದೇ ಆಪರೇಷನ್ ಮಾಡಲು ಬಿಜೆಪಿ ಮುಂದೆ ಬಂದಿಲ್ಲ ಎಂದು ಸ್ಪಷ್ಟಪಡಿಸಿದರು.

ಪತನ ನಿಶ್ಚಿತ: ಅಧಿಕಾರದ ವಿಷಯದಲ್ಲಿ ಅವರಲ್ಲಿಯೇ ಜಗಳ ಹತ್ತಿದೆ. ಸಿಎಂ ಅಧಿಕಾರ ಹಂಚಿಕೆಯಲ್ಲಿ ಸಿದ್ದರಾಮಯ್ಯ ಹಾಗೂ ಡಿಕೆಶಿ ಒಪ್ಪಂದ ಆಗಿದೆ ಎಂದು ಹೇಳಲಾಗುತ್ತಿದೆ. ಇವೆಲ್ಲ ಗೊಂದಲಗಳಿಂದ ಕಾಂಗ್ರೆಸ್ ಸರಕಾರ ಕೆಲವೇ ಮುಂದಿನ ದಿನಗಳಲ್ಲಿ ಪತನ ಆಗುವುದು ನಿಶ್ಚಿತ ಎಂದು ಯತ್ನಾಳ ಭವಿಷ್ಯ ನುಡಿದರು.

ಕರ್ನಾಟಕ ಡಾ.ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಯದ ಆವರಣದಲ್ಲಿ ಶನಿವಾರ ಆಯೋಜಿಸಿದ್ದ ವಿವಿಯ 7, 8 ಮತ್ತು 9ನೇ ಘಟಿಕೋತ್ಸವದಲ್ಲಿ ಚಲನಚಿತ್ರ ಹಿರಿಯ ನಟಿ ಗಿರಿಜಾ ಲೋಕೇಶ್, ಗಮಕ ಕಲಾವಿದ ವಿದ್ವಾನ್ ಎಂ.ಆರ್. ಸತ್ಯನಾರಾಯಣ, ಸಂಗೀತ ನಿರ್ದೇಶಕ ಸಾಧು ಕೋಕಿಲ ಸೇರಿದಂತೆ ಎಂಟು ಮಂದಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು.

ಅಡಕೆ ಕ್ಯಾನ್ಸರ್‌ಗೆ ಕಾರಣ ಅಲ್ಲ

← ಮೊದಲಪುಟದಿಂದ

ಅಡಕೆಯ ಆಮದು ತಗ್ಗಿಸುವ ದೃಷ್ಟಿಯಿಂದ ಈ ಹಿಂದಿದ್ದ ಕನಿಷ್ಠ ಆಮದು ದರವನ್ನು 251 ರು. ಗಳಿಂದ 351 ರು.ಗೆ ಹೆಚ್ಚು ಮಾಡಿದ್ದೇವೆ. ಅಲ್ಲದೇ, ಅಡಕೆಯ ಅನಧಿಕೃತ ಆಮದಿನಿಂದಾಗಿ ದೇಸಿ ಮಾರುಕಟ್ಟೆ ಮೇಲೆ ದುಷ್ಪರಿಣಾಮ ಬೀರುತ್ತಿರುವುದು ಸರಕಾರದ ಗಮನದಲ್ಲಿದೆ. ಪರೋಕ್ಷ ತೆರಿಗೆ ಹಾಗೂ ಸುಂಕಗಳ ಕೇಂದ್ರಿಯ ಮಂಡಳಿ (ಸಿಬಿಐಸಿ)ಗೆ ತೀವ್ರ ನಿಗಾ ವಹಿಸಲು ಸೂಚಿಸಲಾಗಿದೆ ಎಂದರು.

ಸಮ್ಮೇಳನದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ, ಸಂಸದರಾದ ಬಿ.ವೈ.ರಾಘವೇಂದ್ರ, ವಿಶ್ವೇಶ್ವರ ಹೆಗಡೆ ಕಾಗೇರಿ ಮಾತನಾಡಿದರು. ಶಾಸಕರಾದ ಅರಗ ಜ್ಞಾನೇಂದ್ರ, ಗೋಪಾಲಕೃಷ್ಣ ಬೇಳೂರು, ಮಲೆನಾಡು ಅಭಿವೃದ್ಧಿ ಮಂಡಳಿ ಅಧ್ಯಕ್ಷ ಆರ್.ಎಂ.ಮಂಜುನಾಥಗೌಡ, ಕ್ಯಾಂಪ್ಕೋ ಅಧ್ಯಕ್ಷ ಕಿಶೋರ್‌ಕುಮಾರ್ ಕೊಡ್ಗಿ, ಮಾಜಿ ಸಚಿವರಾದ ಕಾಗೋಡು ತಿಮ್ಮಪ್ಪ, ಹರತಾಳು ಹಾಲಪ್ಪ, ಹೊರನಾಡು ಧರ್ಮದರ್ಶಿ ಭೀಮೇಶ್ವರ ಜೋಶಿ, ಮಾಜಿ ಶಾಸಕ ಸ್ವಾಮಿರಾಮ, ಬೆಳೆಗಾರರ ಸಂಘದ ಅಧ್ಯಕ್ಷ ವ.ಶಂ. ರಾಮಚಂದ್ರ ಭಟ್ ಇನ್ನಿತರರು ಇದ್ದರು.

ವಿಜ್ಞಾನಿಗಳ ಸಮಿತಿ ರಚನೆ: ಅಡಕೆಗೆ ಬಾಧಿಸುತ್ತಿರುವ ಎಲೆಚುಕ್ಕಿ ರೋಗ, ಹಳದಿ ರೋಗ ಹಾಗೂ ಕೊಳೆ ರೋಗಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ರಾಷ್ಟ್ರಮಟ್ಟದಲ್ಲಿ ವಿಜ್ಞಾನಿಗಳ ಸಮಿತಿ ರಚಿಸಲಾಗಿದೆ. ಸಮಿತಿಯ ಶಿಫಾರಸುಗಳನ್ನು ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಲು ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ 67 ಕೋಟಿ ರು. ತೆಗೆದಿಡಲಾಗುವುದು. ವೈರಸ್ ಬಾಧಿಸದ ಅಡಕೆ ತಳಿಯ ಸಂಶೋಧನೆಯೂ ಪ್ರಗತಿಯಲ್ಲಿದೆ ಎಂದು ಸಚಿವ ಚೌವ್ಹಾಣ್ ಹೇಳಿದರು.

ಇ.ಡಿ. ಬಿಜೆಪಿಯ ಅಂಗ ಸಂಸ್ಥೆಯೇ?

ಹುಬ್ಬಳ್ಳಿ: ಕಾಂಗ್ರೆಸ್ ಕಾರ್ಯಕ್ರಮಕ್ಕೆ ತೊಂದರೆ ಕೊಡುವ ಕೆಟ್ಟ ಯೋಚನೆ ಇ.ಡಿ ಗೆ ಯಾಕೆ ಬಂತು. ಹಿಂದೆ ಹಲವು ಪ್ರಕರಣಗಳಲ್ಲಿ ತನಿಖೆ ಮಾಡಿದಾಗ ಪ್ರೆಸ್ ನೋಟ್ ಕೊಟ್ಟಿದ್ರಾ? ಅಂದು ದಾಳಿ ಮಾಡಿದಾಗ ಪ್ರೆಸ್ ನೋಟ್ ಕೊಡದ ಇ.ಡಿ ಅಧಿಕಾರಿಗಳು ಕಾಂಗ್ರೆಸ್ ಸಮಾವೇಶಕ್ಕೆ ತೊಂದರೆ ಕೊಡುವುದಕ್ಕಾಗಿ ಈಗ ಪ್ರೆಸ್ ನೋಟ್ ಕೊಟ್ಟಿದ್ದಾರೆ. ಇ.ಡಿ ಬಿಜೆಪಿಯ ಅಂಗ ಸಂಸ್ಥೆಯೇ ಎಂದು ಸಚಿವ ಎಚ್.ಕೆ.ಪಾಟೀಲ ಹರಿಹಾಯ್ದರು. ಮುಡಾ ಪ್ರಕರಣದಲ್ಲಿ 300 ಕೋಟಿ ರು. ಆಸ್ತಿ ಜಪ್ತಿ ವಿಚಾರಕ್ಕೆ ಸಂಬಂಧಿಸಿದಂತೆ ಮಾತನಾಡಿ, ಇ.ಡಿ ತಮ್ಮ ಕೆಲಸ ಮಾಡುವುದು ಬಿಟ್ಟು ಪ್ರೆಸ್ ನೋಟ್ ಕೊಡುತ್ತಿದ್ದಾರೆ. ಇದು ಪ್ರಜಾಪ್ರಭುತ್ವ ವ್ಯವಸ್ಥೆ ಅಶಕ್ತಗೊಳಿಸುವುದಾಗಿದೆ ಎಂದರು.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಬೆಂ.ಮ.ಪ್ರಾ.

ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052
ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/147/2024-25 **ಪ್ರಕಟಣೆ** ದಿನಾಂಕ: 18.01.2025

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 19/61ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **ವ್ಯವಸಾಯ** ವಲಯದಿಂದ **ವಸತಿ** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂ ಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗು	ಅನುಮೋದಿತ ಮಹಾ ಯೋಜನೆಯಂತೆ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
(1)	(2)	(3)	(4)	(5)	(6)	(7)	(8)	(9)
1	ಶ್ರೀ ರವಿ ವಿ. ಬಿನ್ ಇ.ಡಿ. ವಾಸು ಮತ್ತು ಶ್ರೀ ಆರ್. ಆನಂದ್ ಬಿನ್ ರಾಜಪ್ಪ, ನಂ.186, 6ನೇ ಅಡ್ಡರಸ್ತೆ, 28ನೇ ಮುಖ್ಯರಸ್ತೆ, 1ನೇ ಸೆಕ್ಟರ್, ಹೆಚ್.ಎಸ್.ಆರ್. ಬಡಾವಣೆ, ಬೆಂಗಳೂರು ದಕ್ಷಿಣ, ಬೆಂಗಳೂರು–560 102.	ಆನೇಕಲ್	ಅತ್ತಿಬೆಲೆ	ಬಿದರಗುಪ್ಪೆ	10/4 10/5	1–19 0–32	ವ್ಯವಸಾಯ	ವಸತಿ
2	ಶ್ರೀ ಆರ್. ಆನಂದ್ ಬಿನ್ ರಾಜಪ್ಪ ಮತ್ತು ಶ್ರೀ ವರುಣ್ ಸೋಮನಿ ಬಿನ್ ಮೋಹನ್ ಲಾಲ್ ಸೋಮನಿ	ಆನೇಕಲ್	ಅತ್ತಿಬೆಲೆ	ಬಿದರಗುಪ್ಪೆ	359/5	0–32¾	ವ್ಯವಸಾಯ	ವಸತಿ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವ್ಯವಸಾಯ ವಲಯ'** ದಿಂದ **'ವಸತಿ ವಲಯ'** ಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಇರುವುದಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು (ಅ.ಪ್ರ)
ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾ.ಸಾ.ಸಂ.ಇ/4432/ಆಕಾರ್/2024–25

ಕಾರ್ಮಿಕ ಇಲಾಖೆ
ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿ

ಸದಸ್ಯ ಕಾರ್ಯದರ್ಶಿಯವರ ಕಛೇರಿ, 3ನೇ ಮಹಡಿ, "ಕಲ್ಯಾಣ ಸುರಕ್ಷಾ ಭವನ" ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029, ದೂ: 080–29759983/8883, Email:ashadeepa29@gmail.com
ವೆಬ್‌ಸೈಟ್: ashadeepayojane.karnataka.gov.in

ಸಂಖ್ಯೆ: ಆಯೋಸೊ/ಇಎಸ್‌ಟಿ/ಸಿಆರ್–04/2024–25 ದಿನಾಂಕ: 18.01.2025

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿ, ಬೆಂಗಳೂರು, ಇವರು ಸೊಸೈಟಿಯ ಕಛೇರಿಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ಪೂರೈಸಲು ಸೂಕ್ತ ಸಂಸ್ಥೆಯನ್ನು ಆಯ್ಕೆ ಮಾಡುವ ಉದ್ದೇಶಕ್ಕಾಗಿ, ಇ–ಆಡಳಿತ ಇಲಾಖೆಯ, ಇ–ಸಂಗ್ರಹಣಾ ವೇದಿಕೆಯ ಮುಖಾಂತರ 07 ದಿನಗಳ ಅಲ್ಪಾವಧಿ ಟೆಂಡರ್‌ನ್ನು ದಿನಾಂಕ: **18.01.2025** ರಂದು ಆಹ್ವಾನಿಸಲಾಗಿದೆ. ಬಿಡ್ ಸಲ್ಲಿಸಲು ಕೊನೆಯ ದಿನಾಂಕ: **27.01.2025 ರ ಸಾಯಂಕಾಲ 5.00 ಗಂಟೆ** ಆಗಿರುತ್ತದೆ. ಹೆಚ್ಚಿನ ಮಾಹಿತಿ ಮತ್ತು ವಿವರಗಳನ್ನು ಇ–ಸಂಗ್ರಹಣಾ ವೇದಿಕೆಯ ವೆಬ್ ಸೈಟ್ **www.eproc.karnataka.gov.in** ನಲ್ಲಿ ಪಡೆಯಬಹುದಾಗಿದೆ.

ಸಹಿ/–
ಸದಸ್ಯ ಕಾರ್ಯದರ್ಶಿ,
ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ ಯೋಜನೆ) ಸೊಸೈಟಿ, ಬೆಂಗಳೂರು

ವಾಸಾಸಂಇ/ವಾಪ್ರ/ಎಸ್‌ಎಸ್‌ಸಿ/4429/2024–25

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,

ತುಮಕೂರು ಉಪ ವಿಭಾಗ (ಪ್ರಾದೇಶಿಕ), ರಾಮಕೃಷ್ಣನಗರ, ಕುಣಿಗಲ್ ರಸ್ತೆ,ತುಮಕೂರು– 572105
Email: acftumkur@gmail.com

ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: ಸ.ಅ.ಸಂ/ತುಉವಿ/ಸಿವಿಲ್/ಮರುಇಟೆಂಡರ್/ಸಿಆರ್–506/2024–25/640 ದಿನಾಂಕ: 16–01–2025

ಮರು ಇ–ಟೆಂಡರ್ ಪ್ರಕಟಣೆ

2024–25ನೇ ಸಾಲಿನಲ್ಲಿ ಕೆ.ಎಂ.ಇ.ಆರ್.ಸಿ (CEPMIZ) ಯೋಜನೆಯಡಿ ತುಮಕೂರು ಪ್ರಾದೇಶಿಕ ವಿಭಾಗ, ತುಮಕೂರು ಉಪ ವಿಭಾಗದ, ಗುಬ್ಬಿ ವಲಯದಲ್ಲಿ ಗಸ್ತುಹಾದಿ ನಿರ್ಮಾಣ, ಪಿಲ್ಲರ್ ಸಹಿತ ಮುಳ್ಳುತಂತಿ ಬೇಲಿ ನಿರ್ಮಾಣ, ವಾಚ್ ಟವರ್ ನಿರ್ಮಾಣ, ಸಿಲ್ಟ್ ಸೆಟ್ಟಿಂಗ್ ಟ್ಯಾಂಕ್ ನಿರ್ಮಾಣ, ಹಾಗೂ ಇನ್ನಿತರೆ ಕಾಮಗಾರಿಗಳನ್ನು ಕೈಗೊಳ್ಳಲು 2024–25ನೇ ಸಾಲಿಗೆ ಪಿ.ಡಬ್ಲ್ಯೂ.ಡಿ ಗುತ್ತಿಗೆದಾರರಾಗಿ ನೋಂದಾವಣಿಯಾಗಿರುವ ಗುತ್ತಿಗೆದಾರರಿಂದ ಪ್ರತ್ಯೇಕವಾಗಿ ಮರು ಇ–ಟೆಂಡರ್‌ಗಳನ್ನು ದಾಖಲಿಸಲು ಕೋರಿ ಟೆಂಡರ್ ಆಹ್ವಾನಿಸಲಾಗಿದೆ. **ಒಟ್ಟು 06** ಕಾಮಗಾರಿಗಳ ಪೈಕಿ ಗರಿಷ್ಠ ಅಂದಾಜು ಮೊತ್ತ **ರೂ. 10,72,000/–** ಗಳಿಗೆ ಇ.ಎಂ.ಡಿ ಮೊತ್ತ **ರೂ. 13,400/–** ಗಳಾಗಿರುತ್ತದೆ ಮತ್ತು ಕನಿಷ್ಠ ಅಂದಾಜು ಮೊತ್ತ **ರೂ. 6,18,800/–** ಗಳಿಗೆ ಇ.ಎಂ.ಡಿ. ಮೊತ್ತ **ರೂ. 7,735/–** ಗಳಾಗಿರುತ್ತದೆ. **ದಿನಾಂಕ: 29–01–2025ರ ಅಪರಾಹ್ನ 3–00 ಗಂಟೆ**ಯವರೆಗೆ ಟೆಂಡರ್ ಸಲ್ಲಿಸಬಹುದಾಗಿದೆ ಹಾಗೂ **ದಿನಾಂಕ: 30–01–2025ರಂದು ಅಪರಾಹ್ನ 3–00 ಗಂಟೆ**ಗೆ ತಾಂತ್ರಿಕ ಬಿಡ್ಡುಗಳನ್ನು ತೆರೆಯಲಾಗುವುದು. ಪರಿಮಾಣ, ಇಎಂಡಿ ಹಾಗೂ ಇನ್ನಿತರೆ ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ ಮತ್ತು ಅಂತರ್ಜಾಲದ ಮೂಲಕ ಪಡೆಯಬಹುದಾಗಿದೆ.

ವೆಬ್‌ಸೈಟ್ ವಿಳಾಸ – **http://www.kppp.karnataka.gov.in.**

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ತುಮಕೂರು ಉಪ ವಿಭಾಗ, ತುಮಕೂರು

DIPR/TUM/RO-150A/24-25/Oysters

ಕರ್ನಾಟಕ ನೀರಾವರಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ಯಮ)

ಕಾರ್ಯಪಾಲಕ ಅಭಿಯಂತರರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.2, ಹೂವಿನಹಡಗಲಿ, ವಿಜಯನಗರ ಜಿಲ್ಲೆ.

Ph. No. 08399-200001 email:eeslid2hdl@gmail.com

ಅಲ್ಪಾವಧಿ ಟೆಂಡರ್ ಪ್ರಕಟಣೆ (ONLY THROUGH "*e-Procurement*" SYSTEM)

ಉಲ್ಲೇಖ: 1. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1200/2024–25 ದಿನಾಂಕ: 10.01.2024.
2. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1201/2024–25 ದಿನಾಂಕ: 10.01.2024.
3. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1202/2024–25 ದಿನಾಂಕ: 10.01.2024.
4. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1203/2024–25 ದಿನಾಂಕ: 10.01.2024.
5. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1204/2024–25 ದಿನಾಂಕ: 10.01.2024.
6. ಈ ಕಛೇರಿ ಟೆಂಡರ್ ಪ್ರಕಟಣೆ ಪತ್ರ ಸಂಖ್ಯೆ:1205/2024–25 ದಿನಾಂಕ: 10.01.2024

ಸಿಂಗಟಾಲೂರು ಏತ ನೀರಾವರಿ ಯೋಜನೆಯ ಹೂವಿನಹಡಗಲಿ ವಿಭಾಗ–02 ಕಛೇರಿಯಡಿ ಬರುವ ಕೆಳಕಂಡ ಕಾಮಗಾರಿಗಳಿಗೆ ಉಲ್ಲೇಖ(1) ರಿಂದ (6) ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

Sl. No	Indent Number	Amount put to tender (Rs. in Lakhs) (Including GST)	EMD (Rs. in Lakhs)
1.	(KNNL/2024-25/OW/WORK_INDENT2476)	248.78	3.73
2.	(KNNL/2024-25/OW/WORK_INDENT2477)	196.08	2.94
3.	(KNNL/2024-25/OW/WORK_INDENT2481)	150.80	2.26
4.	(KNNL/2024-25/OW/WORK_INDENT2483)	188.23	2.82
5.	(KNNL/2024-25/OW/WORK_INDENT2482)	176.33	2.64
6.	(KNNL/202425/OW/WORK_INDENT2478)	32.99	0.66

ಇನ್ನುಳಿದಂತೆ, ಸದರಿ ಟೆಂಡರಿಗೆ ಸಂಬಂಧಿಸಿದ ಷರತ್ತು/ನಿಯಮಾವಳಿಗಳ ಮಾಹಿತಿಯನ್ನು ಕೆಳಗೆ ಸಹಿ ಮಾಡಿರುವ ಅಧಿಕಾರಿಯವರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ **ದಿನಾಂಕ:17.01.2025**ರ ನಂತರ **"https://kppp.karnataka.gov.in"** ವೆಬ್‌ಸೈಟ್‌ನಲ್ಲಿ ಟೆಂಡರ್ ಡಾಕ್ಯೂಮೆಂಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಬಿಡ್‌ನ್ನು ಸಲ್ಲಿಸಬಹುದಾಗಿರುತ್ತದೆ. ಸದರಿ ಕಾಮಗಾರಿಯ ಟೆಂಡರ್‌ಗೆ ಬಿಡ್ಡನ್ನು ಸಲ್ಲಿಸಲು ಕೊನೆಯ **ದಿನಾಂಕ: 27.01.2025** ಎಂದು ಮತ್ತು ಟೆಂಡರ್ ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ: 29.01.2025** ಎಂದು ನಿಗದಿಪಡಿಸಿದೆ. ಸದರಿ ಟೆಂಡರ್‌ಗಳ ಕುರಿತು **Pre-bid** ಸಭೆಯನ್ನು **ದಿನಾಂಕ:21.01.2025,** ಕಾರ್ಯಪಾಲಕ ಅಭಿಯಂತರರು, ಸಿಂಗಟಾಲೂರು ಏತ ನೀರಾವರಿ ಯೋಜನೆ, ವಿಭಾಗ ನಂ.2, ಹೂವಿನಹಡಗಲಿ ಕಚೇರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಇನ್ನಿತರೆ ಹೆಚ್ಚಿನ ಮಾಹಿತಿಯನ್ನು **e-procurement Helpdesk Phone No's: +91-80-46010000, +91-80-68948777** ಅನ್ನು ಸಂಪರ್ಕಿಸಿ ಪಡೆಯಬಹುದಾಗಿದೆ. ನಿಬಂಧನೆಗೊಳಪಟ್ಟ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಟೆಂಡರ್‌ಗಳನ್ನು ಸ್ವೀಕರಿಸುವ ಅಧಿಕಾರ ಪಡೆದಿರುವ ಅಧಿಕಾರಿಯು ಎಲ್ಲಾ ಅಥವಾ ಯಾವುದೇ ಟೆಂಡರ್‌ನ್ನು ಕಾರಣ ನೀಡದೆ ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಿಂಗಟಾಲೂರು ಏತ ನೀರಾವರಿ ಯೋಜನೆ, ನಂ. 2 ವಿಭಾಗ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಹೂವಿನಹಡಗಲಿ, ವಿಜಯನಗರ ಜಿಲ್ಲೆ.

ವಾ.ಸಾ.ಸಂ.ಇ/ವಿಜಯನಗರ/2024–25/ ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/476

ಪುರಸಭಾ ಕಾರ್ಯಾಲಯ, ಮಳವಳ್ಳಿ.

ಸಂಖ್ಯೆ:ಪುಕಾಮ/ತಾಂತ್ರಿಕ ವಿಭಾಗ/ಜೆ.ಇ/ಟೆಂಡರ್–08/2024–25 ದಿನಾಂಕ:09.01.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

ಈ ಮೂಲಕ ಪ್ರಚುರಪಡಿಸುವುದೇನೆಂದರೆ, ಮಳವಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 15ನೇ ಹಣಕಾಸು ಯೋಜನೆ ಮುಕ್ತನಿಧಿ 2023–24 & 15ನೇ ಹಣಕಾಸು ಯೋಜನೆ ಮುಕ್ತನಿಧಿ 2021–22 ಉಳಿತಾಯ ಯಡಿಯಲ್ಲಿನ ಈ ಕೆಳಕಂಡಂತೆ ಕೈಗೊಳ್ಳಲಿರುವ ಕಾಮಗಾರಿಯನ್ನು ಅನುಷ್ಠಾನಗೊಳಿಸಲು ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಧ್ಯಾದೇಶ 1999 ಮತ್ತು ನಿಯಮಗಳು 2000ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ ಬೆಂಗಳೂರು ಮತ್ತು ಇ–ಪ್ರೊಕ್ಯೂರ್ಮೆಂಟ್, ಬೆಂಗಳೂರುರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಟೆಂಡರ್‌ನ್ನು KW-1 ರ ನಿಯಮಗಳಂತೆ ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರು ತಮ್ಮ ದರ ನಮೂದಿಸಿದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೊರ್ಟೆಲ್ ಮೂಲಕ ಈ ಕೆಳಗೆ ನಿಗಧಿಪಡಿಸಿದ ಅವಧಿಯೊಳಗೆ ಆನ್ ಲೈನ್‌ನಲ್ಲಿ ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಪುರಸಭೆ ಮಳವಳ್ಳಿ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ **www.malavallitown.mrc.gov.in** ನಲ್ಲಿ ವೀಕ್ಷಿಸಬಹುದು. **Visit:https://www.eproc.karnataka.gov.in/** (ಮ್ಯಾನುಯೆಲ್ ಟೆಂಡರ್‌ಗಳನ್ನು ಸ್ವೀಕರಿಸುವುದಿಲ್ಲ).

(1) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 29-01-2025 upto 5.00 pm. (2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30-01-2025 at 11.00 am or any other convenient date notified later. (3) ಟೆಂಡರ್ ಫಾರಂ ಬೆಲೆ ರೂ.ಗಳಲ್ಲಿ : ಇ–ಪೋರ್ಟಲ್ ನಲ್ಲಿರುವಂತೆ. (4) ಕಾಮಗಾರಿ ಪೂರ್ಣಗೊಳಿಸುವ ಅವಧಿ : 90 ದಿನಗಳು (ಮಳೆಗಾಲ ಸೇರಿ).

ಕ್ರ.ಸಂ : 01. ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ನಂ. : DMA/2024-25/OW/ WORK_INDENT34566. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : 12.52. ಟೆಂಡರ್ ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 10.58. ಇ.ಎಂ.ಡಿ ಮೊತ್ತ ರೂ.ಗಳಲ್ಲಿ : 26500. ಗುತ್ತಿಗೆದಾರರ ದರ್ಜೆ : 4ನೇ ದರ್ಜೆ & ಮೇಲ್ಪಟ್ಟ ಸಿವಿಲ್. ಮೀಸಲು : ಪ್ರವರ್ಗ–1.

ಕ್ರ.ಸಂ : 02. ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ನಂ. : DMA/2024-25/OW/ WORK_INDENT34563. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : 15.52. ಟೆಂಡರ್ ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 13.14. ಇ.ಎಂ.ಡಿ ಮೊತ್ತ ರೂ.ಗಳಲ್ಲಿ : 33000. ಗುತ್ತಿಗೆದಾರರ ದರ್ಜೆ : 4ನೇ ದರ್ಜೆ & ಮೇಲ್ಪಟ್ಟ ಸಿವಿಲ್. ಮೀಸಲು : ಇತರೆ.

ಕ್ರ.ಸಂ : 03. ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ನಂ. : DMA/2024-25/OW/ WORK_INDENT34562. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : 15.52. ಟೆಂಡರ್ ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 13.14. ಇ.ಎಂ.ಡಿ ಮೊತ್ತ ರೂ.ಗಳಲ್ಲಿ : 16425. ಗುತ್ತಿಗೆದಾರರ ದರ್ಜೆ : 4ನೇ ದರ್ಜೆ & ಮೇಲ್ಪಟ್ಟ ಸಿವಿಲ್. ಮೀಸಲು : ಎಸ್.ಸಿ.

ಕ್ರ.ಸಂ : 04. ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ನಂ. : DMA/2024-25/OW/ WORK_INDENT34561. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : 15.52. ಟೆಂಡರ್ ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 13.09. ಇ.ಎಂ.ಡಿ ಮೊತ್ತ ರೂ.ಗಳಲ್ಲಿ : 33000. ಗುತ್ತಿಗೆದಾರರ ದರ್ಜೆ : 4ನೇ ದರ್ಜೆ & ಮೇಲ್ಪಟ್ಟ ಸಿವಿಲ್. ಮೀಸಲು : ಇತರೆ.

ಕ್ರ.ಸಂ : 05. ಇ–ಪ್ರೊಕ್ಯೂರ್‌ಮೆಂಟ್ ಇಂಡೆಂಟ್ ನಂ. :DMA/2024-25/BD/ WORK_INDENT34560. ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ) : 15.52. ಟೆಂಡರ್ ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : 13.19. ಇ.ಎಂ.ಡಿ ಮೊತ್ತ ರೂ.ಗಳಲ್ಲಿ : 16425. ಗುತ್ತಿಗೆದಾರರ ದರ್ಜೆ : 4ನೇ ದರ್ಜೆ & ಮೇಲ್ಪಟ್ಟ ಸಿವಿಲ್. ಮೀಸಲು : ಎಸ್.ಟಿ.

ಸಹಿ/– ಅಧ್ಯಕ್ಷರು, ಪುರಸಭೆ, ಮಳವಳ್ಳಿ ಸಹಿ/– ಮುಖ್ಯಾಧಿಕಾರಿ, ಪುರಸಭೆ, ಮಳವಳ್ಳಿ

ವಾಸಾಸಂಇ/ಸನಿ–ಮಂ/ಕೆಎಸ್‌ಎಂಸಿ&ಎ/562/2024–25

ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಿಲ್ಲಾಡಳಿತ ಭವನ, ಚಪ್ಪರದಕಲ್ಲು (ಬೀರಸಂದ್ರ), ದೇವನಹಳ್ಳಿ ತಾಲ್ಲೂಕು,
ಬೆಂಗಳೂರು ಗ್ರಾಮಾಂತರ. ದೂರವಾಣಿ : 080–2978 7463,
ಇ–ಮೇಲ್ : eerdwsd.bngr1@gmail.com

ಸಂಖ್ಯೆ : ಕಾ.ಪಾ.ಅ./ಗ್ರಾ.ಕು.ನೀ.&ನೈ.ವಿ./ಬೆಂ.ಗ್ರಾ./ತಾ.ಶಾ./ಟೆಂಡರ್/2024–25/975
ದಿನಾಂಕ : 17–01–2025

ಅಲ್ಪಾವಧಿ ಟೆಂಡರ್ ಪ್ರಕಟಣೆ
ಸಂಖ್ಯೆ : 07/2024-25 ದಿನಾಂಕ : 17-01-2025

(ಕೆ.ಪಿ.ಪಿ. ಪೋರ್ಟಲ್ ಮೂಲಕ)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ ರವರು 2024–25 ನೇ ಸಾಲಿನ JJM Support Activity ಹಾಗೂ ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಯೋಜನೆಯಡಿ ಅರ್ಹ ಅಧಿಕೃತ ವಿತರಕರು / ಸರಬರಾಜುದಾರರು ಮತ್ತು ಉತ್ಪಾದಕರು ರವರಿಂದ ಹಾಗೂ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಐಟಂವಾರು ಟೆಂಡರ್‌ನ್ನು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಜಿ. – 2 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿ.ಯನ್ನು ಈ ಪೇಮೆಂಟ್ ಮುಖಾಂತರ ಕೆ.ಪಿ.ಪಿ.ಪಿ. ಪೋರ್ಟಲ್‌ನಲ್ಲಿ ಸಲ್ಲಿಸುವುದು.

1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : 18–01–2025 ರ ಸಂಜೆ 4.00 ಗಂಟೆಯ ನಂತರ, 2) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 28–01–2025 ರ ಸಂಜೆ 4.00 ಗಂಟೆಯವರೆಗೆ, 3) ಟೆಂಡರ್ ತೆರೆಯುವ ದಿನಾಂಕ : 29–01–2025 ರ ಸಂಜೆ 4.05 ಗಂಟೆಯ ನಂತರ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ವಿಭಾಗ,
ಬೆಂಗಳೂರು ಗ್ರಾಮಾಂತರ.

ವಾಸಾಸಂಇ/ಬೆಂಗ್ರಾಜಿ/ಮಣಿಪಾಲ್/4411/2024–25

ಲೋಕೋಪಯೋಗಿ ಇಲಾಖೆ, ತುಮಕೂರು,

ಕ್ರ.ಸಂ:ಕಾಇಂ:ಲೋಇವಿ:ತುಮ:ಸ.ಇಂ–2: ಟೆಂಡರ್ 33:2024–25, ದಿನಾಂಕ: 16–01–2025

ಟೆಂಡರ್ ಪ್ರಕಟಣೆ ಸಂ. 33/2024–25 ದಿನಾಂಕ 16–01–2025

ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 33/2024–25: ದಿನಾಂಕ 16–01–2025 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ 5054–ರಾಜ್ಯ ಹೆದ್ದಾರಿ ರಸ್ತೆಗಳ–ಸುಧಾರಣೆ ಹಾಗೂ 8443 ಠೇವಣಿ ವಂತಿಕೆ (ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆ) ಲೆಕ್ಕ ಶೀರ್ಷಿಕೆ ಅಡಿಯಲ್ಲಿ 03 ಕಾಮಗಾರಿಗೆ KPPP-Portal ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ **ರೂ: 162.34 ಲಕ್ಷ**ಗಳು, ಇ.ಎಂ.ಡಿ ಗರಿಷ್ಠ ಮೊತ್ತ **ರೂ. 2,43,524/–,** ಟೆಂಡರಿಗಿಟ್ಟ ಕನಿಷ್ಠ ಮೊತ್ತ **ರೂ: 6.52 ಲಕ್ಷ**ಗಳು, ಇ.ಎಂ.ಡಿ ಕನಿಷ್ಠ ಮೊತ್ತ **ರೂ. 16,295/–** ಅರ್ಹ ಗುತ್ತಿಗೆದಾರರು 3,4ನೇ ದರ್ಜೆ ಮೇಲ್ಪಟ್ಟು, **ಕಾಲಾವಧಿ: 4,6 ತಿಂಗಳು,** ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **30–01–2025 ರ 17–00 ಗಂಟೆಗೆ,** KPPP-Portal ಮೂಲಕ ಟೆಂಡರ್‌ಅನ್ನು **ದಿನಾಂಕ 16–01–2025 ರಿಂದ 31–01–2025 ರ 16.00 ಗಂಟೆ**ವರೆಗೆ ಪಡೆಯಬಹುದಾಗಿದೆ. ಟೆಂಡರ್‌ಅನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **31–01–2025 ರ 16–00 ಗಂಟೆ**ವರೆಗೆ, ತಾಂತ್ರಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: **01–02–2025 ರ 16–30 ಗಂಟೆಗೆ,** ಆರ್ಥಿಕ ಬಿಡ್‌ಅನ್ನು ತೆರೆಯುವ ದಿನಾಂಕ ಮತ್ತು ವೇಳೆ: **03–02–2025 ರ 11.00 ಗಂಟೆಗೆ,** ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ:**https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ.

ಸೂಚನೆ: ಆರ್ಥಿಕ ವಹಿವಾಟಿನ ಪತ್ರದಲ್ಲಿ ಯು.ಡಿ.ಐ ಸಂಖ್ಯೆಯನ್ನು ನಮೂದಿಸಿಲ್ಲದಿರುವ ಆರ್ಥಿಕ ವಹಿವಾಟನ್ನು ಪರಿಗಣಿಸುವುದಿಲ್ಲ.

ಸಹಿ/–ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ತುಮಕೂರು.

DIPR/TUM/RO-152/24-25/Oysters

ರಾಷ್ಟ್ರೀಯ ಆರೋಗ್ಯ ಅಭಿಯಾನ
ಕರ್ನಾಟಕ ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ

ಆರೋಗ್ಯ ಸೌಧ, 1ನೇ ಮಹಡಿ, ಮಾಗಡಿ ರಸ್ತೆ, ಬೆಂಗಳೂರು–23
ದೂ: 080–23113584 ಇ–ಮೇಲ್:pdrch-hfws@karnataka.gov.in

ಸಂ: DD/NCD/48/2023-24 (E-1270286) ದಿನಾಂಕ: 18.01.2025

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ

TENDER FOR PROCUREMENT AND SUPPLY OF SPIROMETER UNDER 15TH FINANCE COMMISSION, NATIONAL HEALTH MISSION (NCD)

ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿಯಲ್ಲಿ "Supply & Installation of Spirometer Equipment for Karnataka State" ಗಳನ್ನು ಸರಬರಾಜು ಮಾಡಲು ಮೂಲ ತಯಾರಕರು / ಅಧಿಕೃತ ಸರಬರಾಜುದಾರರು ಅಗತ್ಯದಾಖಲೆಯೊಂದಿಗೆ ಭಾಗವಹಿಸಲು ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

Tender No: NHM/2024-25/IND0028

ಅರ್ಹತೆಯುಳ್ಳ ಟೆಂಡರ್‌ದಾರರು ಮೇಲ್ಕಂಡ ವಿಷಯದ ಬಗ್ಗೆ ವಿವರವಾದ ಮಾಹಿತಿಯನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪಡೆಯಬಹುದಾಗಿದೆ. ಟೆಂಡರ್ ದಾಖಲೆಗಳನ್ನು ದಿನಾಂಕ: **18/01/2025** ರಿಂದ ಡೌನ್‌ಲೋಡ್ ಮಾಡಬಹುದಾಗಿದೆ ಮತ್ತು ಟೆಂಡರ್ ದಾಖಲೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ: **27/02/2025 ಅಪರಾಹ್ನ 05:30 ಗಂಟೆಯವರೆಗೆ.**

ಹೆಚ್ಚಿನ ಮಾಹಿತಿಗಾಗಿ ಕಛೇರಿಯ ಸಮಯದಲ್ಲಿ ಬೆಳಿಗ್ಗೆ 11.00 ರಿಂದ ಸಂಜೆ 04.00 ಗಂಟೆಯವರೆಗೆ ಭೇಟಿ ನೀಡಬಹುದು

ಸಹಿ/–
ಯೋಜನಾ ನಿರ್ದೇಶಕರು (ಆರ್.ಸಿ.ಹೆಚ್)

DIPR/CP/BCPL/4428/2024-25

ಕರ್ನಾಟಕ ಗೃಹ ಮಂಡಳಿ

ಕರ್ನಾಟಕ ಗೃಹ ಮಂಡಲಿ – ಸಮುದಾಯದ ನಿರ್ಮಾಣದತ್ತ

3ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು – 560009, ದೂರವಾಣಿ: 080–22273511–16

ಟೆಂಡರ್ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯಲ್ಲಿ ಪೂರ್ವಾರ್ಹತೆ ಪಡೆದಿರುವ ಹಾಗೂ ಪಡೆಯಲಿಚ್ಛಿಸುವ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್‌ನ್ನು ಕರೆಯಲಾಗಿದೆ.

ಕ್ರ. ಸಂ	ಕಾಮಗಾರಿಯ ಹೆಸರು	ಕಾಮಗಾರಿ ಇಂಡೆಂಟ್ & ಐಎಫ್‌ಟಿ ನಂ.	ಟೆಂಡರ್‌ಗಿಟ್ಟ ಮೊತ್ತ(ರೂ ಗಳಲ್ಲಿ)	ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ
1.	ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ಸೂರ್ಯನಗರ 2ನೇ ಹಂತದಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಯ ರಸ್ತೆಗಳ ರಿಪೇರಿ ಕಾಮಗಾರಿ–ಸೆಕ್ಟರ್ – ಎ	KHB/2024-25/RD/ WORK_INDENT469 & IFT No. 265/2024-25, Date: 17.01.2025	1,80,51,568/–	01.02.2025 ಸಂಜೆ 4.00 ಗಂಟೆವರೆಗೆ
2.	ಬೆಂಗಳೂರು ನಗರ ಜಿಲ್ಲೆ ಆನೇಕಲ್ ತಾಲ್ಲೂಕು ಸೂರ್ಯನಗರ 2ನೇ ಹಂತದಲ್ಲಿ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಯ ರಸ್ತೆಗಳ ರಿಪೇರಿ ಕಾಮಗಾರಿ–ಸೆಕ್ಟರ್ – ಬಿ	KHB/2024-25/RD/ WORK_INDENT470 & IFT No. 266/2024-25, Date: 17.01.2025	1,80,18,908/–	
3.	ಸೂರ್ಯನಗರ 3ನೇ ಹಂತದ ಬ್ಲಾಕ್–2, 3, 6,7, 8 & 9 ರಲ್ಲಿ ಅಭಿವೃದ್ಧಿಪಡಿಸಿರುವ ಬಡಾವಣೆಯ 2024–25 ನೇ ಸಾಲಿನ ವಾರ್ಷಿಕ ನಿರ್ವಹಣೆ ಕಾಮಗಾರಿ	KHB/2024-25/RD/ WORK_INDENT502 & IFT No. 270/2024-25, Date: 17.01.2025	2,00,48,361/	

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಛೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ: ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು ದೂರವಾಣಿ: 080–22273511/ 080–22100077 **website:https://kppp.karnataka.gov.in**

ಸಹಿ/–
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

DIPR/CP/4417/Zen/2024-25

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಜೆಸ್ಕಾಂ ಗುಲಬರ್ಗಾ. CIN:U4010KA2002SGC030436
E–mail:eeetpgescom@gmail.com Website:gescom.in

ಸಂಖ್ಯೆ:–ಜೆಸ್ಕಾಂ/ಮು.ಇಂ.(ಕಾ)/ಅ.ಇಂ(ತಾಂ)/ಕಾ.ನಿ.ಇಂ/ಸ.ಕಾ.ನಿ.ಇಂ–1(ತಾ)/ಸಇಂ–1(ತಾ)/2024-25/53973-87
ದಿನಾಂಕ: 17–01–2025

:: ಅಲ್ಪಾವದಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರಮೆಂಟ ಮುಖಾಂತರ) ::

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ ವ್ಯಾಪ್ತಿಯಲ್ಲಿ ಬರುವ ಕಾರ್ಯ ಮತ್ತು ಪಾಲನಾ ವಿಭಾಗಗಳಲ್ಲಿ ರೂ. 10,000/– ಮೂಲಸೌಕರ್ಯ ಶುಲ್ಕವನ್ನು ಪಾವತಿಸಿದ ಮತ್ತು ಗ್ರಿಡ್‌ನಿಂದ 500 ಮೀಟರ್ ಒಳಗೆ ಅಸ್ತಿತ್ವದಲ್ಲಿರುವ ಮತ್ತು 22.09.2023ಕ್ಕೆ ವಿದ್ಯುತ್ ಸರಬರಾಜು ಮಾಡಲು ಬಾಕಿ ಇರುವ UAIP ಅರ್ಜಿದಾರರಿಗೆ ಮೂಲಸೌಕರ್ಯ ರಚಿಸಲು ಪಿಟಿಕೆ ರೇಟ್ ಕಾಂಟ್ರಾಕ್ಟ್ ಅಡಿಯಲ್ಲಿ 01 ವರ್ಷದ ಅವಧಿಗೆ (extendable by one more Year at the discretion of GESCOM) ಅರ್ಹ ಬಿಡ್‌ದಾರರುಗಳಿಂದ **ಬೀದರ ವಿಭಾಗ** (Bid Enq no:TP-087/UAIP/2024-25/Bidar Division and Approximate amount put to tender: **Rs. 1282.52 Lakhs), ಹುಮನಾಬಾದ ವಿಭಾಗ** (Bid Enq no:TP-088/UAIP/2024-25/ Humnabad Division and Approximate amount put to tender: **Rs. 217.28 Lakhs)** ಹಾಗೂ **ಬಳ್ಳಾರಿ ಗ್ರಾಮೀಣ ವಿಭಾಗ** (Bid Enq no:TP-089 /UAIP /2024-25 /Ballari Rural Division and Approximate amount put to tender: **Rs.124.32 Lakhs)** ಗಳಿಗೆ ಟೆಂಡರ್‌ನ್ನು ಅಹ್ವಾನಿಸಲಾಗಿದೆ.

ಆಸಕ್ತ ಬಿಡ್‌ದಾರರು ದಿನಾಂಕ: 20.01.2025 ರಂದು ಅಥವಾ ತದನಂತರ ಕರ್ನಾಟಕ ಸರ್ಕಾರದ ಈ ಕೆಳಕಂಡ ವೆಬ್ ಸೈಟ್‌ಗೆ ಲಾಗ್‌ಆನ್ ಮಾಡಲು ಕೋರಲಾಗಿದೆ https://kppp.karnataka.gov.in

ಸಹಿ/– ಮುಖ್ಯ ಇಂಜಿನಿಯರ್(ವಿ),
ಕಾರ್ಯಾಚರಣೆ, ನಿಗಮ ಕಛೇರಿ, ಗುವಿಸಕಂನಿ, ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/855/ಕೆ.ಎಸ್.ಎಂ.ಸಿ.&ಎ/2024–25

ಕಳೆದ ಒಂಬತ್ತು ವರ್ಷಗಳಿಂದ ವಿಶ್ವವಾಣಿ ದಿನಪತ್ರಿಕೆ ಉತ್ತಮ ವರದಿಗಳ ಮೂಲಕ ಜನರ ಗಮನಸೆಳೆದಿದೆ. ಹತ್ತನೇ ವರ್ಷಾಚರಣೆಯ ಈ ಶುಭ ಸಂದರ್ಭದಲ್ಲಿ ಇನ್ನಷ್ಟು ಎತ್ತರವಾಗಿ ಪತ್ರಿಕೆ ಬೆಳೆಯಲಿ ಎಂದು ಹಾರೈಸುತ್ತೇನೆ. ಸದಾ ಹೊಸತನದಿಂದ ಕೂಡಿರುವ ಪತ್ರಿಕೆಗೆ ಶುಭವಾಗಲಿ.

-ಡಾ.ಭೀಮಾಶಂಕರ ಗುಳೇದ್, ಪೊಲೀಸ್ ವರಿಷ್ಠಾಧಿಕಾರಿ, ಬೆಳಗಾವಿ



ವಿಶ್ವವಾಣಿ ದಿನಪತ್ರಿಕೆ ಹತ್ತನೇ ವಾರ್ಷಿಕೋತ್ಸವ ಸಂಭ್ರಮದಲ್ಲಿರುವುದು ಸಂತೋಷದ ಸಂಗತಿ. ನಿಖರ ಹಾಗೂ ಜನಪರ ವರದಿಯ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯ ನಾಲ್ಕನೇ ಅಂಗವಾಗಿ ಪತ್ರಿಕೆ ಉತ್ತಮ ಕೆಲಸ ಮಾಡುತ್ತಿದ್ದು, ಹೀಗೆಯೇ ಮುಂದುವರಿಯಲಿ ಎಂದು ಆಶಿಸುತ್ತೇನೆ.

-ರಾಹುಲ್ ಶಿಂಧೆ, ಜಿಪಂ ಸಿಇಒ, ಬೆಳಗಾವಿ

ರಾಜ್ಯದ ವಿದ್ಯಮಾನಗಳ ಮೇಲೆ ಬೆಳಕು ಚೆಲ್ಲಿ, ಐಎಎಸ್, ಐಪಿಎಸ್ ಅಧಿಕಾರಿಗಳ ಸಂದರ್ಶನಗಳ ಮೂಲಕ ಸದಾ ಹೊಸ ಪ್ರಯೋಗ ಮಾಡುತ್ತಾ ರಾಜ್ಯದ ಪ್ರಮುಖ ಪತ್ರಿಕೆಗಳಲ್ಲಿ ಒಂದಾಗಿರುವ ವಿಶ್ವವಾಣಿ, ಓದುಗರನ್ನು ತನ್ನತ್ತ ಬಹುಬೇಗ ಸೆಳೆದುಕೊಳ್ಳುವುದರಲ್ಲಿ ಸಫಲವಾಗಿದೆ. ವಸ್ತುನಿಷ್ಠ ವರದಿ ಹಾಗೂ ವಿಶೇಷ ಲೇಖನಗಳ ಮೂಲಕ ಇಂದಿಗೂ ಗಟ್ಟಿತನ ಉಳಿಸಿಕೊಂಡಿರುವ ವಿಶ್ವವಾಣಿ ದಶಮಾನೋತ್ಸವ ಆಚರಣೆ ಮಾಡಿಕೊಳ್ಳುತ್ತಿರುವುದಕ್ಕೆ ಅಭಿನಂದನೆಗಳು. ಈ ಪತ್ರಿಕೆ ಇದೇ ರೀತಿ ಸದಾ ಯಶಸ್ಸು ಕಾಣುತ್ತಾ ಶತಮಾನೋತ್ಸವ ಆಚರಿಸಿಕೊಳ್ಳಲಿ.

- ಲವೀಶ್ ಒರಡಿಯಾ, ಸಿಇಒ, ಜಿಪಂ ಯಾದಗಿರಿ

ವಿಶ್ವವಾಣಿ ಕನ್ನಡ ದಿನಪತ್ರಿಕೆಯು 2014 ರಲ್ಲಿ ನಮ್ಮ ಕ್ರಿಯಾಶೀಲ ಪತ್ರಕರ್ತ ವಿಶ್ವೇಶ್ವರ ಭಟ್ ನೇತೃತ್ವದಲ್ಲಿ ಪ್ರಾರಂಭವಾಗಿ 9 ವರ್ಷ ಪೂರ್ಣಗೊಂಡಿವೆ . ನಿಜಕ್ಕೂ ಈ ಒಂದು ಕಾರ್ಯವು ಒಂದು ಮಹಾಸಾಧನೆಯಾಗಿದೆ . ಇಂದಿನ ಪತ್ರಿಕಾರಂಗದಲ್ಲಿ ಪತ್ರಿಕೆಯನ್ನು ಪ್ರಾರಂಭಿಸಿ ಪತ್ರಿಕೆಯನ್ನು ನಡೆಸುವುದು ಸಾಹಸದ ಕೆಲಸವಾಗಿದೆ. ಕಾರಣ ದಿನಪತ್ರಿಕೆಗಳನ್ನು ಇಂದು ಉದ್ಯಮಿಗಳು ಹೆಚ್ಚಿನ ಬಂಡವಾಳವನ್ನು ಹೂಡಿ ಪತ್ರಿಕೆಗಳನ್ನು ನಡೆಸುತ್ತಿರುವ ಈಗಿನ ಕಾಲಘಟ್ಟದಲ್ಲಿ ವಿಶ್ವವಾಣಿ ದಿನಪತ್ರಿಕೆಯು ಹತ್ತನೇ ವರ್ಷದಲ್ಲಿ ಯಶಸ್ವಿಯಾಗಿ ನಡೆಯುತ್ತಿರುವುದು ಸಂತೋಷದ ಸಂಗತಿ.

-ಡಾ.ಬಸವಪ್ರಭು ಸ್ವಾಮೀಜಿ, ಶ್ರೀ ವಿರಕ್ತಮಠ , ದಾವಣಗೆರೆ

ವಿಶ್ವೇಶ್ವರ ಭಟ್: ಬರಹದ ಬಂಡವಾಳ ಹೂಡಿದ ಧೀಮಂತ ಪತ್ರಿಕೋದ್ಯಮಿ

ಮುರುಗೇಶ್ ನಿರಾಣಿ, ಮಾಜಿ ಸಚಿವರು

ಉದ್ದಿಮೆ ಕಟ್ಟಲು ಬಂಡವಾಳ ಬೇಕು. ಪತ್ರಕರ್ತ ವಿಶ್ವೇಶ್ವರ ಭಟ್ಟರು ತಮ್ಮ ಕ್ರಿಯಾಶೀಲ ಬರಹವನ್ನು ಬಂಡವಾಳ ಮಾಡಿಕೊಂಡು ಬೃಹತ್ ಪತ್ರಿಕೋದ್ಯಮ ಕಟ್ಟಿದ್ದು ನಿಜಕ್ಕೂ ಒಂದು ಮಾದರಿ. ನಾನು ಉದ್ದಿಮೆಯಾಗಿ ಹೀಗೂ ಸಾಧ್ಯವೇ ಎಂದು ಚಕಿತಗೊಂಡು ನೋಡುತ್ತಿದ್ದೇನೆ.

ವಿಶ್ವವಾಣಿ ಪತ್ರಿಕೆ ಹತ್ತು ವರ್ಷಕ್ಕೆ ಕಾಲಿಟ್ಟ ಶುಭ ಸಂದರ್ಭದಲ್ಲಿ ಪ್ರೀತಿಯಿಂದ ಅಭಿನಂದನೆ ಹೇಳಬಯಸುತ್ತೇನೆ.

ನನಗೂ ಭಟ್ಟರಿಗೂ ಇರುವ ಒಂದು ಸಾಮ್ಯತೆ ಹೇಳಲೇಬೇಕು ಅನಿಸುತ್ತದೆ. ಪಾಟೀಲ್ ಪುಟ್ಟಪ್ಪ ಅವರು ಆರಂಭಿಸಿದ್ದ ವಿಶ್ವವಾಣಿ ಪತ್ರಿಕೆಯ ಪ್ರಕಟನೆ ಸ್ಥಗಿತಗೊಂಡಿತ್ತು. ಭಟ್ಟರು ಅದನ್ನು ಖರೀದಿಸಿ ಪುನಃ ಪ್ರಕಟಣೆ ಆರಂಭಿಸಿ ನಾಡಿನ ಹೆಮ್ಮೆಯ ಪತ್ರಿಕೆಯಾಗಿ ರೂಪಿಸಿದ್ದಾರೆ. ನಾನು ಕೈಗಾರಿಕೋದ್ಯಮಿಯಾಗಿ ಸ್ಥಗಿತಗೊಂಡಿದ್ದ ಕಾರ್ಖಾನೆಗಳನ್ನು ಪುನಃ ಆರಂಭಿಸಿದ್ದೇನೆ. ಸ್ಥಗಿತಗೊಂಡಿದ್ದನ್ನು ಎದ್ದು ನಿಲ್ಲಿಸುವುದರ ಕಷ್ಟ ನನಗೆ ಗೊತ್ತಿದೆ. ಅದಕ್ಕೆ ಶ್ರಮ ಹಾಕಬೇಕಾಗುತ್ತದೆ. ಭಟ್ಟರು ನಿಷ್ಠೆಯಿಂದ ಆ ಕೆಲಸವನ್ನು ಮಾಡಿದ್ದಾರೆ.

ಭಟ್ಟರ ಬರಹಗಳನ್ನು ಓದುವುದೇ ಒಂದು ಖುಷಿಯ ಸಂಗತಿ. ಅದರಲ್ಲಿ ಬರಿ ಮಾಹಿತಿ ಅಷ್ಟೇ ಇರುವುದಿಲ್ಲ. ಚಿಂತನೆ ,ಪ್ರಚೋದನೆ, ಹಾಸ್ಯ ಚಟಾಕಿ ತುಂಬಿರುತ್ತವೆ. ಈ ಕಾರಣಗಳಿಗಾಗಿ ಅವರ ಬರಹಗಳನ್ನು ಹುಡುಕಿ ಓದುವ ದೊಡ್ಡ ಬಳಗವೇ ಇದೆ. ಅವರು ಪ್ರತಿದಿನ ಬರೆಯುವ 'ಸಂಪಾದಕರ ಸತ್ಯಶೋಧನೆ' ಕಾಲಂ ಅನೇಕ ಹೊಸ ಮಾಹಿತಿಗಳನ್ನು ನೀಡುತ್ತದೆ. ಗೋವಾ ರಾಜ್ಯದ ರಾಜ್ಯಪಾಲ ಶ್ರೀಧರನ್ ಪಿಳ್ಳೆ ಅವರ ಬಗ್ಗೆ ಬರೆದಿದ್ದರು. ರಾಜ್ಯಪಾಲರು 200 ಪುಸ್ತಕ 15 ಕವನ ಸಂಕಲನ ಬರೆದಿದ್ದಾರೆ ಎಂಬ ಸಂಗತಿಯನ್ನು ಸೊಗಸಾಗಿ ಅವರು ಹೇಳಿದ್ದಾರೆ.

ವಿಶ್ವೇಶ್ವರ ಭಟ್ ಅವರ ಜೀವನೋತ್ಸಹ ತುಂಬಾ ದೊಡ್ಡದು. ಅದರಿಂದಾಗಿ ದೊಡ್ಡ ಸಾಧನೆ ಸಾಧ್ಯವಾಗಿದೆ. ಭಟ್ ಅವರು ದೇಶ -ವಿದೇಶಗಳ ರಾಜಕಾರಣಿಗಳೊಂದಿಗೆ ಒಳ್ಳೆಯ ಸ್ನೇಹ ಹೊಂದಿದ್ದಾರೆ. ಆದರೆ ಅವರೊಂದಿಗೆ ಯಾವುದೇ ಸಂಬಂಧ ಇಟ್ಟುಕೊಂಡಿಲ್ಲ. ಎಷ್ಟೇ ದೊಡ್ಡವರಿರಲಿ ಮುಲಾಜು ಇಲ್ಲದೆ ಟೀಕಿಸುತ್ತಾರೆ. ವಿಶ್ವವಾಣಿ ನೂರು ವರ್ಷ ಬಾಳಲಿ. ಕನ್ನಡದ ಬಾವುಟ ಹಾರಿಸಲಿ ಎಂದು ಮತ್ತೊಮ್ಮೆ ಶುಭ ಕೋರುತ್ತೇನೆ.

ನಮ್ಮ ಮನೆಯ ಅವಿಭಾಜ್ಯ ಅಂಗ ವಿಶ್ವವಾಣಿ

-ಎಚ್.ಎಸ್. ಚಂದ್ರಮೌಳಿ
ಹಿರಿಯ ವಕೀಲರು

ವಿಶ್ವವಾಣಿ ಪತ್ರಿಕೆ 2016ರಿಂದ ನನ್ನ ಬದುಕಿನ ಒಂದು ಅಂಗವಾಗಿದೆ. ನನ್ನ ದಿನನಿತ್ಯದ ಪ್ರಕ್ರಿಯೆ ಪ್ರಾರಂಭವಾಗುವುದೇ ಕೊಡಗಿನ ಕಾಫಿ ಹಾಗೂ ವಿಶ್ವೇಶ್ವರ ಭಟ್ಟರ ವಿಶ್ವವಾಣಿ ಮೂಲಕ. ಕಾಫಿಯ ಪರಿಮಳ ಮತ್ತೆ ದಿನಪತ್ರಿಕೆಯ ಸೊಗಡು ಇವೆರಡೂ ಮುಂಜಾನೆಯಿಂದಲೇ ಜೀವನದಲ್ಲಿ ಹೊಸತನ ತರುತ್ತವೆ. ಹೇಗೆ ನಾವು ಒಂದು ಸುಂದರವಾದ ಉದ್ಯಾನವನಕ್ಕೆ ಹೋದಾಗ ಅಲ್ಲಿ ಹತ್ತಾರು ಬಗೆಯ ಹೂವುಗಳನ್ನು ನೋಡಿದಾಗ ಮನಸ್ಸು ಸ್ಪಂದಿಸುತ್ತದೆಯೋ, ಮನಸ್ಸಿನ ಮೇಲೆ ಹೇಗೆ ಪರಿಣಾಮ ಬೀರುತ್ತದೆ. ಅದೇ ರೀತಿ ವಿಶ್ವವಾಣಿ ಪತ್ರಿಕೆ ಓದಿದಾಗ ಎಲ್ಲ ರೀತಿಯ ಸಂಗತಿಗಳೂ ನಿಮಗೆ ಸಿಗುತ್ತದೆ. ನಮ್ಮನ್ನು ಸಾಂಸ್ಕೃತಿಕವಾಗಿ ಮೇಲೆ ತಂದು ಸಂಸ್ಕಾರದ ರುಚಿಯನ್ನು ಉಣಬಡಿಸಿದ ಪತ್ರಿಕೆ ವಿಶ್ವವಾಣಿ.

ವಿಶ್ವವಾಣಿ ಪತ್ರಿಕೆಗೆ ಅದರದ್ದೇ ಆದ ವೈಶಿಷ್ಟ್ಯವಿದೆ. ಬೇರೆ ದಿನಪತ್ರಿಕೆಗಳಲ್ಲಿ ಕೆಲ ಪತ್ರಿಕೆಗಳು ಪ್ರಖ್ಯಾತವಾಗಿದ್ದರೂ ಆ ಎಲ್ಲ ಪತ್ರಿಕೆಗಳನ್ನು 10-15 ನಿಮಿಷದಲ್ಲಿ ಓದಿ ಮುಗಿಸಬಹುದು. ವಿಶ್ವವಾಣಿ 24 ಗಂಟೆಯಲ್ಲಿ ಯಾವಾಗ ಬೇಕಾದರೂ ಓದಬಹುದಾದ ಪತ್ರಿಕೆಯಾಗಿದೆ. ಪತ್ರಿಕೆಯ ಪ್ರತಿಯೊಂದು ಪುಟದಲ್ಲೂ ಅದರದ್ದೇ ಆದ ಐಡೆಂಟಿಟಿ ಇದೆ. ಹೇಗೆ ಹವಾಮಾನವನ್ನು ವರದಿ ಮಾಡುತ್ತೇವೆ, ಅದೇ ರೀತಿ ರಾಜಕಾರಣದ ಭವಿಷ್ಯ ನುಡಿದ ಅನೇಕ ಉದಾಹರಣೆಗಳಿವೆ. ರಾಜಕೀಯ ಆಗುಹೋಗುಗಳು,ಸಂದರ್ಶನ, ಲೇಖನಗಳು ವಿಶ್ವೇಶ್ವರ ಭಟ್ ಅವರ ದೂರದರ್ಶಿತ್ವ ಏನಿದೆ ಎನ್ನುವುದು ತಿಳಿಯುತ್ತದೆ.

ನಮ್ಮ ಸಂವಿಧಾನ ಹೇಳುತ್ತದೆ ದೂರದವರನ್ನು ಹತ್ತಿರ

ತರುವುದು, ಕೆಳಕ್ಕೆ ಬಿದ್ದವರನ್ನು ಮೇಲಕ್ಕೆತ್ತುವುದು ಸಂವಿಧಾನದ ತತ್ವ ಎಂದು. ಅದೇ ರೀತಿ ಸರಿಯಾಗಿ ವಿಶ್ವವಾಣಿ ಪತ್ರಿಕೆ ತನ್ನ ದಿನಚರಿಯನ್ನು ಮಾಡಿಕೊಂಡು ಬಂದಿದೆ. ವಿಶ್ವವಾಣಿಯ ಆರಾಮ ಪುಟಗಳು ಆಲ್ಬಮ್ ಆಗಿವೆ ನಮ್ಮ ಮನೆಗಳಲ್ಲಿ. ನಮ್ಮ ಮನೆಯವರಲ್ಲಿ ಪತ್ನಿಯಲ್ಲಿ ಏನಮ್ಮಾ ಮಾಡ್ತಾ ಇದ್ದೀಯ ಅಂದರೆ ವಿಶ್ವೇಶ್ವರ ಭಟ್ ರ ಪತ್ರಿಕೆ ಓದ್ತಾ ಇದ್ದೀನಿ ಎಂದು ಹೇಳುತ್ತಾರೆ. ಭಟ್‌ರ ಎಲ್ಲ ಲೇಖನಗಳು ನಮ್ಮಲ್ಲಿವೆ. ಹಾಗೇ ನೋಡಿದರೆ ಅವರ ನನ್ನ ಸ್ನೇಹ ಬಹಳ ಹಳೆಯದು. ವಾರಕ್ಕೊಮ್ಮೆಯಾದರೂ ವಿಶ್ವೇಶ್ವರ ಭಟ್ಟರ ಬಳಿ ಮಾತನಾಡಬೇಕು ಹಾಗೂ ಪತ್ರಿಕೆಯಲ್ಲಿದ್ದ ತಪ್ಪುಗಳು ಹಾಗೂ ಬರಹಗಳಲ್ಲಿದ್ದ ಕಸುವುಗಳ ಬಗ್ಗೆಯೂ ಚರ್ಚೆ ಮಾಡುತ್ತೇನೆ. ಕೆಲವೊಂದು ತಪ್ಪು ಬಂದಾಗ ಸಹಜವಾಗಿ ಒಪ್ಪಿಕೊಳ್ಳುತ್ತಾರೆ. ತಪ್ಪುಗಳನ್ನು ಒಪ್ಪಿಕೊಳ್ಳುವುದು ಮನುಜನ ಅತ್ಯುತ್ತಮ ಕೆಲಸ. ವಿಶ್ವವಾಣಿ ಪತ್ರಿಕೆ ಯಾರ ಸಂಗಾತಿ ಅಂದರೆ ಅದು ಮಹಿಳೆಯರದ್ದೋ, ಮಕ್ಕಳದ್ದೋ,ವಯೋವೃದ್ಧರದ್ದೋ, ಮಧ್ಯವಯಸ್ಕರದ್ದೋ ನೋಡಿದರೆ ಎಲ್ಲರೂ ವೋಟ್ ಹಾಕಿದರೆ ವಿಶ್ವವಾಣಿ ಆ ಒಂದು ವೋಟಿಂಗ್‌ನಲ್ಲಿ ಗೆದ್ದೇ ಗೆಲ್ಲುತ್ತದೆ.

ಕೆಲ ಪತ್ರಿಕೆಗಳು ಹೇಗಿವೆ ಎಂದರೆ ಕೆಲವೊಂದು ಪ್ರತಿಷ್ಠಿತ ಶಾಲೆಗಳ ರೀತಿಯಲ್ಲಿದೆ. ಅವರಲ್ಲಿ 90-95 ಶೇ. ಬಂದ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಿಕೊಂಡು ರ್‍ಯಾಂಕ್ ಬರುತ್ತಾರೆ. ವಿಶ್ವವಾಣಿ ಪತ್ರಿಕೆ ಹಾಗಲ್ಲ. 35 ಬಂದ ವಿದ್ಯಾರ್ಥಿಗಳನ್ನು ರ್‍ಯಾಂಕ್ ಬಂದಂತಹ ವಿದ್ಯಾರ್ಥಿಗಳನ್ನಾಗಿ ಮಾಡುತ್ತಾರೆ. ಈಗ ನಿಮ್ಮ ಪರಿಶ್ರಮ ಇರಬಹುದು, ಅವರಿಗೆಲ್ಲಾ ಸಾಕಷ್ಟು ಮಾನಸಿಕವಾಗಿ ಅಥವಾ ಎಲ್ಲಾ ರೀತಿಯಲ್ಲಿ ಬೆನ್ನು ತಟ್ಟುವಂತಹ ಕೆಲಸ ಮಾಡಿ ಇವತ್ತು ಒಂದು ಪ್ರತಿಷ್ಠಿತ ಸಂಸ್ಥೆಯಾಗಿ ನಡೆಯುತ್ತಿದೆ.

ನಾನು ನಮ್ಮ ಕುಟುಂಬದವರೆಲ್ಲರೂ ಈ ಸವಿಯನ್ನು ಆಸ್ವಾದಿಸುತ್ತಾ ಇದ್ದೇವೆ. ಈಗ ವಿಶ್ವವಾಣಿ ಇನ್ನೂ ಸಾಕಷ್ಟು ತನ್ನ ವ್ಯಾಪ್ತಿಯನ್ನು ಜಾಸ್ತಿ ಮಾಡಿಕೊಳ್ಳಬೇಕಾಗಿದೆ. ಇತ್ತೀಚೆಗೆ ಜಪಾನ್‌ಗೆ ನನಗೂ ಅವರ ಜತೆಗೆ ಹೋಗುವ ಅದೃಷ್ಟ ಸಿಕ್ಕಿತು. ಹೋಗುವುದಕ್ಕೂ ಮೊದಲು ಏನೋ ಅಂದುಕೊಂಡಿದ್ದೆ . ಆದರೆ ಸ್ನೇಹಿತರು ಯಾರೋ ಹೇಳಿದರು ಏನು ಅಂದರೆ ನಂಗೆ ಹೇಳೋಕೆ ಆಗ್ತಾ ಇಲ್ಲ. ಯಾವ ರೀತಿ ಏನು ಅಂತ. ಅದನ್ನು ನಿಮ್ಮ ಪತ್ರಿಕೆಯಲ್ಲಿ ಸಂಪಾದಕೀಯದ ಮೂಲಕ ಜಪಾನ್ ಬಗ್ಗೆ ಬರೀತಾ ಇದ್ದಾರೆ. ಹೀಗೆ ಹತ್ತಾರು ದೇಶಗಳಿಗೆ ಇಲ್ಲಿಯ, ಕೆಲವೊಂದು ಪ್ರತಿಭೆ ಅನ್ವೇಷಣೆ ಮಾಡುವ ಒಳ್ಳೆಯ ಕೆಲಸ ಮಾಡ್ತಾ ಇದ್ದಾರೆ. ಯಾರೂ ಕೇಳದೆ ಇರುವವರನ್ನು ಅಲ್ಲಿ ಕರೆದುಕೊಂಡು ಹೋಗಿ ಗೌರವಿಸುವಂತಹದ್ದು ಮನುಷ್ಯನ ದೊಡ್ಡ ಗುಣ. ಅವರನ್ನು ಬೇರೆ ದೇಶಗಳಿಗೆ ಕರೆದೊಯ್ದು, ಅಲ್ಲಿ ಇದ್ದು, ಅಲ್ಲಿ ನಡೆದ ಅನುಭವಗಳನ್ನು ತಮ್ಮ ಓದುಗರಿಗೆ ಕೊಟ್ಟು, ತಾವೂ ಕೂಡಾ ಪ್ರವಾಸದಲ್ಲಿದ್ದೇವೋ ಎನ್ನುವ ಚಿತ್ರಣ ಬರುತ್ತದೆ, ರಾಜಕೀಯರಂಗ, ಸಾಂಸ್ಕೃತಿಕ ರಂಗ, ಕಲೆ, ಸಂಗೀತ ಯಾವುದೇ ಮಜಲು ತೆಗೆದುಕೊಂಡರೂ ವಿಶ್ವವಾಣಿ ಮೊದಲ ಸ್ಥಾನದಲ್ಲಿರುತ್ತದೆ. ಈ ಪತ್ರಿಕೆ ಬೃಹದಾಕಾರವಾಗಿ ಬೆಳೆಯಲಿ. ಸುವರ್ಣ ಮಹೋತ್ಸವವನ್ನು ಆಚರಿಸಲಿ ಎಂದು ಹಾರೈಸುತ್ತೇನೆ.

ಡಿಜಿಟಲ್ ಕಾಲದಲ್ಲಿ ವಸ್ತುನಿಷ್ಠ ವರದಿ ನಿಖರ ಮಾಹಿತಿಯೊಂದಿಗೆ ರಾಜ್ಯದೆಲ್ಲೆಡೆ ಮನೆಮಾತಾಗಿರುವ ವಿಶ್ವವಾಣಿ ಪತ್ರಿಕೋದ್ಯಮದಲ್ಲಿ ಹೊಸತನಕ್ಕೆ ಹೆಸರಾಗಿದೆ. ಜನಪರ ನಿಲುವು ಹಾಗೂ ಸಮಾಜಮುಖಿ ಚಿಂತನೆ ಮೂಲಕ ಪತ್ರಿಕೆ ನೂರುಕಾಲ ಬೆಳೆಯಲಿ, ಉಳಿಯಲಿ ಎಂದು ಹಾರೈಸುತ್ತೇನೆ.

- ಶರಣಬಸಪ್ಪ ಕೋಟೆಪ್ಪಗೋಳ, ಅಪರ ಜಿಲ್ಲಾಧಿಕಾರಿ, ಯಾದಗಿರಿ

ವಿಶ್ವೇಶ್ವರ ಭಟ್ ಸಾರಥ್ಯದಲ್ಲಿ ಬರುತ್ತಿರುವ ಪತ್ರಿಕೆ ಅತ್ಯಂತ ಅಚ್ಚುಕಟ್ಟಾಗಿ ರಾಜ್ಯದ , ದೇಶದ ಹಾಗೂ ಅಂತಾರಾಷ್ಟ್ರೀಯ ಮಟ್ಟದ ಸುದ್ದಿಗಳನ್ನು ಚಾಚೂತಪ್ಪದೆ ಪ್ರಕಟಿಸಿ ಜನರಿಗೆ ತಲುಪಿಸುತ್ತಿದೆ. ಇಂತಹ ಪತ್ರಿಕೆಗೆ ದಶಕದ ಸಂಭ್ರಮ ಎನ್ನುವುದು ಮತ್ತೊಂದು ಹೆಮ್ಮೆ. ಪತ್ರಿಕೆ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ. ವಿಶ್ವವಾಣಿ ಬಳಗಕ್ಕೆ ಒಳಿತಾಗಲಿ ಎಂದು ಹಾರೈಸುವೆ

ಗೋಪಾಲ್ ಬ್ಯಾಕೋಡ್, ಪೊಲೀಸ್ ವರಿಷ್ಠಾಧಿಕಾರಿ, ಧಾರವಾಡ ಜಿಲ್ಲೆ

ಸ್ಪಷ್ಟ ಮಾಹಿತಿ ನಿಖರ ಸುದ್ದಿಯೊಂದಿಗೆ ರಾಜ್ಯದ ಜನರ ಮನೆಮಾತಾಗಿರುವ ವಿಶ್ವವಾಣಿ ದಿನಪತ್ರಿಕೆ ಪ್ರಜಾಪ್ರಭುತ್ವದಲ್ಲಿ ಪತ್ರಿಕೆಗಳ ಮಹತ್ವ ಸಾರುತ್ತ ವಿಶ್ವಾಸ ಉಳಿಸಿಕೊಂಡಿದೆ. ಇದೀಗ ಈ ಪತ್ರಿಕೆ ವಿಶ್ವೇಶ್ವರ ಭಟ್ ನೇತೃತ್ವದಲ್ಲಿ 9 ವರ್ಷ ಪೂರೈಸಿ 10 ನೇ ವರ್ಷಕ್ಕೆ ಕಾಲಿಟ್ಟಿರುವುದು ಸಂತಸದ ಸಂಗತಿಯಾಗಿದೆ. ಇದೇ ರೀತಿಯಾಗಿ ಪತ್ರಿಕಾಧರ್ಮ ಪಾಲನೆ ಮತ್ತಷ್ಟು ವರ್ಷಗಳ ಕಾಲ ಕರುನಾಡಿನಲ್ಲಿ ಪ್ರಕಾಶಿಸಲಿ.

-ಶರಣಗೌಡ ಕಂದಕೂರ, ಶಾಸಕ



ವಿಶ್ವೇಶ್ವರ ಭಟ್ ಸಾರಥ್ಯದ ವಿಶ್ವವಾಣಿ ಪತ್ರಿಕೆ ತನ್ನದೇ ಆದ ಇತಿಹಾಸದ ಜತೆಗೆ ನಾಡಿನ ಓದುಗರಿಗೆ ರಸವತ್ತಾದ ಹೊಸ ಹೊಸ ವಿಷಯಗಳನ್ನು ನೀಡುತ್ತಾ ವರ್ಣರಂಜಿತವಾಗಿ ಕನ್ನಡಿಗರ ಸೇವೆ ಮಾಡುತ್ತಿದೆ. ಅದರಂತೆ ಪತ್ರಿಕೋದ್ಯಮದಲ್ಲಿ ದಿಟ್ಟಹೆಜ್ಜೆ ಇಡುತ್ತ ಯುವ ಪತ್ರಕರ್ತ ರನ್ನು ಹೆಚ್ಚು ಹೆಚ್ಚು ಬೆಳೆಸುವಲ್ಲಿ ಸಾಗುತ್ತಿದೆ. ಹೀಗೆ ಮುಂದೆಯೂ ಕೂಡಾ ವಿಶ್ವವಾಣಿ ತನ್ನ ಕಾರ್ಯವನ್ನು ಮುಂದುವರಿಸಲಿ.

ರಾಜೂಗೌಡ, ಮಾಜಿ ಸಚಿವ

ವಿರಾಮ
ಪ್ರತಿ ಭಾನುವಾರ

ಟ್ವೀಟೂ-ಖಾರಾ

ಕಾಂಗ್ರೆಸ್, ಕರ್ನಾಟಕ

ಅದಾನಿ-ಪ್ರಧಾನಿ ನಂಟಿನ ವಿಚಾರದಲ್ಲಿ ಕುಂಬಳಕಾಯಿ ಕಳ್ಳ ಹೆಗಲು ಮುಟ್ಟಿ ನೋಡಿಕೊಂಡಂತಿದೆ ಬಿಜೆಪಿಯ ನಡೆ. ಮೋದಿಗೂ, ಅದಾನಿಗೂ ಯಾವುದೇ ಸಂಬಂಧ ಇಲ್ಲದ ಮೇಲೆ ಬಿಜೆಪಿ ತನ್ನ ಸಾಮಾಜಿಕ ಜಾಲತಾಣದ ಖಾತೆಯಲ್ಲಿ ಹಿಂಡನ್‌ಬರ್ಗ್ ಸಂಸ್ಥೆಯನ್ನು ಮುಚ್ಚುವ ಸುದ್ದಿಯನ್ನು ಪ್ರಚಾರ ಮಾಡುತ್ತಿರುವುದು ಏಕೆ..? ಹಿಂಡನ್‌ಬರ್ಗ್ ಮುಚ್ಚುವ ಸುದ್ದಿಗೆ ಬಿಜೆಪಿ ಹಿರಿಹಿರಿ ಹಿಗ್ಗುತ್ತಿರುವುದಾದರೂ ಏಕೆ..?

ನಾಗರಾಜ್, ಬೆಂಗಳೂರು

ಅವರದು(ಬಿಜೆಪಿ) ಹೋಗಲಿ. ನಿಮ್ಮ ಪಕ್ಷ ಹಿಂಡನ್ ಬರ್ಗ್ ಸಂಸ್ಥೆಗೆ ಎಷ್ಟು ದುಡ್ಡು ಕೊಟ್ಟು ಕಳಕೊಂಡರೀ..? ಅದು ಹೇಳಿ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಉಡುಪಿ**

ಸಮಸ್ಯೆಯೇನು..?

- ಉಡುಪಿ ಜಿಲ್ಲೆಯ ಕಾರ್ಕಳ ವಾರ್ಡ್ ನಂ.1ರ ಬಂಗ್ಲೆಗುಡ್ಡೆ ಕುದುರೆ ಮುಖ್ಯರಸ್ತೆ ಮೇಲೆ ಚರಂಡಿ ನೀರು ಹರಿಯುತ್ತಿರುವುದು.
- **ಪರಿಹಾರ:** ಉಡುಪಿ ಜಿಲ್ಲೆಯ ಕಾರ್ಕಳ ವಾರ್ಡ್ ನಂ.1ರ ಬಂಗ್ಲೆಗುಡ್ಡೆ ಕುದುರೆ ಮುಖ್ಯರಸ್ತೆ ಮೇಲೆ ಚರಂಡಿ ಮೇಲೆ ಹಾಕಿದ್ದ ಹಾಸುಗಲ್ಲು ಮುರಿದು ನೀರು ಹರಿಯುತ್ತಿರುವುದು ಪರಿಶೀಲನೆ ನಡೆಸಿ, ಪೌರ ಕಾರ್ಮಿಕರಿಂದ ಸ್ವಚ್ಛಗೊಳಿಸಿ, ನೀರು ಸರಾಗವಾಗಿ ಹರಿಯುವಂತೆ ಕ್ರಮ ಕೈಗೊಳ್ಳಲಾಗಿದೆ.

ತುಮಕೂರಿನಲ್ಲಿ ಹಮ್ಮಿಕೊಂಡಿದ್ದ ಪತ್ರಕರ್ತರ ಸಂಘದ 39ನೇ ರಾಜ್ಯ ಸಮ್ಮೇಳನದಲ್ಲಿ ಸಿಎಂ ಭರವಸೆ

ಪತ್ರಕರ್ತರ ಕುಟುಂಬಕ್ಕೆ ಆರೋಗ್ಯ ವಿಮೆ

ತುಮಕೂರು: ಸರಕಾರದ ವತಿಯಿಂದ ಪತ್ರಕರ್ತರ ಕುಟುಂಬಗಳಿಗೆ ಆರೋಗ್ಯ ವಿಮೆ ನೀಡುವ ಬಗ್ಗೆ ತೀರ್ಮಾನಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ನಗರದ ಸಿದ್ಧಾರ್ಥ ಎಂಜಿನಿಯರಿಂಗ್ ಕಾಲೇಜು ಮೈದಾನದಲ್ಲಿ ಕಾರ್ಯನಿರತ ಪತ್ರಕರ್ತ ಸಂಘದ 39ನೇ ರಾಜ್ಯ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ಸಮಾಜಕ್ಕಾಗಿ ಶ್ರಮಿಸುವ ಪತ್ರಕರ್ತರ ಕುಟುಂಬಗಳಿಗೆ ಆರೋಗ್ಯ ಸೌಲಭ್ಯ ಒದಗಿಸಲು ತಮ್ಮ ಸರಕಾರ ಬದ್ಧ ಎಂದರು.

ಶೀಘ್ರದಲ್ಲೇ ಗ್ರಾಮೀಣ ಪತ್ರಕರ್ತರಿಗೆ ಬಸ್ ಪಾಸ್

ಗ್ರಾಮೀಣ ಪತ್ರಕರ್ತರಿಗೆ ಉಚಿತ ಬಸ್‌ಪಾಸ್ ಅನ್ನು ಸದ್ಯದಲ್ಲೇ ವಿತರಿಸಲಾಗುವುದು. ಅಲ್ಲದೆ ಪತ್ರಕರ್ತರ ಮಾಸಾಶನವನ್ನೂ 3 ಸಾವಿರದಿಂದ 12 ಸಾವಿರಕ್ಕೆ ಹೆಚ್ಚಿಸಲಾಗಿದೆ ಎಂದು ಸಿಎಂ ವಿವರಿಸಿದರು.

ಮಾಧ್ಯಮಗಳು ಮೌಢ್ಯವನ್ನು ಬಿತ್ತರಿಸಬಾರದು, ವಾಸ್ತವಾಂಶವನ್ನು ಜನರಿಗೆ ತಿಳಿಸಬೇಕು. ನಾನು ಚಾಮರಾಜನಗರಕ್ಕೆ ಭೇಟಿ ನೀಡಿದಾಗ ಮುಖ್ಯಮಂತ್ರಿ ಹುದ್ದೆ ಕಳೆದುಕೊಳ್ಳುತ್ತಾರೆ ಎಂದು ಕೆಲ ಜ್ಯೋತಿಷಿಗಳು ಹೇಳಿದ್ದರು. ಇಂತಹ ಮೌಢ್ಯ ವಿಚಾರಗಳನ್ನು ಪತ್ರಿಕೆಗಳು ಪ್ರಚಾರ ಮಾಡಬಾರದು ಎಂದು ಕರೆ ನೀಡಿದರು.

ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್, ಗೃಹ ಸಚಿವ ಜಿ.ಪರಮೇಶ್ವರ್, ಸಹಕಾರಿ ಸಚಿವ ಕೆ.ಎನ್.ರಾಜಣ್ಣ, ರಾಜ್ಯ ಸರಕಾರದ ದೆಹಲಿ ಪ್ರತಿನಿಧಿ ಟಿ.ಬಿ.ಜಯಚಂದ್ರ, ಮಾಜಿ ಸಚಿವ ಸೊಗಡು ಶಿವಣ್ಣ, ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಹಾಗೂ ವಿವಿಧ ಶಾಸಕರು, ಜಿಲ್ಲಾಡಳಿತದ ಅಧಿಕಾರಿಗಳು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ತಾರತಮ್ಯ-ಅಸಮಾನತೆ ನಿವಾರಿಸಲು ಶ್ರಮಿಸಿ

ಸಂವಿಧಾನದ ಆಶಯಗಳನ್ನು ಈಡೇರಿಸುವುದೇ ಪತ್ರಿಕಾ ವೃತ್ತಿಯ ಕರ್ತವ್ಯ. ಧ್ವನಿ ಇಲ್ಲದವರ ಪರವಾಗಿ ವೃತ್ತಿ ಇದ್ದಾಗ ಸಮಾಜಕ್ಕೆ ಅನುಕೂಲ. ಸಮಾಜದಲ್ಲಿರುವ ಮೇಲು, ಕೆಳಜಾತಿಗಳ ನಡುವಿನ ತಾರತಮ್ಯ ಮತ್ತು ಅಸಮಾನತೆ ಕೊನೆಯಾಗುವ ನಿಟ್ಟಿನಲ್ಲಿ ಕರ್ತವ್ಯ ನಿರ್ವಹಿಸಿ. ವಿಜ್ಞಾನ, ತಂತ್ರಜ್ಞಾನದ ವೇಗದಲ್ಲೇ ಪತ್ರಿಕೋದ್ಯಮ ಬೆಳೆಯುತ್ತಿದೆ. ಇದು ಅವಕಾಶ, ಸವಾಲು ಎರಡೂ ಆಗಿದೆ.ದೇಶದ ಪ್ರತಿಯೊಬ್ಬರೂ ಸಂವಿಧಾನ ಓದಬೇಕು. ಆಗ ಹಕ್ಕು-ಕರ್ತವ್ಯ ಎರಡೂ ಗೊತ್ತಾಗುತ್ತವೆ. ನಿಮ್ಮದು ಶಕ್ತಿಯುತ ಮಾಧ್ಯಮ ಎಂದು ಸಿದ್ದರಾಮಯ್ಯ ಕಿವಿಮಾತು ಹೇಳಿದರು.

ತುಮಕೂರಿನಲ್ಲಿ ನಡೆದ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದಿಂದ ಸನ್ಮಾನಿಸಲಾಯಿತು. ಸಚಿವರಾದ ಡಾ.ಪರಮೇಶ್ವರ್, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಇದ್ದರು.

> ಜನರು ಪತ್ರಕರ್ತರ ಮೇಲೆ ನಂಬಿಕೆ ಇಟ್ಟಿದ್ದಾರೆ. ಮೌಢ್ಯದ ಸುದ್ದಿಗಳನ್ನು , ಚರ್ಚೆ ನಡೆಸಿ ನೋಡುಗರ, ಓದುಗರ ದಾರಿತಪ್ಪಿಸಬೇಡಿ. ನಾನು ಪ್ರತಿದಿನ ಪತ್ರಿಕೆ ಓದುತ್ತೇನೆ. ಪತ್ರಿಕಾ ಸ್ವಾತಂತ್ರ್ಯ ಗೌರವಿಸುತ್ತೇನೆ. ನನ್ನ ವಿರುದ್ಧ ಪತ್ರಿಕೆ ಬರೆದರೂ ನಾನು ಮಾಧ್ಯಮ ಧರ್ಮ ಎತ್ತಿ ಹಿಡಿಯುತ್ತೇನೆ. ವರದಿಗಾರಿಕೆ ವೃತ್ತಿಪರವಾಗಿದ್ದಾಗ ಸಮಾಜದ ಪರವಾಗಿರುತ್ತದೆ. ಪತ್ರಿಕಾ ವೃತ್ತಿ ಉದ್ಯಮ ಆದ ಕೂಡಲೇ ಇದರ ಉದ್ದೇಶಗಳು ಬದಲಾಗುತ್ತವೆ. ವಸ್ತುಸ್ಥಿತಿ ಜತೆಗೆ ಮೌಲ್ಯಾಧಾರಿತ ಸುದ್ದಿ ಇಂದಿನ ಅಗತ್ಯ. ಊಹಾಪೋಹದ ಪತ್ರಿಕೋದ್ಯಮ ಅಪಾಯಕಾರಿ.
>
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಸಮಾರೋಪ ಸಮಾರಂಭ ಇಂದು

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 39 ನೇ ರಾಜ್ಯ ಸಮ್ಮೇಳನದ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ಭಾನುವಾರ ಸಂಜೆ 4.30ಕ್ಕೆ ಹಮ್ಮಿಕೊಳ್ಳಲಾಗಿದೆ. ವಿಶ್ವವಾಣಿ ಪತ್ರಿಕೆಯ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಮತ್ತು ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಗೃಹ ಸಚಿವ ಪರಮೇಶ್ವರ್, ಕೇಂದ್ರ ಸಚಿವ ಸೋಮಣ್ಣ ಉಪಸ್ಥಿತಿಯಲ್ಲಿ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಸಮಾರೋಪ ನುಡಿಗಳನ್ನಾಡುವರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅಭಿನಂದನಾ ನುಡಿಗಳನ್ನಾಡುವರು. ಕೆಯುಡಬ್ಲ್ಯುಜೆ ಅಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸುವರು. ಅದಕ್ಕೂ ಮೊದಲು ಬೆಳಗ್ಗೆ 10:30ಕ್ಕೆ ಹಮ್ಮಿಕೊಂಡಿರುವ ವಿಚಾರಗೋಷ್ಠಿಯಲ್ಲಿ ಬೆಂಗಳೂರು ಪ್ರೆಸ್ ಕ್ಲಬ್ ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಬೆಳ್ಳಿತಟ್ಟೆ ಮುಖ್ಯ ಅತಿಥಿಯಾಗಿ ಉಪಸ್ಥಿತರಿರುವರು.

ಸುವರ್ಣಸೌಧದಲ್ಲಿ ಗಾಂಧಿ ಪ್ರತಿಮೆ ಅನಾವರಣ | ಬೆಳಗಾವಿ ಜಿಲ್ಲಾಧಿಕಾರಿಗೆ ಹೊಣೆಗಾರಿಕೆ: ಉಪಮುಖ್ಯಮಂತ್ರಿ

ಎಲ್ಲ ಪಕ್ಷಗಳ ಶಾಸಕರಿಗೆ ಆಹ್ವಾನ: ಡಿಕೆಶಿ

ಬೆಳಗಾವಿ: ಸುವರ್ಣಸೌಧ ಗಾಂಧಿ ಪ್ರತಿಮೆ ಅನಾವರಣ ಕಾರ್ಯಕ್ರಮದಲ್ಲಿ ಎಲ್ಲಾ ಪಕ್ಷದ ಶಾಸಕರ ಜತೆಗೆ ಸ್ವಾತಂತ್ರ್ಯ ಹೋರಾಟಗಾರರಿಗೂ ಆಹ್ವಾನ ನೀಡಲಾಗುವುದು. ಇದರ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗೆ ವಹಿಸಲಾಗಿದೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬೆಳಗಾವಿಯ ಸುವರ್ಣಸೌಧದ ಗಾಂಧಿ ಪ್ರತಿಮೆ ಬಳಿ ಕಾರ್ಯಕ್ರಮ ಸ್ಥಳದ ಪರಿಶೀಲನೆ ನಡೆಸಿದ ಡಿಸಿಎಂ. ಇದು ಸರಕಾರಿ ಕಾರ್ಯಕ್ರಮವಾಗಿದ್ದು ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆಯಲಿದೆ. ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಉಪಸ್ಥಿತಿಯಲ್ಲಿ ಎಐಸಿಸಿ ಅಧ್ಯಕ್ಷರು, ರಾಜ್ಯಸಭೆಯ ಪ್ರತಿಪಕ್ಷ ನಾಯಕ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರತಿಮೆ ಅನಾವರಣ ಮಾಡಲಿದ್ದಾರೆ ಎಂದು ತಿಳಿಸಿದರು.

ಪ್ರಮುಖ ಗಣ್ಯರು ಭಾಗಿ

ಕಾರ್ಯಕ್ರಮದಲ್ಲಿ ವಿಧಾನಸಭೆ ಸ್ಪೀಕರ್ ಹಾಗೂ ಪರಿಷತ್ತಿನ ಸಭಾಪತಿ ಭಾಗವಹಿಸಲಿದ್ದಾರೆ. ಎಲ್ಲ ಪಕ್ಷಗಳ ಶಾಸಕರಿಗೂ ಆಹ್ವಾನ ನೀಡಲಾಗಿದೆ. ಕಾರ್ಯಕ್ರಮದ ನಂತರ ನೆನಪಿಗಾಗಿ ಎಲ್ಲ ಶಾಸಕರ ಸಮೂಹ ಫೋಟೊ ತೆಗೆಯಲಾಗುವುದು. ನಂತರ ಅತಿಥಿಗಳು ಹಾಗೂ ಆಹ್ವಾನಿತರಿಗೆ ಮುಖ್ಯಮಂತ್ರಿಗಳು ಭೋಜನಕೂಟ ಏರ್ಪಡಿಸಲಿದ್ದಾರೆ. ಶಾಸಕರ ಹೊರತಾಗಿ ಗಂಗಾಧರ ದೇಶಪಾಂಡೆ ಅವರ ಕುಟುಂಬ ಸೇರಿದಂತೆ ಪ್ರಮುಖ ಕುಟುಂಬದವರಿಗೂ ಆಹ್ವಾನ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಡಿಕೆಶಿ, ಸುರ್ಜೇವಾಲ ಮಾತುಕತೆ: ಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷ ಸ್ಥಾನ ಬದಲಾವಣೆ ಕುರಿತು ಪಕ್ಷದ ನಾಯಕರು ಯಾರೂ ಅನಗತ್ಯ ಹೇಳಿಕೆ ನೀಡದಂತೆ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಖಡಕ್ ಎಚ್ಚರಿಕೆ ನಂತರ ಕಾಂಗ್ರೆಸ್ ನಾಯಕರು ಹೇಳಿಕೆಗಳನ್ನು ನೀಡಲು ಹಿಂಜರಿಯುತ್ತಿದ್ದಾರೆ. ಈ ಮಧ್ಯೆ ಜ. 21 ರಂದು ಬೆಳಗಾವಿಯಲ್ಲಿ ನಡೆಯಲಿರುವ ಜೈ ಬಾಪು, ಜೈ ಭೀಮ್, ಜೈ ಸಂವಿಧಾನ ಕಾರ್ಯಕ್ರಮ ಹಿನ್ನೆಲೆಯಲ್ಲಿ ಬೆಳಗಾವಿಯಲ್ಲಿರುವ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಹಾಗೂ ಡಿಸಿಎಂ ಡಿ.ಕೆ ಶಿವಕುಮಾರ್ ಶನಿವಾರ ಕೆಲಕಾಲ ಗೋಪ್ಯ ಸಭೆ ನಡೆಸಿದ್ದಾರೆ.

ಬೆಳಗಾವಿಯ ಸುವರ್ಣಸೌಧದ ಗಾಂಧಿ ಪ್ರತಿಮೆ ಅನಾವರಣ ನಡೆಯುವ ಸ್ಥಳ ಪರಿಶೀಲನೆ ನಡೆಸಿದ ಸುರ್ಜೇವಾಲ ಹಾಗೂ ಡಿ.ಕೆ ಶಿವಕುಮಾರ್.

ಸಿದ್ದರಾಮಯ್ಯ ವಿರುದ್ಧ ರಾಜಕೀಯ ಪಿತೂರಿ

ಮುಡಾ ಪ್ರಕರಣದಲ್ಲಿ ಅಕ್ರಮ ನಡೆದಿದೆ ಎಂದು ಇ.ಡಿ. ಸಂಸ್ಥೆಯ ತನಿಖೆ ನ ಸುದ್ದಿಗಾರರು ಪ್ರಶ್ನಿಸಿದಾಗ, ಯಾವುದೇ ಪ್ರಕರಣ ಎಂದರೆ ತನಿಖೆ ಸುದೀರ್ಘ ಪ್ರಕ್ರಿಯೆಯಾಗಿದೆ. ಇಲ್ಲಿ ಅಕ್ರಮ ನಡೆದಿದೆಯೇ ಇಲ್ಲವೇ ಎಂದು ನ್ಯಾಯಾಲಯ ವಿಚಾರಣೆ ಮಾಡಬೇಕೇ ಹೊರತು, ನೀವು ನಾನು ವಿಚಾರಣೆ ಮಾಡುವಂತಹದಲ್ಲ. ಮುಖ್ಯಮಂತ್ರಿಗಳು ಹಾಗೂ ಅವರ ಕುಟುಂಬದ ವಿರುದ್ಧ ರಾಜಕೀಯ ಪಿತೂರಿ ನಡೆಯುತ್ತಿದೆ. ಮುಖ್ಯಮಂತ್ರಿಗಯಾಗಲೀ, ಅವರ ಪತ್ನಿಯಾಗಲೀ ಅಕ್ರಮದಲ್ಲಿ ಭಾಗಿಯಾಗಿಲ್ಲ. ಈ ವಿಚಾರ ಬಿಟ್ಟು ರಾಜ್ಯದ ವಿಚಾರದ ಬಗ್ಗೆ ಗಮನಹರಿಸಿ ಎಂದು ಶಿವಕುಮಾರ್ ತಿಳಿಸಿದರು.

ಬಿಜೆಪಿ ವಿರುದ್ಧ ರಣದೀಪ್ ಸಿಂಗ್ ಸುರ್ಜೇವಾಲ ಕಿಡಿ

ಇ.ಡಿ. ಮೂಲಕ ಬೆದರಿಕೆ

ಹುಬ್ಬಳ್ಳಿ: ಜೈ ಬಾಪು, ಜೈಭೀಮ್, ಜೈ ಸಂವಿಧಾನ ಸಮಾವೇಶದ ಹಿನ್ನೆಲೆಯಲ್ಲಿ, ಹುಬ್ಬಳ್ಳಿಯ ಖಾಸಗಿ ಹೋಟೆಲ್‌ನಲ್ಲಿ ಕಾಂಗ್ರೆಸ್ ನಾಯಕರಿಂದ ಪೂರ್ವ ಭಾವಿ ಸಭೆ ನಡೆಯಿತು.



ಜ.21 ರಂದು ಬೆಳಗಾವಿಯಲ್ಲಿ ನಡೆಯಲಿರುವ ಸಮಾವೇಶದ ಹಿನ್ನೆಲೆಯಲ್ಲಿ ಹುಬ್ಬಳ್ಳಿಯಲ್ಲಿ ಬೆಳಗಾವಿ ಸಮಾವೇಶದ ಪೂರ್ವ ಸಿದ್ಧತಾ ಸಭೆಯನ್ನು ಹುಬ್ಬಳ್ಳಿಯ ಖಾಸಗಿ ಹೋಟೆಲ್‌ನಲ್ಲಿ ನಡೆಸಲಾಗಿದ್ದು, ಈ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲ ಕೆಪಿಸಿಸಿ ಅಧ್ಯಕ್ಷ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಸಭೆ ನಡೆಯಿತು. ಸಭೆಯಲ್ಲಿ ಸಚಿವರು, ಶಾಸಕರು ಕಾಂಗ್ರೆಸ್ ಮುಖಂಡರು ಭಾಗಿಯಾಗಿದ್ದರು.

ಈ ಸಂದರ್ಭದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ರಣದೀಪ್ ಸಿಂಗ್ ಸುರ್ಜೇವಾಲ, ಗೋಡ್ಸೆ ವಿಚಾರಧಾರೆ ಹೊಂದಿರುವ ಜನರು ಗಾಂಧಿ ತತ್ವ ಒಪ್ಪಲು ಸಾಧ್ಯವಿಲ್ಲ. ಬಿಜೆಪಿ ಯಾವತ್ತಿಗೂ ಸಂವಿಧಾನದ ವಿರೋಧಿ ನೀತಿ ಒಂದಿದೆ. ಬಿಜೆಪಿ ಸಾಮಾಜಿಕ ನ್ಯಾಯದ ವಿರುದ್ಧ ಕೆಲಸ ಮಾಡುತ್ತೆ. ಮೋದಿ ಮತ್ತು ಬಿಜೆಪಿ ಕಾಂಗ್ರೆಸ್ ಸಮಾವೇಶದಿಂದ ಹೆದರಿದ್ದಾರೆ. ಇದೇ ಕಾರಣಕ್ಕೆ ಇ.ಡಿ. ಮೂಲಕ ಕಾಂಗ್ರೆಸ್ ನಾಯಕರನ್ನು ನಿಯಂತ್ರಿಸು ಕೆಲಸ ಮಾಡುತ್ತಿದೆ ಎಂದರು.

ಬಿಜೆಪಿಯಿಂದ ದ್ವೇಷದ ರಾಜಕಾರಣ: ಬಿಜೆಪಿ ದ್ವೇಷ ಹಾಗೂ ಹಿಂಸೆಯ ರಾಜಕಾರಣ ಮಾಡುತ್ತಿದೆ. ಕಾಂಗ್ರೆಸ್ ನ ಪ್ರಭಾವಿ ನಾಯಕರಾದ ರಾಹುಲ್, ಸೋನಿಯಾ ಗಾಂಧಿ, ಸಿದ್ದರಾಮಯ್ಯ ಅವರನ್ನು ಗುರಿಯಾಗಿಸಿ ದಾಳಿ ನಡೆಸುತ್ತಲೇ ಬಂದಿದೆ. ಈಗ ಸಿದ್ದರಾಮಯ್ಯ ವಿರುದ್ಧ ಇಡಿ ಅಸ್ತ್ರ ಪ್ರಯೋಗಿಸಿದೆ. ಅಮಿತ್ ಶಾ ಅಂಬೇಡ್ಕರ್ ಗೆ ಅವಮಾನ ಮಾಡಿದನ್ನು ಮರೆಮಾಚಲು ಈ ರೀತಿ ಆರೋಪಿಸುತ್ತೆ. ದೆಹಲಿಯಲ್ಲಿ ಕಾಂಗ್ರೆಸ್ ತನ್ನ ಸ್ವಂತ ಶಕ್ತಿಯ ಮೇಲೆ ಚುನಾವಣೆ ಸ್ಪರ್ಧಿಸಲಿದೆ. ಆಮ್ ಆದ್ಮಿ ದೆಹಲಿಯಲ್ಲಿ ಜನಪರ ಆಡಳಿತ ನೀಡುವಲ್ಲಿ ವಿಫಲವಾಗಿದೆ. ಆ ಕಾರಣಕ್ಕೆ ಕಾಂಗ್ರೆಸ್ ಪ್ರತ್ಯೇಕವಾಗಿ ಸ್ಪರ್ಧಿಸಲಿದೆ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲ ತಿಳಿಸಿದರು.

ಕೇವಲ ಒಬ್ಬ ಶಾಲಾ ಬಾಲಕಿಗಾಗಿ ಮೂರು ವರ್ಷ ಓಡಿದ ರೈಲು!

ನಾನು ಹತ್ತಿರ ಹತ್ತಿರ ನೂರು ದೇಶಗಳಿಗೆ ಹೋಗಿದ್ದರೂ, ಅಲ್ಲಿಂದ ಬರುತ್ತಿದ್ದಂತೆ ಯಾವ ದೇಶದ ಬಗ್ಗೆಯೂ ಉಸಿರು ಬಿಗಿ ಹಿಡಿದುಕೊಂಡು ಬರೆದಿಲ್ಲ. ಆದರೆ ಜಪಾನಿನಿಂದ ಬರುತ್ತಿದ್ದಂತೆ, ಯಾಕೋ ಬರೆಯಲೇಬೇಕು ಎಂದೆನಿಸಿತು. ಕಳೆದ ಒಂದೂವರೆ ತಿಂಗಳುಗಳಿಂದ ಬರೆಯುತ್ತಿದ್ದರೂ ಅಲ್ಲಿ ನೋಡಿದ್ದು, ಕೇಳಿದ್ದು, ಓದಿದ್ದು ನನ್ನ ಮನಸ್ಸಿನಲ್ಲಿ ಇನ್ನೂ ತೊಟ್ಟಿಕ್ಕುತ್ತಲೇ ಇದೆ. ಇನ್ನು ಸಾಕು ಮಾಡೋಣ ಅಂತ ಅಂದುಕೊಳ್ಳುತ್ತಿರುವಾಗಲೇ ಇನ್ನ್ಯಾವುದೋ ಅಂಶಗಳು ನೆನಪಾಗುತ್ತವೆ. ಹತ್ತಾರು ವಿಷಯಗಳ ಕುರಿತಂತೆ ನನ್ನ ಸಂದೇಹಗಳನ್ನು ನಿವಾರಿಸಿಕೊಳ್ಳಲು ಜಪಾನಿನಲ್ಲಿ ಸಿಕ್ಕಿದ ಕೆಲವು ಸ್ನೇಹಿತರಿಗೆ ಫೋನ್ ಮಾಡಿದರೆ ಅವರು ಮತ್ತಷ್ಟು ಕತೆಗಳನ್ನು ಹೇಳಿ, ನನ್ನ ಆಸಕ್ತಿಯ ಪರಿಧಿಯನ್ನು ಮತ್ತಷ್ಟು ವಿಸ್ತರಿಸುತ್ತಲೇ ಹೋಗುತ್ತಿದ್ದಾರೆ.

ಹೀಗಾಗಿ ಜಪಾನ್ ನನ್ನಲ್ಲಿ ಜಮೆಯಾಗುತ್ತಲೇ ಹೋಗುತ್ತಿದೆ. ಸಾಮಾನ್ಯವಾಗಿ ನಾವು ಯಾವ ದೇಶಕ್ಕೆ ಹೋದರೂ ಅಲ್ಲಿಂದ ಕಲಿಯುವಂಥದ್ದು, ತಿಳಿಯುವಂಥದ್ದು, ಪ್ರೇರಣೆಗೊಳಗಾಗುವಂಥದ್ದು ಇದ್ದೇ ಇರುತ್ತದೆ. ಆದರೆ ಜಪಾನ್ ಮಾತ್ರ ನನ್ನ ಮುಂದೆ ಅಗಾಧ ಅಚ್ಚರಿಯ ಹೆಬ್ಬಾಗಿಲನ್ನು ತೆರೆದಿಟ್ಟಿದ್ದು ಸುಳ್ಳಲ್ಲ.

ಕೆಲವು ವರ್ಷಗಳ ಹಿಂದೆ, ಪತ್ರಿಕೆಗಳಲ್ಲಿ ಒಂದು ವರದಿ ಪ್ರಕಟವಾಗಿತ್ತು. 'ಒಬ್ಬಳೇ ಶಾಲಾ ಬಾಲಕಿಗಾಗಿ ಓಡುವ ರೈಲು' ಎಂಬ ಶೀರ್ಷಿಕೆಯಡಿಯಲ್ಲಿ ಪ್ರಕಟವಾದ ವರದಿಯದು. ಈ ಸುದ್ದಿ ನನ್ನಲ್ಲಿ ಆ ದೇಶದ ಬಗ್ಗೆ ವಿಶೇಷ ಅಭಿಮಾನವನ್ನು ಉಂಟು ಮಾಡಿತ್ತು. ನಮ್ಮ ರಾಜ್ಯದಲ್ಲಿ ವಿದ್ಯಾರ್ಥಿಗಳು ಕಮ್ಮಿಯಾಗುತ್ತಿದ್ದಾರೆ ಎಂಬ ಕಾರಣ ನೀಡಿ ಸರಕಾರ ಕನ್ನಡ ಶಾಲೆಗಳನ್ನು ಮುಚ್ಚುತ್ತಿದೆ. ಶಿಕ್ಷಕರನ್ನು ಬೇರೆಡೆ ವರ್ಗ ಮಾಡುತ್ತಿದೆ. ಆದರೆ ಜಪಾನಿನಲ್ಲಿ ಒಬ್ಬ ಶಾಲಾ ಬಾಲಕಿಗಾಗಿ ಒಂದು ರೈಲನ್ನು ಓಡಿಸುತ್ತಿದ್ದಾರೆ. ಅದರಿಂದ ರೈಲು ಸಂಸ್ಥೆಗೆ ನಷ್ಟವಾದರೂ, ಆ ಬಾಲಕಿಯ ವಿದ್ಯಾಭ್ಯಾಸಕ್ಕೆ ಮಾರಕವಾಗಬಾರದು ಎಂಬ ಸೂಕ್ಷ್ಮ ಅಂಶವನ್ನು ಗಮನಿಸಿ, ಆ ನಿರ್ಧಾರ ತೆಗೆದುಕೊಂಡಿದ್ದು ನನ್ನಲ್ಲಿ ಆ ದೇಶದ ಬಗ್ಗೆ ವಿಶೇಷ ಅಭಿಮಾನವನ್ನು ಹುಟ್ಟಿಸಿತ್ತು.

ಜಪಾನ್ ದೇಶವು ತನ್ನ ಸುಧಾರಿತ ತಂತ್ರಜ್ಞಾನ, ವಿಶಿಷ್ಟ ಸಂಸ್ಕೃತಿ ಮತ್ತು ವ್ಯಾಪಕ ವಿಶ್ವಾಸಾರ್ಹತೆ ಇರುವ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಪ್ರಸಿದ್ಧ. ಆದರೆ ಆ ದೇಶವು ಕೇವಲ ತಂತ್ರಜ್ಞಾನದ ಪ್ರಗತಿಗೆ ಮಾತ್ರ ಸೀಮಿತವಾಗಿಲ್ಲ. ಇದು ಮಾನವೀಯ ಮೌಲ್ಯಗಳನ್ನು, ಸಮುದಾಯದ ಸಂವೇದನೆಗಳನ್ನು ಮತ್ತು ಪ್ರತಿಯೊಬ್ಬ ವ್ಯಕ್ತಿಯ ಮಹತ್ವವನ್ನು ಅರಿತುಕೊಂಡ ಸಂವೇದನಾಶೀಲ ರಾಷ್ಟ್ರವಾಗಿ ತನ್ನನ್ನು ಗುರುತಿಕೊಂಡಿರುವುದು ಗಮನಾರ್ಹ.

ಪ್ರಾಯಶಃ ಯಾವುದೇ ದೇಶದಲ್ಲಾದರೂ ಅಲ್ಲಿನ ರೈಲ್ವೆ ಇಲಾಖೆ ಒಬ್ಬರಿಗಾಗಿ ರೈಲನ್ನು ಓಡಿಸಿದ ನಿದರ್ಶನಗಳಿಲ್ಲ. ಅದರಿಂದ ರೈಲು ಸಂಸ್ಥೆಗೆ ವರ್ಷಕ್ಕೆ ಕೋಟ್ಯಂತರ ರುಪಾಯಿ ನಷ್ಟವಾಗುವುದು ಸರ್ವವಿದಿತ. ಆದರೆ ಒಬ್ಬ ಬಾಲಕಿ ಕೂಡ ಶಿಕ್ಷಣದಿಂದ ವಂಚಿತಳಾಗಬಾರದು ಎಂದು ಯೋಚಿಸುವುದು ಆ ದೇಶದ ಪ್ರಖರ ಸಾಕ್ಷಿಪ್ರಜ್ಞೆ ಮತ್ತು ಅಂತಃಶಕ್ತಿಯನ್ನು ಎತ್ತಿ ತೋರಿಸುತ್ತದೆ. ಇದಕ್ಕೆ ಸಾಕ್ಷಿಯಾಗಿ ಜಪಾನಿನ ರೈಲು ಸೇವೆ ಒಬ್ಬ ವಿದ್ಯಾರ್ಥಿಗಾಗಿ ರೈಲು ಓಡಿಸಿದ ಕಥೆ ರೋಮಾಂಚನಕಾರಿ.

ಸುಮಾರು ಎರಡೂವರೆ ದಶಕಗಳ ಹಿಂದೆ, ಜಪಾನಿನ ಹೋಕೈಡೋ ಪ್ರಾಂತ್ಯದಲ್ಲಿ, ಕಮಿ-ಶಿರಾಟಾಕಿ ಎಂಬ ರೈಲು ನಿಲ್ದಾಣವನ್ನು ನಿರ್ಮಿಸಲಾಯಿತು. ಇದರ ಸುತ್ತಮುತ್ತ ಸಾಕಷ್ಟು ವಸತಿ ಬಡಾವಣೆಗಳಿದ್ದವು. ಆದರೆ ಕಾಲಕ್ರಮೇಣ ಆ ಪ್ರದೇಶವು ನಿರ್ವಸತಿ ಪ್ರದೇಶವಾಗುತ್ತಾ ಹೋಯಿತು. ಅದರಲ್ಲೂ ವಿಶೇಷವಾಗಿ ಶಿರಾಟಾಕಿ ರೈಲು ನಿಲ್ದಾಣದ ಬಳಿ ಜನಸಂಖ್ಯೆ ವ್ಯಾಪಕವಾಗಿ ಕುಸಿಯಲಾರಂಭಿಸಿತು. ಆ ಪ್ರದೇಶ ಆಗಾಗ ಭಾರಿ ಭೂಕಂಪಗಳಿಗೆ ತುತ್ತಾಗುತ್ತಿದ್ದುದೂ ಇದಕ್ಕೆ ಕಾರಣವಾಗಿತ್ತು. ಅಲ್ಲಿ ಕೆಲವೇ ಕೆಲವು ಮನೆಗಳು ಮಾತ್ರ ಉಳಿದಿದ್ದವು. ಅಲ್ಲಿನ ಜನ ಬೇರೆ ಊರುಗಳಿಗೆ ಗುಳೆ ಹೋಗಿದ್ದರ ಪರಿಣಾಮ ಇಡೀ ಊರು ಹೆಚ್ಚು-ಕಮ್ಮಿ ಖಾಲಿಯಾಯಿತು. ಆಗ ಅನಿವಾರ್ಯವಾಗಿ ರೈಲು ಸೇವೆಯನ್ನು ಸ್ಥಗಿತಗೊಳಿಸಲು ನಿರ್ಧರಿಸಲಾಯಿತು. ಕಾರಣ ದಿನದ ಕೆಲವು ಟ್ರಿಪ್‌ಗಳಲ್ಲಿ ಇಡೀ ಬೋಗಿಯಲ್ಲಿ ಜನರೇ ಇರುತ್ತಿರಲಿಲ್ಲ. ಹೀಗಾಗಿ ದಿನದಲ್ಲಿ ಎಂಟು ಸಲ ಓಡುತ್ತಿದ್ದ ರೈಲು ಸಂಚಾರವನ್ನು ಎರಡಕ್ಕೆ ಇಳಿಸಲಾಯಿತು. ಆಗಲೂ ಟ್ರೇನಿನಲ್ಲಿ ಏಳೆಂಟು ಜನ ಮಾತ್ರ ಪ್ರಯಾಣಿಸುತ್ತಿದ್ದರು.

ಪರಿಣಾಮ, ರೈಲು ಸಂಸ್ಥೆಯು ನಷ್ಟ ಅನುಭವಿಸಲಾರಂಭಿಸಿತು. ಎರಡು ಸಲ ಸಂಚರಿಸುತ್ತಿದ್ದ ಟ್ರೇನನ್ನು ಒಂದಕ್ಕೆ ಇಳಿಸಲಾಯಿತು. ಆಗಲೂ ಟ್ರೇನು ಭರ್ತಿಯಾಗುವುದಿರಲಿ, ಕೇವಲ ಮೂರ್ನಾಲ್ಕು ಪ್ರಯಾಣಿಕರು ಮಾತ್ರ ಸಂಚರಿಸುತ್ತಿದ್ದರು. ಕೊನೆಗೆ ಅವರೂ ಬೇರೆ ಊರಿಗೆ ಹೋಗಿ ನೆಲೆಸಿದ್ದರಿಂದ ಅವರೂ ರೈಲು ಪ್ರಯಾಣವನ್ನು ನಿಲ್ಲಿಸಿದರು.

ಆದರೆ ಇಡೀ ರೈಲಿನಲ್ಲಿ ಒಬ್ಬಳೇ ಒಬ್ಬಳು ಬಾಲಕಿ ಶಾಲೆಗೆ ಹೋಗುತ್ತಿದ್ದಳು. ಆಗ ಬಾಲಕಿ ಸೇರಿದಂತೆ ಕೆಲವು ಸ್ಥಳೀಯರು ಒಂದು ವಿಚಿತ್ರ ಮನವಿಯನ್ನು ರೈಲ್ವೆ ಇಲಾಖೆಗೆ ಮಾಡಿಕೊಂಡರು- 'ಕಮಿ-ಶಿರಾಟಾಕಿ ನಿಲ್ದಾಣದಿಂದ ಪ್ರತಿದಿನ ಬಾಲಕಿಯೊಬ್ಬಳು ಪ್ರಯಾಣಿಸುತ್ತಿದ್ದಾಳೆ. ಒಂದು ವೇಳೆ ರೈಲು ಸಂಚಾರವನ್ನು ನಿಲ್ಲಿಸಿದರೆ, ಆಕೆಗೆ ಶಾಲೆಗೆ ಹೋಗಲು ಆಗುವುದಿಲ್ಲ. ಅಲ್ಲಿಗೆ ಆಕೆಯ ವಿದ್ಯಾಭ್ಯಾಸ ನಿಂತುಹೋಗುತ್ತದೆ. ಆಕೆಯ ಭವಿಷ್ಯ ಡೋಲಾಯಮಾನವಾಗುತ್ತದೆ. ಹೀಗಾಗಿ ಅವಳ ಶಾಲೆಯ ಸಮಯಕ್ಕೆ ಅನುಕೂಲವಾಗುವಂತೆ ಒಂದು ಬೋಗಿಯನ್ನಾದರೂ ಓಡಿಸಿ. ಇದರಿಂದ ನಿಮ್ಮ ಇಲಾಖೆಗೆ ನಷ್ಟವಾಗುತ್ತದೆ ಎಂಬುದು ಗೊತ್ತಿದ್ದರೂ ಈ ಮನವಿ ಮಾಡಿಕೊಳ್ಳುತ್ತಿದ್ದೇವೆ'.

ಪ್ರಾಯಶಃ ಜಗತ್ತಿನ ಯಾವ ದೇಶದಲ್ಲೇ ಆಗಲಿ, ಇಂಥ ಮನವಿಯನ್ನು ಯಾವ ಸಂಸ್ಥೆಯಾಗಲಿ, ಸರಕಾರವಾಗಲಿ ಪುರಸ್ಕರಿಸುವುದಿಲ್ಲ. ಅದು ವ್ಯಾವಹಾರಿಕವಾಗಿ ಸಾಧುವೂ ಅಲ್ಲ. ಆದರೆ ಜಪಾನ್ ರೈಲ್ವೆ ಸಂಸ್ಥೆಯು (Japan Railways-JR) ವಿದ್ಯಾರ್ಥಿನಿಯ ಶಿಕ್ಷಣಕ್ಕೆ ಅಡ್ಡಿಯಾಗಬಾರದು ಎಂಬ ಉದ್ದೇಶದಿಂದ, ಕೇವಲ ಆಕೆಯ ಸಮಯಕ್ಕೆ ಹೊಂದಿಸಿಕೊಂಡು ರೈಲು ಸೇವೆಯನ್ನು ಮುಂದುವರಿಸಲು ನಿರ್ಧರಿಸಿತು.

ಅಷ್ಟೇ ಅಲ್ಲ, ಇಡೀ ರೈಲು ಸೇವೆಯನ್ನು ಸಂಪೂರ್ಣವಾಗಿ ಆ ವಿದ್ಯಾರ್ಥಿನಿ ಶಾಲೆಗೆ ಹೋಗುವ ಮತ್ತು ಹಿಂದಿರುಗುವ ಸಮಯಕ್ಕೆ ಪೂರಕವಾಗಿ ಹೊಂದಿಸಲಾಯಿತು. ರೈಲು ಬರುವುದಕ್ಕಿಂತ ಮುನ್ನವೇ ಆಕೆ ನಿಲ್ದಾಣದಲ್ಲಿ ನಿಂತಿರುತ್ತಿದ್ದಳು. ಅದು ಬರುತ್ತಿದ್ದಂತೆ, ಆಕೆ ಬೋಗಿಯನ್ನೇರುತ್ತಿದ್ದಂತೆ ರೈಲು ಹೊರಡುತ್ತಿತ್ತು. ಆ ಬಾಲಕಿ ಬೆಳಗ್ಗೆ 7:04ಕ್ಕೆ ಟ್ರೇನನ್ನು ಹತ್ತುತ್ತಿದ್ದಳು ಮತ್ತು ಸಾಯಂಕಾಲ 5:08ಕ್ಕೆ ತಿರುಗಿ ಕಮಿ-ಶಿರಾಟಾಕಿ ರೈಲು ನಿಲ್ದಾಣಕ್ಕೆ ಮರಳುತ್ತಿದ್ದಳು.

ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
vbhat@me.com

ಆ ಬಾಲಕಿಯ ಟೈಮ್ ಟೇಬಲ್‌ಗೆ ಅನುಗುಣವಾಗಿ ಟ್ರೇನು ತನ್ನ ಸಮಯವನ್ನು ಹೊಂದಿಸಿಕೊಳ್ಳುತ್ತಿತ್ತು. ಆ ಬಾಲಕಿ ಅನಾರೋಗ್ಯಕ್ಕೆ ತುತ್ತಾದಾಗ ರೈಲು ಓಡುತ್ತಿರಲಿಲ್ಲ. ಶಾಲೆಗೆ ರಜಾ ಇದ್ದ ದಿನಗಳಲ್ಲಿ ಟ್ರೇನು ಆಗಮಿಸುತ್ತಿರಲಿಲ್ಲ. ಆಕೆಗಾಗಿ ರೈಲು ನಿಲ್ದಾಣದಲ್ಲಿ ಮೂವರು ಸಿಬ್ಬಂದಿ ಇರುವಂತಾಯಿತು. ಚಳಿಗಾಲದಲ್ಲಿ ರೈಲು ನಿಲ್ದಾಣ ಹಿಮದಿಂದ ಆವೃತವಾಗಿರುತ್ತಿತ್ತು. ಆ ಬಾಲಕಿಗಾಗಿ ನಿಲ್ದಾಣವನ್ನು ಸ್ವಚ್ಛಗೊಳಿಸಲಾಗುತ್ತಿತ್ತು. 2013ರಿಂದ 2016ರ ತನಕ ಸತತ ಮೂರು ವರ್ಷಗಳ ಕಾಲ, ಜಪಾನ್ ರೈಲ್ವೆ ಇಲಾಖೆಯು ಒಬ್ಬ ವಿದ್ಯಾರ್ಥಿನಿಗಾಗಿ ಒಂದು ಬೋಗಿಯನ್ನು, ಒಂದು ಮಾರ್ಗವನ್ನು ಮೀಸಲಾಗಿಟ್ಟಿತ್ತು.

2013ರಲ್ಲಿ ಈ ಅನನ್ಯ ಮತ್ತು ವಿಶೇಷ ಘಟನೆಯು ಜಗತ್ತಿನ ಎಲ್ಲ ಪತ್ರಿಕೆಗಳಲ್ಲಿ ಮುಖಪುಟ ಸುದ್ದಿಯಾಗಿ ಪ್ರಕಟವಾಗಿತ್ತು. ಇಡೀ ಜಗತ್ತು ಈ ಸುದ್ದಿಗೆ ಸಖೇದಾಶ್ಚರ್ಯ ವ್ಯಕ್ತಪಡಿಸಿತ್ತು.

ಈ ಘಟನೆಯು ಜಪಾನಿನ ಮಾನವೀಯತೆ, ಸಮುದಾಯದ ಮೌಲ್ಯ ಮತ್ತು ಶಿಕ್ಷಣಕ್ಕೆ ನೀಡುವ ಮಹತ್ವವನ್ನು ಜಗತ್ತಿಗೆ ತೋರಿಸಿಕೊಟ್ಟಿತ್ತು. ಕೇವಲ ಒಬ್ಬ ವಿದ್ಯಾರ್ಥಿನಿಗಾಗಿ ಸಂಪೂರ್ಣ ರೈಲು ಸೌಲಭ್ಯವನ್ನು ನಿರ್ವಹಿಸುವುದು ಆರ್ಥಿಕವಾಗಿ ಹಾನಿಯಾದರೂ, ಆಕೆಯ ವಿದ್ಯಾಭ್ಯಾಸಕ್ಕೆ ತೊಡಕಾಗಬಾರದು ಎಂಬ ಕಾರಣಕ್ಕೆ ಆ ನಿರ್ಧಾರ ಕೈಗೊಂಡಿದ್ದು ಸರ್ವತ್ರ ಪ್ರಶಂಸೆಗೆ ಪಾತ್ರವಾಗಿತ್ತು. ಇದರಿಂದ ಪ್ರಭಾವಿತರಾಗಿ ಭಾರತದಲ್ಲಿನ ಕೆಲವು ಸರಕಾರಗಳು ವಿದ್ಯಾರ್ಥಿಗಳ ಕೊರತೆ ಕಾರಣಕ್ಕಾಗಿ ಶಾಲೆಗಳನ್ನು ಮುಚ್ಚುವ ನಿರ್ಧಾರ ಹಿಂಪಡೆದಿದ್ದವು. ಭಾರತದ ಸಂಸತ್ತಿನಲ್ಲೂ ಈ ವಿಷಯ ಪ್ರಸ್ತಾಪವಾಗಿತ್ತು.

ಪ್ರತಿಯೊಬ್ಬ ಪ್ರಜೆಯ ಯೋಗಕ್ಷೇಮ, ಶಿಕ್ಷಣ ಮುಖ್ಯ. ಒಬ್ಬ ಪ್ರಜೆಗಾದರೂ ಸರಕಾರ ಸ್ಪಂದಿಸಬೇಕು ಎಂಬುದನ್ನು ಜಪಾನ್ ಈ ಘಟನೆಯಿಂದ ಜಗತ್ತಿಗೆ ತೋರಿಸಿಕೊಟ್ಟಿತು. ಈ ಘಟನೆ ಜಗತ್ತಿನ ಕಣ್ಣು ತೆರೆಯಿಸಿತು. ಜನಸಂಖ್ಯೆ ಕುಸಿತದಿಂದ ಹೋಕೈಡೋ ನಗರವಾಸಿಗಳು ಅನುಭವಿಸಿದ ತೊಂದರೆಗಳು ಜಗತ್ತಿನ ಇತರ ದೇಶಗಳಲ್ಲೂ ಚರ್ಚೆಯನ್ನು ಹುಟ್ಟು ಹಾಕಿದವು. ಒಂದು ಹಳ್ಳಿ, ಒಬ್ಬ ವ್ಯಕ್ತಿ ಕೂಡ ಸಮುದಾಯದ ಭಾಗವೇ ಆಗಿದ್ದರಿಂದ, ಸರಕಾರ ವ್ಯಾವಹಾರಿಕವಾಗಿ ಲಾಭ-ನಷ್ಟ ಲೆಕ್ಕ ಹಾಕಬಾರದು ಎಂಬ ಜಾಗೃತಿ ಮೂಡಲು ಈ ಘಟನೆ ಇಂಬು ನೀಡಿತು. ಒಬ್ಬ ವ್ಯಕ್ತಿಯ ಶಿಕ್ಷಣಕ್ಕಾಗಿ ಸರಕಾರ ಲಾಭ-ನಷ್ಟದ ಬಾಬಿನ ಬಗ್ಗೆ ಯೋಚಿಸಬಾರದು ಎಂಬ ಹೊಸ ಚಿಂತನೆಯನ್ನೇ ಈ ಪ್ರಕರಣ ಹುಟ್ಟು ಹಾಕಿತು.

ಮಾರ್ಚ್ 26, 2016. ಆ ದಿನ ಆ ಬಾಲಕಿ ಹೈಸ್ಕೂಲು ಪರೀಕ್ಷೆ ಬರೆದಳು. ಮರುದಿನದಿಂದ ರೈಲು ಸಂಚಾರ ಸ್ಥಗಿತಗೊಂಡಿತು!

ಈ ಘಟನೆ ಜಪಾನಿನ ಸಾಮಾಜಿಕ ಸಂವೇದನೆ ಮತ್ತು ಮಾನವೀಯತೆಯ ಪರಮಪಾಠವಾಗಿ ಚಿರಸ್ಥಾಯಿಯಾಗಿ ನೆನಪಿನಲ್ಲಿ ಉಳಿಯಲಿದೆ. ಇದು ಕಟ್ಟಕಡೆಯ ಸಾಮಾನ್ಯ ವ್ಯಕ್ತಿಗೂ ಪ್ರಾಮುಖ್ಯ ನೀಡಲೇಬೇಕು ಎಂಬ ದಿವ್ಯ ಸಂದೇಶ ಸಾರುವ ದೀಪಸ್ತಂಭವಾಗಿದೆ.

ಆ ಬಾಲಕಿ ಯಾರು?

ಕನಾ ಹರಡಾ!

ಒಬ್ಬ ಶಾಲಾ ಬಾಲಕಿಗಾಗಿ ಮೂರು ವರ್ಷ ಜಪಾನಿನಲ್ಲಿ ರೈಲೊಂದು ಓಡಿತಲ್ಲ, ಆ ಬಾಲಕಿಯ ಹೆಸರು ಕನಾ ಹರಡಾ. ಇಂದಿಗೂ ಆಕೆ ಶಿಕ್ಷಣ, ಪ್ರಜ್ಞೆ, ಸಮುದಾಯ ಪ್ರಜ್ಞೆ ಮತ್ತು ಸ್ತ್ರೀಶಕ್ತಿಯ ಸಂಕೇತವಾಗಿ ಗುರುತಿಸಿಕೊಂಡಿದ್ದಾಳೆ. ಈಗ ಆಕೆ ಎಲ್ಲಿಗೇ ಹೋದರೂ, ಏಕಾಂಗಿಯಾಗಿ ರೈಲಿನಲ್ಲಿ ಪ್ರಯಾಣಿಸಿದವಳು ಎಂದು ಗುರುತಿಸಿಕೊಳ್ಳುತ್ತಾಳೆ.

ಜಗತ್ತಿನಲ್ಲಿ ಪ್ರತಿದಿನ ನೂರಾರು ಕೋಟಿ ಜನ ರೈಲಿನಲ್ಲಿ ಸಂಚರಿಸುತ್ತಾರೆ. ಜೀವನವಿಡೀ ರೈಲಿನಲ್ಲಿ ಸಂಚರಿಸಿದವರಿದ್ದಾರೆ. ಆದರೆ ಅವರಾರೂ ಬೇರೆಯವರಿಗೆ ಗೊತ್ತಿಲ್ಲ. ಅವರು ಅನಾಮಧೇಯರಾಗಿಯೇ ಇದ್ದಾರೆ. ಆದರೆ ಕನಾ ಹರಡಾ ಮಾತ್ರ ಎಲ್ಲಿಗೇ ಹೋಗಲಿ, ಬರಲಿ, ಇಂದಿಗೂ ಎಲ್ಲರ ಗಮನ ಸೆಳೆಯುತ್ತಾಳೆ. ಜಾಗತಿಕ ಮಾಧ್ಯಮಗಳಲ್ಲಿ ವರದಿಯಾದಾಗ ಕನಾ ಹರಡಾ ಹಠಾತ್ತನೆ ಎಲ್ಲರ ಗಮನ ಸೆಳೆದಳು. ಅವಳನ್ನು ಏನಿಲ್ಲವೆಂದರೂ ನೂರಕ್ಕೂ ಹೆಚ್ಚು ಟಿವಿ ಚಾನೆಲುಗಳು ಸಂದರ್ಶಿಸಿರಬಹುದು. ಕೆಲ ಕಾಲ ಅವಳು ಸುರಕ್ಷತೆ ದೃಷ್ಟಿಯಿಂದ ಮಾಧ್ಯಮಗಳಿಂದ ದೂರವೇ ಇದ್ದಳು.

ವಿದ್ಯಾಭ್ಯಾಸ ಮುಗಿಸಿದ ಮರುದಿನವೇ ಟ್ರೇನ್ ಸಂಚಾರ ಸ್ಥಗಿತಗೊಂಡಾಗಲೂ ಅವಳು ಮತ್ತೊಮ್ಮೆ ಮಾಧ್ಯಮಗಳ ಕಣ್ಣಿಗೆ ಬಿದ್ದು ಮತ್ತಷ್ಟು ಸುದ್ದಿಗೆ ಗ್ರಾಸವಾಗಿದ್ದಳು.

ಭಾಷಾ ಪ್ರೇಮ

ಜಪಾನಿಯರ ಭಾಷಾ ಪ್ರೇಮದ ಬಗ್ಗೆ ಬರೆದಿದ್ದೆ. ಜಪಾನಿಯರು ದೇಶ ಮತ್ತು ತಾಯಿಯಷ್ಟೇ ಮಹತ್ವ ನೀಡುವುದು ತಮ್ಮ ಭಾಷೆಗೆ. ಈ ವಿಷಯದಲ್ಲಿ ಅವರು ರಾಜಿಯಾಗುವುದಿಲ್ಲ. ಕೆಲ ಕನ್ನಡಿಗರು ಹೇಳುವಂತೆ, 'ನನ್ನ ಕನ್ನಡ ಅಷ್ಟು ಚೆನ್ನಾಗಿಲ್ಲ, ಹೀಗಾಗಿ ಇಂಗ್ಲಿಷಿನಲ್ಲಿ ಮಾತಾಡುತ್ತೇನೆ' ಎಂದು ನಾಲಗೆ ಕುಯ್ದರೂ ಹೇಳಲಿಕ್ಕಿಲ್ಲ, 'ನನಗೆ ಇಂಗ್ಲಿಷ್ ಬರುವುದಿಲ್ಲ, ಹೀಗಾಗಿ ನಾನು ಜಪಾನೀಸ್ ಭಾಷೆಯಲ್ಲೇ ಮಾತಾಡುತ್ತೇನೆ' ಎಂದು ಎದೆ ತಟ್ಟಿಕೊಂಡು, ಅಭಿಮಾನದಿಂದ ಹೇಳುತ್ತಾರೆ.

ಜಪಾನ್ ಜಗತ್ತಿನಲ್ಲಿ ತಂತ್ರಜ್ಞಾನದಲ್ಲಿ ಮುಂದುವರಿದಿರುವ ದೇಶ ಎಂಬುದು ಎಲ್ಲರಿಗೂ ಗೊತ್ತು. ಈ ತಂತ್ರಜ್ಞಾನದಲ್ಲೂ ಜಪಾನಿಯರು ಅತ್ಯಂತ ಸಮರ್ಥವಾಗಿ ತಮ್ಮ ಭಾಷೆಯನ್ನು ಅಳವಡಿಸಿಕೊಂಡಿದ್ದಾರೆ. ಜಪಾನೀಸ್ ಭಾಷೆಗೆ ಬೆಂಬಲ ನೀಡಲು ವಿಶೇಷ ತಂತ್ರಜ್ಞಾನವನ್ನು ಅವರು ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಉದಾಹರಣೆಗೆ, ಕೀಬೋರ್ಡ್ ಇನ್ಪುಟ್ ವಿಧಾನಗಳು (ರೋಮಾಜಿ). ಭಾಷಾ ಸಂರಕ್ಷಣೆಗಾಗಿ ಅಪ್ಲಿಕೇಷನ್‌ಗಳನ್ನು ಅವರು ಅಭಿವೃದ್ಧಿಪಡಿಸಿದ್ದಾರೆ. ಜಪಾನೀಸ್ ಭಾಷಾ ಗ್ರಂಥಾಲಯ ಮತ್ತು ಶಬ್ದಕೋಶಗಳನ್ನು ಡಿಜಿಟಲ್‌ಗೆ ರೂಪಾಂತರಿಸುವ ಮೂಲಕ ಯುವಜನತೆಯ ಮೊಬೈಲ್ ಸಾಧನಗಳಲ್ಲಿ ಭಾಷೆಯ ಪ್ರೀತಿಯನ್ನು ಬೆಳೆಸಲಾಗಿದೆ.

ಜಪಾನಿನಲ್ಲಿ ವಿದೇಶಿ ಭಾಷೆಗಳ ಪ್ರಭಾವ ಹೆಚ್ಚಾದರೂ, ಸ್ಥಳೀಯ ಭಾಷೆಯ ಪ್ರಾಮುಖ್ಯ ಎಂದಿಗೂ ಕಡಿಮೆಯಾಗಿಲ್ಲ. ಮೊದಲು ಹೆಚ್ಚಾಗಿ ಜಪಾನಿ ಭಾಷೆಯಲ್ಲಿಯೇ ಬೋರ್ಡುಗಳು ಕಾಣಿಸಿಕೊಳ್ಳುತ್ತಿದ್ದವು. ಈಗ ಜಪಾನ್ ಜಾಗತೀಕರಣಕ್ಕೆ ತೆರೆದುಕೊಂಡಿರುವುದರಿಂದ ಇಂಗ್ಲಿಷ್ ಪ್ರಭಾವವನ್ನು ಕಾಣಬಹುದು. ಹಾಗೆಂದು ಅವು ಜಪಾನಿ ಬೋರ್ಡುಗಳ ಸಮಾಧಿ ಮೇಲೆ ರಾರಾಜಿಸುತ್ತಿಲ್ಲ, ಕಟಕಾನಾ ಲಿಪಿ ಬಳಸಿ ವಿದೇಶಿ ಪದಗಳನ್ನು ಅಳವಡಿಸುವ ಮೂಲಕ, ಜಪಾನೀಸ್ ಭಾಷೆಯೆಡೆಗಿನ ಪ್ರೀತಿ ನಾಶವಾಗದಂತೆ ನೋಡಿಕೊಳ್ಳಲಾಗಿದೆ. ಕನ್ಸಾಯ ಬೆನ್, ಹಾಕಾಟಾ ಬೆನ್, ಸಾಪೊರೊ ಭಾಷೆ ಮುಂತಾದ ಪ್ರಾದೇಶಿಕ ಭಾಷೆಗಳನ್ನೂ ಹಾಗೇ ಉಳಿಸಿಕೊಂಡಿದ್ದಾರೆ.

ಜಪಾನಿಯರಿಗೆ ತಮ್ಮ ಭಾಷೆ ಕೇವಲ ಸಂವಹನದ ಸಾಧನವಲ್ಲ, ಅದು ಅವರ ಸಾಂಸ್ಕೃತಿಕ ವ್ಯಕ್ತಿತ್ವದ ಪ್ರತಿರೂಪ. ಅದು ಅವರ ಹೃದಯ ಮತ್ತು ಕೊರಳಿನ ಭಾಷೆ. ಜಪಾನಿಯರು ತಮ್ಮ ಭಾಷೆಯಲ್ಲಿ ನಿರಂತರ ಅಧ್ಯಯನಶೀಲರು. ಹಿರಿಯರು ಸಹ ತಮ್ಮ ಶಬ್ದಕೋಶವನ್ನು ಸಮೃದ್ಧಗೊಳಿಸಲು ಓದುತ್ತಾರೆ ಮತ್ತು ಕಲಿಯುತ್ತಾರೆ. ಜಪಾನ್ ಜಾಗತಿಕ ಸಂಸ್ಕೃತಿ ಮತ್ತು ಆರ್ಥಿಕತೆಯ ಪ್ರಮುಖ ಭಾಗವಾಗಿದ್ದರೂ, ಜಾಗತೀಕರಣವು ಜಪಾನಿಯರ ಭಾಷೆಯ ಪ್ರೀತಿಯ ಮೇಲೆ ಯಾವುದೇ ಪ್ರಭಾವ ಬೀರಲಿಲ್ಲ. ಆಂಗ್ಲಭಾಷೆಯ ಪ್ರಭಾವ ಹೆಚ್ಚಾದರೂ, ಪ್ರತಿ ಜಪಾನಿ ಪ್ರಜೆಯ ಮನದಾಳದಲ್ಲಿ ತನ್ನ ಭಾಷೆಯ ಪ್ರೀತಿ ಅಚ್ಚುಕಟ್ಟಾಗಿ ಉಳಿದಿದೆ. ಹಾರುಕಿ ಮುರಕಾಮಿ ಸೇರಿದಂತೆ ನೂರಾರು ಲೇಖಕರು ಜಪಾನಿ ಭಾಷೆಯ ವೈಶಿಷ್ಟ್ಯವನ್ನು ಜಾಗತಿಕ ಸಾಹಿತ್ಯದಲ್ಲಿ ಪರಿಚಯಿಸುತ್ತಿದ್ದಾರೆ. ಜಪಾನಿ ಭಾಷೆಯೆಡೆಗಿನ ಪ್ರೀತಿ ಇಡೀ ಜಗತ್ತಿಗೆ ಮಾದರಿಯಾಗಿದೆ. ಜಪಾನಿನ ಜನರು ತಾವು ತಮ್ಮ ಭಾಷೆಯನ್ನು ಹೇಗೆ ಜೀವಂತವಾಗಿಟ್ಟುಕೊಂಡಿದ್ದಾರೆ ಎಂಬುದರಿಂದ ಪ್ರಪಂಚದ ಅನೇಕ ಭಾಷಾ ಸಮುದಾಯಗಳು ಪ್ರೇರಿತವಾಗುತ್ತಿವೆ.

ಜಪಾನಿಯರಿಗೆ ತಮ್ಮ ಭಾಷೆ ಸಂವಹನ ಸಾಧನವಷ್ಟೇ ಅಲ್ಲ, ಅದು ಅವರ ಜೀವನದ ಪ್ರತಿ ಕ್ಷಣದ ಅಮೂಲ್ಯ ಭಾಗ. ಇದರ ಮೂಲಕ ಅವರು ತಮ್ಮ ಸಂಸ್ಕೃತಿಯ ಮೂಲಾಧಾರವನ್ನು ರಕ್ಷಿಸುತ್ತಿದ್ದಾರೆ. ಜಪಾನಿ ಭಾಷೆಯು ನಾವೀನ್ಯ ಮತ್ತು ಸಂಪ್ರದಾಯಗಳ ನಡುವೆ ಸಮತೋಲನವನ್ನು ಸಾಧಿಸಿದಂತೆ, ಜಪಾನಿಯರ ಭಾಷಾ ಪ್ರೀತಿ ಅದನ್ನು ಇನ್ನಷ್ಟು ಶ್ರೇಷ್ಠವಾಗಿಸಿದೆ.

ಭಾಷೆಯನ್ನು ಉಳಿಸಬೇಕೆಂದರೆ ಅದು ಕಂಪ್ಯೂಟರ್ ಮತ್ತು ಮೊಬೈಲುಗಳಲ್ಲಿ ಉಳಿಯಬೇಕು ಹಾಗೂ ಸಾಮಾಜಿಕ ಜಾಲತಾಣ-ಸ್ನೇಹಿ ಆಗಿರಬೇಕು ಎಂಬುದನ್ನು ಅರಿತುಕೊಂಡ ಜಪಾನಿಯರು, ಆ ನಿಟ್ಟಿನಲ್ಲಿ ತಮ್ಮ ಭಾಷೆಯನ್ನೂ ಪರಿಣಾಮಕಾರಿಯಾಗಿ ಅಳವಡಿಸುತ್ತಿದ್ದಾರೆ. ಸ್ಮಾರ್ಟ್‌ಫೋನ್‌ಗಳಲ್ಲಿ ಮತ್ತು ಕಂಪ್ಯೂಟರ್‌ಗಳಲ್ಲಿ ಜಪಾನಿ ಭಾಷೆಯ ಕೀಬೋರ್ಡ್ ಮತ್ತು ನಿರ್ದಿಷ್ಟ ಅಪ್ಲಿಕೇಶನ್‌ಗಳನ್ನು ಅಭಿವೃದ್ಧಿಪಡಿಸಿದ್ದಾರೆ.

ಜಪಾನಿಯರು ತಮ್ಮ ಭಾಷೆಗೆ ತೊಡಕಾಗದಂತೆ ನೋಡಿಕೊಳ್ಳುತ್ತಿರುವ ಶ್ರದ್ಧಾವಂತರು. ಚಲನಚಿತ್ರಗಳು, ಟಿವಿ ಶೋಗಳು, ನಾಟಕಗಳು ಮತ್ತು ಹೊಸ ಕಥೆಗಳನ್ನು ಜಪಾನಿ ಭಾಷೆಯಲ್ಲಿಯೇ ನಿರ್ಮಿಸುತ್ತಾರೆ, ಇದು ಯುವ ಪೀಳಿಗೆಗೆ ತಾಯ್ನುಡಿಯಲ್ಲಿನ ಆಸಕ್ತಿಯನ್ನು ಹೆಚ್ಚಿಸುತ್ತಿದೆ.

ಇದಕ್ಕೆ ಕಾರಣ ಜಪಾನಿನಲ್ಲಿ ಶಾಲಾ ಪಠ್ಯಕ್ರಮ ಜಪಾನಿ ಭಾಷೆಯಲ್ಲಿಯೇ ಇರುವುದು. ಪ್ರಾರಂಭದಿಂದಲೇ ಮಕ್ಕಳಿಗೆ ತಮ್ಮ ಭಾಷೆಯನ್ನು ತಿಳಿಯಲು ಪ್ರೋತ್ಸಾಹ ನೀಡಲಾಗುತ್ತದೆ. ಇದರಿಂದ ಅವರು ತಮ್ಮ ಸಂಸ್ಕೃತಿಯ ಮೂಲವನ್ನು ಆರಂಭದಿಂದಲೇ ಅರ್ಥ ಮಾಡಿಕೊಳ್ಳುವಂತಾಗಿದೆ. ಉದಾಹರಣೆಗೆ, ಶಿಕ್ಷಣದಲ್ಲಿ ಕಂಜಿ, ಹಿರಾಗನಾ, ಕಟಕಾನಾ ಎಂಬ ಮೂರು ಲಿಪಿಗಳ ಪ್ರಾಮುಖ್ಯವನ್ನುಒಟ್ಟಿಗೇ ನೀಡಲಾಗುತ್ತಿದೆ, ಇದು ಮಕ್ಕಳಲ್ಲಿ ಭಾಷೆಯ ಪ್ರೀತಿಯನ್ನು ಸಹಜವಾಗಿ ಬೆಳೆಸುತ್ತಿದೆ.

ಕೊಟ್ಟಿದ್ದು ಚಿಕ್ಕ ಉಡುಗೊರೆ; ಪ್ರಭಾವಕ್ಕೊಳಗಾದದ್ದು ಇಡೀ ಪ್ರಪಂಚ!

ಅವಲಕ್ಕಿ, ಅದೂ ಬರೀ ಒಂದು ಮುಷ್ಟಿಯಷ್ಟು, ಸುದಾಮನು ಕೃಷ್ಣನಿಗೆ ಪ್ರೀತಿಯಿಂದ ಕೊಟ್ಟ ಉಡುಗೊರೆ. ಕೃಷ್ಣನಿಂದ ಬೀಳ್ಕೊಂಡು ಮನೆಗೆ ಹಿಂದಿರುಗಿ ನೋಡುತ್ತಾನೆ, ಸುದಾಮನ ಬಡ ಗುಡಿಸಲಿನ ಜಾಗದಲ್ಲಿ ಭವ್ಯವಾದ ಅರಮನೆ ತಲೆಯೆತ್ತಿದೆ! ಅದು ಕೃಷ್ಣನು ಸುದಾಮನ ಪ್ರೀತಿಗೆ ಪ್ರತಿಯಾಗಿ ಕೊಟ್ಟ ಉಡುಗೊರೆ. ಉಡುಗೊರೆ ಕೊಡು-ಪಡೆವುದು ಯುಗಯುಗಗಳಿಂದ ಬಂದಿರುವ ಸುಂದರ ಸಂಪ್ರದಾಯ. ಭಾರತೀಯ ಸಂಸ್ಕೃತಿಯಷ್ಟೇ ಅಲ್ಲ, ಜಗತ್ತಿನೆಲ್ಲೆಡೆ ಇರುವಂಥದ್ದೇ. ಈಗೀಗ ಮನುಷ್ಯಸಂಬಂಧಗಳು ಶಿಥಿಲಗೊಳ್ಳುತ್ತಿವೆ, ಪ್ರತಿಯೊಂದನ್ನೂ ವಾಣಿಜ್ಯದೃಷ್ಟಿಯಿಂದ ನೋಡಲಾಗುತ್ತಿದೆ, ಉಡುಗೊರೆಯು ಪೊಳ್ಳುಪ್ರತಿಷ್ಠೆಯ ಪ್ರತೀಕವಾಗುತ್ತಿದೆ, ನಿರೀಕ್ಷೆ-ಅಪೇಕ್ಷೆಗಳು ವಿಪರೀತವಾಗಿವೆ, ಉಡುಗೊರೆಗಳೇ ಮತ್ಸರ-ಮನಸ್ತಾಪಗಳಿಗೂ ಕಾರಣವಾಗುತ್ತವೆ, ಬೇಡಾದ ವಸ್ತುಗಳನ್ನು ಯಾಕಾದ್ರೂ ಕೊಡ್ತಾರಪ್ಪ ಎಂದು ವಾಕರಿಕೆ ಬರುವುದೂ ಇದೆ... ಅಂತೆಲ್ಲ ಉಡುಗೊರೆಗಳ ಬಗ್ಗೆ ನೇತ್ಯಾತ್ಮಕ ವಾದಗಳನ್ನೂ ಮಂಡಿಸಬಹುದು. ಆದರೂ ಒಟ್ಟಾರೆಯಾಗಿ ಉಡುಗೊರೆಯೆಂದರೆ ಅಕ್ಕರೆ-ಆಪ್ತತೆ ವ್ಯಕ್ತಗೊಳ್ಳುವ ಚಂದದ ರೀತಿ. ಬಂಧವನ್ನು ಬಂಧುರಗೊಳಿಸುವ ನವಿರು ತಂತು. ವೈಜ್ಞಾನಿಕವಾಗಿ ನೋಡಿದರೆ, ಅದೊಂದು ಭೌತಿಕ ವಸ್ತುವೇ ಆಗಿದ್ದರೂ ಆ ಪ್ರಕ್ರಿಯೆಯ ಹಿಂದಿರುವ ಮಾನಸಿಕ ಒಳಿತುಗಳು ಅನೇಕ. ಉಡುಗೊರೆ ಕೊಡುವ ಮತ್ತು ಪಡೆವ ವ್ಯಕ್ತಿಗಳಿಬ್ಬರಿಗೂ ಆಕ್ಸಿಟಾಸಿನ್ ಅಂತಃಸ್ರಾವದ ಮಟ್ಟ ಒಂದೊಮ್ಮೆಗೆ ಏರುವುದರಿಂದ ತೃಪ್ತಿ-ಖುಷಿ-ಧನ್ಯತೆ ಉಕ್ಕಿಬಂದ ಅನುಭೂತಿ. ಆದ್ದರಿಂದಲೇ ಹಬ್ಬಗಳು, ಸಮಾರಂಭಗಳು, ವಿಶೇಷ ಸಂದರ್ಭಗಳು ಉಡುಗೊರೆ ವಿನಿಮಯವಿಲ್ಲದೆ ಅಪೂರ್ಣ. 'ಆಶೀರ್ವಾದವೇ ಉಡುಗೊರೆ' ಅಂತಾದರೂ ಆಗಲೇಬೇಕು.

ಉಡುಗೊರೆಯು, ಕೊಡುವವರ ಮತ್ತು ಪಡೆಯುವವರ ಖುಷಿಗೆ ಕಾರಣವಾಗುವುದಂತೂ ಹೌದೇಹೌದು, ಆದರೆ ಸಿಂಪಲ್ ಉಡುಗೊರೆಯೊಂದು ಬರೀ ಆ ಇಬ್ಬರು ವ್ಯಕ್ತಿಗಳಿಗಷ್ಟೇ ಅಲ್ಲ, ಅದಕ್ಕಿಂತ ವ್ಯಾಪಕವಾಗಿ, ಕೆಲವೊಮ್ಮೆ ಇಡೀ ಪ್ರಪಂಚಕ್ಕೇ ಏನೋ ಒಂದು ಒಳ್ಳೆಯದನ್ನು ಮಾಡಿರುತ್ತದೆ. ಉಡುಗೊರೆ ಕೊಡುವವರಾಗಲಿ ಪಡೆದವರಾಗಲಿ ಆ ಕ್ಷಣದಲ್ಲಿ ಊಹಿಸಿರಲಾರದ ಮಹತ್ತ್ವ ಆ ಉಡುಗೊರೆಗೆ ಬಂದಿರುತ್ತದೆ. ಚರಿತ್ರೆಯುದ್ದಕ್ಕೂ ನಮಗಿದರ ನಿದರ್ಶನಗಳು ಸಿಗುತ್ತವೆ. ಅಂಥ ಕೆಲವು ವಿಶೇಷ ಉಡುಗೊರೆಗಳ ವ್ಯಾಖ್ಯಾನ ಇಂದಿನ ತೋರಣದ ಹೂರಣ. ಕೆಲವದರ ವ್ಯಾಪ್ತಿ ಅಮೆರಿಕಕ್ಕಷ್ಟೇ ಸಂಗತ; ಮತ್ತೆ ಕೆಲವು ವಿಶ್ವವ್ಯಾಪ್ತಿಯವು, ವಿಶ್ವಖ್ಯಾತಿಯವು.

ಒಕ್ಟಾವಿಯಾ ಇ. ಬಟ್ಲರ್ 1947ರಲ್ಲಿ ಅಮೆರಿಕದ ಲಾಸ್ ಏಂಜಲೀಸ್ ಬಳಿಯ ಪ್ಯಾಸಡಿನಾ ನಗರದಲ್ಲಿ- ಈಗ ಕಾಳ್ಗಿಚ್ಚಿನಿಂದ ಉರಿಯುತ್ತಿದೆಯಲ್ಲ ಅದೇ ಪ್ಯಾಸಡಿನಾದಲ್ಲಿ- ಹುಟ್ಟಿದ ಆಫ್ರಿಕನ್ ಅಮೆರಿಕನ್ ಮಹಿಳೆ. ಅಮೆರಿಕದ ಸಾಹಿತ್ಯಲೋಕದಲ್ಲಿ ಸೈನ್ಸ್ ಫಿಕ್ಷನ್ ಬರಹಗಾರರೆಲ್ಲ ಬಿಳಿಯ ಪುರುಷರೇ ಆಗಿದ್ದವೇಳೆ ಅವರಿಗೆ ಸಡ್ಡುಹೊಡೆದು ಅದ್ಭುತ ವಿಜ್ಞಾನಕೃತಿಗಳನ್ನು ಬರೆದ, 'ಆಫ್ರೋ ಫ್ಯೂಚರಿಸಮ್' ಎಂಬ ಹೊಸ ಸಾಹಿತ್ಯಶೈಲಿಯನ್ನು ಆರಂಭಿಸಿದ ಖ್ಯಾತಿ ಈಕೆಯದು. 1995ರಲ್ಲಿ ಪ್ರತಿಷ್ಠಿತ ಮೆಕಾರ್ಥರ್ ಫೆಲೊಶಿಪ್ ಪಡೆದ ಪ್ರಪ್ರಥಮ ಸೈನ್ಸ್ ಫಿಕ್ಷನ್ ಲೇಖಕಿಯೆನಿಸಿದವಳು. ಹತ್ತು ವರ್ಷದ ಬಾಲಕಿಯಾಗಿದ್ದಾಗ ತನಗೊಂದು ಟೈಪ್‌ರೈಟರ್ ಬೇಕೆಂದು ಅಮ್ಮನಲ್ಲಿ ಕೇಳಿದ್ದಳಂತೆ. ಕೂಲಿನಾಲಿ ಮಾಡಿಕೊಂಡು ಬಡತನದಲ್ಲಿದ್ದ ಅಮ್ಮ ಅದಕ್ಕೆಲ್ಲಿ ಹಣ ಹೊಂದಿಸಿಯಾಳು? ಅಷ್ಟು ಚಿಕ್ಕ ಹುಡುಗಿಗೇಕೆ ಟೈಪ್‌ರೈಟರ್? ತಂದರೂ ಅದನ್ನೆಲ್ಲಿ ಉಪಯೋಗಿಸುವಳು? ಕಪಾಟಿನಲ್ಲಿ ಧೂಳುತಿನ್ನುತ್ತ ಇರುವುದಕ್ಕೇಕೆ ದುಡ್ಡು ದಂಡ? ಎಂದು ಅಮ್ಮನ ಕೆಲ ಸ್ನೇಹಿತೆಯರು ಕಿವಿಯೂದಿದ್ದರಂತೆ. ಆದರೂ ಕರುಣಾಮಯಿ ಅಮ್ಮ ಅದು ಹೇಗೋ ಹಣ ಉಳಿಸಿ ಒಂದು ಟೈಪ್‌ರೈಟರ್ ಕೊಂಡುತಂದು ಮಗಳಿಗೆ ಉಡುಗೊರೆಯಾಗಿತ್ತಳು. ಡಿಸ್ಲೆಕ್ಸಿಯಾದಿಂದಾಗಿ ಕೈಬರಹ ಸಾಧ್ಯವಿರದಿದ್ದ, ಕ್ರಮಬದ್ಧ ಟೈಪಿಂಗ್ ಕಲಿಯದಿದ್ದ ಒಕ್ಟಾವಿಯಾ ಎರಡು ತೋರುಬೆರಳುಗಳಿಂದ ಕೀಲಿಗಳನ್ನು ಅದುಮುತ್ತ ಟೈಪಿಸತೊಡಗಿದಳು. ಒಂದಾದ ಮೇಲೊಂದು ಸೈನ್ಸ್ ಫಿಕ್ಷನ್ ರಚಿಸಿದಳು. 2000ನೆಯ ಇಸವಿಯಲ್ಲಿ ಆಕೆಯ 'ಪ್ಯಾರಬಲ್ ಆಫ್ ದ ಸೋವರ್' ಕೃತಿಯು ನ್ಯೂಯಾರ್ಕ್ ಟೈಮ್ಸ್ ಬೆಸ್ಟ್ ಸೆಲ್ಲರ್ ಪಟ್ಟಿಯಲ್ಲಿ ಕಾಣಿಸಿಕೊಂಡಿತು!

ಅಮೆರಿಕದ ಪ್ರಖ್ಯಾತ ಜಾಝ್ ಕಲಾವಿದ ಲೂಯಿ ಆರ್ಮ್‌ಸ್ಟ್ರಾಂಗ್ ಚಿಕ್ಕ ಹುಡುಗನಾಗಿದ್ದಾಗಿನ ಕಥೆಯೂ ಸ್ವಾರಸ್ಯಕರ. ಆತ ಕರ್ನೋಫ್ಸ್ಕಿ ಎಂಬ ಕುಟುಂಬಕ್ಕೆ ಕೆಲಸದ ಹುಡುಗನಾಗಿದ್ದ. ಆ ಕುಟುಂಬದ ಉದ್ಯಮದ ಬಗ್ಗೆ ಬೀದಿಪ್ರಚಾರ ಮಾಡುವುದು ಅವನ ಕೆಲಸ. ಬಾಯಿಂದ ಅರಚುವುದಕ್ಕಿಂತ ಆತ ಒಂದು ತಗಡಿನ ತುತ್ತೂರಿ ಮಾಡಿಕೊಂಡಿದ್ದ. ಹುಡುಗನಲ್ಲಿ ಸಂಗೀತದ ಅಭಿರುಚಿ ಇರುವುದನ್ನು ಕರ್ನೋಫ್ಸ್ಕಿ ಕುಟುಂಬ ಗಮನಿಸಿತು. ಒಮ್ಮೆ ಗಿರವಿ ಅಂಗಡಿಯೊಂದರಲ್ಲಿ ಕಾರ್ನೆಟ್ ವಾದ್ಯ ಮಾರಾಟಕ್ಕಿರುವುದನ್ನು ಆರ್ಮ್‌ಸ್ಟ್ರಾಂಗ್ ನೋಡಿದ. ಅದನ್ನು ಕೊಂಡುಕೊಳ್ಳುವ ಆಸೆ ಅವನಿಗಿತ್ತೆಂದು ಯಜಮಾನ ಮೊರಿಸ್ ಕರ್ನೋಫ್ಸ್ಕಿಗೂ ಗೊತ್ತಾಯ್ತು. ಒಡನೆಯೇ ಆತ 2 ಡಾಲರ್ ದುಡ್ಡನ್ನು ಆರ್ಮ್‌ಸ್ಟ್ರಾಂಗ್‌ಗೆ ಕೊಟ್ಟು ನಿನ್ನಿಷ್ಟದ ವಾದ್ಯ ಕೊಂಡುಕೋ, ಅದು ನನ್ನಿಂದ ನಿನಗೊಂದು ಉಡುಗೊರೆ ಎಂದುಬಿಟ್ಟನು. ಆರ್ಮ್‌ಸ್ಟ್ರಾಂಗ್ ಆ ಕಾರ್ನೆಟ್ ವಾದ್ಯ ಕೊಂಡುಕೊಂಡನು. ಅದು ಅವನ ಜಾಝ್ ಕಲಾತಪಸ್ಸಿನ ಮೂಲಸಾಧನವಾಯ್ತು. ಏಕಲವ್ಯನಂತೆ ಅಭ್ಯಾಸ ಮಾಡಿ ಬಹುದೊಡ್ಡ- ಅಮೆರಿಕದ ಜಾಝ್ ಪಿತಾಮಹ ಎನಿಸುವಂಥ - ಕಲಾವಿದನಾಗಿ ಬೆಳೆದನು. ಆತನ ಧ್ವನಿಮುದ್ರಣಗಳನ್ನು ಪ್ರಪಂಚದಾದ್ಯಂತ ಜಾಝ್ ರಸಿಕರು, ವಿದ್ಯಾರ್ಥಿಗಳು ಈಗಲೂ ಅಮೂಲ್ಯ ಆಸ್ತಿಯೆಂದು ಪರಿಗಣಿಸುತ್ತಾರೆ. ರಾಕ್-ಆ್ಯಂಡ್-ರೋಲ್ ಸಂಗೀತದ ಅನಭಿಷಿಕ್ತ ದೊರೆ ಎನಿಸಿಕೊಂಡ ಎಲ್ವಿಸ್ ಪ್ರೆಸ್ಲೆಯೂ ಒಂದು ಸಾದಾ ಉಡುಗೊರೆಯಿಂದಲೇ ಉತ್ತೇಜಿತನಾದವನು. 11 ವರ್ಷದವನಿದ್ದಾಗ ಬರ್ತ್‌ಡೇ ಗಿಫ್ಟ್ ಒಂದೋ ಬೈಸಿಕಲ್ ಬೇಕು ಇಲ್ಲ ರೈಫಲ್ ಬೇಕು ಎಂದಿದ್ದನಂತೆ. ಅವನಮ್ಮ ಅವೆರಡರ ಬದಲಿಗೆ ಏಳು ಡಾಲರ್ ಬೆಲೆಯ ಗಿಟಾರ್ ತಂದುಕೊಟ್ಟಳು. ಅದನ್ನು ಬಳಸಿಯೇ ಆತ ಸಂಗೀತ ಕಲಿತನು. ಮೊತ್ತಮೊದಲ ಹಾಡಿನ ಧ್ವನಿಮುದ್ರಣಕ್ಕೂ ಅದನ್ನೇ ಬಳಸಿದನು. ಆಮೇಲೆ ಅಪ್ರತಿಮ ಹಾಡುಗಾರನಾಗಿ, ಚಿತ್ರನಟನಾಗಿ, ಅಸಂಖ್ಯಾತ ಹುಡುಗಿಯರ ಕನಸಿನ ರಾಜಕುಮಾರನಾಗಿ ಖ್ಯಾತನಾದನು. 42 ವರ್ಷವಷ್ಟೇ ಬಾಳಿದನಾದರೂ ಎಲ್ವಿಸ್ ಪ್ರೆಸ್ಲೆಯ ಸಂಗೀತದ ಆಲ್ಬಮ್‌ಗಳು ಈಗಲೂ ಮಾರಾಟವಾಗುತ್ತವೆ. ಮರಣೋತ್ತರವಾಗಿಯೂ ಆತನಿಗೆ ಸ್ಟಾರ್‌ವಾಲ್ಯೂ ಇದೆ.

ಉಡುಗೊರೆಯಿಂದ ಉತ್ತೇಜನ ಪಡೆದ ಇನ್ನೊಂದು ಉದಾಹರಣೆ ಅಮೆರಿಕದ ಖ್ಯಾತ ಖಗೋಳವಿಜ್ಞಾನಿ ಕಾರ್ಲ್ ಸೇಗನ್. ಬಹುಶಃ ಆಲ್ಬರ್ಟ್ ಐನ್‌ಸ್ಟೀನ್‌ನ ಬಳಿಕ ಜಗತ್ತು ಕಂಡ ಅತಿಮೇಧಾವಿ ಖಗೋಳದಾರ್ಶನಿಕ ಎಂದು ಸೇಗನ್‌ನನ್ನು ಬಿಂಬಿಸಲಾಗಿತ್ತು. ಬರೀ ವಿಜ್ಞಾನಿಯಷ್ಟೇ ಆಗಿರದೆ ವಿಜ್ಞಾನ ಸಂಬಂಧಿ ಟಿವಿ ಕಾರ್ಯಕ್ರಮಗಳ ನಿರ್ಮಾಪಕನೂ, ಲೇಖಕನೂ ಆಗಿದ್ದರಿಂದ ಜನಸಾಮಾನ್ಯರಿಗೆ ವಿಜ್ಞಾನವನ್ನು ತಲುಪಿಸುವ ಮಹತ್ತರ ಕೆಲಸ ಮಾಡಿದವನು ಕಾರ್ಲ್ ಸೇಗನ್. ಆತನ ಟಿವಿ ಸರಣಿ ಕಾಸ್ಮೋಸ್, ಪುಲಿಟ್ಜರ್ ಪ್ರಶಸ್ತಿವಿಜೇತ ಕೃತಿಗಳಾದ ಡ್ರಾಗನ್ಸ್ ಆಫ್ ಈಡನ್, ಪೇಲ್ ಬ್ಲೂ ಡಾಟ್ ಮುಂತಾದುವು ಸುಪ್ರಸಿದ್ಧ. 1939ರಲ್ಲಿ ಕಾರ್ಲ್ ಸೇಗನ್ ಆಗಿನ್ನೂ ನಾಲ್ಕು ವರ್ಷದ ಹುಡುಗನಾಗಿದ್ದಾಗ ತಂದೆತಾಯಿ ಅವನನ್ನು ನ್ಯೂಯಾರ್ಕ್‌ಗೆ ವರ್ಲ್ಡ್ ಫೇರ್ ವಸ್ತುಪ್ರದರ್ಶನಕ್ಕೆ ಕರೆದುಕೊಂಡು ಹೋಗಿದ್ದರಂತೆ. ಅವರು ಶ್ರೀಮಂತರೇನಲ್ಲ, ಆದರೂ ವಿಜ್ಞಾನಿಯಾಗುತ್ತೇನೆಂದು ಕನಸಿದ್ದ ಮಗನ ಆಸೆಯನ್ನು ಪೋಷಿಸಿದರು. ವಸ್ತುಪ್ರದರ್ಶನದಲ್ಲಿ ಕೆಮಿಸ್ಟ್ರಿ ಸೆಟ್ ಎಂಬ ವಿಜ್ಞಾನ ಆಟಿಕೆಯನ್ನು ಮಗನಿಗೆ ಉಡುಗೊರೆ ಕೊಟ್ಟರು. ವಿಜ್ಞಾನಸಾಗರದಲ್ಲಿ ಧುಮುಕಲಿಕ್ಕೆ ಅದು ಹಾರುಹಲಗೆ ಆಯ್ತು ಕಾರ್ಲ್ ಸೇಗನ್‌ಗೆ.

ತಿಳಿರು ತೋರಣ
ಶ್ರೀವತ್ಸ ಜೋಶಿ
srivathsajoshi@yahoo.com

ವಿಜ್ಞಾನ ಆಟಿಕೆಗಳ ವಿಷಯ ಬಂದಾಗ ಸ್ಟೀವ್ ಜಾಬ್ಸ್‌ನ ಉದಾಹರಣೆಯೂ ಉಲ್ಲೇಖಾರ್ಹವೇ. ಆ್ಯಪಲ್ ಕಂಪನಿಯ ಸಂಸ್ಥಾಪಕ ಸ್ಟೀವ್ ಜಾಬ್ಸ್ ಚಿಕ್ಕ ಹುಡುಗನಾಗಿದ್ದಾಗ ಆತನ ಹೆತ್ತವರು ಕೊಡಿಸುತ್ತಿದ್ದ ಆಟಿಕೆ-ಉಡುಗೊರೆಗಳು ತಂತ್ರಜ್ಞಾನದಲ್ಲಿ ಆಸಕ್ತಿ ಕೆರಳಿಸುವಂಥವೇ ಆಗಿದ್ದುವು. ಅದಕ್ಕಿಂತ ಮುಖ್ಯವಾಗಿ, ಅವರ ಪಕ್ಕದಮನೆಯಲ್ಲಿ ವಾಸಿಸುತ್ತಿದ್ದ ಲ್ಯಾರಿ ಲ್ಯಾಂಗ್ ಎಂಬೊಬ್ಬ ಎಂಜಿನಿಯರ್ ಆಗ ಹ್ಯೂಲೆಟ್-ಪಕಾರ್ಡ್ ಕಂಪನಿಗೆ ಕೆಲಸ ಮಾಡುತ್ತಿದ್ದವನು ಸ್ಟೀವ್‌ನ ಅಚ್ಚುಮೆಚ್ಚಿನ ಅಂಕಲ್ ಆಗಿದ್ದನಂತೆ. ಆತ ಸ್ಟೀವ್‌ಗೆ ಹೀತ್‌ಕಿಟ್ ಎಂಬ ಹೆಸರಿನ ಇಲೆಕ್ಟ್ರಾನಿಕ್ ಕಿಟ್‌ಗಳನ್ನು ಉಚಿತವಾಗಿ ಒದಗಿಸುತ್ತಿದ್ದನು. ಅದರಿಂದ ರೇಡಿಯೊ, ಟಿವಿ ರಿಸೀವರ್‌ಗಳನ್ನೆಲ್ಲ ಕಟ್ಟಿಕೊಳ್ಳುವುದು ಸಾಧ್ಯವಾಗುತ್ತಿತ್ತು. ಕಷ್ಟವೇನಿಲ್ಲ, ಪ್ರಯತ್ನಪಟ್ಟರೆ ನಾವೂ ತಯಾರಿಸಬಹುದು ಎಂದೆನ್ನುವ ಆತ್ಮವಿಶ್ವಾಸ ಸ್ಟೀವ್‌ನಲ್ಲಿ ಅಂಕುರಿಸಿತು. ಒಮ್ಮೆ ಧೈರ್ಯದಿಂದ ಹ್ಯೂಲೆಟ್-ಪಕಾರ್ಡ್ ಕಂಪನಿಯ ಸಂಸ್ಥಾಪಕ ಬಿಲ್ ಹ್ಯೂಲೆಟ್‌ನಿಗೇ ಕರೆ ಮಾಡಿ ತಾನೊಬ್ಬ ಹೈಸ್ಕೂಲ್ ಹುಡುಗನೆಂದೂ, ಫ್ರೀಕ್ವೆನ್ಸಿ ಕೌಂಟರ್ ಎಂಬ ಉಪಕರಣ ತಯಾರಿಸಲಿಕ್ಕೆ ಬಿಡಿಭಾಗಗಳಿದ್ದರೆ ಬೇಕಿತ್ತೆಂದೂ ಕೇಳಿದನಂತೆ! ಸ್ಟೀವ್‌ನ ಆಸಕ್ತಿಯನ್ನು ಮೆಚ್ಚಿದ ಬಿಲ್ ಹ್ಯೂಲೆಟ್, ಬಿಡಿಭಾಗಗಳನ್ನು ಒದಗಿಸಿದನಷ್ಟೇ ಅಲ್ಲ, ಬೇಸಗೆಯಲ್ಲಿ ಕಲಿಕೆಲಸ (ಇಂಟರ್ನ್‌ಶಿಪ್) ಮಾಡಲಿಕ್ಕೂ ಅವಕಾಶ ವಿತ್ತನು. ಈಗ ಆ್ಯಪಲ್ ಕಂಪನಿಯ ಭವ್ಯ ಇತಿಹಾಸ ಏಳಿಗೆ... ಎಲ್ಲ ನಮ್ಮ ಕಣ್ಣೆದುರಿಗಿದೆ.

ಈ ಕಥಾನಕ ಮತ್ತೂ ಸ್ವಾರಸ್ಯದ್ದು. ಇದರಲ್ಲಿ ಉಡುಗೊರೆ ಪಡೆದವನಲ್ಲ, ಉಡುಗೊರೆ ಕೊಟ್ಟವನೇ ಉತ್ಸಾಹ ವರ್ಧಿಸಿಕೊಂಡು ಜಗದ್ವಿಖ್ಯಾತನಾದದ್ದು! ಲಂಡನ್‌ನಿವಾಸಿ ಇಂಗ್ಲಿಷ್ ಲೇಖಕ ಆಲನ್ ಅಲೆಗ್ಸಾಂಡರ್ ಮಿಲ್ನ್, 21 ಆಗಸ್ಟ್ 1921ರಂದು ತನ್ನ ಒಂದು ವರ್ಷದ ಮಗ ಕ್ರಿಸ್ಟೋಫರ್ ರಾಬಿನ್ ಮಿಲ್ನ್‌ಗೆ ಕರಡಿಗೊಂಬೆ (ಟೆಡ್ಡಿಬೇರ್)ಯನ್ನು ಹುಟ್ಟುಹಬ್ಬದ ಉಡುಗೊರೆಯೆಂದು ತಂದುಕೊಟ್ಟನು. ಅದಕ್ಕೆ ಎಡ್ವರ್ಡ್ ಬೇರ್ ಎಂದು ಹೆಸರನ್ನೂ ಇಟ್ಟಿದ್ದನು. ಮಗನಿಗೆ ಆಟಿಕೆ ಮೆಚ್ಚುಗೆಯಾಯ್ತು, ಅದಕ್ಕಿಂತ ಹೆಚ್ಚಾಗಿ ತಂದೆಗೆ ಅದು ಹೊಸದೊಂದು ಕಲ್ಪನೆಯನ್ನು ತಂದುಕೊಟ್ಟಿತು. ಆ ಕಲ್ಪನೆ ಗರಿಗೆದರಿ ಹೊರಬಂದಿದ್ದೇ ವಿನ್ನಿ-ದ-ಪೂಹ್ ಎಂಬ ಸುಪ್ರಸಿದ್ಧ ಕಾಮಿಕ್ ಕಥಾಸರಣಿ. ಪ್ರಪಂಚದಾದ್ಯಂತ ಚಿಕ್ಕಮಕ್ಕಳನ್ನು ಮುದಗೊಳಿಸಿದ ಕರಡಿಕಥೆಗಳು. ವಿನ್ನಿ ಎಂಬ ಹೆಸರು ಲಂಡನ್‌ನ ಪ್ರಾಣಿಸಂಗ್ರಹಾಲಯದಲ್ಲಿದ್ದ ವಿನ್ನಿಪೆಗ್ ಹೆಸರಿನ ಕಪ್ಪುಕರಡಿಯಿಂದ; ಪೂಹ್ ಎಂದು ಮಗ ಕ್ರಿಸ್ಟೋಫರ್ ಒಂದು ಮುದ್ದಿನ ಬಾತುಕೋಳಿಯನ್ನು ಕರೆಯುತ್ತಿದ್ದ ರೀತಿಯಿಂದ. ಅದೆರಡೂ ಸೇರಿ ವಿನ್ನಿ-ದ-ಪೂಹ್ ಆಯ್ತು. ಅದನ್ನು ಅತಿಹೆಚ್ಚು ಮೌಲ್ಯದ ಫಿಕ್ಷನಲ್ ಕ್ಯಾರೆಕ್ಟರ್ ಎಂದು ಫೋರ್ಬ್ಸ್ ಮ್ಯಾಗಜೀನ್ 2002ರಲ್ಲಿ ಘೋಷಿಸಿತು. ಆಗತಾನೆ ವಿನ್ನಿ-ದ-ಪೂಹ್ ವಾರ್ಷಿಕ ವಹಿವಾಟು 600 ಕೋಟಿ ಡಾಲರ್‌ಗಳಷ್ಟು ಆಗಿತ್ತು. ಹಾಲಿವುಡ್‌ನ ವಾಕ್ ಆಫ್ ಫೇಮ್ ಓಣಿಯಲ್ಲಿ ವಿನ್ನಿ-ದ-ಪೂಹ್‌ಗೂ ಸ್ವಂತ ನಕ್ಷತ್ರದ ಗೌರವ ಸಿಕ್ಕಿದೆ.

ಮಕ್ಕಳನ್ನು ರಂಜಿಸುತ್ತಿರುವ ವಿನ್ನಿ-ದ-ಪೂಹ್‌ನ ಕಥೆ ಅದಾದರೆ, ಮಕ್ಕಳು-ದೊಡ್ಡವರೆನ್ನದೆ ಎಲ್ಲರ ಮನಕಲುಕುವ ಆ್ಯನ್ ಫ್ರಾಂಕ್‌ಳ ಡೈರಿಯ ಹಿಂದೆಯೂ ಉಡುಗೊರೆಯದೇ ಪ್ರಧಾನ ಭೂಮಿಕೆಯಿರುವುದು. ಆ್ಯಮ್‌ಸ್ಟರ್‌ಡ್ಯಾಮ್‌ನಲ್ಲಿ ವಾಸಿಸುತ್ತಿದ್ದ ಹದಿಹರೆಯದ ಯಹೂದ್ಯ ಹುಡುಗಿ ಆ್ಯನ್ ಫ್ರಾಂಕ್ 12 ಜೂನ್ 1942ರಂದು ತನ್ನ 13ನೆಯ ಹುಟ್ಟುಹಬ್ಬದಂದು ಹೆತ್ತವರಿಂದ ಒಂದು ಚಿಕ್ಕ ಡೈರಿಯನ್ನು ಉಡುಗೊರೆಯಾಗಿ ಪಡೆದಳು. ನಿಜವಾಗಿ ಅದು ಡೈರಿಯೂ ಅಲ್ಲ, ಆಟೊಗ್ರಾಫ್ ಪುಸ್ತಕವನ್ನೇ ದಿನಾಂಕ ನಮೂದಿಸಿ ಡೈರಿಯಾಗಿಸಿದ್ದು. ಹುಟ್ಟುಹಬ್ಬಕ್ಕೆ ಅದೇ ಉಡುಗೊರೆ ಆಗಬಹುದು ಎಂದು ಅವಳೇ ಆಯ್ಕೆ ಮಾಡಿದ್ದಂತೆ, ಮತ್ತು ಅದು ತನಗೆ ಸಿಕ್ಕಿದ ಅತ್ಯಮೂಲ್ಯ ಉಡುಗೊರೆ ಎಂದು ಅವಳಿಗೆ ತುಂಬ ಹೆಮ್ಮೆಯಿತ್ತಂತೆ. ಅದಾಗಿ ಒಂದು ತಿಂಗಳೊಳಗೇ ಆ್ಯನ್ ಮತ್ತವಳ ಕುಟುಂಬಸ್ಥರನ್ನೆಲ್ಲ ನಾತ್ಸಿಗಳಿಂದ ತಪ್ಪಿಸಿಕೊಳ್ಳಲಿಕ್ಕೆ ಒಂದು ಅಡಗುದಾಣದಲ್ಲಿ ಇಡಲಾಯ್ತು. ಆಗಸ್ಟ್ 1944ರಲ್ಲಿ ಅದರ ಮೇಲೆ ದಾಳಿ ನಡೆಯಿತು. ಅದಾದ ಮೇಲೆ ಬರ್ಜನ್-ಬೆಲ್ಸನ್ ಸೆರೆಮನೆಯಲ್ಲಿ ಕೆಲದಿನ ವಾಸವಾಗಿದ್ದ ಆ್ಯನ್ ಫ್ರಾಂಕ್ ಅಲ್ಲಿಯೇ ಟೈಫಸ್ ರೋಗಕ್ಕೆ ಬಲಿಯಾದಳು. ಎರಡು ವರ್ಷ ಕಾಲ ಪ್ರತಿದಿನದ ದಾರುಣ ಅವಸ್ಥೆಯನ್ನು ಆ್ಯನ್ ತನ್ನ ಡೈರಿಯಲ್ಲಿ ಕಣ್ಣಿಗೆ ಕಟ್ಟುವಂತೆ ದಾಖಲಿಸಿದ್ದಳು. 1947ರಲ್ಲಿ ಅದು 'ದ ಡೈರಿ ಆಫ್ ಎ ಯಂಗ್ ಗರ್ಲ್' ಎಂಬ ಹೆಸರಿನಲ್ಲಿ



ಪ್ರಕಟವಾಯಿತು. ಜಗತ್ತಿನ 67 ಭಾಷೆಗಳಲ್ಲಿ ಒಟ್ಟು ಸುಮಾರು 3 ಕೋಟಿ ಪ್ರತಿಗಳು ಮಾರಾಟವಾದವು. ಈ ಪುಸ್ತಕವು ಹೊಲೊಕಾಸ್ಟ್ ನರಕಯಾತನೆಯ ಬಗೆಗಿನ ಅತ್ಯಮೂಲ್ಯ ದಾಖಲೆಯೆನಿಸಿತು. ಅಮೆರಿಕಾಧ್ಯಕ್ಷ ಜಾನ್ ಎಫ್ ಕೆನಡಿಯಂತೂ ಆ್ಯನ್ ಫ್ರಾಂಕ್‌ಳ ಡೈರಿಯನ್ನು- ಸಂಕಟಸಮಯದಲ್ಲಿ ಮನುಷ್ಯನ ಘನತೆ-ಗೌರವ ಹೇಗೆ ಘಾಸಿಗೊಳ್ಳುತ್ತದೆಂದು ಇದರಷ್ಟು ಮಾರ್ಮಿಕವಾಗಿ ಮತ್ತೆಲ್ಲೂ ದಾಖಲಿಸಿಲ್ಲ ಎಂದು- ವಿಶೇಷ ಪದಗಳಿಂದ ಕೊಂಡಾಡಿದ್ದಾರೆ.

ಇವಿಷ್ಟು ವ್ಯಕ್ತಿ-ವ್ಯಕ್ತಿ ನಡುವಿನ ಉಡುಗೊರೆಗಳಾದರೆ ರಾಷ್ಟ್ರ-ರಾಷ್ಟ್ರಗಳ ನಡುವಿನ ಉಡುಗೊರೆಗಳ ಪೈಕಿ ವಿಶೇಷವಾದವುಗಳನ್ನೂ ಇಲ್ಲಿ ನೆನಪಿಸಿಕೊಳ್ಳಲೇಬೇಕು. ಮೊದಲನೆಯದು, ನ್ಯೂಯಾರ್ಕ್‌ನಲ್ಲಿ ಪ್ರವಾಸಿಗರನ್ನು ಸ್ವಾಗತಿಸುವ, ಅಮೆರಿಕದ ಹೆಗ್ಗುರುತು ಎನಿಸಿಕೊಂಡಿರುವ ಸ್ಟ್ಯಾಚ್ಯೂ ಆಫ್ ಲಿಬರ್ಟಿ. ಇದು ಅಮೆರಿಕಕ್ಕೆ ಫ್ರಾನ್ಸ್ ದೇಶದ ಉಡುಗೊರೆ. ಫ್ರೆಂಚ್ ಕವಿ ಎದುಆರ್ ದ್ಲಬುಲೆ ಎಂಬಾತ 1865ರಲ್ಲಿ ಅಮೆರಿಕದ ಸ್ವಾತಂತ್ರ್ಯ ಶತಮಾನೋತ್ಸವ ಹತ್ತಿರ ಬರುತ್ತಿದ್ದುದರಿಂದ ಮತ್ತು ಆಗಷ್ಟೇ ಅಮೆರಿಕದಲ್ಲಿ ಗುಲಾಮಗಿರಿ ಪದ್ಧತಿ ನಿರ್ಮೂಲವಾಗಿದ್ದರಿಂದ ಇಂಥದೊಂದು ಉಡುಗೊರೆ ಕೊಡಬೇಕೆಂದು ಸಲಹೆಯಿತ್ತನು. ಫ್ರೆದೆರಿಕ್ ಒಗೂಸ್ತ್ ಬಾರ್ತೋಲ್ದಿ ಇದರ ಪ್ರಧಾನ ಶಿಲ್ಪಿ. ಒಳಗಿನ ಸಂರಚನೆಯ ವಿನ್ಯಾಸಕ್ಕೆ ಅಲೆಕ್ಸಾಂದರ್ ಗುಸ್ತಾವ್ ಈಫೆಲ್ ಎಂಬ ವಾಸ್ತುಶಿಲ್ಪಿಯ ನೆರವನ್ನೂ ಪಡೆಯಲಾಗಿತ್ತು. ಫ್ರಾನ್ಸ್‌ನಿಂದ ಅಮೆರಿಕಕ್ಕೆ ಹಡಗಿನಲ್ಲಿ ಬಿಡಿಭಾಗಗಳನ್ನೆಲ್ಲ ತಂದು ಇಲ್ಲಿ ಪ್ರತಿಮೆಯನ್ನು ಜೋಡಿಸಿ ನಿಲ್ಲಿಸಲಾಯ್ತು. 28 ಅಕ್ಟೋಬರ್ 1886ರಂದು ಅದು ಸಾರ್ವಜನಿಕ ವೀಕ್ಷಣೆಗೆ ತೆರೆದುಕೊಂಡಿತು. ಎರಡನೆಯದು, ವಾಷಿಂಗ್ಟನ್ ಡಿಸಿ.ಯಲ್ಲಿ ಶ್ವೇತಭವನದ ಓವಲ್ ಆಫೀಸ್‌ನಲ್ಲಿರುವ ರೆಸೊಲ್ಯುಟ್ ಡೆಸ್ಕ್ ಎಂಬ ಹೆಸರಿನ ಮೇಜು. ಅದರ ಕಥೆಯೂ ರೋಮಾಂಚಕಾರಿಯಾಗಿದೆ. 1852ರಲ್ಲಿ ಇಂಗ್ಲೆಂಡ್‌ನಿಂದ ಉತ್ತರಧ್ರುವದ ಆರ್ಕ್ಟಿಕ್‌ಗೆ ಹೊರಟ ಜಾನ್ ಫ್ರಾಂಕ್ಲಿನ್‌ನ ನೌಕೆ ನಾಪತ್ತೆಯಾದಾಗ ಅದರ ಹುಡುಕಾಟಕ್ಕೆಂದು ರೆಸೊಲ್ಯೂಟ್ ಹೆಸರಿನ ಇನ್ನೊಂದು ಹಡಗು ಅಲ್ಲಿಗೆ ಧಾವಿಸಿತು. ದುರದೃಷ್ಟವಶಾತ್ ಆ ಹಡಗು ಹಿಮಗಡ್ಡೆಗಳೊಳಗೆ ಹೂತುಹೋಗಿದ್ದರಿಂದ ನಾವಿಕರು ಅದನ್ನು ಅಲ್ಲಿಯೇ ತೊರೆದು ರಕ್ಷಣಾದೋಣಿಗಳಲ್ಲಿ ಹಿಂದಿರುಗಬೇಕಾಯ್ತು. 1855ರಲ್ಲಿ ಅಮೆರಿಕದ ಒಂದು ಹಡಗು ಆ ಪ್ರದೇಶದಲ್ಲಿ ಸಂಚರಿಸುತ್ತಿದ್ದಾಗ ಪಾಳುಬಿದ್ದಿದ್ದ ರೆಸೊಲ್ಯೂಟ್ ಹಡಗನ್ನು ಕಂಡಿತು. ಅದನ್ನಲ್ಲಿಂದ ಹೊರತೆಗೆದು ಇಂಗ್ಲೆಂಡ್‌ನ ರಾಣಿ ವಿಕ್ಟೋರಿಯಾಳ ಸುಪರ್ದಿಗೆ ಮರಳಿಸಿತು. 1880ರಲ್ಲಿ ಆ ಹಡಗನ್ನು ಸಂಪೂರ್ಣ ಕಳಚಲಾಯಿತು. ಅದರದೇ ಕೆಲವು ಮರಮಟ್ಟುಗಳಿಂದ ಒಳ್ಳೆಯದೊಂದು ಡೆಸ್ಕ್ ರಚಿಸಿ, ಉಪಕಾರಸ್ಮರಣೆಯೆಂದು ಅಮೆರಿಕಕ್ಕೆ ಕೃತಜ್ಞತಾಪೂರ್ವಕ ಕಳಿಸಲಾಯ್ತು. ಆಗಿನ ಅಮೆರಿಕಾಧ್ಯಕ್ಷ ರುದರ್‌ಫೋರ್ಡ್ ಹೇಯ್ಸ್ ಅದನ್ನು ಸ್ವೀಕರಿಸಿ ಶ್ವೇತಭವನದಲ್ಲಿ ಸ್ಥಾಪಿಸಿದರು. ಆಮೇಲಿನ ಅಮೆರಿಕಾಧ್ಯಕ್ಷರೆಲ್ಲ ಅದೆಷ್ಟೋ ವಿಧೇಯಕಗಳನ್ನು, ಒಪ್ಪಂದಗಳನ್ನು ಆ ಮೇಜಿನ ಮೇಲೆ ಕಾಗದಪತ್ರಗಳನ್ನಿಟ್ಟು ಸಹಿ ಹಾಕಿದ್ದಾರೆ. ಮೂರನೆಯದು ಕೂಡ ರಾಜಧಾನಿ ವಾಷಿಂಗ್ಟನ್ ಡಿಸಿ.ಗೆ ಸಂಬಂಧಿಸಿದ್ದೇ. ಇಲ್ಲಿ ಪ್ರತಿವರ್ಷ ಮಾರ್ಚ್-ಏಪ್ರಿಲ್ ತಿಂಗಳಲ್ಲಿ ಅರಳುವ ಚೆರ್ರಿ ಬ್ಲಾಸಮ್ ಮರಗಳು. ಅವು ಅಮೆರಿಕಕ್ಕೆ ಜಪಾನ್ ದೇಶದ ಉಡುಗೊರೆ. 1885ರಲ್ಲಿ ಜಪಾನ್‌ಗೆ ಪ್ರವಾಸ ಹೋಗಿಬಂದ ಅಮೆರಿಕನ್ ಲೇಖಕಿ ಎಲಿಝಾ ಸ್ಕಿಡ್‌ಮೋರ್ ಅಲ್ಲಿನ ಸಾಕುರಾ ಮರಗಳ ಚೆಲುವನ್ನು ಕೊಂಡಾಡಿ ಬರೆದಳು. ಅಮೆರಿಕದ ರಾಜಧಾನಿಯಲ್ಲೂ ಅಂಥ ಮರಗಳಿದ್ದರೆ ಚೆನ್ನಾಗಿರುತ್ತದೆ ಎಂದುಕೊಂಡಳು. ಆಗಿನ ಪ್ರಥಮಮಹಿಳೆ ಹೆಲೆನ್ ಟಾಫ್ಟ್‌ಳ ಮನವೊಲಿಸಿದಳು. ಅದೇ ಸಂದರ್ಭದಲ್ಲಿ ಜಪಾನ್‌ನ ವಿಜ್ಞಾನಿ ಡಾ.ಜೊಕಿಚಿ ಟಕಮಿನ್ ಅಮೆರಿಕ ರಾಜಧಾನಿಗೆ ರಾಜತಾಂತ್ರಿಕ ಭೇಟಿಯಿತ್ತಾಗ ಪ್ರಥಮ ಮಹಿಳೆ ಹೆಲೆನ್ ಟಾಫ್ಟ್ ಆತನಲ್ಲಿ ಈ ವಿಚಾರ ಪ್ರಸ್ತಾವಿಸಿದಳು. ಆತ ಟೋಕಿಯೊಗೆ ಹಿಂದಿರುಗಿದ ಮೇಲೆ ಮೇಯರ್ ಯುಕ್ಯೊ ಒಜಾಕಿಯ ಬಳಿ ವಿಚಾರಿಸಿದನು. ಯುಕ್ಯೊನ ಖುಷಿಯ ಒಪ್ಪಿಗೆಯಂತೆ ಸಾಕುರಾ ಗಿಡಗಳಿದ್ದ ಹಡಗು ಜಪಾನ್‌ನಿಂದ ಅಮೆರಿಕಕ್ಕೆ ಹೊರಟಿತು. ದುರದೃಷ್ಟವಶಾತ್ ಆ ಗಿಡಗಳು ಕೀಟಬಾಧೆಗೆ ಒಳಗಾದ್ದರಿಂದ ಸುಟ್ಟು ನಾಶಪಡಿಸಬೇಕಾಯ್ತು. 1912ರಲ್ಲಿ ಮತ್ತೊಮ್ಮೆ ಸುಮಾರು 3000ದಷ್ಟು ಸಾಕುರಾ ಗಿಡಗಳನ್ನು ಜಪಾನ್‌ನಿಂದ ವಾಷಿಂಗ್ಟನ್ ಡಿಸಿ.ಗೆ ತರುವ ಪ್ರಯತ್ನ ಫಲಿಸಿತು. ಈಗ ಪ್ರತಿವರ್ಷ ಮಾರ್ಚ್-ಏಪ್ರಿಲ್ ಅವಧಿಯಲ್ಲಿ ಚೆರ್ರಿ ಬ್ಲಾಸಮ್ ಫೆಸ್ಟಿವಲ್ ಅಮೆರಿಕ ರಾಜಧಾನಿಯ ಪ್ರಮುಖ ಆಕರ್ಷಣೆ. ಪ್ರಕೃತಿಯ ಸುಂದರ ದೃಶ್ಯಾವಳಿ ನೋಡಲೆಂದು ದೇಶವಿದೇಶಗಳಿಂದ ಪ್ರವಾಸಿಗರು ಬಂದುಸೇರುವ ಜನಪ್ರಿಯ ಜಾತ್ರೆ. ಹೀಗಿದೆ ನೋಡಿ ಉಡುಗೊರೆಗಳ ಮಹಾತ್ಮೆ!

ಆದ್ದರಿಂದ, ಉಡುಗೊರೆ ಬಗ್ಗೆ ತಾತ್ಸಾರ ಸಲ್ಲದು. ಯಾವ ಉಡುಗೊರೆಯು ಯಾರಿಗೆ ಯಾವ ನಮೂನೆಯ ಉತ್ಸಾಹ-ಉತ್ತೇಜನ ತಂದು ವರ್ಲ್ಡ್ ಫೇಮಸ್ ಆಗಿಸುತ್ತದೆಯೋ ಯಾರಿಗೆ ಗೊತ್ತು!?

ಉದಾರಚರಿತರ ಮಹೌದಾರ್ಯವೆಂದರೆ ಇದೇನಾ?

ಪರರ ಉನ್ನತಿಯನ್ನು ಸದಾ ಬಯಸುವ ವಿಶ್ವೇಶ್ವರ ಭಟ್ಟರ ಮಹೌದಾರ್ಯ ಗುಣಕ್ಕೆ ನನ್ನ 'ವಿದ್ಯಮಾನ' ಅಂಕಣದ ಈ 50ನೇ ಪ್ರಸ್ತುತಿಯ ಅರ್ಪಣೆ.



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಈ ವಾರ ನಿಮಗೆ, ಮಹೌದಾರ್ಯವನ್ನು ಸಾರುವ 2 ಕಥೆಗಳನ್ನು ಹೇಳಬೇಕು ಅಂದುಕೊಂಡಿದ್ದೇನೆ. ಮೊದಲನೆಯದು ತ್ರೇತಾಯುಗದ್ದಾದರೆ, ಎರಡನೆಯದು ಕಲಿಯುಗದ್ದು.

ರಾಮಾಯಣವನ್ನು ಬರೆದದ್ದು ಮಹರ್ಷಿ ವಾಲ್ಮೀಕಿ ಎಂಬುದು ಗೊತ್ತಿರುವಂಥದ್ದೇ. ನಂತರ, ಪ್ರಪಂಚದಾದ್ಯಂತದ 24ಕ್ಕೂ ಹೆಚ್ಚು ಭಾಷೆಗಳಲ್ಲಿ 300ಕ್ಕೂ ಹೆಚ್ಚು ರಾಮಾಯಣಗಳನ್ನು ಬರೆಯಲಾಗಿದೆ ಎಂಬುದು ತಿಳಿದರೆ ಆಶ್ಚರ್ಯವಾಗುತ್ತದೆ. ಭಾರತವಲ್ಲದೆ ಇತರ 9 ದೇಶಗಳು ತಮ್ಮದೇ ಆದ ರಾಮಾಯಣವನ್ನು ಹೊಂದಿವೆ. ವಾಲ್ಮೀಕಿ ರಾಮಾಯಣ ಹೊರತುಪಡಿಸಿ, ಗೋಸ್ವಾಮಿ ತುಳಸೀದಾಸರು ಬರೆದ 'ರಾಮ ಚರಿತ ಮಾನಸ' ಅಥವಾ 'ತುಳಸಿ ರಾಮಾಯಣ' ಭಾರತದಲ್ಲಿ ಹೆಚ್ಚು ಜನಪ್ರಿಯ. ಆದರೆ, ರಾಮಾಯಣವನ್ನು ವಾಲ್ಮೀಕಿಗಿಂತ ಮೊದಲು ರಾಮಭಕ್ತ ಹನುಮಂತ ಬರೆದಿದ್ದ ಎಂಬುದು ಕೆಲವರಿಗಷ್ಟೇ ಗೊತ್ತು. ಇದಕ್ಕೆ ಯಾವುದೇ ಆಧಾರಗಳಿಲ್ಲದಿದ್ದರೂ, ಕೆಲ ಪೌರಾಣಿಕ ನಂಬಿಕೆಗಳ ಪ್ರಕಾರ, ಇದನ್ನು 'ಹನುಮದ್ ರಾಮಾಯಣ' ಎಂದು ಕರೆಯಲಾಗುತ್ತದೆ. ಈ ರಾಮಾಯಣವೇಕೆ ವಾಲ್ಮೀಕಿ ರಾಮಾಯಣದಷ್ಟು ಪ್ರಸಿದ್ಧವಾಗಿಲ್ಲ? ಹನುಮದ್ ರಾಮಾಯಣ ಇದ್ದಿತ್ತಾದರೆ ಈಗ ಏನಾಯಿತು? ಎಂಬ ಬಗ್ಗೆ ಉತ್ತರಭಾರತದ ಸಂತ-ಮಹಾಂತರು ಹೇಳುವುದು ಹೀಗೆ:

ಯುದ್ಧದಲ್ಲಿ ರಾವಣನನ್ನು ಸೋಲಿಸಿದ ನಂತರ ರಾಮನು ಲಂಕೆಯಿಂದ ತನ್ನ ರಾಜ್ಯ ಅಯೋಧ್ಯೆಗೆ ಹಿಂದಿರುಗಿ ಆಳ್ವಿಕೆ ಮಾಡಲು ಪ್ರಾರಂಭಿಸುತ್ತಾನೆ. ಕಾಲಾನಂತರ, ಶ್ರೀರಾಮನ ನಿರ್ಯಾಣವಾದ ಮೇಲೆ ಚಿರಂಜೀವಿ ಹನುಮಂತನು ರಾಮನ ಸ್ಮೃತಿಯಲ್ಲಿ ತಪಸ್ಸು ಮಾಡಲು ಹಿಮಾಲಯಕ್ಕೆ ಹೋದ. ಭಗವಾನ್ ಶಿವನನ್ನು ಕುರಿತು ತಪಸ್ಸಿನಲ್ಲಿ ತೊಡಗಿದ. ನಂತರ, ರಾಮನನ್ನು ಸ್ಮರಿಸುತ್ತಾ ದೊಡ್ಡ ಬಂಡೆಯ ಮೇಲೆ ತನ್ನ ವಜ್ರನಖಗಳಿಂದ ರಾಮಾಯಣವನ್ನು ಬರೆದ, ರಾಮನೊಂದಿಗೆ ತಾನು ಕಳೆದ ದಿನಗಳ ಬಗ್ಗೆ ಇದರಲ್ಲಿ ವರ್ಣಿಸಿದ. ರಾಮ-ಸೀತೆಯರ ಸಂಬಂಧ, ರಾಮ-ಲಕ್ಷ್ಮಣರ ಸಾಹೋದರ್ಯ ಹೇಗಿತ್ತು? ಸೀತೆಯನ್ನು ರಾವಣನಿಂದ ರಾಮನು ಕಾಪಾಡಿದ್ದು ಹೇಗೆ? ಎಂಬುದನ್ನಲ್ಲದೆ, ರಾಮನ ಧೈರ್ಯ-ಶೌರ್ಯಗಳ ಕುರಿತೂ ಬರೆದು, ಈ ರಾಮಾಯಣವನ್ನು ಶಿವನಿಗೆ ಅರ್ಪಿಸಲೆಂದು ಆ ಬಂಡೆಗಲ್ಲನ್ನು ಕೈಲಾಸಕ್ಕೆ ಹೊತ್ತು ತಂದ ಹನುಮಂತ. ಅದೇ ವೇಳೆಗೆ ವಾಲ್ಮೀಕಿಗಳೂ ತಾವು ಬರೆದಿದ್ದ ರಾಮಾಯಣವನ್ನು ತಂದು ಶಿವನಿಗರ್ಪಿಸಲು ಅಲ್ಲಿಗೆ ಬಂದಿದ್ದರು. ಆದರೆ, ಹನುಮದ್ ರಾಮಾಯಣವನ್ನು ಅವಲೋಕಿಸುತ್ತಿದ್ದಂತೆ ವಾಲ್ಮೀಕಿಗಳಿಗೆ ಅದು ತುಂಬಾ ಇಷ್ಟವಾಗಿ, ತಾವು ಬರೆದುದಕ್ಕಿಂತಲೂ ಇದು ಅದ್ಭುತವಾಗಿದೆ ಎನಿಸಿ, ತಮ್ಮ 'ಮಹಾಕಾವ್ಯ' ನಿರರ್ಥಕವಾಯಿತಲ್ಲಾ ಎಂದು ನಿರಾಸೆಯಾಯಿತು. ವಾಲ್ಮೀಕಿಗಳ ದುಗುಡವನ್ನರಿತ ಹನುಮಂತ, 'ಲೋಕದಲ್ಲಿ ವಾಲ್ಮೀಕಿ ರಾಮಾಯಣವೇ ಇರಲಿ' ಎಂದು ಆಲೋಚಿಸಿ, ತಾನು ಬರೆದ ರಾಮಾಯಣವಿದ್ದ ಬಂಡೆಯನ್ನು ಛಿದ್ರಗೊಳಿಸಿ ನೀರಿಗೆಸೆದ. ಈ ಮಹಾತ್ಯಾಗ ಮತ್ತು ಔದಾರ್ಯವನ್ನು ಕಂಡ ವಾಲ್ಮೀಕಿಗಳು ಹನುಮಂತನಿಗೆ, ''ನನಗಾಗಿ ನಿನ್ನ ಮಹಾಕಾವ್ಯವನ್ನು ನಾಶಮಾಡಿ ಮಹಾತ್ಯಾಗವನ್ನೇ ಮಾಡಿಬಿಟ್ಟೆ; ಇದಕ್ಕೆ ಪ್ರತಿಯಾಗಿ ನಿನಗೆ ನಾನು ಈ ಜನ್ಮದಲ್ಲಿ ಏನನ್ನೂ ನೀಡಲಾರೆ. ಆದರೆ ಮುಂದಿನ ಜನ್ಮದಲ್ಲಿ ನಿನ್ನ ಋಣ ತೀರಿಸುವೆ'' ಎಂದರು. ಅಂತೆಯೇ, ಮುಂದಿನ ಜನ್ಮದಲ್ಲಿ ಗೋಸ್ವಾಮಿ ತುಳಸೀದಾಸರಾಗಿ ಜನಿಸುವ ವಾಲ್ಮೀಕಿಗಳು 'ಹನುಮಾನ್ ಚಾಲೀಸಾ'ವನ್ನು ಬರೆದು, ಅದರಲ್ಲಿ ಆತನ ಗುಣಗಾನ ಮಾಡಿ ಋಣಸಂದಾಯ ಮಾಡುತ್ತಾರೆ ಎಂದು ನಂಬಲಾಗಿದೆ. ನಾನು ಮೊದಲೇ ಹೇಳಿದಂತೆ, ಈ ಕಥೆಯ ಸತ್ಯಾಸತ್ಯತೆಯ ವಿಮರ್ಶೆ ಬೇಡ; ಮಹಾನುಭಾವ ಹನುಮಂತನ ಅಪರೂಪದ ಔದಾರ್ಯವನ್ನಷ್ಟೇ ಇಲ್ಲಿ ಪರಿಗಣಿಸೋಣ. ರಾಮಾಯಣದ ಪ್ರಾಣವಾಗಿದ್ದ, ಪ್ರಮುಖ ಪಾತ್ರವೇ ಆಗಿದ್ದ ಹನುಮಂತನಿಗೆ ತಿಳಿದಷ್ಟು ಶ್ರೀರಾಮಚರಿತೆ ವಾಲ್ಮೀಕಿಗಳಿಗೆ ತಿಳಿದಿರಲು ಸಾಧ್ಯವಿರಲಿಲ್ಲ, ಮಹಾನ್ ವ್ಯಾಕರಣ ಪಂಡಿತನೂ ಆಗಿದ್ದ ಹನುಮಂತನು ರಾಮಾಯಣ ರಚಿಸಲು ಶಕ್ಯನಾಗಿದ್ದ ಎನ್ನುವುದರಲ್ಲಂತೂ ಸಂದೇಹವಿಲ್ಲ. ವಾಲ್ಮೀಕಿ ರಾಮಾಯಣವೇ ಇಷ್ಟು ಅದ್ಭುತವಾಗಿದೆ, ಇನ್ನು ಹನುಮಂತ ರಚಿಸಿದ್ದಿದ್ದರೆ ಅದಿನ್ನೆಷ್ಟು 'ಮಹಾದ್ಭುತ'ವಾಗಿರುತ್ತಿತ್ತು ಎಂಬುದನ್ನು ನಾವು ಊಹಿಸಬಹುದು. ತಾನು ಶ್ರೀರಾಮಸೇವೆಯನ್ನು ವಿವಿಧ ರೀತಿಯಲ್ಲಿ ಮಾಡಿ ಅವನ ಪ್ರೇಮವನ್ನು ಸಂಪಾದಿಸಿಯಾಗಿದೆ, ಹೀಗಾಗಿ ವಾಲ್ಮೀಕಿಗಳ ರಾಮಸೇವೆಯ ಈ ಯತ್ನ ವ್ಯರ್ಥವಾಗದಿರಲಿ ಎನ್ನುವ ಕಾರಣಕ್ಕೋ ಏನೋ ಆತ ತನ್ನ ರಾಮಾಯಣ ಕೃತಿಯನ್ನು ಜಲಸಮಾಧಿ ಮಾಡಿಬಿಟ್ಟ ಎನ್ನುವಲ್ಲಿಗೆ ಮೊದಲ ಕಥೆ ಮುಗಿಯಿತು.

ಈಗ ಕಲಿಯುಗದ 2ನೇ ಕಥೆಯನ್ನು ನೋಡೋಣ. ನಾವೆಲ್ಲಾ ಸಣ್ಣವರಿದ್ದಾಗ ರಜೆಯಲ್ಲಿ ಅಜ್ಜಿಮನೆಗೆ ಹೋಗಿಬರುವಂತೆ, ಹಲವು ಸಲ ಇಸ್ರೇಲ್‌ಗೆ ಹೋಗಿಬಂದಿರುವವರು, ಅದರ ಬಗ್ಗೆ ಇಸ್ರೇಲಿಗರಿಗಿಂತ ಜಾಸ್ತಿ ತಿಳಿದುಕೊಂಡಿರುವವರು ಮತ್ತು ಇಸ್ರೇಲ್ ಬಗ್ಗೆ ಸವಿಸ್ತಾರ ಲೇಖನಗಳನ್ನೂ ಪುಸ್ತಕಗಳನ್ನೂ ಬರೆದು ಕನ್ನಡಿಗರೆಲ್ಲರಿಗೂ ಇಸ್ರೇಲನ್ನು ಪರಿಚಯಿಸಿದವರು ವಿಶ್ವೇಶ್ವರ ಭಟ್ ಅವರು ಎಂಬುದು ಜನಜನಿತ. ಅಲ್ಲಿಯ ಲೇಖಕರು, ಸಾಂಸ್ಕೃತಿಕ ರಾಯಭಾರಿಗಳಿಗೆಲ್ಲ ಭಟ್ಟರು ಅಂದರೆ ಒಂಥರಾ 'ಫ್ಯಾಮಿಲಿ ಫ್ರೆಂಡ್' ಇದ್ದಂತೆ. ಭಟ್ಟರಿಗೂ ಹಾಗೆಯೇ- ಇಸ್ರೇಲ್, ಅಲ್ಲಿಯ ಜನ, ಸಾಹಿತ್ಯ, ಸಂಶೋಧನೆಗಳೆಂದರೆ ವಿಶೇಷ ಪ್ರೀತಿ.

ಇಸ್ರೇಲಿಗರ ನೀರಾವರಿ ತಂತ್ರಗಳ ಬಗ್ಗೆ ಈಗಾಗಲೇ ಹಲವಾರು ಪುಸ್ತಕಗಳು ಬಂದಿದ್ದು, ಆ ಪೈಕಿ ಸೇತ್ ಎಂ.ಸಿಗೆಲ್ ಅವರ Let There Be Water ಎಂಬ ಪುಸ್ತಕವೂ ಸೇರಿದೆ. ಇದು ವಿಶ್ವದ ಅನೇಕ ಭಾಷೆಗಳಿಗೆ ಅನುವಾದಗೊಂಡು, ಮೆಚ್ಚುಗೆಗೆ ಪಾತ್ರವಾಗಿ, 'ಬೆಸ್ಟ್ ಸೆಲ್ಲರ್' ಎನಿಸಿಕೊಂಡ ಪುಸ್ತಕ. ಇದರ ವಸ್ತು-ವಿಷಯಗಳಿಂದ ಆಕರ್ಷಿತರಾದ ಭಟ್ಟರು, ಎಂದಿನಂತೆ ಅದನ್ನು ಕನ್ನಡಿಗರಿಗೆ ತಲುಪಿಸಲೆಂದು ಅನುವಾದಿಸಿ ಪ್ರಕಟಿಸಲು ಮೂಲಲೇಖಕರನ್ನು ಸಂಪರ್ಕಿಸಿದರು. ಆಗಲೇ ಕನ್ನಡದಲ್ಲಿ 50-60 ಪುಸ್ತಕಗಳನ್ನು ಸೃಜಿಸಿದ್ದ ಭಟ್ಟರು 'ಕನ್ನಡ ಅಕ್ಷರಲೋಕದ ದೈತ್ಯ' ಎಂಬುದನ್ನರಿತಿದ್ದ ಮೂಲ ಲೇಖಕರು, ಅನುವಾದಿಸಿ ಪ್ರಕಟಿಸಲು ಭಟ್ಟರಿಗೆ ಕಣ್ಣುಮುಚ್ಚಿ ಅನುಮತಿಸಿದರು. ಇನ್ನು ತಡವಾಗಲುಂಟೇ! ಅನುವಾದಕ್ಕೆ ಶುರುವಿಟ್ಟುಕೊಂಡ ಭಟ್ಟರು ಒಂದೆರಡು ವಾರಗಳಲ್ಲಿ ಅದಕ್ಕೆ ಮಂಗಳ ಹಾಡಿ, ಮುದ್ರಣಕ್ಕೆ ನೀಡುವುದಷ್ಟೇ ಬಾಕಿ ಎನ್ನುವ ಹಂತಕ್ಕೆ ತಂದು ನಿಲ್ಲಿಸಿದರು.

ಈ ಹೊತ್ತಿನಲ್ಲಿ, ನನ್ನ ಆತ್ಮೀಯರಾದ ಕಾನಗೋಡಿನ ರಾಘವೇಂದ್ರ ಹೆಗಡೆಯವರು ಒಮ್ಮೆ ನನಗೆ ಫೋನಾಯಿಸಿ, ''ನೋಡಿ, ಇಸ್ರೇಲ್ ಲೇಖಕ ಸೇತ್ ಎಂ.ಸಿಗೆಲ್‌ರ Let There Be Water ಎಂಬ ಪುಸ್ತಕವೊಂದಿದೆ. ನಾನು ಅದನ್ನು ಓದುತ್ತಿದ್ದಂತೆ ಕನ್ನಡಕ್ಕೆ ಅನುವಾದಿಸುವ ಮನಸ್ಸಾಯಿತು. ಅನುವಾದದ ಅರ್ಧ ಕೆಲಸವೂ ಮುಗಿದಿದೆ. ಅನುಮತಿಗಾಗಿ ಮೂಲಲೇಖಕರನ್ನು ಸಂಪರ್ಕಿಸಿದಾಗ, ಕನ್ನಡದ ಖ್ಯಾತ ಪತ್ರಕರ್ತ ವಿಶ್ವೇಶ್ವರ ಭಟ್ಟರು ಅನುವಾದಕ್ಕಾಗಿ ಈಗಾಗಲೇ ತಮ್ಮನ್ನು ಸಂಪರ್ಕಿಸಿದ್ದು, ಭಟ್ಟರ ಕ್ಷಮತೆಯ ಆಧಾರದಲ್ಲಿ ಅವರಿಗೆ ತಾತ್ವಿಕ ಒಪ್ಪಿಗೆ ನೀಡಿ ಆಗಿದೆ ಎಂದರು. ನಾನು ಬರಹಗಾರನಲ್ಲದಿದ್ದರೂ, ಸಮಾಜಕ್ಕೆ ಉಪಕಾರವಾಗಲಿ ಎಂಬ ದೃಷ್ಟಿಯಿಂದ ಬಹಳ ಪ್ರಯತ್ನಪಟ್ಟು ಅನುವಾದಿಸಿದ್ದೇನೆ. ಆದರೆ ಪ್ರಕಟಿಸುವುದು ಸಾಧ್ಯವಿಲ್ಲ ಎಂಬುದು ಅರಿವಾಗಿ ತುಂಬಾ ಬೇಸರದಲ್ಲಿದ್ದೇನೆ'' ಎನ್ನುತ್ತಾ, ''ನನ್ನ ಇಚ್ಛೆಯ ಕುರಿತು ನೀವು ಭಟ್ಟರಿಗೆ ಒಂದು ಮಾತು ಹೇಳಬಹುದಾ?'' ಎಂದು ಕೇಳಿ ನನ್ನನ್ನು ಇಕ್ಕಟ್ಟಿಗೆ ಸಿಲುಕಿಸಿಬಿಟ್ಟರು!

ಏನಾದರಾಗಲಿ ಅಂದುಕೊಂಡು, 'ನೀವು ಈ ಪುಸ್ತಕವನ್ನು ಅನುವಾದಿಸುವ ಆಲೋಚನೆಯನ್ನು ಕೈಬಿಟ್ಟು ನನಗೆ ಅವಕಾಶ ಮಾಡಿಕೊಡಬೇಕು' ಎಂಬ ರಾಘವೇಂದ್ರ ಹೆಗಡೆಯವರ ಮನದಿಂಗಿತವನ್ನು ನಾನು ಭಟ್ಟರಿಗೆ 'ಮೆಸೇಜ್' ಮೂಲಕ ಸಂಕ್ಷಿಪ್ತವಾಗಿ ತಿಳಿಸಿ, 'ಈ ಕುರಿತು ಅವರಿಗೆ ನೇರವಾಗ ಬಹುದಾ?' ಎಂದು ಕೇಳಿದ್ದೆ. ಅದಕ್ಕೆ ಭಟ್ಟರು, 'ನನ್ನನ್ನು ಕೂಡಲೇ ಸಂಪರ್ಕಿಸುವಂತೆ ಹೆಗಡೆಯವರಿಗೆ ತಿಳಿಸು' ಎಂದಷ್ಟೇ ಹೇಳಿ ಸುಮ್ಮನಾಗಿಬಿಟ್ಟರು. ಅದರಂತೆ, ಭಟ್ಟರನ್ನು ಸಂಪರ್ಕಿಸುವಂತೆ ಹೆಗಡೆಯವರಿಗೆ ತಿಳಿಸಿ ನಾನೂ ಸುಮ್ಮನಾಗಿಬಿಟ್ಟೆ. ಈ ಕೃತಿಗೆ ಸಂಬಂಧಿಸಿದ ಭಟ್ಟರ ಅನುವಾದ ಕಾರ್ಯ ಅದಾಗಲೇ ಮುಗಿದು, ಹಸ್ತಪ್ರತಿಯು ಮುದ್ರಣದ ಮನೆಗೆ ಹೋಗುವ ದಾರಿಯಲ್ಲಿದ್ದ ವಿಷಯ ಆಗ ನನಗೆ ತಿಳಿದಿರಲಿಲ್ಲ, ಭಟ್ಟರೂ ಹೇಳಿರಲಿಲ್ಲ. ಹೆಗಡೆಯವರಿಗೂ ಈ ವಿಷಯ ಇಂದಿನವರೆಗೂ ತಿಳಿದಿರಲಿಕ್ಕಿಲ್ಲ. ಮರುದಿನ, ಭಟ್ಟರ ಭಾನುವಾರದ ಅಂಕಣದ ಕೊನೆಯಲ್ಲಿ, 'ಸೇತ್ ಎಂ.ಸಿಗೆಲ್‌ರ Let There Be Water ಪುಸ್ತಕದ ಕನ್ನಡಾನುವಾದವನ್ನು ರಾಘವೇಂದ್ರ ಹೆಗಡೆಯವರು ಪ್ರಥಮ ಪ್ರಯತ್ನವಾದರೂ ಉತ್ತಮವಾಗಿ ಮಾಡಿದ್ದಾರೆ. ಅದು ಪ್ರಕಟಣೆಗೊಂಡು ಹೊರಬರುವುದಕ್ಕೆ ನಾನೂ ಎದುರುನೋಡುತ್ತಿದ್ದೇನೆ' ಎಂದು ಘೋಷಿಸಿಯೇಬಿಟ್ಟರು. ಅಷ್ಟಕ್ಕೇ ನಿಲ್ಲದೆ, 'ಹೆಗಡೆಯವರ ಅನುವಾದ ಕಾರ್ಯದ ಹಿಂದೆ ನಾನು ಇದ್ದೇ ಇರುತ್ತೇನೆ. ಹಾಗಾಗಿ, ಅವರ ಅನುವಾದದ ಪ್ರಸ್ತಾವನೆಗೆ ಅನುಮತಿಸಿ' ಎಂದು ಮೂಲಲೇಖಕರಿಗೆ ವಿನಂತಿಸಿದರು. ಮುಂದೆ ಪುಸ್ತಕದ ಮುದ್ರಣದಿಂದ ಹಿಡಿದು ಪ್ರಕಟಣೆಯವರೆಗೆ ಸ್ವತಃ ರಾಘವೇಂದ್ರ ಹೆಗಡೆಯವರಿಗೆ ಮಾರ್ಗದರ್ಶನ ಮಾಡಿದರು.

''ಇಡೀ ವಿಶ್ವವೇ ನೀರಿನ ಕೊರತೆಗೆ, ಜಲಸಮರಕ್ಕೆ ಸಾಕ್ಷಿಯಾಗಿರುವ ಈ ಸಂಕಟಮಯ ಸಂದರ್ಭದಲ್ಲಿ ಸೇತ್ ಎಂ.ಸಿಗೆಲ್‌ರ ಮಹತ್ವಪೂರ್ಣ ಕೃತಿಯನ್ನು ಸನ್ಮಿತ್ರ ರಾಘವೇಂದ್ರ ಹೆಗಡೆಯವರು 'ನಾಳೆಗೂ ಇರಲಿ ನೀರು' ಹೆಸರಿನಲ್ಲಿ ಕನ್ನಡಕ್ಕೆ ಅನುವಾದಿಸಿ ಉಪಕರಿಸಿದ್ದಾರೆ. ಮನುಕುಲದ ಭವಿಷ್ಯದಲ್ಲಿ, ಜೀವಿಯಲ್ಲಿ, ಜೀವಸೆಲೆಯಲ್ಲಿ ಆಸ್ಥೆಯಿರುವವರೆಲ್ಲ ಓದಲೇಬೇಕಾದ ಕೃತಿಯಿದು. ನೀರಿನ ಬಗ್ಗೆ ಮತ್ತಷ್ಟು ಜಾಗೃತಿ, ಕಳಕಳಿ ಮೂಡಿಸುವ ಈ ಪುಸ್ತಕವು ನೀರಿನ ಕೊರತೆಗೆ ಒರತೆಯಾಗಿ ಸಾರ್ಥಕವೆನಿಸುತ್ತದೆ, ಒಟ್ಟಾರೆ ಇದೊಂದು ತಂಪನ್ನೆರೆಯುವ ಕೃತಿ. ಹೆಗಡೆ ಅವರು ಅಭಿನಂದನಾರ್ಹರು'' ಎಂಬ ಸುಂದರ ಬೆನ್ನುಡಿಯನ್ನು 'ನಾಳೆಗೂ ಇರಲಿ ನೀರು' ಅನುವಾದಿತ ಕೃತಿಗೆ ಬರೆದುಕೊಟ್ಟು ಭಟ್ಟರು ಆ ಪುಸ್ತಕದ ತೂಕ ಹೆಚ್ಚಿಸಿದ್ದರ ಜತೆಗೆ, ಹೆಗಡೆಯವರ ಆಗ್ರಹದ ಮೇರೆಗೆ ಅದನ್ನು ಸ್ವತಃ ಲೋಕಾರ್ಪಣೆಗೊಳಿಸಿದರು.

ಈ ಎರಡೂ ಕಥೆಗಳನ್ನು ಕೇಳಿದ ಮೇಲೆ 'ಮಹೌದಾರ್ಯ' ಎಂಬ ಪದದ ಅರ್ಥ ಸಾಕ್ಷಾತ್ಕಾರವಾಗುತ್ತದೆ. ಹನುಮಂತನು ತನ್ನ ರಾಮಾಯಣ ಕೃತಿಯನ್ನು ತ್ಯಾಗ ಮಾಡಿದ್ದರಿಂದ ವಾಲ್ಮೀಕಿಗಳು 'ಆದಿಕವಿ' ಎನಿಸಿಕೊಂಡರೆ, ಭಟ್ಟರ ಕೃತಿತ್ಯಾಗದಿಂದಾಗಿ ರಾಘವೇಂದ್ರ ಹೆಗಡೆ ಎಂಬ ಹೊಸಲೇಖಕರ ಉದಯವಾದಂತಾಯ್ತು. ಅಲ್ಲಿ ಹನುಮಂತನ ಮಹತ್ವವೇನೂ ಕಡಿಮೆಯಾಗಲಿಲ್ಲ, ಇಲ್ಲಿ ಭಟ್ಟರ ಗೌರವ ಇನ್ನೂ ಹೆಚ್ಚಿದಂತಾಯಿತು. ಈ ಪುಸ್ತಕವನ್ನು ರಾಘವೇಂದ್ರ ಹೆಗಡೆಯವರು ಬಹಳ ಸರಳ-ಸುಂದರವಾಗಿ ಅನುವಾದಿಸಿ ಕನ್ನಡದ ಓದುಗರನ್ನು ಮುಟ್ಟಿದ್ದಾರಾದರೂ, ಅನುಭವಿ ಭಟ್ಟರು ಅನುವಾದಿಸಿದ್ದಿದ್ದರೆ ಅದು ಇನ್ನೂ ಉತ್ತಮವಾಗಿರುತ್ತಿತ್ತು ಎಂಬುದನ್ನು ಸ್ವತಃ ರಾಘವೇಂದ್ರ ಹೆಗಡೆಯವರೂ ಒಪ್ಪುತ್ತಾರೆ ಎನ್ನುವುದು ನನ್ನ ಭಾವನೆ. 'ಭಟ್ಟರು ನೂರಾರು ಪುಸ್ತಕವನ್ನು ಬರೆದಿದ್ದಾರೆ, ಒಂದು ಪುಸ್ತಕದ ತ್ಯಾಗದಿಂದ ಏನಾಗುವುದು?' ಅಂದರೆ, 'ತಮಗಿರುವ ನಾಲ್ಕು ಮಕ್ಕಳಲ್ಲಿ ಒಬ್ಬನನ್ನು ದಾನ ಮಾಡಿದರೆ ಏನಾಗುತ್ತದೆ?' ಎಂದು ಕೇಳಿದಂತಾಗುತ್ತದೆ. ಈ ಪ್ರಕರಣದಿಂದ ವಿಶ್ವೇಶ್ವರ ಭಟ್ಟರಿಗೆ ಏನೂ ವ್ಯತ್ಯಾಸ ವಾಗಿರಲಿಕ್ಕಿಲ್ಲ; ಆದರೆ ಉದಯೋನ್ಮುಖ ಲೇಖಕ ರಾಘವೇಂದ್ರ ಹೆಗಡೆಯವರಿಗೆ? ವಿಶ್ವೇಶ್ವರ ಭಟ್ಟರ ಉತ್ತಮ ಕೃತಿಯೊಂದು ಹೊರಬರಲು ನಾನು ಅಡ್ಡಬಂದೆ ಎನ್ನುವ ಪ್ರಜ್ಞೆ ನನ್ನನ್ನು ಸದಾ ಕಾಡುವುದರಲ್ಲಿ ಸಂಶಯವಿಲ್ಲ. ಆದರೆ ಈಗ ಏನೂ ಮಾಡುವಂತಿಲ್ಲ. 'ಭಟ್ಟರೇ, ಕ್ಷಮೆ ಇರಲಿ' ಎಂದಷ್ಟೇ ಹೇಳಬಹುದು. ಪರರ ಉನ್ನತಿಯನ್ನು ಬಯಸುವ ವಿಶ್ವೇಶ್ವರ ಭಟ್ಟರ ಆ ಮಹೌದಾರ್ಯ ಗುಣಕ್ಕೆ 'ವಿದ್ಯಮಾನ' ಅಂಕಣದ ನನ್ನ ಈ 50ನೇ ಪ್ರಸ್ತುತಿಯ ಅರ್ಪಣೆ...

ಅಧ್ಯಾತ್ಮ ಬಾ, ಬಾ ಅಂತಿತ್ತು!

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಪ್ರೇಮಿಗಳ ಪಾಲಿನ ಭಗವದ್ಗೀತಾ ಎನ್ನಿಸಿಕೊಳ್ಳದಿದ್ದರೂ ಹಲವು ವರ್ಷಗಳ ಹಿಂದೆ ಬಂದ 'ಸಂಜು ವೆಡ್ಸ್ ಗೀತಾ' ಚಿತ್ರ ಕ್ಲಾಸಿಕ್ ಪ್ರೇಮಕಥೆ ಎನ್ನಿಸಿಕೊಂಡಿತ್ತು. ಆ ಚಿತ್ರದಲ್ಲಿ ನಾಯಕಿಗೆ ಶ್ವಾಸಕೋಶದ ಸಿಕ್‌ನೆಸ್ ಇರುತ್ತೆ. ಆದ್ರೆ ಈಗಿನ ಚಿತ್ರ ಕ್ಲಾಸಿಕ್ ಅನ್ನಿಸಿಕೊಳ್ಳದೇ ಇರೋಕೆ ಅದು ಕಾರಣ ಅಲ್ಲ. ಮೂಲ ಚಿತ್ರದ ಯಶಸ್ಸಿನ ಗುಂಗಿನಲ್ಲಿ ಮತ್ತೆ ಅಂಥದ್ದೇ ರಸದೌತಣ ಸಿಗುತ್ತೆ ಅಂತ ನಂಬಿಕೊಂಡು ನೀವು ಚಿತ್ರಮಂದಿರಕ್ಕೆ ಹೋದರೆ ನಿಮಗೆ ಸಿಗೋದು ರಸದೌತಣ ಅಲ್ಲ, ಬದಲಾಗಿ ಆಸ್ಪತ್ರೆ ಊಟ. ಅಂದ್ರೆ, ಊಟ ಹೆಲ್ದಿಯಾಗೇನೋ ಇರುತ್ತೆ. ಆದ್ರೆ ಟೇಸ್ಟ್ ಇಲ್ಲ. ನಿರ್ದೇಶಕ ನಾಗಶೇಖರ್ ಅವರು ತಾವು ಅಂದುಕೊಂಡಂತೆ ಈ ಚಿತ್ರವನ್ನು ಮಾಡಲಾಗಲಿಲ್ಲವೋ ಏನೋ ಗೊತ್ತಿಲ್ಲ, ಆದರೆ ಸಂಜು ವೆಡ್ಸ್ ಗೀತಾ ಪ್ರೇಕ್ಷಕರು ಅಂದುಕೊಂಡಂತೆ ಮಾತ್ರ ಖಂಡಿತಾ ಆಗಿಲ್ಲ. ಮೊದಲು ಮಾಡಿದ ಚಿತ್ರ ಹಿಟ್ ಆಗಿದೆ. ಹಾಗಾಗಿ ಅದರ ಸೀಕ್ವೆಲ್ ಮಾಡೋದು ಬಾಳೆಹಣ್ಣಿನ ಸಿಪ್ಪೆ ಸುಲಿದಷ್ಟೇ ಸುಲಭ ಎಂದುಕೊಂಡು ಸಂಪೂರ್ಣ ಸಪ್ಪೆ ಸಿನಿಮಾ ಮಾಡಿದ್ದಾರೆ ನಾಗಶೇಖರ್. ಇಡ್ಲಿ, ಐಡಿಎಲ್‌ವೈ ಅಂದ್ರೆ, 'ಐ ಡೀಪ್ಲಿ ಲವ್ ಯೂ' ಅನ್ನೋ ವಿವರಣೆ ಕೊಟ್ಟಿರುವ ನಾಗಶೇಖರ್ ತುಂಬಾ ಸಾಫ್ ಸೀದಾ ಕಥೆಗೆ ಒಗ್ಗರಣೆಯನ್ನೇ ಹಾಕಿಲ್ಲ. ಸಿನಿಮಾದಲ್ಲೇ ಡೆಪ್ತ್ ಇಲ್ಲ. ಹಾಗಾಗಿ ಅದು ಪ್ರೇಕ್ಷಕನ ಎದೆಯ ಆಳಕ್ಕೆ ಇಳಿಯೋದಿಲ್ಲ, ಇಂಪಾದ ಡ್ಯುಯೆಟ್‌ಗಳು ಇರೋ ರುಚಿಕರ ಊಟದ ಬದಲು ಡಯಟ್‌ನಲ್ಲಿರೋ ಪ್ರೇಮಿಗಳ ಕಥೆಯಂತೆ ಸಪ್ಪೆಯಾಗಿದೆ. ಚಿತ್ರದ ಪ್ರೇಮಕಥೆಯ ನಡುವೆ ಶಿಡ್ಲಘಟ್ಟದ ಸಿಲ್ಕ್ ಅನ್ನು ಜನಪ್ರಿಯಗೊಳಿಸೋ ಯತ್ನವನ್ನೂ ಮಾಡಲಾಗಿದೆ. ಹಾಗಂತ ನಿರ್ದೇಶಕರು ಸಿನಿಮಾಗೆ 'ಸಿಲ್ಕೀ ಟಚ್' ಕೊಟ್ಟಿದ್ದಾರೆ ಅನ್ನೋಕೆ ಆಗಲ್ಲ. ಒಟ್ಟಾರೆ ಹೇಳೋದಾದ್ರೆ, 'ಸೀಕ್ವೆಲ್' ಸಿನಿಮಾ ಮಾಡುವಾಗ ಹಳೆಯ ಸಿನಿಮಾದ ಕ್ವಾಲಿಟಿಗೆ ಕನಿಷ್ಠಪಕ್ಷ 'ಈಕ್ವಲ್' ಅನ್ನಿಸಿ ಕೊಳ್ಳುವ ಕಂಟೆಂಟ್ ಮತ್ತು ಎಫರ್ಟ್ ಬೇಕಾಗುತ್ತದೆ. ಆದರೆ 'ಸಂಜು ವೆಡ್ಸ್ ಗೀತಾ-2' ಸಿನಿಮಾದಲ್ಲಿ ಹಳೆಯ ಸಿನಿಮಾದ ಮ್ಯಾಜಿಕ್ ಮೈನಸ್ ಆಗಿರೋದು ವಿಪರ್ಯಾಸ.

ಲೂಸ್ ಟಾಕ್

ಐಐಟಿ ಬಾಬಾ

- **ನೀವು ಐಐಟಿಯಲ್ಲಿ ಓದಿ ಆಮೇಲೆ ಬಾಬಾ ಆಗಿದ್ದು ಯಾಕೆ?**
- ಏನ್ ಮಾಡೋದು? ಓದೋದೇನೋ ಓದಿದೆ. ಆದ್ರೆ ಅಧ್ಯಾತ್ಮ ಬಾ, ಬಾ ಅಂತ ಕರೀತಾ ಇತ್ತು. ಅದಕ್ಕೇ ಬಾಬಾ ಆದೆ.
- **ಆದ್ರೆ, ನಿಮ್ಮನ್ನ ಐಐಟಿಯಿಂದ ಅಧ್ಯಾತ್ಮಕ್ಕೆ ಸೆಳೆದ ವಿಷಯ ಯಾವುದು?**
- ಐಐಟಿಯಲ್ಲಿ ಎರಡೆರಡು 'ಐ' ಇದ್ದಾವೆ. ಹಾಗಾಗಿ 'ಐ' ಅನ್ನೋದನ್ನ, ಅಂದ್ರೆ 'ನಾನು' ಅನ್ನೋ ವ್ಯಾಮೋಹವನ್ನ ಬಿಡಬೇಕು ಅಂದುಕೊಂಡಿದ್ದರಿಂದ ಇದು ಸಾಧ್ಯ ಆಯ್ತು.
- **ವ್ಯಾಮೋಹ ಅಂದಿದ್ದಕ್ಕೆ ನೆನಪಾಯ್ತು. ಐಐಟಿ ಓದುವಾಗ ನಿಮಗೆ ಯಾವ ಹುಡುಗಿ ಮೇಲೂ ಲವ್ ಆಗಲಿಲ್ವಾ?**
- ಆಗ ಲವ್ ಆಗಿದ್ದಿದ್ರೆ ನಾನು ಈಗ ಐಐಟಿ ಬಾಬಾ ಆಗಿರ್ತಾ ಇರಲಿಲ್ಲ. ಐಐಟಿ ಡ್ರಾಪ್ ಔಟ್ ಬಾಬಾ ಆಗಿ, ಐ ಡ್ರಾಪ್ ಹಾಕ್ಕೊಳ್ಳದೇ ಅಳ್ತಾ ಇರ್ತಿದ್ದೆ.
- **ಸರಿ, ಐಐಟಿ ಜೀವನಕ್ಕೂ ಈ ಜೀವನಕ್ಕೂ ಏನು ವ್ಯತ್ಯಾಸ?**
- ಆವಾಗ ಐಐಟಿ, ಈಗ ಆಗಾಗ ಗಾಂಜಾ ಸೇದಿ ಹೈ, ಹೈ ಟಿ. ಐಐಟಿ ಯಾರ್ ಬೇಕಾದ್ರೂ ಓದ್ತಾರೆ. ಅದೊಂಥರಾ ಕುಂಬಳಕಾಯಿ ಮೇಳ ಇದ್ದಂಗೆ. ಅದಕ್ಕಿಂತ ಕುಂಭಮೇಳಕ್ಕೆ ಬರೋದು ಗ್ರೇಟು.
- **ಆದ್ರೂ, ನೀವು ಬಾಬಾ ಆಗಿದ್ರಿಂದ ಒಬ್ಬ ಪ್ರತಿಭಾವಂತ ಹುಡುಗನಿಗೆ ಐಐಟಿ ಸೀಟು ಸಿಗೋದನ್ನ ತಪ್ಪಿಸಿದಂತೆ ಆಗಲಿಲ್ವೇ?**
- ಏನ್ ಮಾಡೋಕಾಗಲ್ಲ. IT's all right

(ಕಾಲ್ಪನಿಕ ಸಂದರ್ಶನ)

ನೆಟ್ ಪಿಕ್ಸ್

ಖೇಮು ಹೆಂಡತಿಯ ಮಹಿಳಾ ಸಮಾಜದ ಗೆಳತಿಯರೆಲ್ಲಾ ಸೇರಿಕೊಂಡು ಒಂದು ಕಪಲ್ ಪಾರ್ಟಿ ಏರ್ಪಡಿಸಿದರು. ಪಾರ್ಟಿಯ ದಿನ ಎಲ್ಲರೂ ಗೆಳೆಯರೊಬ್ಬರ ಮನೆಯಲ್ಲಿ ಸೇರಿದರು. ಅಲ್ಲಿ ಮನರಂಜನೆ, ಊಟ, ಡ್ಯಾನ್ಸ್ ಎಲ್ಲವೂ ಆದ ನಂತರ ಏನಾದರೂ ಗೇಮ್ ಆಡೋಣ ಅಂತ ಎಲ್ಲರೂ ಮಾತಾಡಿಕೊಂಡರು. ಆಗ ಖೇಮುಶ್ರೀ, ''ನಮ್ಮೆಲ್ಲರ ಗಂಡಂದಿರು ನಮ್ಮನ್ನ ಎಷ್ಟು ಪ್ರೀತಿಸುತ್ತಾರೆ ಅಂತ ತಿಳ್ಕೊಳ್ಳೋದಕ್ಕೆ ಒಂದು ಆಟ ಆಡೋಣ'' ಅಂದ್ಳು. ಅದರ ಪ್ರಕಾರ ಎಲ್ಲಾ ಹೆಂಡತಿಯರು ಅವರವರ ಗಂಡಂದಿರಿಗೆ ಉತ್ತರಿಸಲು ಕಷ್ಟ ಆಗುವಂಥ ಪ್ರಶ್ನೆ ಕೇಳಬೇಕು ಎಂದಾಯ್ತು. ಅದರ ಜತೆಗೆ ಆ ಪ್ರಶ್ನೆಯಲ್ಲಿ ಆಯಾ ಗಂಡ ತನ್ನ ಹೆಂಡತಿಯನ್ನು ಎಷ್ಟು ಪ್ರೀತಿಸುತ್ತಾನೆ ಅಂತನೂ ಎಲ್ಲರಿಗೂ ಗೊತ್ತಾಗಬೇಕು ಎಂದು ತೀರ್ಮಾನ ಆಯಿತು. ಸರಿ, ಒಬ್ಬೊಬ್ಬರದ್ದೇ ಸರದಿ ಶುರುವಾಯ್ತು. ಎಲ್ಲರೂ ಗಂಡಂದಿರನ್ನು ಪ್ರಶ್ನೆ ಕೇಳೋಕೆ ಶುರು ಮಾಡಿದ್ರು. ''ನಿಮಗೆ ನಾನು ಮುಖ್ಯನಾ, ನಿಮ್ಮ ತಾಯಿ ಮುಖ್ಯನಾ?'' ಎಂಬ ಟಿಪಿಕಲ್ ಪ್ರಶ್ನೆಯಿಂದ ಆಟ ಶುರುವಾಯಿತು. ಎಲ್ಲರೂ ಹೀಗೆ ಕೇಳ್ತಾ ಹೋದರು. ಅದಕ್ಕೆ ತಕ್ಕಂತೆ, ಸತ್ಯನೋ ಸುಳ್ಳೋ, ಒಟ್ಟಿನಲ್ಲಿ ತಮ್ಮ ತಮ್ಮ ಹೆಂಡತಿಯರನ್ನು ಮೆಚ್ಚಿಸುವಂಥ ಉತ್ತರಗಳನ್ನು ಕೊಟ್ಟು ಎಲ್ಲ ಗಂಡಂದಿರು ತಮಗೆ ಹೆಂಡತಿ ಮೇಲೆ ಪ್ರೀತಿ ಇದೆ ಅಂತ ನಿರೂಪಿಸುತ್ತಾ ಹೋದರು. ಕೊನೆಯಲ್ಲಿ, ಪಾರ್ಟಿ ಆಯೋಜಿಸಿ ಈ ಆಟವನ್ನು ಶುರುಮಾಡಿದ ಖೇಮುಶ್ರೀ ಸರದಿ ಬಂತು. ಎಲ್ಲರೂ ಬರೀ ಸುಲಭದ ಪ್ರಶ್ನೆ ಕೇಳ್ತಾ ಇದ್ದಾರೆ. ನಾನು ನನ್ನ ಗಂಡನನ್ನು ಸಿಕ್ಕಿ ಹಾಕಿಸುವಂಥ ಪ್ರಶ್ನೆ ಕೇಳಬೇಕು ಅಂದುಕೊಂಡ ಖೇಮುಶ್ರೀ, ಖೇಮುಗೆ ತನ್ನ ಪ್ರಶ್ನೆ ಕೇಳಿದಳು, ''ನಿಮಗೆ ಒಂದು ದಿನ 5 ಕೋಟಿ ರು. ಲಾಟರಿ ಹೊಡೆಯುತ್ತೆ. ನೀವು ತುಂಬಾ ಖುಷಿಯಾಗಿ ಆ ದುಡ್ಡು ತಗೊಂಡು ಮನೆಗೆ ಬಂದ ತಕ್ಷಣ, ನಿಮಗೊಂದು ಕಾಲ್ ಬರುತ್ತೆ- 'ನಿಮ್ಮ ಹೆಂಡತಿಯನ್ನ ಕಿಡ್ನ್ಯಾಪ್ ಮಾಡಿದ್ದೇವೆ, 5 ಕೋಟಿ ಕೊಟ್ಟು ಕರ್ಕೊಂಡ್ ಹೋಗು' ಅಂತ. ಆಗ ನೀವೇನ್ ಮಾಡ್ತೀರಾ?''. ಈ ಪ್ರಶ್ನೆ ಕೇಳಿದ ಮೇಲೆ ಎಲ್ಲರೂ ಖೇಮು ಮುಖ ನೋಡೋಕೆ ಶುರು ಮಾಡಿದ್ರು. ಒಂದು ಕ್ಷಣ ಸುಮ್ಮನಿದ್ದ ಖೇಮು ನಂತರ ಹೇಳಿದ, ''ಇದೆಲ್ಲಾ ಆಗಲ್ಲ ಬಿಡು. ನನ್ನ ಅದೃಷ್ಟ ಒಂದೇ ದಿನ ಎರಡೆರಡು ಲಾಟರಿ ಹೊಡೆಯುವಷ್ಟು ಚೆನ್ನಾಗಿಲ್ಲ ಅಂತ ನಂಗೊತ್ತು''.

ಲೈನ್ ಮ್ಯಾನ್

- **ಪ್ರಾಣಿಗಳು ಯಾರನ್ನಾದರೂ ಕೊಂದರೆ ಅವುಗಳನ್ನೇಕೆ ಜೈಲಿಗೆ ಹಾಕಲ್ಲ?**
- ಯಾಕಂದ್ರೆ ಅವು 'ಬಾಲಾ'ಪರಾಧಿಗಳು
- **ಅಮೆರಿಕದಲ್ಲೂ ಬೆಂಕಿ, ಭಾರತದಲ್ಲೂ ಬೆಂಕಿ**
  ಔರ್, ರಾಜು ಭಾಯ್, ಕ್ಯಾ ಚಲ್ ರಹಾ ಹೈ?'
  ''ಆಜ್ ಕಲ್ 'ಆಗ್' ಜಲ್ ರಹಾ ಹೈ''
  ''ಹಾ, ವೋ ತೋ ಪತಾ ಹೈ, ಲೇಕಿನ್, ಔರ್ ಕ್ಯಾ ಚಲ್ ರಹಾ ಹೈ''
  ''ಔರ್....... 'ಆಗ್' ಹಿ ಜಲ್ ರಹಾ ಹೈ''
- **ಸಾರ್ವಕಾಲಿಕ ಸತ್ಯ**
- ಕಿಡ್ನಿ 'ಫೇಲ್' ಆದ್ರೆ ಯೂರಿನ್ 'ಪಾಸ್' ಆಗಲ್ಲ.
- **ಇಗೋ ಜಾಸ್ತಿ ಇದ್ದು ದುರಹಂಕಾರ ತೋರಿಸುವವರದು**
- 'ನಾನ್' ಸೆನ್ಸ್
- **ಯಾವಾಗಲೂ ನಾನು, ನಾನು ಅಂತನೇ ಮಾತಾಡೋನು**
- 'ಐ' ಸ್ಪೆಷಲಿಸ್ಟ್
- **ಸಣ್ಣ ಸತ್ಯ**
- ಸಣ್ ಹುಡುಗೀರನ್ನ 'ಚಿಕ್' ಹುಡುಗಿ ಅನ್ನಬಹುದು.. ಸಣ್ ಹುಡುಗರನ್ನಲ್ಲ..
- **ಕಾಡುಪಾಪಗಳ ಫೋಟೋ ತೆಗೆಯೋನು**
- ವೈಲ್ಡ್ ಲೈಫ್ ಫೋಟೋಗ್ರಾಫರ್
- **ಮನೆಯಲ್ಲಿ ಪಾಪುಗಳ ಫೋಟೋ ತೆಗೆಯೋನು**
- ಚೈಲ್ಡ್ ಲೈಫ್ ಫೋಟೋಗ್ರಾಫರ್
- **ಯಾರೋ ತಮ್ಮ ಮನೆಗೆ 'ಆಶ್ಚರ್ಯ' ನಿವಾಸ ಅಂತ ಹೆಸರಿಟ್ಟಿದ್ರು**
- ಅದನ್ನ ನೋಡಿ ಡೌಟ್ ಆಯ್ತು, ಇವ್ರೇನ್ ಮನೆ ಕಟ್ಟಿದ್ದಾರೋ, ಇಲ್ಲಾ 'ವಂಡರ್' ಲಾ ಕಟ್ಟಿದ್ದಾರೋ?!

ಚಿಣ್ಣರ ಸುಜ್ಞಾನವ್ರೂ, ಅಣ್ಣರ ಅಜ್ಞಾನವ್ರೂ..!



ರಸದೌತಣ
ಯಗಟಿ ರಘು ನಾಡಿಗ್
naadigru@gmail.com

- **ಮಗನೇ ಶಂಕರ ಭಟ್ಟಾ, ದೊಡ್ಡೋನಾಗಿ ನಾನು ಹೇಳಿದ್ದೇನು, ನೀನು ಮಾಡ್ತಿರೋದೇನು? ಅಷ್ಟು ಸಲ ಬಿಡಿಸಿ ಹೇಳಿದ್ರೂ ತಪ್ಪು ಮಾಡ್ತಾ ಇದ್ದೀಯಲ್ಲಯ್ಯಾ?**
- ನಾನೇನು ತಪ್ಪು ಮಾಡಿದ್ನಪ್ಪಾ?
- **ಲೋಟದಲ್ಲಿರೋ ಬಿಸಿಹಾಲು ಕುಡಿದು ಮಲಕ್ಕೋ ಅಂತ ಹೇಳಿದ್ರೆ, ಅದೇನು ಮಾಡ್ತಿದ್ದೀ ಆ ಮೂಲೇಲಿ? ಹೊಟ್ಟು ತುಂಬೋಕೆ ಇಟ್ಟಿದ್ದ ಗೋಣಿಚೀಲಾನ ಅಲ್ಯಾಕೆ ಹಾಕಿದ್ದೀಯ?**
- ಅಪ್ಪಾ, 4 ಮರಿ ಹಾಕಿದ್ದ ಆ ಬೀದಿನಾಯಿ ಸತ್ತೋಯ್ತು. ಹುಟ್ಟಿ 2 ದಿನವಷ್ಟೇ ಆಗಿದ್ದ ಮರಿಗಳು ಮಳೇಲಿ ನೆಂದು ಒದ್ದಾಡ್ತಾ ಇದ್ವು. ಪಾಪ! ಅಮ್ಮ ಇಲ್ಲಾಂತ ಕಂಗಾಲಾಗಿದ್ವು. ಅದಕ್ಕೇ ಎತ್ಕೊಂಡು ಬಂದು ಗೋಣಿಚೀಲದ ಮೇಲೆ ಮಲಗಿಸಿ, ನನಗಿಟ್ಟಿದ್ದ ಬಿಸಿಹಾಲನ್ನ ಮರಿಗಳಿಗೆ ಕುಡಿಸ್ತಿದ್ದೀನಪ್ಪಾ..
- **ಅಯ್ಯೋ ಪ್ರಾರಬ್ಧ ಮುಂಡೇದೇ... ಬೀದಿನಾಯಿನ ಮನೆಯೊಳಗೆ ತಂದಿದ್ದಲ್ದೆ, ಅವಕ್ಕೆ ಹಾಲೂ ಕುಡಿಸ್ತಿದ್ದೀಯಾ? ತಲೆ ಕೆಟ್ಟಿದೆಯಾ ನಿಂಗೆ?**
- ಹಸಿವಿನಿಂದ ಒದ್ದಾಡ್ತಿದ್ದ ಅವುಗಳ ಸಂಕಟ ನೋಡಿ ನನಗೆ ತಡೆಯೋಕ್ಕೆ ಆಗ್ಲಿಲ್ಲ. ಸರಿಯಾಗಿ ಕಣ್ಣು ಕಾಣದೆ ಯಾವ್ದಾದ್ರೂ ಲಾರಿ ಕೆಳಗೆ ಸಿಕ್ಕಿ ಸತ್ತುಬಿಡ್ತಾವೇನೋ ಅಂದ್ಕೊಂಡು ಮನೆಗೆ ತಂದೆ ಅಪ್ಪಾ..
- **ಆಹಾ! ಧರ್ಮರಾಯನ ಮರಿಮಗ! ಬೀದಿನಾಯಿ ಸತ್ರೆ, ಅದರ ಮರಿಗಳು ಹಸಿವಿನಿಂದ್ಲೋ, ವಾಹನಕ್ಕೆ ಸಿಲುಕಿಯೋ ಸತ್ರೆ ಅದಕ್ಕೆ ನಾವು ಹೊಣೆಯಾ? ಬೀದೀಲಿ ಬಿದ್ದಿರೋದೇ ಬೀದಿನಾಯಿಯ ಪಾಡು, ಅದನ್ನ ಮನೆಗೆ ತಂದು ಸಿಂಹಾಸನದ ಮೇಲೆ ಕೂರಿಸ್ತಾರಾ?!**
- 'ದಯೆ ಇರಬೇಕು ಸಕಲ ಪ್ರಾಣಿಗಳಲ್ಲಿ, ದಯೆಯೇ ಧರ್ಮದ ಮೂಲ' ಅಂತ ನೀನೇ ಪಾಠ ಮಾಡಿದ್ಯಲ್ಲಪ್ಪಾ? ನಮ್ಮಲ್ಲಿರೋದೂ, ಪ್ರಾಣಿಗಳಲ್ಲಿರೋದೂ ಜೀವವೇ. ಏನಾದ್ರೂ ಬೇಕು ಅಂದ್ರೆ, ಹಸಿವೆ-ನೋವು ಆದ್ರೆ ನಮ್ಮಂಥೋರು ಬಾಯಿಬಿಟ್ಟು ಹೇಳ್ಕೋತೀವಿ. ಆದ್ರೆ ಈ ಮೂಕಪ್ರಾಣಿಗಳು, ಅದರಲ್ಲೂ ತಬ್ಬಲಿಗಳು ಯಾರನ್ನ ಕೇಳ್ಬೇಕಪ್ಪಾ?
- **ಚೋಟುದ್ದ ಇದ್ದೀಯ, ನಂಗೇ ಬುದ್ಧಿ ಹೇಳ್ತೀಯಾ ಅಯೋಗ್ಯ... ಮರ್ಯಾದೆಯಿಂದ ಅವನ್ನ ಹೊರಗೆ ಎಸೆದು ಬಂದ್ರೆ ಸರಿ. ಇಲ್ಲಾಂದ್ರೆ ನಿನ್ನ ಚರ್ಮ ಸುಲಿದುಬಿಡ್ತೀನಿ...**
- ಪ್ಲೀಸ್ ಅಪ್ಪಾ, ಅವಿನ್ನೂ ಮರಿಗಳು, ಸದ್ಯಕ್ಕೆ ಇಟ್ಕೊಂಡಿರೋಣ. ಅವು ದೊಡ್ಡವಾದ ಮೇಲೆ ನೀನಂದಂತೆ ಹೊರಗೆ ಬಿಡ್ತೀನಪ್ಪಾ. ಆಗ ಅವು ಸ್ವತಂತ್ರವಾಗಿ ಆಹಾರ ಹುಡುಕಿಕೊಳ್ತವೆ...
- **ಹೆತ್ತಪ್ಪನಿಗೇ ಬುದ್ಧಿ ಹೇಳೋವಷ್ಟು ಪೊಗರೇನೋ ನಿಂಗೆ? ಅವನ್ನ ಈಗಿಂದೀಗ್ಲೇ ಹೊರಗೆಸೆಯದಿದ್ರೆ ನಿನ್ನ ಅವಸ್ಥೆಯನ್ನ ನಾಯಿಪಾಡು ಮಾಡ್ತೀನಿ ನೋಡ್ತಿರು...**
- ಅಪ್ಪಾ....??

***

- **ಲೋ ರಾಮೂ, ಮೇಷ್ಟ್ರಾಗಿ ನಾನು ಹೇಳಿದ್ದೇನು, ನೀನು ಮಾಡಿದ್ದೇನು?**
- ನಾನೇನ್ ಮಾಡ್ದೇ ಮೇಷ್ಟ್ರೇ?
- **ಸೀಬೆಗಿಡಕ್ಕೆ ನೀರುಣಿಸಿದ್ದಕ್ಕೆ ನಾನು ನಿಂಗೊಂದು ಸೀಬೆಕಾಯಿ ಕೊಟ್ಟು, 'ಒಬ್ಬನೇ ಮರೆಯಲ್ಲಿ ತಿಂದು ಬಾ' ಅಂದಿದ್ದೆ. ನೀನು ಈ ಶಾಮನ ಹತ್ರ ಬಂದಿದ್ದೇಕೆ?**
- ಮೇಷ್ಟ್ರೇ, ನನ್ ಜತೆ ಶಾಮನೂ ಗಿಡಕ್ಕೆ ನೀರು ಹಾಕಿದ್ದ, ಹೀಗಾಗಿ ಅವನೊಂದಿಗೆ ಹಣ್ಣು ಹಂಚಿಕೊಳ್ಳೋಣ ಅಂತ ಬಂದೆ...
- **ಆಹಾಹ, ದಾನಶೂರ ಕರ್ಣನ ಮೊಮ್ಮಗ! ಲೇಯ್ ಅಯೋಗ್ಯ, ಹಂಗೆ ಕೊಡೋದಾದ್ರೆ ಸ್ಟಾಫ್‌ರೂಮ್‌ನಿಂದ ಚಾಕು ತಂದು ಕತ್ತರಿಸಿ ಕೊಡಬೇಕಿತ್ತು, ಹೀಗೆ ಎಂಜಲು ಮಾಡಿ ಕಚ್ಚಿಕೊಡ್ತಾರಾ?**
- ಮೇಷ್ಟ್ರೇ, 'ಮತ್ತೊಬ್ಬರಿಗೆ ಏನಾದ್ರೂ ಕೊಡಬೇಕು ಅನಿಸಿ ದಾಕ್ಷಣ ಮನಃಪೂರ್ತಿಯಾಗಿ ಕೂಡಲೇ ಕೊಟ್ಟುಬಿಡ್ಬೇಕು, ಮೀನ-ಮೇಷ ಎಣಿಸಬಾರದು' ಅಂತ ನೀವೇ ಹೇಳಿದ್ರಿ. ಚಾಕು ತರೋವಷ್ಟರಲ್ಲಿ ನನ್ ಮನಸ್ಸು ಬದಲಾಗಿಬಿಟ್ರೆ ಏನ್ಮಾಡೋದು? ಅದಕ್ಕೇ ಹೀಗೆ ಮಾಡಿದೆ. ಅಷ್ಟಕ್ಕೂ, ನೇರವಾಗಿ ಬಾಯಲ್ಲಿ ಕಚ್ಚಿಕೊಟ್ರೆ ಅದು ಎಂಜಲು; ಸೀಬೆಕಾಯಿನ ನನ್ನ ಅಂಗಿ ಒಳಗೆ ತೂರಿಸಿ, ಬಟ್ಟೆಯ ಮೇಲ್ಭಾಗದಿಂದ ಕಚ್ಚಿ ತುಂಡುಮಾಡಿದ್ರೆ ಅದು 'ಕಾಗೆ ಎಂಜಲು'. ಸ್ನೇಹದಲ್ಲಿ 'ಕಾಗೆ ಎಂಜಲು' ನಡೆಯುತ್ತಲ್ವಾ ಮೇಷ್ಟ್ರೇ...
- **ಓಹೋ ಚಾಣಕ್ಯನ ತುಂಡು ಇವನು, ನನಗೇ ನೀತಿಸೂತ್ರ ಬೋಧಿಸ್ತಾನೆ! ಅಲ್ವೋ, ಹಾಗೆ ಕೊಡೋದನ್ನಾದ್ರೂ ಬಲಗೈಲಿ ಕೊಡಬೇಕು ತಾನೇ? ಯಾರಾದ್ರೂ ಎಡಗೈಲಿ ಕೊಡ್ತಾರಾ?**
- ಮೇಷ್ಟ್ರೇ, ಬಲಭಾಗದಲ್ಲಿದ್ದ ಮಾತ್ರಕ್ಕೆ ಬಲಗೈ ಶ್ರೇಷ್ಠವಲ್ಲ, ಎಡಭಾಗದಲ್ಲಿದೆ ಅಂತ ಎಡಗೈ ಕನಿಷ್ಠವಲ್ಲ. ದೇಹಕ್ಕೆ ಎರಡೂ ಬೇಕು. ಜತೆಗೆ, ಸೀಬೆಕಾಯಿನ ಎಡಗೈಯಿಂದ ಬಲಗೈಗೆ ತಗೊಳ್ಳೋವಷ್ಟರಲ್ಲಿ ನನ್ ಮನಸ್ಸು ಭ್ರಷ್ಟವಾಗಿ, 'ಇದನ್ನ ನಾನೊಬ್ಬನೇ ತಿನ್ನಬಹುದಲ್ಲ?' ಅನ್ನೋ ಸ್ವಾರ್ಥ ಚಿಮ್ಮಬಹುದು. ಅದಕ್ಕೆ ಅವಕಾಶವಾಗಬಾರದು ಅಂತ ಎಡಗೈಯಲ್ಲೇ ಶಾಮನಿಗೆ ಸೀಬೆಕಾಯಿ ಕೊಟ್ಟುಬಿಟ್ಟೆ ಮೇಷ್ಟ್ರೇ...
- **ನಿನ್ನನ್ನ ಹೀಗೇ ಬಿಟ್ರೆ, ನಾನು ರಜೆಯಲ್ಲಿದ್ದಾಗ ನನ್ ಕುರ್ಚೀಲೇ ಕೂತುಬಿಡ್ತೀಯೋ ಏನೋ?! ಮೇಷ್ಟ್ರಿಗೆ ಎದುರುತ್ತರ ಕೊಟ್ಟ ತಪ್ಪಿಗೆ ಹೊಡಿಯೋ 50 ಬಸ್ಕಿ...**
- ಮೇಷ್ಟ್ರೇ....?

***

- **ಅರೆ ಬೇಟಾ, ಎಲ್ಲಿ ಹೋಗಿದ್ದೆ?**
- ಅಯ್ಯಂಗಾರರ ಮನೆಯಿಂದ ಈಗಷ್ಟೇ ಬರ್ತಿದ್ದೀನಿ ಅಬ್ಬಾಜಾನ್...
- **ತುಮ್ಹಾರಿ ಅಕಲ್ ಕೊ ಕ್ಯಾ ಹುವಾ ಬೇಟಾ? ಇದು ರಂಜಾನ್ ಹಬ್ಬದ ಉಪವಾಸದ ಟೈಮು ಅಂತ ಗೊತ್ತಿಲ್ವಾ? ಅಲ್ಲಾಹುವಿನ ಸ್ಮರಣೆ ಮಾಡ್ತಾ ಮನೇಲಿ ಇರಬೇಕಾದೋನು, ಆ ಹಾರವರ ಮನೆಗೆ ಬೆಳಗ್ಗೇನೇ ಹೋಗಿ ಈಗ ರಾತ್ರಿ ಮನೆಗೆ ಬಂದ್ಯಲ್ಲಾ? ನಿಯಮ ಮುರಿದ್ರೆ ಅಲ್ಲಾಹು ಏನ್ ಮಾಡ್ತಾನೆ, ಮಾಲುಮ್ ಹೈ ಕ್ಯಾ?**
- ಮಾಫ್ ಕರೋ ಅಬ್ಬಾಜಾನ್... ಅಯ್ಯಂಗಾರರ ಮಗ ನನ್ ದೋಸ್ತು, ಇಂಗ್ಲಿಷ್ ನೋಟ್ಸ್ ಇಸ್ಕೊಳ್ಳೋಕ್ಕೆ ಹೋಗಿದ್ದೆ. ಆದ್ರೆ ಅವರ ಮನೇಲಿ ಪೂಜೆ ಇದೆ ಅಂತ ಗೊತ್ತಿರ್ಲಿಲ್ಲ. 'ಪೂಜೆ ಹೊತ್ತಿಗೆ ಸಾಕ್ಷಾತ್ ಬಾಲಕೃಷ್ಣನ ಥರ ಬಂದಿದ್ದೀಯ' ಅಂತ ಅವರಮ್ಮ ಬಲವಂತ ಮಾಡಿ ಕೂರಿಸಿಕೊಂಡ್ರು, ಅಬ್ಬಾಜಾನ್...
- **ಅರೆ ಬೇಟಾ, ಅವರ ಕೃಷ್ಣ ಸ್ತೋತ್ರವೇ ಬೇರೆ, ರಂಜಾನ್‌ನಲ್ಲಿ ಅಲ್ಲಾಹುವಿಗೆ ನಾವು ಮಾಡೋ 'ತರಾವೀಹ್' ಪ್ರಾರ್ಥನೆಯೇ ಬೇರೆ. ಜತೆಗೆ, ರಂಜಾನ್‌ನ ದಿನವಿಡೀ ಉಪವಾಸವಿರೋ ನಾವು ಸಂಜೆ ಹಣ್ಣು ತಿಂದು ಉಪವಾಸ ಮುರೀಬೇಕಾಗುತ್ತೆ ಅಂತ ನಿಂಗೆ ಹೇಳಿದ್ದೆ ಅಲ್ವಾ?**
- ಹೇಳಿದ್ರಿ ಅಬ್ಬಾಜಾನ್, ಆದ್ರೆ ಅಯ್ಯಂಗಾರರ ಮನೇಲಿದ್ದ ಆ ಕೃಷ್ಣನ ಫೋಟೋ ನೋಡ್ತಾ ಇದ್ದ ಹಾಗೆ, 'ನಮ್ ಅಲ್ಲಾಹು ಬೇರೆ ಅಲ್ಲ, ಈ ಕೃಷ್ಣ ಬೇರೆ ಅಲ್ಲ' ಅನ್ನೋಕೆ ಶುರುವಾಯ್ತು. ಅವರು ಭಜನೆಗೆ ಶುರುವಿಟ್ಟುಕೊಂಡ್ರು, ನಂಗೆ ಅದು ಬರದಿದ್ರೂ ಕೈಮುಗಿದುಕೊಂಡು ಕೃಷ್ಣನ ಕಣ್ಣಲ್ಲೇ ಅಲ್ಲಾಹುವಿನ ಬೆಳಕನ್ನ ಕಾಣತೊಡಗಿದೆ ಅಬ್ಬಾಜಾನ್..
- **ಅವರ-ನಮ್ಮ ಆಚಾರವಿಚಾರದಲ್ಲಿ, ನಂಬಿಕೆಯಲ್ಲಿ 'ಫರಕ್' ಇದೆ ಬೇಟಾ. ನಿಂಗ್ಯಾಕೆ ಇದು ಅರ್ಥವಾಗ್ತಿಲ್ಲ?**
- ಫರಕ್ ಎಲ್ಲಿದೆ ಅಬ್ಬಾಜಾನ್? ಪೂಜೆ-ನೈವೇದ್ಯ ಆಗೋವರೆಗೂ ಅವರ ಮನೆಯವರೂ ಉಪವಾಸವಿದ್ರು, ನಾನೂ ಉಪವಾಸದಲ್ಲಿದ್ದೆ. ಅವರು ಪೂಜೆಯ ನಡುವೆ 'ಯಜ್ಞೋಪವೀತ' ಅಂತ ಹೇಳಿ ಅದೇನೋ ದಾರವನ್ನು ದೇವರಿಗೆ ತೊಡಿಸಿದ್ರು, ಅಂಥ ದಾರದಿಂದಲೇ ಮಾಡಿದ 'ಚಾದರ'ವನ್ನ ನಮ್ಮಲ್ಲಿ ದರ್ಗಾದಲ್ಲಿ ಹೊದಿಸ್ತೇವೆ. ಹಾಂ, ಒಂದು ವ್ಯತ್ಯಾಸವಿದೆ, ಉಪವಾಸ ಮುರಿಯುವಾಗ ನಾವು ಖರ್ಜೂರದಂಥ 'ಡ್ರೈ ಫ್ರೂಟ್' ತಿಂತೀವಿ, ಆದರೆ ಅಯ್ಯಂಗಾರರ ಮನೇಲಿ ಬಾಳೆಹಣ್ಣು ಕೊಟ್ರು, ಅಷ್ಟೇ ಅಬ್ಬಾಜಾನ್...
- **ನಿಂಗೆ ನಾಲ್ಕಕ್ಷರ ಕಲಿಯೋಕ್ಕೆ ಬಿಟ್ಟಿದ್ದೇ ನನ್ ತಪ್ಪಾಯ್ತು, ತುಮ್ ಅಂದರ್ ಮತ್ ಆವೋ, ಉಧರೀಚ್ ಠೆಹರೋ...**
- ಅಬ್ಬಾಜಾನ್....?

***

- **Sonny, what happened to you? ನಿನ್ನೆ ನೀನು Confession ಮಾಡಿಕೊಳ್ಳಲಿಕ್ಕೆ ಚರ್ಚಿಗೆ ಹೋಗಲಿಲ್ವಂತೆ? ಫಾದರ್ ಹೇಳಿದ್ರು...**
- ಡ್ಯಾಡ್, ನಂಗೆ ಚರ್ಚಿಗಿಂತ ಪಕ್ಕದ ಮನೆ ಆರಾಧ್ಯ ಅಂಕಲ್ ಹತ್ರ Confession ಮಾಡಿಕೊಳ್ಳೋದಿತ್ತು. ಅವರಲ್ಲಿಗೆ ಹೋಗಿದ್ದೆ.
- **What...? You had been to a Non-Christian to make a confession? ಅವರು ನಮ್ ಜನ ಅಲ್ಲ, ಲಿಂಗಾಯತರು ಅಂತ ನಿಂಗೆ ಗೊತ್ತಿಲ್ವಾ? ಅವರ ಹತ್ರ 'ಕನ್‌ಫೆಷನ್' ಮಾಡಿಕೊಳ್ಳುವಂಥದ್ದು ಏನಿತ್ತು?**
- ಡ್ಯಾಡ್, ತುಂಬಾ ಆಸೆಯಾಗಿದ್ದಕ್ಕೆ ಆರಾಧ್ಯ ಅಂಕಲ್‌ಗೆ ಗೊತ್ತಾಗದಂತೆ ಅವರ ಮನೆಯ ಗಿಡದಿಂದ ಒಂದೆರಡು ಸಪೋಟಾ ಹಣ್ಣು ಕದ್ದು ತಿಂದುಬಿಟ್ಟೆ. ಆಮೇಲೆ ಗೊತ್ತಾಯ್ತು, ಅದು ಮೊದಲ ಫಲವಾಗಿತ್ತಂತೆ, ಅದನ್ನ ಶಿವಲಿಂಗಕ್ಕೆ ಮೊದಲು ಸಮರ್ಪಿಸಿ ನಂತರ ಮನೆಯವರು ತಿನ್ನಬೇಕು ಅಂದ್ಕೊಂಡಿದ್ರಂತೆ. ನಾನು ಕದ್ದುತಿಂದು ಅವರ ನಂಬಿಕೆಗೆ ಘಾಸಿಮಾಡ್ಬಿಟ್ಟೆ ಅಂತ ತಪ್ಪಿತಸ್ಥ ಭಾವನೆ ಕಾಡೋಕ್ಕೆ ಶುರುವಾಯ್ತು. ಹೀಗಾಗಿ ಅವರಲ್ಲಿ ತಪ್ಪೊಪ್ಪಿಗೆಗೆ ಹೋಗಿದ್ದೆ ಡ್ಯಾಡ್...
- **ಬ್ಲಡಿ ಫೂಲ್, ಪುಟಗೋಸಿ 2 ಸಪೋಟಾಕ್ಕೆ ಕನ್‌ಫೆಷನ್ನಾ? ಅಷ್ಟಾದ ಮೇಲೆ ಮನೆಗೆ ಬರದೆ ರಾತ್ರಿ 12 ಗಂಟೆಗೆ ಮರಳಿದ್ದೀಯಲ್ಲಾ, ಇವತ್ತು ಕ್ರಿಸ್‌ಮಸ್ ಸೆಲೆಬ್ರೇಷನ್, ಸಾಂಟಾಕ್ಲಾಸ್ ಗಿಫ್ಟ್ ತಂದುಕೊಡ್ತಾನೆ ಅಂತ ನಿಂಗೆ ನಾನು ಹೇಳಿರಲಿಲ್ವಾ?**
- ಡ್ಯಾಡ್, ನನ್ನ ತಪ್ಪೊಪ್ಪಿಗೆ ಆಗ್ತಿದ್ದಂತೆ ಆರಾಧ್ಯ ಅಂಕಲ್ 8-10 ಸಪೋಟಾ ತಂದು ನನ್ನ ಕೈಗಿಟ್ಟು, ''ಹಾಗೆಲ್ಲಾ Guilty feeling ಇಟ್ಕೋಬೇಡ ಮರೀ. ಏನೋ ಆಸೆ ಪಟ್ಟು ಗೊತ್ತಿಲ್ಲದೇ ತಪ್ಪು ಮಾಡಿದ್ದೀಯ. ಅದಕ್ಕೆ ಪಶ್ಚಾತ್ತಾಪ ಪಟ್ಟೆ ನೋಡು? ಅದೇ ನಿನ್ನ ತಪ್ಪನ್ನ ಕರಗಿಸಿಬಿಡ್ತು. ನೀನೇ 'ಬಾಲಶಿವ', ದೇವರಿಗೆ ನೈವೇದ್ಯ ಆಯ್ತು ಅಂದ್ಕೊಂಡ್ರಾಯ್ತು'' ಅಂದ್ರು ಡ್ಯಾಡ್. ಅವರು ನಗುತ್ತಾ ನನ್ನ ಕೈಗಳಿಗೆ ಸಪೋಟಾ ತುರುಕೋವಾಗ ಸಾಕ್ಷಾತ್ ಸಾಂಟಾಕ್ಲಾಸ್ ಥರಾನೆ ಕಾಣಿಸಿಬಿಟ್ರು... ಹೀಗಾಗಿ 'ಈ ಸಲ ನನ್ನ ಕ್ರಿಸ್‌ಮಸ್ ಇಲ್ಲೇ ಆಯ್ತು' ಅಂದ್ಕೊಂಡುಬಿಟ್ಟೆ ಡ್ಯಾಡ್...
- **ಓಹೋ, ನನಗೇ ಧರ್ಮಸೌಹಾರ್ದ ಹೇಳಿಕೊಡ್ತೀಯಾ. You stay there in Aradhya's home only...**
- ಡ್ಯಾಡ್....??

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6332393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue: 5

ಸಮಾಚಾರ ಸಣ್ಣದಲ್ಲ

ಚಳಿಗೆ ಬೆಂಕಿ-ಹೊಗೆ ದಂಪತಿ ಜೀವಹರಣ

ಡೆಹರಾಡೂನ್: ಉತ್ತರಾಖಂಡ್ ರಾಜ್ಯದಲ್ಲಿಯೂ ವಿಪರೀತ ಚಳಿಯಿದ್ದು, ಜನರು ದಿನದೂಡುವುದಕ್ಕೇ ಕಷ್ಟಪಡುವಂತಾಗಿದೆ. ಚಳಿಯ ತೀವ್ರತೆ ತಡೆಯಲಾರದ ರಾಜ್ಯದ ಭಿಲಂಗಾನ ಪ್ರದೇಶದ ದ್ವಾರಿ-ಥಾಪ್ಲಾ ಗ್ರಾಮದಲ್ಲಿ ಸಂಬಂಧಿಕರ ಮದುವೆ ಕಾರ್ಯಕ್ರಮಕ್ಕೆಂದು ಬಂದಿದ್ದ ದಂಪತಿ, ರಾತ್ರಿ ಮಲಗುವ ಮುನ್ನ ಕೊಠಡಿ ಶಾಖದಿಂದ ಕೂಡಿರಲಿ ಎಂದು ಕೊಠಡಿಯಲ್ಲೇ ಸಣ್ಣ ಅಗ್ಗಿಷ್ಟಿಕೆಯಲ್ಲಿ ಬೆಂಕಿ ಹಾಕಿ ಮಲಗಿದ್ದಾರೆ. ಶಾಖ ಹೊರ ಹೋಗದಿರಲಿ ಎಂದು ಕೊಠಡಿಯ ಕಿಟಕಿ-ಬಾಗಿಲು ಎಲ್ಲವನ್ನೂ ಬಂದ್ ಮಾಡಿದ್ದಾರೆ. ಆದರೆ, ಬೆಂಕಿಯ ಶಾಖದ ಜತೆಗೇ ಹೊಗೆಯೂ ಕೊಠಡಿ ತುಂಬಾ ತುಂಬಿಕೊಂಡಿದ್ದರಿಂದ ಬೆಳಗಾಗುವ ವೇಳೆಗೆ ಉಸಿರುಗಟ್ಟಿ ಸಾವನ್ನಪ್ಪಿದ್ದಾರೆ. ಮದನ್ ಮೋಹನ್ ಸೆಮ್ವಾಲ್(52), ಪತ್ನಿ ಯಶೋದಾ ದೇವಿ (48) ಮೃತರು. ಶುಕ್ರವಾರ ಬೆಳಗ್ಗೆ ಅಪ್ಪ-ಅಮ್ಮನನ್ನು ಎಬ್ಬಿಸಲು ಮಗ ಹೋದಾಗ ದಂಪತಿ ಬೆಡ್ ಮೇಲೆ ಶವವಾಗಿರುವುದು ಕಂಡಿದೆ.

ಬುಲೆಟ್‌ಟ್ರೇನ್ ಮಾರ್ಗ ವಿದ್ಯುದ್ದೀಕರಣ ಶುರು

ಮುಂಬೈ: ಮಹಾರಾಷ್ಟ್ರದ ಮುಂಬೈ-ಗುಜರಾತ್‌ನ ಅಹಮದಾಬಾದ್ ನಗರಗಳ ನಡುವೆ ಬುಲೆಟ್ ಟ್ರೇನ್ ಕಾರಿಡಾರ್ ವಿದ್ಯುದ್ದೀಕರಣ ಕಾರ್ಯ ಆರಂಭಗೊಂಡಿದೆ. ಗುಜರಾತ್‌ನ ಸೂರತ್ ಮತ್ತು ಬಿಲಿಮೋರಾ ನಿಲ್ದಾಣಗಳ ನಡುವೆ 14 ಮೀ. ಎತ್ತರದಲ್ಲಿ ವಯಾಡಕ್ಟ್‌ನಲ್ಲಿ 2 ಸ್ಟೀಲ್ ಮಾಸ್ಟ್ಸ್‌ ಅಳವಡಿಸಲಾಗಿದೆ. ಹೈ ಸ್ಪೀಡ್ ಬುಲೆಟ್ ಟ್ರೈನ್ ಕಾರಿಡಾರ್‌ನಲ್ಲಿ 9.5 ರಿಂದ 14.5 ಮೀ. ಎತ್ತರದಲ್ಲಿ 20 ಸಾವಿರ ಮಾಸ್ಟ್ಸ್‌ಗಳನ್ನು ಅಳವಡಿಸಲಾಗುವುದು ಎಂದು ನ್ಯಾಷನಲ್ ಹೈಸ್ಪೀಡ್ ರೈಲ್ ಕಾರ್ಪೊರೇಷನ್ ಲಿ. ತಿಳಿಸಿದೆ. ಈ ಮಾಸ್ಟ್ಸ್‌ಗಳು ಓವರ್ ಹೆಡ್ ಸಲಕರಣೆ ವ್ಯವಸ್ಥೆಗೆ ಅನುಕೂಲ ಕಲ್ಪಿಸಲಿವೆ. ಅದರಲ್ಲಿ ಓವರ್‌ಹೆಡ್ ತಂತಿಗಳು, ಫಿಟ್ಟಿಂಗ್ಸ್ ಮತ್ತಿತರ ಪರಿಕರಗಳು ಸೇರಿವೆ. ಇದು ಬುಲೆಟ್ ಟ್ರೇನ್ ಸಂಚಾರಕ್ಕೆ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸಲಿದೆ ಎಂದು ಪ್ರಕಟಣೆ ವಿವರಿಸಿದೆ.

ಅಪಘಾತ: ಕಿರುತೆರೆ ನಟ ಅಮನ್ ಸಾವು

ಮುಂಬೈ: ಮುಂಬೈನಲ್ಲಿ ಶುಕ್ರವಾರ ರಾತ್ರಿ ಸಂಭವಿಸಿದ ರಸ್ತೆ ಅಪಘಾತದಲ್ಲಿ 'ಧರತಿಪುತ್ರ ನಂದಿನಿ' ಧಾರಾವಾಹಿಯಲ್ಲಿನ ಪ್ರಮುಖ ಪಾತ್ರದಿಂದ ಹೆಸರು ಮಾಡಿದ್ದ ಕಿರುತೆರೆ ನಟ, ಮೂಲತಃ ಉತ್ತರ ಪ್ರದೇಶದ ಅಮನ್ ಜೈಸ್ವಾಲ್ (23) ಮೃತಪಟ್ಟಿದ್ದಾರೆ. ಮುಂಬೈನ ಜೋಗೇಶ್ವರಿ ರಸ್ತೆಯಲ್ಲಿ ಜೈಸ್ವಾಲ್ ಚಲಾಯಿಸುತ್ತಿದ್ದ ಮೋಟಾರ್‌ಬೈಕ್‌ಗೆ ಟ್ರಕ್ ಡಿಕ್ಕಿ ಹೊಡೆದು ಈ ಅಪಘಾತವಾಗಿದೆ. ತೀವ್ರವಾಗಿ ಗಾಯಗೊಂಡಿದ್ದ ಜೈಸ್ವಾಲ್‌ರನ್ನು ಕೂಡಲೇ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಿಸಲಿಲ ಎಂದು ಪೊಲೀಸರು ತಿಳಿಸಿದ್ದಾರೆ. ಟ್ರಕ್ ಚಾಲಕನನ್ನು ಪೊಲೀಸರು ಬಂಧಿಸಿ ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ಟ್ರಕ್ ಅನ್ನು ವಶಪಡಿಸಿಕೊಳ್ಳಲಾಗಿದೆ. ಮುಂಬೈನ ಅಂಬೋಲಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದೆ.

ರಷ್ಯಾ ತೈಲ ವ್ಯಾಪಾರಕ್ಕೆ ಜೋಬೈಡನ್ ನಿರ್ಬಂಧ

ವಾಷಿಂಗ್ಟನ್: ಅಮೆರಿಕದ ಅಧ್ಯಕ್ಷ ಸ್ಥಾನಕ್ಕೆ ವಿದಾಯ ಹೇಳುವ ವೇಳೆಯಲ್ಲೂ ಜೋ ಬೈಡನ್, ರಷ್ಯಾ ದೇಶದ ಮೇಲೆ ನಿರ್ಬಂಧ ಪ್ರಯೋಗ ಮಾಡಿದ್ದಾರೆ. ಉಕ್ರೇನ್ ಮೇಲೆ ಯುದ್ಧ ನಡೆಸುತ್ತಿರುವ ರಷ್ಯಾವನ್ನು ಆರ್ಥಿಕವಾಗಿ ಮತ್ತಷ್ಟು ಕುಗ್ಗಿಸಲು ಹೊಸ ನಿರ್ಬಂಧ ಕ್ರಮಗಳನ್ನು ವಿಧಿಸಿದ್ದಾರೆ. ಜಗತ್ತಿನಲ್ಲೇ ಅತಿ ದೊಡ್ಡ ತೈಲ ರಫ್ತುದಾರ ರಾಷ್ಟಗಳಲ್ಲಿ ರಷ್ಯಾ ಕೂಡಾ ಸೇರಿದೆ. ತೈಲ ವ್ಯಾಪಾರಕ್ಕೆ ಅಡ್ಡಿಪಡಿಸುವ ಮೂಲಕ ರಷ್ಯಾವನ್ನು ಕಟ್ಟಿಹಾಕಲು ಬೈಡನ್ ಆಡಳಿತ ಯತ್ನಿಸಿದೆ. ಅಮೆರಿಕದ ನಿರ್ಬಂಧ ಕ್ರಮದಿಂದ ರಷ್ಯಾದ ಮಿತ್ರ ರಾಷ್ಟ್ರಗಳೂ, ತೈಲೋತ್ಪನ್ನ ಖರೀದಿ ದೇಶಗಳೂ ಆಗಿರುವ ಭಾರತ ಮತ್ತು ಚೀನಾ ಮೇಲೂ ಪರಿಣಾಮ ಬೀರಲಿದೆ ಎನ್ನಲಾಗಿದೆ.

ಬಾಡಿಗೆದಾರರಿಗೂ ಉಚಿತ ವಿದ್ಯುತ್, ನೀರು: ಎಎಪಿ

ದೆಹಲಿ: ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಒಲೈಸುವ ದೃಷ್ಟಿಯಿಂದ ಪ್ರಮುಖ ಮೂರೂ ರಾಜಕೀಯ ಪಕ್ಷಗಳಾದ ಎಎಪಿ, ಬಿಜೆಪಿ, ಕಾಂಗ್ರೆಸ್ ಹೊಸ ಹೊಸ ಉಚಿತ ಕೊಡುಗೆಗಳನ್ನು ಪ್ರಕಟಿಸುತ್ತಲೇ ಇವೆ. ದೆಹಲಿ ಜನರ ಒಲೈಸುವಲ್ಲಿ ಪೈಪೋಟಿಗಿಳಿದಿರುವ ಮಾಜಿ ಮುಖ್ಯಮಂತ್ರಿ ಮತ್ತು ಎಎಪಿ ಸಂಚಾಲಕ ಅರವಿಂದ್ ಕೇಜ್ರಿವಾಲ್, ದೆಹಲಿಯಲ್ಲಿ ಮನೆಗಳಲ್ಲಿ ಬಾಡಿಗೆಗೆ ಇರುವವರಿಗೂ ಉಚಿತ ಕೊಡುಗೆ ಘೋಷಿಸಿದ್ದಾರೆ. ಚುನಾವಣೆಯಲ್ಲಿ ಗೆದ್ದರೆ ಬಾಡಿಗೆದಾರರಿಗೂ ಉಚಿತ ವಿದ್ಯುತ್ ಮತ್ತು ಉಚಿತ ಕುಡಿವ ನೀರು ನೀಡಲಾಗುವುದೆಂದು ಶನಿವಾರ ಘೋಷಿಸಿದ್ದಾರೆ.

ರಾಹುಲ್ ಗಾಂಧಿ ಪ್ರತಿಪಕ್ಷ ನಾಯಕ

ಗಂಗಾ ನದಿಯ ನೀರು ಎಲ್ಲೆಡೆ ಹರಿಯುವಂತೆ ಸಂವಿಧಾನದ ಸಿದ್ಧಾಂತ ದೇಶದ ಪ್ರತಿ ವ್ಯಕ್ತಿ, ಪ್ರತಿ ಸಂಸ್ಥೆಯನ್ನೂ ತಲುಪಬೇಕು ಎಂದು ಕಾಂಗ್ರೆಸ್ ಬಯಸುತ್ತದೆ. ಜಾತಿಗಣತಿ ನಡೆಯಲೇಬೇಕು. ಆಗ ಪ್ರತಿ ಜಾತಿಯ ಜನಸಂಖ್ಯೆ, ಅಧಿಕಾರಶಾಹಿ, ಶಿಕ್ಷಣ ಸಂಸ್ಥೆ, ಖಾಸಗಿ ಕಂಪನಿಗಳಲ್ಲಿ ಯಾವ ಜಾತಿಯವರು ಎಷ್ಟಿದ್ದಾರೆ ಎಂಬುದು ತಿಳಿಯುತ್ತದೆ.



65 ಲಕ್ಷ ಕುಟುಂಬಗಳಿಗೆ ಪರಿಪೂರ್ಣ ಆಸ್ತಿ ಒಡೆತನ ನೀಡಿದ ಪ್ರಧಾನಿ ಮೋದಿ | 10 ರಾಜ್ಯ-2 ಕೇಂ.ಪ್ರದೇಶ 230 ಜಿಲ್ಲೆಗಳ 50,000 ಗ್ರಾಮಗಳ ಜನಕ್ಕೆ ಲಾಭ

ಸ್ವಾಮಿತ್ವ ಯೋಜನೆ: 65 ಲಕ್ಷ ಕುಟುಂಬಕ್ಕೆ ಆಸ್ತಿಪತ್ರ

ದೆಹಲಿ: ದೇಶದ ಗ್ರಾಮೀಣ ಭಾಗದಲ್ಲಿ ಭೂಮಿಯ ಮಾಲೀಕತ್ವ ಹೆಚ್ಚಿಸುವ ನಿಟ್ಟಿನಲ್ಲಿ 'ಸ್ವಾಮಿತ್ವ' ಯೋಜನೆ ಜಾರಿಗೊಳಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಎನ್‌ಡಿಎ ಸರಕಾರ, ಶನಿವಾರ ಒಂದೇ ದಿನದಲ್ಲಿ ದೇಶದ ವಿವಿಧೆಡೆಯ 65 ಲಕ್ಷ ಕುಟುಂಬಗಳಿಗೆ ಏಕಕಾಲದಲ್ಲಿ ಆಸ್ತಿಪತ್ರವನ್ನು ಡಿಜಿಟಲ್ ಮಾರ್ಗದಲ್ಲಿ ವಿತರಿಸಿದೆ.

ಗ್ರಾಮೀಣ ಭಾರತದ ಆರ್ಥಿಕ ಬೆಳವಣಿಗೆ, ಬಡತನ ನಿರ್ಮೂಲನೆ ಉದ್ದೇಶದಿಂದ ಕುದ್ದು ಆಸಕ್ತಿ ವಹಿಸಿ 'ಸ್ವಾಮಿತ್ವ' ಯೋಜನೆಯನ್ನು ಪ್ರಾರಂಭಿಸಿರುವುದಾಗಿ ಪ್ರಧಾನ ಮಂತ್ರಿ ಮೋದಿ ಅವರು ಹೇಳಿದ್ದಾರೆ. 65 ಲಕ್ಷ ಕುಟುಂಬಗಳಿಗೆ ಆಸ್ತಿಗಳ ಮಾಲೀಕತ್ವದ ಪತ್ರಗಳನ್ನು ವಿತರಿಸುವ ಕಾರ್ಯಕ್ರಮಕ್ಕೆ ಶನಿವಾರ ದೆಹಲಿಯಿಂದ ವರ್ಚುವಲ್ ಮಾರ್ಗದಲ್ಲಿ ಚಾಲನೆ ನೀಡಿದ ಪ್ರಧಾನಿ ಮೋದಿ, ಕಾನೂನುಬದ್ಧ ಆಸ್ತಿ ಹಕ್ಕುಗಳ ಜತೆಗೇ ಗ್ರಾಮೀಣ ಪ್ರದೇಶದ ಬಡ ಕುಟುಂಬಗಳನ್ನು ಆರ್ಥಿಕವಾಗಿ ಸಬಲೀಕರಣಗೊಳಿಸುವ ಗುರಿಯನ್ನು ಕೇಂದ್ರದ ಎನ್‌ಡಿಎ ಸರಕಾರ ಹೊಂದಿದೆ ಎಂದರು.

ಆಸ್ತಿಯ ಪೂರ್ಣ ಮಾಲೀಕತ್ವ ಹಳ್ಳಿಗಾಡಿನ ಬಡಕುಟುಂಬಗಳ ಪಾಲಿಗೆ ಅದೆಷ್ಟು ಮಹತ್ವದ್ದು ಎಂಬ ಅಂಶವನ್ನು ಎತ್ತಿ ತೋರಿದ ಮೋದಿ ಅವರು, ಈ ಸ್ವಾಮಿತ್ರ ಯೋಜನೆಯು ಗ್ರಾಮಗಳನ್ನು ಬಲಪಡಿಸುವಲ್ಲಿ ಹಾಗೂ ಬಡತನವನ್ನು ಕಡಿಮೆ ಮಾಡುವಲ್ಲಿ ಬಹಳ ಪ್ರಮುಖ ಪಾತ್ರ ವಹಿಸಲಿದೆ. ಅಲ್ಲದೇ, ಹಳ್ಳಿಗಳಲ್ಲಿನ ದೀರ್ಘಕಾಲದ ಆಸ್ತಿ ವಿವಾದಗಳನ್ನು ಪರಿಹರಿಸುವ ಗುರಿಯನ್ನು ಈ ಯೋಜನೆ ಹೊಂದಿದೆ ಎಂದು ನುಡಿದರು. ಅಲ್ಲದೆ, ಗಾಂಧೀಜಿ ಅವರ ಗ್ರಾಮೀಣಾಭಿವೃದ್ಧಿಯ ಕನಸು-ದೃಷ್ಟಿಕೋನವನ್ನು ನೆನಪಿಸಿದರು.

ಗ್ರಾಮೀಣ ಆರ್ಥಿಕತೆ ಸುಧಾರಣೆಯ ಜತೆಗೇ ಭೂ ದಾಖಲೆಗಳ ಡಿಜಿಟಲೀಕರಣ ಕಾರ್ಯದಲ್ಲಿ ಕೇಂದ್ರದ ಎನ್‌ಡಿಎ ಸರಕಾರದ ಪ್ರಯತ್ನಗಳನ್ನು ಪ್ರಧಾನಿ ವಿವರಿಸಿದರು. ಕಳೆದ 7-8 ವರ್ಷಗಳಲ್ಲಿ ಶೇ.98ರಷ್ಟು ಭೂ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲಾಗಿದೆ. ಭೂಮಿ ಆಧಾರ್ ಸಂಖ್ಯೆ ಮೂಲಕ ಭೂಮಿಯ ಒಡೆತನಕ್ಕೆ ವಿಶಿಷ್ಟ ಗುರುತು ನೀಡಲಾಗಿದೆ. 23 ಕೋಟಿ ಭೂ ಆಧಾರ್ ಸಂಖ್ಯೆಗಳನ್ನು ಈವರೆಗೆ ರಚಿಸಿ ಮಾಲೀಕರಿಗೆ ಒದಗಿಸಲಾಗಿದೆ ಎಂದರು.

ಬ್ಯಾಂಕ್ ಸಾಲಕ್ಕೂ ಅನುಕೂಲ

10 ರಾಜ್ಯಗಳು ಮತ್ತು 2 ಕೇಂದ್ರಾಡಳಿತ ಪ್ರದೇಶಗಳಲ್ಲಿನ 230 ಜಿಲ್ಲೆಗಳಲ್ಲಿನ 50 ಸಾವಿರಕ್ಕೂ ಅಧಿಕ ಹಳ್ಳಿಗಳಲ್ಲಿನ ಬಡ ಕುಟುಂಬಗಳು ಸ್ವಂತ ಭೂಮಿ ಹೊಂದುವಂತೆ ಮಾಡಲಾಗಿದೆ. ಪ್ರಧಾನಿ ನರೇಂದ್ರ ಮೋದಿ ಅವರು 65 ಲಕ್ಷ ಆಸ್ತಿ ಕಾರ್ಡ್‌ಗಳನ್ನು ವಿತರಿಸುವ ಮೂಲಕ ಬಡಕುಟುಂಬಗಳ ಸದಸ್ಯರನ್ನು ಸ್ವಂತ ಆಸ್ತಿ ಹೊಂದುವಂತೆ ಮಾಡಿದ್ದಾರೆ. ಇದರಿಂದ ಆಸ್ತಿ ಒಡೆತನದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಸಿಕ್ಕಂತಾಗಿದೆ. ಪರಿಣಾಮವಾಗಿ ಆಸ್ತಿ ಮಾಲೀಕರು ಬ್ಯಾಂಕ್‌ಗಳಿಂದ ಸುಲಭವಾಗಿ ಸಾಲ ಪಡೆಯಲು ಅನುಕೂಲವಾಗಲಿದೆ.

ಭಾರತದ ಆತ್ಮ ಹಳ್ಳಿಗಳಲ್ಲಿದೆ. ಹಾಗಾಗಿ ಹಳ್ಳಿಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿ ಎಂಬ ಬಾಪು ಅವರ ಮಾತುಗಳನ್ನು ನಾವೆಂದೂ ಮರೆಯಬಾರದು. ಬಾಪು ಅವರ ಕನಸು- ಭಾವನೆಯನ್ನು ಕಾರ್ಯಗತಗೊಳಿಸುವ ಕೆಲಸವನ್ನು ನಮ್ಮ ಸರಕಾರ ಕಳೆದ ದಶಕದಲ್ಲಿ ಮಾಡಿದೆ.
-ನರೇಂದ್ರ ಮೋದಿ ಪ್ರಧಾನಿ

ಯಾವ ರಾಜ್ಯಗಳಲ್ಲಿ ಸ್ವಾಮಿತ್ವ

ಛತ್ತೀಸ್‌ಗಢ, ಗುಜರಾತ್, ಹಿಮಾಚಲ ಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ಮಿಜೋರಾಂ, ಒಡಿಶಾ, ಪಂಜಾಬ್, ರಾಜಸ್ಥಾನ, ಉತ್ತರ ಪ್ರದೇಶ ರಾಜ್ಯಗಳಲ್ಲಿ ಹಾಗೂ ಕೇಂದ್ರಾಡಳಿತ ಪ್ರದೇಶಗಳಾದ ಜಮ್ಮು-ಕಾಶ್ಮೀರ ಮತ್ತು ಲಡಾಕ್‌ನಲ್ಲಿ ಸ್ವಾಮಿತ್ವ ಯೋಜನೆಯಡಿ ಆಸ್ತಿಪತ್ರ ವಿತರಿಸಲಾಗಿದೆ.

ಸ್ವಾಮಿತ್ವ ಯೋಜನೆ ಎಂದರೇನು?

ಸರ್ವೆ ಆಫ್ ವಿಲೇಜಸ್ ಅಂಡ್ ಮ್ಯಾಪಿಂಗ್ ವಿಥ್ ಇಂಪ್ರೊವೈಸ್ಡ್ ಟೆಕ್ನಾಲಜಿ ಇನ್ ವಿಲೇಜ್ ಏರಿಯಾಸ್ ಎಂಬುದರ ಸಂಕ್ಷಿಪ್ತ ರೂಪವೇ 'ಎಸ್‌ವಿಎಎಂಐಟಿವಿಎ' ಅರ್ಥಾತ್ 'ಸ್ವಾಮಿತ್ವ' ಎಂಬುದಾಗಿದೆ. ಡ್ರೋನ್ ತಂತ್ರಜ್ಞಾನ ಬಳಸಿ ಗ್ರಾಮೀಣ ವಸತಿ ಪ್ರದೇಶಗಳ ನಕಾಶೆ ಸಿದ್ಧಪಡಿಸಲಾಗಿದೆ. ಆ ನಕಾಶೆಯಲ್ಲಿ ಗ್ರಾಮಸ್ಥರು ಹೊಂದಿರುವ ಮನೆ ಮತ್ತಿತರ ಆಸ್ತಿಗಳ ಮಾಲೀಕತ್ವ ವನ್ನು ದೃಢೀಕರಿಸಲೆಂದೇ 'ಆಸ್ತಿ ಕಾರ್ಡ್' ನೀಡಲಾಗುತ್ತಿದೆ. ಅದಕ್ಕಾಗಿಯೇ ಗ್ರಾಮೀಣ ಪ್ರದೇಶಗಳಲ್ಲಿ ಸುಧಾರಿತ ತಂತ್ರಜ್ಞಾನದೊಂದಿಗೆ ಗ್ರಾಮಗಳ ಸಮೀಕ್ಷೆ ಮತ್ತು ನಕ್ಷೆಯ 'ಸ್ವಾಮಿತ್ವ' ಯೋಜನೆಯನ್ನು ಕೇಂದ್ರದ ಎನ್‌ಡಿಎ ಸರಕಾರ 2020ರಲ್ಲಿ ಪ್ರಾರಂಭಿಸಿದೆ. ಹಿಂದಿನ ಸರಕಾರಗಳು ಈ ದಿಶೆಯಲ್ಲಿ ಯಾವುದೇ ಕ್ರಮ ಕೈಗೊಳ್ಳಲಿಲ್ಲ. 2014ರಲ್ಲಿ ಎನ್‌ಡಿಎ ಸರಕಾರ ರಚನೆಯಾದ ಬಳಿಕ ನಾವು 'ಸ್ವಾಮಿತ್ವ ಯೋಜನೆ' ಪ್ರಾರಂಭದ ಬಗ್ಗೆ ಆಲೋಚನೆ ಮಾಡಿದೆವು ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ದೇಶದ ಪ್ರತಿ ಹಳ್ಳಿಯಲ್ಲಿಯೂ ಡ್ರೋನ್ ಸಹಾಯದಿಂದ ಪ್ರತಿಯೊಂದು ಮನೆ ಮತ್ತು ಕೃಷಿ ಭೂಮಿಯ ನಕ್ಷೆ ತಯಾರಿಸಲು ನಮ್ಮ ಸರಕಾರ ನಿರ್ಧರಿಸಿದೆ. ಗ್ರಾಮಸ್ಥರಿಗೆ ಅವರ ವಸತಿ ಆಸ್ತಿ ದಾಖಲೆಗಳನ್ನು ನೀಡಲಾಗುವುದು. ಬಡತನ ಕಡಿಮೆ ಆಗಬೇಕಾದರೆ ಆಸ್ತಿ ಹಕ್ಕುಗಳನ್ನು ಹೊಂದಿರುವುದು ಬಹಳ ಮುಖ್ಯ ಎಂದು ವಿಶ್ವಸಂಸ್ಥೆ ಸ್ಪಷ್ಟವಾಗಿ ಹೇಳಿದೆ ಎಂದು ಮೋದಿ ಹೇಳಿದರು.

ದುಷ್ಕರ್ಮಿ ಆಕ್ರಮಣಕಾರಿ, ಆಭರಣ ಮುಟ್ಟಲಿಲ್ಲ: ಕರೀನಾ ಹೇಳಿಕೆ

ಎರಡೂವರೆ ದಿನವಾದರೂ ಸಿಗದ ದುಷ್ಕರ್ಮಿ

ಮುಂಬೈ: ಬಾಲಿವುಡ್ ನಟ ಸೈಫ್ ಅಲಿ ಖಾನ್(54) ಮೇಲೆ ಮಾರಣಾಂತಿಕವಾಗಿ ದಾಳಿ ನಡೆಸಿ ಬೆನ್ನೆಲುಬು, ಕುತ್ತಿಗೆ, ಬಲ ತೋಳು ಸೇರಿದಂತೆ ದೇಹದ 6 ಕಡೆ ಚಾಕುವಿನಿಂದ ಇರಿದ ದುಷ್ಕರ್ಮಿ ಘಟನೆ ನಡೆದು ಎರಡೂವರೆ ದಿನಗಳೇ ಕಳೆದರೂ ಪೊಲೀಸರಿಗಿನ್ನೂ ಸೆರೆ ಸಿಕ್ಕಿಲ್ಲ.

ಮುಂಬೈ ಮಹಾನಗರದ ಬಾಂದ್ರಾದಲ್ಲಿನ 'ಸದ್ಗುರು ಶರಣ್' ಬಹುಮಹಡಿ ವಸತಿ ಸಂಕೀರ್ಣದಲ್ಲಿನ 12ನೇ ಮಹಡಿಯಲ್ಲಿರುವ ಮನೆಗೆ ನುಗ್ಗಿದ ದುಷ್ಕರ್ಮಿ, ಮೊದಲಿಗೆ ಮನೆಗೆಲಸದವಳ ಮೇಲೆ ಹಲ್ಲೆಗೆ ಯತ್ನಿಸಿದ. ಆಗ ಅಡ್ಡ ಬಂದ ನಟ ಸೈಫ್ ಅಲಿಖಾನ್ ಮೇಲೆ ಮುಗಿಬಿದ್ದ ಸಿಕ್ಕಸಿಕ್ಕಲ್ಲೆಲ್ಲಾ ಚಾಕುವಿನಿಂದ ಇರಿದು ಪರಾರಿಯಾಗಿದ್ದ. ದುಷ್ಕರ್ಮಿಯ ಪತ್ತೆಗಾಗಿ 30ಕ್ಕೂ ಹೆಚ್ಚು ಪೊಲೀಸ್ ತಂಡಗಳು ಶೋಧ ನಡೆಸುತ್ತಿವೆ. ದಾಳಿ ಕುರಿತು ಸೈಫ್ ಪತ್ನಿ ಕರೀನಾ ಕಪೂರ್‌ರಿಂದ ಪೊಲೀಸರು ಶನಿವಾರ ಹೇಳಿಕೆ ದಾಖಲಿಸಿಕೊಂಡಿದ್ದಾರೆ. ಮನೆಗೆ ನುಗ್ಗಿದ್ದ ದುಷ್ಕರ್ಮಿ ಬಹಳ ಆಕ್ರಮಣಕಾರಿಯಾಗಿ ವರ್ತಿಸಿದ್ದ. ದಾಳಿ ನಡೆಸುತ್ತಿದ್ದ ಜಾಗದಲ್ಲೇ ಇದ್ದ ಬೆಲೆಬಾಳುವ ಚಿನ್ನಾಭರಣಗಳನ್ನು ಮುಟ್ಟಲೂ ಇಲ್ಲ ಎಂದು ನಟಿ ಕರೀನಾ ತಿಳಿಸಿರುವುದಾಗಿ ಪೊಲೀಸರು ಮಾಧ್ಯಮಗಳಿಗೆ ಮಾಹಿತಿ ನೀಡಿದ್ದಾರೆ. ಚಾಕುವಿನ 2.5 ಇಂಚಿನ ಚೂರು ನಟ ಸೈಫ್ ಅಲಿಖಾನ್ ಬೆನ್ನೆಲುಬಿನಲ್ಲಿಯೇ ಸಿಕ್ಕಿಕೊಂಡಿದ್ದರಿಂದ ಶಸ್ತ್ರಚಿಕಿತ್ಸೆ ನಡೆಸಲಾಗಿದೆ. ಕುತ್ತಿಗೆ, ತೋಳು ಸೇರಿದಂತೆ 6 ಕಡೆ ಗಾಯಗಳಾಗಿವೆ. ಸದ್ಯ ಲೀಲಾವತಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ. ದಾಳಕೋರ ಕ್ರಿಮಿನಲ್ ಗ್ಯಾಂಗ್‌ಗಳ ಜತೆ ಸಂಪರ್ಕ ಹೊಂದಿದಂತಿಲ್ಲ. ಬಹುಶಃ ಯಾರದೋ ಮನೆಗೆ ಬಂದವನು ಸೈಫ್ ಅವರ ಮನೆಗೆ ನುಗ್ಗಿರಬಹುದು ಎಂದು ಪೊಲೀಸರು ಅಭಿಪ್ರಾಯಪಟ್ಟಿದ್ದಾರೆ. ಜ.16ರ ನಸುಕಿನ 2 ಗಂಟೆ ವೇಳೆ ನಟ ಸೈಫ್ ಅಲಿಖಾನ್ ಮೇಲೆ ಅವರದೇ ಮನೆಯಲ್ಲಿ ದಾಳಿ ನಡೆಸಿದ ದುಷ್ಕರ್ಮಿ, ಬಳಿಕ ಬೆಳಗ್ಗೆ 9ರ ವೇಳೆ ಮುಂಬೈ ಮಹಾ ನಗರದಲ್ಲಿನ ಎಲೆಕ್ಟ್ರಾನಿಕ್ಸ್ ಅಂಗಡಿಗಳ ಮಾರುಕಟ್ಟೆಗೆ ತೆರಳಿ ಈಯರ್ ಫೋನ್ ಖರೀದಿಗೆಂದು ಹೋಗಿದ್ದ ಎಂಬುದು ತಿಳಿದುಬಂದಿದೆ.



ಯಾರನ್ನೂ ಬಂಧಿಸಿಲ್ಲ

ಸಿಸಿಟಿವಿಯಲ್ಲಿ ಕಂಡ ರೀತಿಯಲ್ಲೇ ಇದ್ದ ಕಾರ್ಪೆಂಟರ್ ಒಬ್ಬರನ್ನು ಬಾಂದ್ರಾ ಠಾಣೆಗೆ ಕರೆಸಿ ವಿಚಾರಣೆ ನಡೆಸಿ ಬಳಿಕ ಬಿಡುಗಡೆ ಮಾಡಲಾಗಿದೆ. ಈವರೆಗೂ ಯಾರನ್ನು ಬಂಧಿಸಿಲ್ಲ ಎಂದು ಮುಂಬೈ ಅಪರಾಧ ವಿಭಾಗದ ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಪಾಕ್‌ನ ಸದ್ಯದ ಪರಿಸ್ಥಿತಿ ಬಗ್ಗೆ ಜೈಶಂಕರ್ ಮಾರ್ಮಿಕ ನುಡಿ

ಕ್ಯಾನ್ಸರ್ ಸೃಷ್ಟಿಸಿದವನ ದೇಹ ತಿನ್ನುತ್ತಿದೆ

ಮುಂಬೈ: ನೆರೆಯ ದೇಶ ಸೃಷ್ಟಿ ಮಾಡಿ ಬೆಳೆಸಿದ ಕ್ಯಾನ್ಸರ್ ರೋಗವೀಗ ಅದರ ದೇಹವನ್ನೇ ಒಂದೆಡೆಯಿಂದ ಕಿತ್ತು ತಿನ್ನಲಾರಂಭಿಸಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್, ಪಾಕಿಸ್ತಾನದ ಸದ್ಯದ ಸ್ಥಿತಿ ಕುರಿತು ಮಾರ್ಮಿಕವಾಗಿ ನುಡಿದಿದ್ದಾರೆ.

ಮುಂಬೈನಲ್ಲಿ ಶನಿವಾರ ನಾನಿ ಎ.ಪಾಲಕೀವಾಲಾ ಸ್ಮರಣಾರ್ಥದ 19ನೇ ವಾರ್ಷಿಕ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಜೈಶಂಕರ್, ನೆರೆಯ ದೇಶ ಭಯೋತ್ಪಾದನೆ ಎಂಬ ಕ್ಯಾನ್ಸರ್ ಗಟ್ಟೆಗಳನ್ನು ಹುಟ್ಟಿಸಿ ಬೆಳೆಸಿ ಬೇರೆಯವರ ಮೇಲೆ ಪ್ರಯೋಗಿಸಿತು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ. ಅದರದೇ ಸೃಷ್ಟಿಯಾದ ಕ್ಯಾನ್ಸರ್ ಗಡ್ಡೆಗಳು(ಭಯೋತ್ಪಾದನೆ) ಈಗ ಆ ದೇಶವನ್ನೇ ಹುರಿದು ಮುಕ್ಕಲಾರಂಭಿಸಿವೆ ಎಂದು ಕಟುವಾಗಿ ನುಡಿದರು. ಇದೇ ವೇಳೆ, ಭಾರತ ಭಯೋತ್ಪಾದನೆಯ ವಿರುದ್ಧ ದೇಶದೊಳಗೆ ಹೋರಾಟ ನಡೆಸುತ್ತಲೇ ಅಭಿವೃದ್ಧಿ ಕಡೆಗೂ ಗಮನ ಹರಿಸಿದ್ದರಿಂದ ಆಂತರಿಕವಾಗಿಯೂ ಬೆಳೆಯುತ್ತಾ ಹೋಯಿತು. ಉತ್ತಮ ರಾಜತಾಂತ್ರಿಕ ಕಾರ್ಯತಂತ್ರಗಳ ಮೂಲಕ ಬಾಹ್ಯ ಸಂಬಂಧ-ಸಂಪರ್ಕಗಳನ್ನೂ ಹೆಚ್ಚಿಸಿಕೊಂಡು ಜಾಗತಿಕ ಮಟ್ಟದಲ್ಲಿ ಸದೃಢವಾಗಿ ಬೆಳೆಯಿತು. ಇಡೀ ವಿಶ್ವಕ್ಕೆ ಮಿತ್ರ ಎನಿಸಿಕೊಂಡಿತು ಎಂದು ಬಣ್ಣಿಸಿದರು. ನಮ್ಮ ನೆರೆಹೊರೆಯ ದೇಶಗಳಲ್ಲಿ ಪಾಕಿಸ್ತಾನವೇ ಬಲು ಭಿನ್ನ. ಅದು ಗಡಿಯಾಚೆಗಿನ ಭಯೋತ್ಪಾದನೆಗೆ ಒತ್ತು ನೀಡಿತೇ ಹೊರತು, ಅಭಿವೃದ್ಧಿ ಕಡೆಗೆ ಗಮನವನ್ನೇ ಕೊಡಲಿಲ್ಲ. ಬೇರೆ ದೇಶಗಳ ಜತೆಗಿನ ಸಂಬಂಧವನ್ನೂ ಚೆನ್ನಾಗಿಟ್ಟುಕೊಳ್ಳದೇ ಏಕಾಂಗಿಯಾಗಿದೆ ಎಂದು ವಿಶ್ಲೇಷಿಸಿದರು. ಭಾರತ ದೇಶ ತಂತ್ರಜ್ಞಾನ ಕ್ಷೇತ್ರದಲ್ಲಿಯೂ ಪ್ರಗತಿ ಸಾಧಿಸಿದೆ. ವಿದೇಶಾಂಗ ವಿಚಾರಗಳ ಲ್ಲಿಯೂ ಉತ್ತಮ ಸಾಧನೆ ಮಾಡಿ ಹೆಚ್ಚು ಮಿತ್ರ ರಾಷ್ಟ್ರಗಳನ್ನು ಸಂಪಾದಿಸಿದೆ. ಭಾರತ ಪಶ್ಚಿಮದ ದೇಶವಲ್ಲದೇ ಇರಬಹುದು, ಹಾಗೆಂದು ಪಶ್ಚಿಮದ ದೇಶಗಳ ಶತ್ರುವಲ್ಲ ಎಂಬುದು ಜಾಗತಿಕ ಮಟ್ಟದಲ್ಲಿ ಈಗಾಗಲೇ ಸಾಬೀತಾಗಿದೆ. ಭಾರತ ದೇಶ ವಿಶ್ವಬಂಧು ಎಂಬುದೂ ಬೇರೆ ದೇಶಗಳಿಗೂ ಮನದಟ್ಟಾ ಗಿದೆ. ಜಾಗತಿಕ ಮಟ್ಟದಲ್ಲಿ ಅತ್ಯಂತ ವಿಶ್ವಾಸಾರ್ಹ, ಸದಾಕಾಲ ನಂಬಿಕೆ ಇಡಬಲ್ಲ ದೇಶ ಎನಿಸಿಕೊಂಡಿದೆ ಎಂದು ಹೆಮ್ಮೆಯಿಂದ ಮಾತನಾಡಿದರು.

ಪರಸ್ಪರ ಗೌರವ, ಆಸಕ್ತಿ, ಸೂಕ್ಷ್ಮಪ್ರಜ್ಞೆ

ಕೊಟ್ಟು ತೆಗೆದುಕೊಳ್ಳುವ ಕ್ರಮ ಅನುಸರಿಸುವ ಮೂಲಕ ಭಾರತ ತನ್ನ ಮಿತ್ರ ದೇಶಗಳ ಜತೆಗೆ ಪರಸ್ಪರ ಗೌರವದ ಸಂಬಂಧ ಕಾಯ್ದುಕೊಳ್ಳಲಾಗಿದೆ. ಪರಸ್ಪರರ ಆಸಕ್ತಿಯ ವಿಚಾರಗಳತ್ತಲೂ ಗಮನ ಹರಿಸಲಾಗಿದೆ. ಸಂಬಂಧವನ್ನು ಅಷ್ಟೇ ಸೂಕ್ಷ್ಮವಾಗಿ ನಿರ್ವಹಿಸುತ್ತಿದೆ. ಈ ಮೂರು ತತ್ವಗಳನ್ನು ಪಾಲಿಸಿದ ಕಾರಣ ಮಿತ್ರರಾಷ್ಟ್ರಗಳ ಸಂಖ್ಯೆ ಹೆಚ್ಚಿಸಿಕೊಳ್ಳುವುದರ ಜತೆಗೇ, ಸಮಸ್ಯೆಗಳ ಪ್ರಮಾಣವನ್ನೂ ಕಡಿಮೆ ಮಾಡಿಕೊಂಡಿದೆ ಎಂದು ವಿದೇಶಾಂಗ ಸಚಿವ ಎಸ್.ಜೈಶಂಕರ್ ಭಾರತದ ವಿದೇಶಾಂಗ ನೀತಿಯನ್ನು ವಿವರಿಸಿದರು.

ಕೋಲ್ಕತ್ತ ಆರ್‌ಜಿ ಕರ್ ಆಸ್ಪತ್ರೆ ಕಿರಿಯ ವೈದ್ಯೆ ಹತ್ಯಾಚಾರ ಪ್ರಕರಣ | ಸೋಮವಾರ ಶಿಕ್ಷೆ ಪ್ರಮಾಣ ಪ್ರಕಟ

ನನ್ನನ್ನು ಪ್ರಕರಣದಲ್ಲಿ ವೃಥಾ ಸಿಲುಕಿಸಲಾಗಿದೆ: ಸಂಜಯ್

ಕೋಲ್ಕತ್ತ: ದೇಶವನ್ನು ಬೆಚ್ಚಿ ಬೀಳಿಸಿದ್ದ ಕೋಲ್ಕತ್ತ ಆರ್‌ಜಿ ಕರ್ ಸರಕಾರಿ ವೈದ್ಯಕೀಯ ಕಾಲೇಜು-ಆಸ್ಪತ್ರೆಯಲ್ಲಿ ಆ.9ರ ನಸುಕಿನಲ್ಲಿ ಕಿರಿಯ ವೈದ್ಯೆಯ ಮೇಲೆ ಅತ್ಯಾಚಾರ ನಡೆಸಿ ಬರ್ಬರವಾಗಿ ಕೊಲೆ ಮಾಡಿದ ಪ್ರಕರಣದಲ್ಲಿ ಬಂಧಿತ ಸಂಜಯ್ ರಾಯ್ ದೋಷಿ ಎಂದು ನಗರದ ವಿಶೇಷ ಸೆಷನ್ಸ್ ನ್ಯಾಯಾಲಯ ಶನಿವಾರ ತೀರ್ಪು ಪ್ರಕಟಿಸಿದೆ.



ವಿಚಾರಣೆ ಆರಂಭಿಸಿದ 57 ದಿನಗಳಿಗೆಲ್ಲ ತೀರ್ಪು ಪ್ರಕಟಿಸಿರುವ ನ್ಯಾಯಾಧೀಶರು, ಅಪರಾಧಿಗೆ ವಿಧಿಸಲಾಗುವ ಶಿಕ್ಷೆಯ ಪ್ರಮಾಣವನ್ನು ಸೋಮವಾರ ಪ್ರಕಟಿಸಲಾಗುವುದು ಎಂದು ಹೇಳಿದ್ದಾರೆ.

ಈ ಮಧ್ಯೆ, ಶಿಕ್ಷೆ ಏನೇ ಇರಲಿ ಅದನ್ನು ನಾವು ಕೋರ್ಟ್‌ನಲ್ಲಿ ಪ್ರಶ್ನೆ ಮಾಡುವುದಿಲ್ಲ ಎಂದು ಅಪರಾಧಿ ಸಂಜಯ್ ರಾಯ್‌ನ ಸೋದರಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ್ದಾರೆ. ನ್ಯಾಯಾಧೀಶರು ತೀರ್ಪು ಪ್ರಕಟಿಸುತ್ತಿದ್ದಂತೆಯೇ ಅಪರಾಧಿ ಸಂಜಯ್ ರಾಯ್, 'ನಾನು ಯಾವುದೇ ತಪ್ಪು ಮಾಡಿಲ್ಲ. ನಾನೊಬ್ಬ ಅಮಾಯಕ. ನನ್ನನ್ನು ವೃಥಾ ಈ ಅಪರಾಧ ಪ್ರಕರಣದಲ್ಲಿ ಸಿಲುಕಿಸಲಾಗಿದೆ' ಎಂದು ಕಟಕಟೆಯಿಂದಲೇ ಕೂಗಲಾರಂಭಿಸಿದ. ಪಕ್ಕದಲ್ಲೇ ಇದ್ದ ಪೊಲೀಸರು, ಬಳಿಕ ಸಂಜಯ್ ರಾಯ್‌ನನ್ನು ಹೊರಗೆ ಸಿದ್ಧವಾಗಿದ್ದ ಪೊಲೀಸ್ ವ್ಯಾನ್‌ನತ್ತ ಎಳೆದೊಯ್ದರು. ದೇಶದಲ್ಲಿ ಸಂಚಲನ ಉಂಟು ಮಾಡಿದ್ದ ಅಪರಾಧ ಪ್ರಕರಣದ ತೀರ್ಪು ಪ್ರಕಟವಾಗಲಿದ್ದ ಹಿನ್ನೆಲೆ ನ್ಯಾಯಾಲಯದ ಸಭಾಂಗಣಕ್ಕೆ ವಿಶೇಷ ಭದ್ರತೆ ಒದಗಿಸಲಾಗಿತ್ತು. ನ್ಯಾಯಾಲಯದ ಆವರಣದಲ್ಲಿಯೂ 300ಕ್ಕೂ ಹೆಚ್ಚು ಪೊಲೀಸರನ್ನು ಭದ್ರತಾ ಕಾರ್ಯಕ್ಕೆ ನಿಯೋಜಿಸಲಾಗಿತ್ತು.

ಆರಂಭದಲ್ಲಿ ಈ ಪ್ರಕರಣದ ವಿಚಾರಣೆ ನಡೆಸಿದ್ದ ಕೋಲ್ಕತ್ತ ಪೊಲೀಸರು ಆಗಸ್ಟ್ 10ರಂದು ರಾಯ್‌ನನ್ನು ಬಂಧಿಸಿದ್ದರು. ಆಸ್ಪತ್ರೆಯ ಸೆಮಿನಾರ್ ಹಾಲ್ನಲ್ಲಿ ವೈದ್ಯ ವಿದ್ಯಾರ್ಥಿನಿಯ ಮೃತದೇಹ ದೊರೆತ ಮರುದಿನ ಬಂಧನ ನಡೆದಿತ್ತು. ನವೆಂಬರ್ 12 ರಿಂದ ವಿಚಾರಣೆ ಆರಂಭವಾಗಿತ್ತು. ಒಟ್ಟು 50 ಸಾಕ್ಷಿಗಳ ಹೇಳಿಕೆಗಳನ್ನು ಪಡೆಯಲಾಗಿತ್ತು. ಆರೋಪಿಯ ವಿಚಾರಣೆ ಜನವರಿ 9ರಂದು ಕೊನೆಗೊಂಡಿತ್ತು.

2024ರ ಆ.8ರಂದು ರಾತ್ರಿ ಪಾಳಿಯಲ್ಲಿದ್ದ ಕಿರಿಯ ವೈದ್ಯೆ, ನಾಲ್ವರು ಸಹೋದ್ಯೋಗಿಗಳ ಜತೆಗೆ ತಡರಾತ್ರಿ ಊಟ ಮಾಡಿದ ಬಳಿಕ ತುಸು ವಿರಮಿಸುವುದಾಗಿ ಹೇಳಿ ಡ್ಯುಟಿ ಡಾಕ್ಟರ್‌ಗಳ ಕೊಠಡಿಗೆ ತೆರಳಿದ್ದರು. ಆದರೆ, ಆ.9ರ ಮುಂಜಾನೆ ಆಸ್ಪತ್ರೆಯ ಸೆಮಿನಾರ್ ಹಾಲ್‌ನಲ್ಲಿ ಅರೆನಗ್ನ ಸ್ಥಿತಿಯಲ್ಲಿ ಕಿರಿಯ ವೈದ್ಯೆಯ ಮೃತದೇಹ ಪತ್ತೆಯಾಗಿತ್ತು. ಆಕೆಯ ಮೇಲೆ ಅತ್ಯಾಚಾರ ನಡೆಸಿ ಕೊಲೆ ಮಾಡಿರುವುದು ನಂತರದಲ್ಲಿ ತಿಳಿದುಬಂದಿತ್ತು. ಸಿಸಿಟಿವಿ ದೃಶ್ಯಾವಳಿ ಆಧರಿಸಿ ಸಂಜಯ್ ರಾಯ್‌ನೇ ಕೃತ್ಯ ನಡೆಸಿರುವುದು ಎಂದು ಆರೋಪಿಯನ್ನು ಪೊಲೀಸರು ಆ.10ರಂದು ಬಂಧಿಸಿದ್ದರು. ಅಶ್ಲೀಲ ವೀಡಿಯೋಗಳಿಗೆ ವ್ಯಸನಿಯಾಗಿದ್ದ ಸಂಜಯ್ ರಾಯ್ ಕೊಲೆ ಮಾಡಿದ ನಂತರ ಸಾಕ್ಷ್ಯ ನಾಶಪಡಿಸಲು ರಕ್ತಸಿಕ್ತ ಬಟ್ಟೆಯನ್ನು ತೊಳೆದಿದ್ದ ಎನ್ನುವುದನ್ನು ಪೊಲೀಸರು ಕಂಡುಕೊಂಡಿದ್ದರು. ಆತ ಈ ಹಿಂದೆ ಪೊಲೀಸರಿಗೆ ಸಾಮಾಜಿಕ ಸಹಾಯಕನಾಗಿ ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ. ಸಂಜಯ್ ಒಟ್ಟು 4 ಮದುವೆ ಆಗಿದ್ದ ಎಂದು ತಿಳಿದುಬಂದಿತ್ತು.

ಕೋಲ್ಕತ್ತ ನಗರದ ನ್ಯಾಯಾಲಯದಲ್ಲಿ ಕಿರಿಯ ವೈದ್ಯೆ ಹತ್ಯಾಚಾರ ಪ್ರಕರಣದ ತೀರ್ಪು ಪ್ರಕಟವಾಗುವ ಸಂದರ್ಭ ನ್ಯಾಯಾಲಯ ಆವರಣದಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ನೆರೆದಿದ್ದರು.

ತೀರ್ಪು ಪ್ರಕಟ ಬಳಿಕ ಕುಸಿದ ಸಂತ್ರಸ್ತೆ ತಂದೆ

ಕಿರಿಯ ವೈದ್ಯೆಯ ಅತ್ಯಾಚಾರ-ಬರ್ಬರ ಹತ್ಯೆ ಪ್ರಕರಣದಲ್ಲಿ ಸಂಜಯ್ ರಾಯ್ ತಪ್ಪಿತಸ್ತ ಎಂದು ನ್ಯಾಯಾಧೀಶರು ತೀರ್ಪು ಪ್ರಕಟಿಸುತ್ತಲೇ ಕೋರ್ಟ್ ಹಾಲ್‌ನಲ್ಲಿದ್ದ ಸಂತ್ರಸ್ತೆಯ ತಂದೆ ಭಾವೋದ್ವೇಗಕ್ಕೆ ಒಳಗಾಗಿ ನಿಂತಲ್ಲಿಯೇ ಕುಸಿದರು. ಪಕ್ಕದಲ್ಲಿದ್ದವರು ಅವರನ್ನು ಸಮಾಧಾನಗೊಳಿಸಿದರು. ಬೆಳಗ್ಗೆಯಿಂದಲೇ ಅವರು ಉದ್ವೇಗಕ್ಕೆ ಒಳಗಾಗಿದ್ದರು. ಸಮಾಧಾನದಿಂದ ಇರುವಂತೆ ಹೇಳುತ್ತಿದ್ದ ಜನರಿಗೆಲ್ಲಾ, 'ತಪ್ಪು ಮಾಡಿದವರಿಗೆ ಶಿಕ್ಷೆಯಾದ ಬಳಿಕವಷ್ಟೇ ನಮ್ಮ ಕುಟುಂಬಕ್ಕೆ ಸಮಾಧಾನವಾಗುವುದು. ಅಲ್ಲಿಯವರೆಗೂ ನೆಮ್ಮದಿ-ಸಮಾಧಾನ ಎಂಬುದೆಲ್ಲಾ ಇಲ್ಲ' ಎಂದೇ ಪ್ರತಿಕ್ರಿಯಿಸಿದ್ದರು.

ಕೇಜ್ರಿ ಕಾರಿಗೆ ಬಿಜೆಪಿ ಕಲ್ಲು: ಎಎಪಿ ಆರೋಪ

ದೆಹಲಿ: ಫೆ.5ರಂದು ದೆಹಲಿ ವಿಧಾನಸಭಾ ಚುನಾವಣೆ ನಡೆಯಲು ದಿನ ನಿಗದಿಯಾಗಿದೆ. ಚುನಾವಣೆಗೆ ರಾಜಕೀಯ ಪಕ್ಷಗಳ ಪ್ರಚಾರ ಬಿರುಸಾಗಿ ಆರಂಭವಾಗಿರುವಾಗಲೇ ಆರೋಪ-ಪ್ರತ್ಯಾರೋಪಗಳೂ ಶುರುವಾಗಿವೆ. ಮನೆ ಮನೆ ಪ್ರಚಾರ ನಡೆಸುತ್ತಿದ್ದ ಅರವಿಂದ್ ಕೇಜ್ರಿವಾಲ್ ಅವರ ಕಾರಿನ ಮೇಲೆ ಶನಿವಾರ ಕೆಲವರು ಕಲ್ಲೆಸೆದಿದ್ದಾರೆ. ಕೇಜ್ರಿವಾಲ್ ಕಾರಿನ ಮೇಲೆ ದುಷ್ಕರ್ಮಿಗಳು ದಾಳಿ ನಡೆಸಿದ್ದಾರೆ. ಇದು ಬಿಜೆಪಿಯ ಗೂಂಡಾಗಳದ್ದೇ ಕೃತ್ಯ ಎಂದು ಆಮ್ ಆದ್ಮಿ ಪಾರ್ಟಿ(ಎಎಪಿ) ಆರೋಪಿಸಿದೆ. ದಾಳಿ ಸಂದರ್ಭದ ವಿಡಿಯೊವನ್ನೂ ಎಎಪಿ ಹಂಚಿಕೊಂಡಿದೆ. ಕೆಲ ಯುವಕರು ಕಪ್ಪು ಬಾವುಟ ಪ್ರದರ್ಶಿಸಿ ಕೇಜ್ರಿವಾಲ್ ಕಾರಿಗೆ ಅಡ್ಡಿಪಡಿಸುತ್ತಿರುವ ದೃಶ್ಯಗಳು ವಿಡಿಯೋದಲ್ಲಿ ಕಂಡು ಬಂದಿವೆ. 'ಅರವಿಂದ್ ಕೇಜ್ರಿವಾಲ್ ಅವರ ಕಾರಿನ ಮೇಲೆ ಬಿಜೆಪಿ ಗೂಂಡಾಗಳು ಕಲ್ಲೆಸೆದಿದ್ದು, ಆ ಮೂಲಕ ನಮ್ಮ ಪ್ರಚಾರದ ಕಾರ್ಯಕ್ರಮವನ್ನು ಹಾಳುಗೆಡುವಲು ಪ್ರಯತ್ನಿಸಿದ್ದಾರೆ. ಈ ಹೇಡಿತನದ ದಾಳಿಗಳಿಗೆ ಕೇಜ್ರಿವಾಲ್ ಹೆದರುವುದಿಲ್ಲ. ದೆಹಲಿ ಜನರು ನಿಮಗೆ ತಕ್ಕ ಶಾಸ್ತಿ ಮಾಡಲಿದ್ದಾರೆ ಎಂದು ಎಎಪಿ ಎಕ್ಸ್ ಖಾತೆಯಲ್ಲಿ ಬರೆದುಕೊಂಡಿದೆ. ಈ ಆರೋಪವನ್ನು ಅಲ್ಲಗಳೆದಿರುವ ಬಿಜೆಪಿಯ ಪರ್ವೇಶ್ ವರ್ಮಾ, ಜನರ ಗಮನ ಸೆಳೆವ ಎಎಪಿ ತಂತ್ರವಷ್ಟೇ ಎಂದಿದ್ದಾರೆ.

ಬಾಂಗ್ಲಾ ಬಿಡುವುದು ತಡವಾಗಿದ್ದರೆ ಹತ್ಯೆ

ದೆಹಲಿ: 2024ರ ಆ.5ರಂದು ದೇಶ ತೊರೆಯುವುದು 20-25 ನಿಮಿಷ ತಡವಾಗಿದ್ದರೂ ನನ್ನ ಹಾಗೂ ಕುಟುಂಬದವರ ಹತ್ಯೆಯಾಗುತ್ತಿತ್ತು ಎಂದು ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ(77) ಹೇಳಿದ್ದಾರೆ.

ರಾಜಕೀಯ ವಿರೋಧಿಗಳು ನಮ್ಮನ್ನು ಸಾಯಿಸಲು ಸಂಚು ರೂಪಿಸಿದ್ದರು ಎಂದು ಆರೋಪಿಸಿರುವ ಹಸೀನಾ, ಜೀವ ಉಳಿಸಿದ್ದಕ್ಕಾಗಿ ಅಲ್ಲಾಹನಿಗೆ ಕೃತಜ್ಞತೆ ಸಲ್ಲಿಸುವೆ ಎಂದಿದ್ದಾರೆ.

ಅದೇನೂ ನನ್ನ ಹತ್ಯೆಗೆ ನಡೆದ ಮೊದಲ ಸಂಚಲ್ಲ. ಜೀವನದುದ್ದಕ್ಕೂ ಹಲವು ಬಾರಿ ಹತ್ಯೆ ಪ್ರಯತ್ನಗಳು ನಡೆದಿವೆ. ತಾವು ಮತ್ತು ಸಹೋದರಿ ರೆಹಾನಾ ಸ್ವಲ್ಪದರಲ್ಲೇ ಸಾವಿನಿಂದ ಪಾರಾಗಿ ಭಾರತಕ್ಕೆ ಬಂದು ಸೇರಿದ್ದನ್ನು ನೆನಪಿಸಿಕೊಂಡಿದ್ದಾರೆ. ಹಸೀನಾ ಅವರ ಮಾತುಗಳ ಧ್ವನಿಮುದ್ರಣವನ್ನು ಅವಾಮಿ ಲೀಗ್ ಪಕ್ಷ ಜಾಲತಾಣದಲ್ಲಿ ಶನಿವಾರ ಹಂಚಿಕೊಂಡಿದೆ. ನಾನೀಗ ದೇಶವಿಲ್ಲದವಳಾಗಿದ್ದೇನೆ. ಸ್ವಂತದ ಮನೆಯಿಂದಲೂ ದೂರವಾಗಿದ್ದೇನೆ. ನನ್ನ ಮನೆ, ನಗರ, ದೇಶ ಸುಟ್ಟುಹೋಗಿದೆ ಎಂದು ಭಾವುಕರಾಗಿ ಮಾತನಾಡಿದ್ದಾರೆ. ಈ ಮಧ್ಯೆ, ಬಾಂಗ್ಲಾದೇಶದ ಮಧ್ಯಂತರ ಸರಕಾರ ಶೇಖ್ ಹಸೀನಾ ವಿರುದ್ಧ ಹಲವು ಪ್ರಕರಣಗಳನ್ನು ದಾಖಲಿಸಿದ್ದು, ಅವರನ್ನು ಹಸ್ತಾಂತರಿಸುವಂತೆ ಭಾರತವನ್ನು ಕೋರಿದೆ. ಬಾಂಗ್ಲಾದೇಶದ ನ್ಯಾಯಾಲಯ ಹಸೀನಾ ಅವರ ವಿರುದ್ಧ ಜ.6ರಂದು 2ನೇ ಬಂಧನ ವಾರಂಟ್ ಹೊರಡಿಸಿದೆ.

ಸ್ಥಳೀಯ ಚುನಾವಣೆ ಏಕಾಂಗಿ ಸ್ಪರ್ಧೆ: ಎನ್ಸಿಪಿ

ಮುಂಬೈ: ಆಡಳಿತಾರೂಢ ಮಹಾಯುತಿ ಮೈತ್ರಿಕೂಟದ ಭಾಗವಾಗಿರುವ ಉಪ ಮುಖ್ಯಮಂತ್ರಿ ಅಜಿತ್ ಪವಾರ್ ನೇತೃತ್ವದ ನ್ಯಾಷನಲಿಸ್ಟ್ ಕಾಂಗ್ರೆಸ್ ಪಾರ್ಟಿ(ಎನ್‌ಸಿಪಿ) ರಾಜ್ಯದಲ್ಲಿನ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಏಕಾಂಗಿಯಾಗಿ ಸ್ಪರ್ಧೆ ಮಾಡಲು ಸಿದ್ಧ ಎಂದು ಹೇಳಿದೆ.

ಬೃಹನ್ ಮುಂಬೈ ಮಹಾನಗರ ಪಾಲಿಕೆ ಸೇರಿದಂತೆ ಜಿಲ್ಲಾ ಪಂಚಾಯಿತಿ ಮೊದಲಾದ ಸ್ಥಳೀಯ ಸಂಸ್ಥೆ ಚುನಾವಣೆಗಳಲ್ಲಿ ಮಹಾರಾಷ್ಟ್ರದಲ್ಲಿ ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷ(ಎನ್‌ಸಿಪಿ) ಏಕಾಂಗಿ ಸ್ಪರ್ಧೆಗೆ ಸಿದ್ಧವಿದೆ ಎಂದು ಪಕ್ಷದ ನಾಯಕ ದಿಲೀಪ್ ವಾಲ್ಸೆ ಶನಿವಾರ ಹೇಳಿದ್ದಾರೆ. ಇದರೊಂದಿಗೆ ಮಹಾರಾಷ್ಟ್ರದಲ್ಲಿ ಬಿಜೆಪಿ, ಶಿವಸೇನೆ(ಶಿಂದೆ ಬಣ) ಮತ್ತು ಎನ್‌ಸಿಪಿ(ಅಜಿತ್ ಬಣ) ಸೇರಿಕೊಂಡು ರಚಿಸಿದ್ದ 'ಮಹಾಯುತಿ' ಮೈತ್ರಿಕೂಟದಲ್ಲಿ ಭಿನ್ನಾಭಿಪ್ರಾಯ ಮೂಡಿದಂತಾಗಿದೆ. ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಮಹಾಯುತಿಯ ಮಿತ್ರಪಕ್ಷಗಳು ತಮ್ಮ ಕಾರ್ಯತಂತ್ರವನ್ನು ಅಂತಿಮಗೊಳಿಸುತ್ತಿವೆ. ಚುನಾವಣೆಗೆ ಮೈತ್ರಿ ತಂತ್ರ ಕಾರ್ಯರೂಪಕ್ಕೆ ಬಾರದೇ ಹೋದರೆ ಎನ್‌ಸಿಪಿ ಸ್ವತಂತ್ರವಾಗಿಯೇ ಸ್ಪರ್ಧಿಸಲು ಸಿದ್ಧವಾಗಿದೆ ಎಂದು ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು. ಮಹಾರಾಷ್ಟ್ರಕ್ಕೆ ಸಂಬಂಧಿಸಿ ಎನ್‌ಸಿಪಿಯ ಈ ನಡೆ ಬಿಜೆಪಿ ನೇತೃತ್ವದ 'ಮಹಾಯುತಿ' ಮೈತ್ರಿಕೂಟಕ್ಕೆ ಹಿನ್ನಡೆ ತಂದಿದೆ.



70 ಕ್ಷೇತ್ರಗಳಿಗೆ 1,521 ನಾಮಪತ್ರಗಳ ಸಲ್ಲಿಕೆ

ದೆಹಲಿ: 70 ಸದಸ್ಯ ಬಲದ ದೆಹಲಿ ವಿಧಾನಸಭೆಗೆ ಫೆ.5ರಂದು ಚುನಾವಣೆ ನಡೆಯಲಿದೆ. ಈವರೆಗೆ 70 ವಿಧಾನಸಭಾ ಕ್ಷೇತ್ರಗಳಿಗೆ ಒಟ್ಟಾರೆ 1,521 ನಾಮ ಪತ್ರಗಳು ಸಲ್ಲಿಕೆಯಾಗಿವೆ. ನಾಮಪತ್ರ ಸಲ್ಲಿಕೆಗೆ ಜ.17 ಕೊನೆಯ ದಿನವಾಗಿತ್ತು. 70 ಕ್ಷೇತ್ರಗಳಿಗೆ 981 ಅಭ್ಯರ್ಥಿಗಳು 1,521 ನಾಮಪತ್ರ ಗಳನ್ನು ಸಲ್ಲಿಕೆ ಮಾಡಿದ್ದಾರೆ.

ಶನಿವಾರ ನಾಮಪತ್ರ ಗಳ ಪರಿಶೀಲನೆ ನಡೆದಿದೆ. ನಾಮಪತ್ರ ವಾಪಸ್ ಪಡೆಯಲು ಜ.20 ಕೊನೆ ಯ ದಿನವಾಗಿದೆ. ಚುನಾವಣಾ ಆಯೋಗದ ಮಾಹಿತಿ ಪ್ರಕಾರ 981 ಅಭ್ಯರ್ಥಿಗಳು 1,521 ನಾಮಪತ್ರ ಸಲ್ಲಿಕೆ ಮಾಡಿದ್ದಾರೆ. ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಶುಕ್ರವಾರವೊಂದೇ ದಿನ ದಾಖಲೆ ಪ್ರಮಾಣದಲ್ಲಿ 680 ನಾಮಪತ್ರಗಳು ಸಲ್ಲಿಕೆಯಾಗಿವೆ. ದೆಹಲಿ ಉತ್ತರ ಜಿಲ್ಲೆಯಲ್ಲಿ ಅತಿ ಹೆಚ್ಚು ಎಂದರೆ 183 ನಾಮಪತ್ರಗಳನ್ನು 108 ಅಭ್ಯರ್ಥಿಗಳಿಂದ ಸ್ವೀಕಾರ ಮಾಡಲಾಗಿದೆ. ದೆಹಲಿ ನೈಋತ್ಯ ಜಿಲ್ಲೆಯಲ್ಲಿ 104 ಅಭ್ಯರ್ಥಿಗಳು 170 ನಾಮಪತ್ರಗಳನ್ನು ಸಲ್ಲಿಸಿದ್ದರೆ, ಕೇಂದ್ರ ಜಿಲ್ಲೆಯಲ್ಲಿ 108 ಅಭ್ಯರ್ಥಿಗಳು 154 ನಾಮಪತ್ರಗಳನ್ನು ಸಲ್ಲಿಸಿದ್ದಾರೆ. ನವದೆಹಲಿ ವಿಭಾಗದಲ್ಲಿ 85 ಅಭ್ಯರ್ಥಿಗಳು 135 ನಾಮಪತ್ರ, ವಾಯುವ್ಯದಲ್ಲಿ 90 ಅಭ್ಯರ್ಥಿಗಳು 139, ಆಗ್ನೇಯದಲ್ಲಿ 93 ಅಭ್ಯರ್ಥಿಗಳು 140 ನಾಮಪತ್ರ ಸಲ್ಲಿಸಿದ್ದಾರೆ ಎಂದು ಚುನಾವಣೆ ಆಯೋಗ ಅಂಕಿ ಅಂಶ ನೀಡಿದೆ.

ಸಮಾಚಾರ ಸಣ್ಣದಲ್ಲ

ರಣಜಿ ಟ್ರೋಫಿ: ಕೊಹ್ಲಿ, ರಾಹುಲ್ ಅಲಭ್ಯ

ಮುಂಬೈ: ರಣಜಿ ಟ್ರೋಫಿ ಟೂರ್ನಿಯಲ್ಲಿ ಜಮ್ಮು ಮತ್ತು ಕಾಶ್ಮೀರ ವಿರುದ್ಧ ಮುಂಬೈ ತಂಡದ ಮುಂದಿನ ಪಂದ್ಯಕ್ಕೆ ಲಭ್ಯರಿರುವುದಾಗಿ ಭಾರತ ತಂಡದ ನಾಯಕ ರೋಹಿತ್ ಶರ್ಮಾ ಖಚಿತಪಡಿಸಿದ್ದಾರೆ. ಮುಂಬೈ ಈ ಪಂದ್ಯವನ್ನು ಎಂಸಿಎ- ಬಿಕೆಸಿ ಮೈದಾನದಲ್ಲಿ ಜನವರಿ 23ರಿಂದ ಆಡಲಿದೆ. ಇದೇ ವೇಳೆ ತಾರಾ ವರ್ಚಸ್ಸಿನ ಆಟಗಾರರು ದೇಶಿ ಟೂರ್ನಿಯಲ್ಲಿ ಭಾಗವಹಿಸುವುದಕ್ಕೆ ಸಂಬಂಧಿಸಿ ಪ್ರಸ್ತಾಪಿಸಿದ ಅವರು ಬಿಡುವಿಲ್ಲದ ವೇಳಾಪಟ್ಟಿಯ ನಡುವೆ ಅವರಿಗೂ ವಿರಾಮ ಬೇಕಾಗುತ್ತದೆ. ಯಾರೂ ದೇಶಿ ಕ್ರಿಕೆಟ್ ಟೂರ್ನಿಗಳನ್ನು ಲಘುವಾಗಿ ತೆಗೆದುಕೊಳ್ಳುತ್ತಿಲ್ಲ ಎಂದೂ 37 ವರ್ಷ ವಯಸ್ಸಿನ ರೋಹಿತ್ ಎಂದೂ ಹೇಳಿದ್ದಾರೆ. ಬಿಸಿಸಿಐ ಕೇಂದ್ರ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿ ವೇಳೆ ಅವರು ಮಾತನಾಡಿ, ಕಳೆದ 6-7 ವರ್ಷಗಳಿಂದ ವೇಳಾಪಟ್ಟಿ ಗಮನಿಸಿದರೆ, ಕ್ರಿಕೆಟ್ ನಡೆಯುತ್ತಿರುವಾಗ ವರ್ಷಕ್ಕೆ 45 ದಿನ ಕೂಡ ಸಿಗುವುದಿಲ್ಲ. ಐಪಿಎಲ್ ಮುಗಿದ ಬಳಿಕ ಬಿಡುವು ಇರುತ್ತದೆ. ಆಗ ದೇಶಿ ಕ್ರಿಕೆಟ್ ಕೂಡ ಇರುವುದಿಲ್ಲ ಎಂದು ಹೇಳಿದರು. ದೇಶದ ಕ್ರಿಕೆಟ್ ಋತು ಅಕ್ಟೋಬರ್‌ನಲ್ಲಿ ಆರಂಭವಾಗಿ ಮಾರ್ಚ್‌ವರೆಗೆ ಇರುತ್ತದೆ. ಎಲ್ಲಾ ಮಾದರಿಯಲ್ಲಿ ಆಡದ ಆಟಗಾರರು, ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಆಡಬಹುದು ಎಂದು ರೋಹಿತ್ ಹೇಳಿದ್ದಾರೆ.

ತಾಯಿ ಎದುರೇ ಗುಂಡಿಕ್ಕಿ ಅಥ್ಲೀಟ್ ಕೊಲೆ

ಪೆನ್ಸಿಲ್ವೇನಿಯಾ (ಅಮೆರಿಕ): ಪೆನ್ಸಿಲ್ವೇನಿಯಾದ ಫಿಲಡೆಲ್ಫಿಯಾದ ಸ್ಯಾಮ್ಯುಯೆಲ್ ಫೆಲ್ಸ್ ಹೈಸ್ಕೂಲ್‌ನಲ್ಲಿ 17 ವರ್ಷದ ಬಾಸ್ಕೆಟ್‌ಬಾಲ್ ಆಟಗಾರ ನೋಹ್ ಸ್ಕರ್ರಿ ಎಂಬುವವರನ್ನು ದುಷ್ಕರ್ಮಿಗಳು ಗುಂಡುಹಾರಿಸಿ ಹತ್ಯೆಗೈದ್ದಾರೆ. ಈ ಘಟನೆ ಜನವರಿ 14 ರಂದು ತಡವಾಗಿ ವರದಿಯಾಗಿದೆ. ನೋಹ್ ಸ್ಕರ್ರಿ ತನ್ನ ತಾಯಿಯೊಂದಿಗೆ ಶಾಲೆಗೆ ತೆರಳುತ್ತಿದ್ದ ವೇಳೆ ದುಷ್ಕರ್ಮಿಗಳು ಅವರ ಮೇಲೆ ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ. ಸ್ಕರ್ರಿಯ ತಾಯಿಯ ಕಿರುಚಾಟ ಕೇಳಿದ ಜನರು ಧಾವಿಸುವಷ್ಟರಲ್ಲಿ ದುಷ್ಕರ್ಮಿಗಳು ಪರಾರಿಯಾಗಿದ್ದಾರೆ. ನೋಹ್ ಸ್ಕರ್ರಿ ಬಾಸ್ಕೆಟ್ ಬಾಲ್ ಆಟಗಾರ ಮಾತ್ರವಲ್ಲದೇ ರ್‍ಯಾಪ್ ಹಾಡುಗಳನ್ನು ಹಾಡುತ್ತಿದ್ದರು. ಮುಖದ ಮೇಲೆ ಜೋಕರ್ ಮುಖವಾಡವಿರುವ ಮಾಸ್ಕ ಧರಿಸಿ ರ್‍ಯಾಪ್ ಹಾಡಿನ ವಿಡಿಯೊ ಬಿಡುಗಡೆ ಮಾಡಿದ್ದರು. ಈ ವಿಡಿಯೊ ಬಿಡುಗಡೆ ಮಾಡಿದ 24 ಗಂಟೆಗಳ ನಂತರ ಸ್ಕರ್ರಿಯನ್ನು ಗುಂಡಿಕ್ಕಿ ಕೊಲ್ಲಲಾಗಿದೆ.

ವಿರಾಮ
ಪ್ರತಿ ಭಾನುವಾರ

ದಾಖಲೆಯ 5ನೇ ಬಾರಿ ಗೆದ್ದ ಮಯಾಂಕ್ ಪಡೆ | ಉತ್ತಮ ಪ್ರದರ್ಶನದ ನಡುವೆಯೂ ಸೋತ ವಿದರ್ಭ

ಕರ್ನಾಟಕದ ಮುಡಿಗೆ ವಿಜಯ್ ಹಜಾರೆ ಟ್ರೋಫಿ

ಅಹಮದಾಬಾದ್: ವಡೋದರಾದಲ್ಲಿ ಶನಿವಾರ ನಡೆದ ವಿಜಯ್ ಹಜಾರೆ ಟೂರ್ನಿಯ ಅಂತಿಮ ಪಂದ್ಯದಲ್ಲಿ ವಿದರ್ಭ ತಂಡವನ್ನು ಸೋಲಿಸಿ ಐದನೇ ಬಾರಿಗೆ ಟ್ರೋಫಿ ತನ್ನದಾಗಿಸುವಲ್ಲಿ ಕರ್ನಾಟಕ ತಂಡ ಯಶಸ್ವಿಯಾಗಿದೆ. ಕರುಣ್ ನಾಯರ್ ನೇತೃತ್ವದ ವಿದರ್ಭ ತಂಡವನ್ನು ಮಣಿಸಿದ ಕರ್ನಾಟಕ ದಾಖಲೆಯ ಬಾರಿ ಟ್ರೋಫಿಯನ್ನು ತನ್ನ ಮುಡಿಗೇರಿಸಿಕೊಂಡಿದೆ. ರೋಚಕ ಹೋರಾಟದಲ್ಲಿ ದಿಟ್ಟ ಹೋರಾಟ ನೀಡಿದ ಮಯಾಂಕ್ ಪಡೆ ಅರ್ಹವಾಗಿಯೇ ಚಾಂಪಿಯನ್ ಆಗಿ ಹೊರಹೊಮ್ಮಿದೆ.

ದೇಶಿಯ ಕ್ರಿಕೆಟ್‌ನಲ್ಲಿ ಕರ್ನಾಟಕದ ಗತವೈಭವ ಮರುಕಳಿಸುತ್ತಿದೆ. ವಿಜಯ್ ಹಜಾರೆ ಟೂರ್ನಿಯ ಅಂತಿಮ ಪಂದ್ಯದಲ್ಲಿ ವಿದರ್ಭ ತಂಡಕ್ಕೆ ಸೋಲುಣಿಸಿದ ಕರ್ನಾಟಕ ತಂಡ, ಚಾಂಪಿಯನ್ ಪಟ್ಟ ಅಲಂಕರಿಸಿದೆ. ವಿದರ್ಭ ವಿರುದ್ಧ ಕರ್ನಾಟಕ 36 ರನ್ ಗೆಲುವು ದಾಖಲಿಸಿದೆ. ಕರ್ನಾಟಕ ನೀಡಿದ 348 ರನ್ ಬೃಹತ್ ಗುರಿಯ ಬೆನ್ನುಹತ್ತಿದ ವಿದರ್ಭ 312 ರನ್‌ಗೆ ಎಲ್ಲ ವಿಕೆಟ್ ಕಳೆದುಕೊಂಡು ಸೋಲೊಪ್ಪಿಕೊಂಡಿತು. ಈ ಮೂಲಕ ಕರ್ನಾಟಕ 5ನೇ ಬಾರಿಗೆ ವಿಜಯ್ ಹಜಾರೆ ಟ್ರೋಫಿ ಗೆದ್ದ ಸಾಧನೆ ಮಾಡಿದೆ.

ಆದರೆ, ಚೊಚ್ಚಲ ಟ್ರೋಫಿ ಗೆಲ್ಲುವ ವಿದರ್ಭ ಕನಸು ಭಗ್ನಗೊಂಡಿದೆ. ಕರ್ನಾಟಕದ ಮಾಜಿ ಆಟಗಾರ ಕರುಣ್ ನಾಯರ್ ನಾಯಕತ್ವದಲ್ಲಿ ಹೊಸ ಉತ್ಸಾಹದಲ್ಲಿ ಉತ್ತಮ ಪ್ರದರ್ಶನದ ಮೂಲಕ ವಿದರ್ಭ ತಂಡ ಅಂತಿಮ ಹಂತ ಪ್ರವೇಶಿಸಿತ್ತು. ಆದರೆ ಫೈನಲ್‌ನಲ್ಲಿ ಗೆಲುವಿನ ದಡ ಮುಟ್ಟಲು ಆ ತಂಡ ವಿಫಲವಾಯಿತು.

ಕರ್ನಾಟಕದ ದಾಳಿಗೆ ಕುಸಿದ ವಿದರ್ಭ: ಸಮರನ್ ರವಿಚಂದ್ರನ್ ಶತಕ, ಕೃಷ್ಣನ್ ಶ್ರೀಜಿತ್ ಹಾಗೂ ಅಭಿನವ್ ಮನೋಹರ್ ಅವರ ಅರ್ಧ ಶತಕಗಳ ನೆರವಿನಿಂದ ಕರ್ನಾಟಕ 6 ವಿಕೆಟ್ ನಷ್ಟಕ್ಕೆ 348 ರನ್ ಗಳಿಸಿತು. ಇದಕ್ಕೆ ಉತ್ತರವಾಗಿ ವಿದರ್ಭ ದಿಟ್ಟ ಹೋರಾಟ ನೀಡಿದರೂ ಗೆಲುವು ಪಡೆಯಲಾಗಲಿಲ್ಲ. ಧ್ರುವ್ ಶೋರೆ ಸ್ಫೋಟಕ ಬ್ಯಾಟಿಂಗ್ ಮೂಲಕ ಶತಕ(110 ರನ್) ಸಿಡಿಸಿದ್ದರು. ಆದರೆ ಪ್ರಸಿದ್ಧ್ ಕೃಷ್ಣ ವಾಸುಕಿ ಕೌಶಿಕ್ , ಅಭಿಲಾಷ್ ಶೆಟ್ಟಿ ಹಾಗೂ ಹಾರ್ದಿಕ್ ರಾಜ್‌ರ ಮಾರಕ ದಾಳಿಗೆ ವಿದರ್ಭ ದಿಢೀರ್ ಕುಸಿಯಿತು.

ಅಂತಿಮ ಹಂತದಲ್ಲಿ ಹರ್ಷಾ ದುಬೆ ಹೋರಾಟ ನೀಡಿದರೂ ತಂಡವನ್ನು ಗೆಲುವಿನ ದಡ ಸೇರಿಸಲು ಸಾಧ್ಯವಾಗಲಿಲ್ಲ. ಕರ್ನಾಟದ ದಿಟ್ಟ ಬೌಲಿಂಗ್ ದಾಳಿಗೆ ವಿದರ್ಭ 48.2 ಓವರ್ಗಳಲ್ಲಿ 312 ರನ್‌ಗೆ ಸರ್ವಪತನ ಕಂಡಿತು. ಈ ಮೂಲಕ 36 ರನ್ ಗೆಲುವು ಕರ್ನಾಟಕದ ಪಾಲಾಯಿತು.

2020ರ ಬಳಿಕ ಕರ್ನಾಟಕ ವಿಜಯ್ ಹಜಾರೆ ಟ್ರೋಫಿ ಗೆಲ್ಲುವಲ್ಲಿ ವಿಫಲವಾಗಿತ್ತು. ಆದರೆ ಈ ಬಾರಿ ಪ್ರಶಸ್ತಿ ಕೊರತೆ ನೀಗಿಸಿದೆ. ನಾಲ್ಕು ವರ್ಷಗಳ ಬಳಿಕ ವಿಜಯ್ ಹಜಾರೆ ಟ್ರೋಫಿಯನ್ನು ಕರ್ನಾಟಕ ಗೆದ್ದಿದೆ. 2019-20ರ ಸಾಲಿನಲ್ಲಿ ಕರ್ನಾಟಕ ಕೊನೆಯದಾಗಿ ವಿಜಯ್ ಹಜಾರೆ ಟ್ರೋಫಿ ಗೆದ್ದಿತ್ತು. 2013-14 ಸಾಲಿನಲ್ಲಿ ಮೊದಲ ಬಾರಿಗೆ ಗೆದ್ದಿದ್ದರೆ, 2014-15ನೇ ಸಾಲಿನಲ್ಲೂ ಗೆದ್ದಿತ್ತು. ಗೆದ್ದುಕೊಂಡಿತ್ತು. ಬಳಿಕ 2017-18 ಹಾಗೂ 2019-20ರಲ್ಲಿ ಈ ಗೆಲುವನ್ನು ಪುನರಾವರ್ತಿಸಿತ್ತು.

> **ಕರ್ನಾಟಕಕ್ಕೆ 21ನೇ ದೇಸಿ ಕಿರೀಟ**
>
> **ದೇಶಿ ಕ್ರಿಕೆಟ್ ಲ್ಲಿ ಕರ್ನಾಟಕ 21ನೇ ಟ್ರೋಫಿ ಗೆದ್ದ ಸಾಧನೆ ಮಾಡಿದೆ. 8 ಬಾರಿ ರಣಜಿ ಟ್ರೋಫಿ ಗೆದ್ದಿದ್ದರೆ, 6 ಬಾರಿ ಇರಾನ್ ಕಪ್ ಸಾಧನೆ ಮಾಡಿದೆ. 5 ಬಾರಿ ವಿಜಯ್ ಹಜಾರೆ ಟ್ರೋಫಿ, 2 ಬಾರಿ ಮುಷ್ತಾಕ್ ಅಲಿ ಟಿ20 ಟೂರ್ನಿ ಟ್ರೋಫಿಯನ್ನು ಗೆದ್ದಿದೆ.**

ಟಿ20 ಪಂದ್ಯ: ಕೋಲ್ಕತ್ತಕ್ಕೆ ಬಂದಿಳಿದ ಆಟಗಾರರು

ಕೋಲ್ಕತ್ತ: ವಿಶ್ವ ಚಾಂಪಿಯನ್ ಭಾರತ ಮತ್ತು ಪ್ರವಾಸಿ ಇಂಗ್ಲೆಂಡ್ ತಂಡದ ಆಟಗಾರರು, ಬುಧವಾರ ಆರಂಭವಾಗಲಿರುವ ಟಿ20 ಸರಣಿಯ ಮೊದಲ ಪಂದ್ಯ ಆಡಲು ಶನಿವಾರ ಪ್ರತ್ಯೇಕ ಬ್ಯಾಚ್‌ಗಳಲ್ಲಿ ಇಲ್ಲಿಗೆ ಬಂದಿಳಿದರು.

ಸುಮಾರು ಮೂರು ವರ್ಷಗಳ ನಂತರ ಇದೇ ಮೊದಲ ಬಾರಿ ಈಡನ್ ಗಾರ್ಡನ್‌ನಲ್ಲಿ ಟಿ20 ಅಂತಾರಾಷ್ಟ್ರೀಯ ಪಂದ್ಯ ನಡೆಯುತ್ತಿದ್ದು ಕ್ರಿಕೆಟ್ ಜ್ವರ ಏರುತ್ತಿದೆ. ಇಂಗ್ಲೆಂಡ್ ಹಾಲಿ ಪ್ರವಾಸದಲ್ಲಿ ಐದು ಟಿ20 ಪಂದ್ಯಗಳನ್ನು ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ. ಇದು ಎರಡೂ ತಂಡಗಳಿಗೆ ಫೆ. 19ರಿಂದ ಪಾಕಿಸ್ತಾನ ಮತ್ತು

ದುಬೈನಲ್ಲಿ ನಡೆಯುವ ಚಾಂಪಿಯನ್ಸ್ ಟ್ರೋಫಿಗೆ ಸಿದ್ಧತೆ ನಡೆಸಲು ಇರುವ ಕೊನೆಯ ಅವಕಾಶವಾಗಿದೆ.

ಆಲ್ರೌಂಡರ್ ಲಿಯಾಮ್ ಲಿವಿಂಗ್ಸ್ಟೋನ್ ಇಲ್ಲಿಗೆ ತಲುಪಿದ ಮೊದಲ ಆಟಗಾರ ಎನಿಸಿದರು. ಅವರು ಎಸ್‌ಎ ಟಿ20 ಲೀಗ್‌ನಲ್ಲಿ ಭಾಗವಹಿಸಿದ್ದು ದಕ್ಷಿಣ ಆಫ್ರಿಕಾದಿಂದ ನೇರವಾಗಿ ಇಲ್ಲಿಗೆ ಬಂದಿಳಿದರು. ದುಬೈನಲ್ಲಿ ತರಬೇತಿಯಲ್ಲಿದ್ದ ಜೋಸ್ ಬಟ್ಲರ್ ಬಳಗದ ಇತರ ಆಟಗಾರರು ಸಂಜೆ ಬಂದಿಳಿದರು. ಭಾರತ ತಂಡದ ಆಟಗಾರರೂ ತವರು ಊರಿನಿಂದ ಇಲ್ಲಿಗೆ ತಲುಪಿದರು. ಉದಯೋನ್ಮುಖ ಆಟಗಾರರಾದ ನಿತೀಶ್ ಕುಮಾರ್ ರೆಡ್ಡಿ ಮತ್ತು ರಿಂಕು ಸಿಂಗ್ ಸಂಜೆ ತಲುಪಿದರು. ನಾಯಕ ಸೂರ್ಯಕುಮಾರ್ ಯಾದವ್ ಅವರು ತಿಲಕ್ ವರ್ಮಾ, ಹೆಡ್ ಕೋಚ್ ಗೌತಮ್ ಗಂಭೀರ್ ಮತ್ತು ಉಳಿದ ಆಟಗಾರರು ನಂತರ ಬಂದಿಳಿದರು.

ಚಾಂಪಿಯನ್ಸ್ ಟ್ರೋಫಿಗೆ ಭಾರತ ತಂಡ ಪ್ರಕಟ, ಬುಮ್ರಾ, ಶಮಿ ವಾಪಸ್

ಟೀಮ್ ಇಂಡಿಯಾಗೆ ಮತ್ತೆ ರೋಹಿತ್ ಶರ್ಮಾ ನಾಯಕ

ಮುಂಬೈ: ಪಾಕಿಸ್ತಾನದಲ್ಲಿ ಹೈಬ್ರಿಡ್ ಮಾದರಿಯಲ್ಲಿ ನಡೆಯಲಿರುವ ಐಸಿಸಿ ಚಾಂಪಿಯನ್ಸ್ ಟ್ರೋಫಿಗಾಗಿ ಭಾರತದ ಪ್ರಬಲ ತಂಡವನ್ನು ಪ್ರಕಟಿಸಲಾಗಿದೆ. ರೋಹಿತ್ ಶರ್ಮಾಗೆ ಮತ್ತೆ ನಾಯಕತ್ವದ ಹೊಣೆ ನೀಡಲಾಗಿದ್ದು, ಅಚ್ಚರಿಯೆಂಬಂತೆ ಪ್ರಮುಖ ಬ್ಯಾಟ್ಸ್‌ಮನ್ ಶುಭಮನ್ ಗಿಲ್ ರನ್ನು ಉಪನಾಯಕರನ್ನಾಗಿ ಮಾಡಲಾಗಿದೆ. ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ನಾಯಕ ರೋಹಿತ್ ಶರ್ಮಾ ಜತೆ ಶನಿವಾರ ಚಾಂಪಿಯನ್ಸ್ ಟ್ರೋಫಿಗಾಗಿ ತಂಡದ ಸದಸ್ಯರನ್ನು ಪ್ರಕಟಿಸಿದರು.

ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿ ಆಡಿದ ತಂಡವನ್ನೇ ಚಾಂಪಿಯನ್ಸ್ ಟ್ರೋಫಿಗೆ ಉಳಿಸಿಕೊಳ್ಳಲಾಗಿದೆ. ಎಂದಿನಂತೆ ರೋಹಿತ್ ಶರ್ಮಾ ಅವರೇ ತಂಡವನ್ನು ಮುನ್ನಡೆಸಲಿದ್ದು, ಶುಭಮನ್ ಗಿಲ್ ಉಪನಾಯಕರಾಗಿದ್ದಾರೆ ಎಂದು ಅಗರ್ಕರ್ ಸ್ಪಷ್ಟಪಡಿಸಿದರು.

ಗಾಯದ ಸಮಸ್ಯೆ ಎದುರಿಸುತ್ತಿರುವ ವೇಗದ ದಾಳಿಕಾರ ಜಸ್ಪ್ರೀತ್ ಬುಮ್ರಾ ಅವರನ್ನು ಆಯ್ಕೆ ಮಾಡಲಾಗಿದ್ದು, ಗಾಯದಿಂದ ಚೇತರಿಸಿಕೊಂಡಿರುವ ಮೊಹಮ್ಮದ್ ಶಮಿ ತಂಡಕ್ಕೆ ವಾಪಸಾಗಿದ್ದಾರೆ. ಅಚ್ಚರಿಯೆಂಬಂತೆ ಮತ್ತೊಬ್ಬ ವೇಗದ ಬೌಲರ್ ಮೊಹಮ್ಮದ್ ಸಿರಾಜ್‌ರನ್ನು ಕೈ ಬಿಡಲಾಗಿದೆ. ವಿರಾಟ್ ಕೊಹ್ಲಿ, ರಾಹುಲ್ , ಹಾರ್ದಿಕ್ ಪಾಂಡ್ಯ ಸೇರಿದಂತೆ ಬಹುತೇಕ ಪ್ರಮುಖ ಆಟಗಾರರಿರುವ ಪ್ರಬಲ ತಂಡವನ್ನೇ ಆಯ್ಕೆಮಾಡಲಾಗಿದೆ ಎಂದು ಅಗರ್ಕರ್ ವಿವರಿಸಿದರು.

ಮತ್ತೆ ಬಂದ ಶಮಿ: ಗಾಯದ ಸಮಸ್ಯೆಯಿಂದ ಸುದೀರ್ಘ ಕಾಲ ಮೈದಾನದಿಂದ ಹೊರಗಿದ್ದ ಪ್ರಮುಖ ವೇಗದ ಬೌಲರ್ ಮೊಹಮ್ಮದ್ ಶಮಿ ತಂಡಕ್ಕೆ ಮರಳಿದ್ದಾರೆ. ಭಾರತ ತಂಡದಲ್ಲಿ ನಿರಂತರವಾಗಿ ಅವಕಾಶ ಪಡೆಯುತ್ತಿದ್ದ ಸಿರಾಜ್ ಸ್ಥಾನ ಪಡೆಯಲು ವಿಫಲರಾಗಿದ್ದಾರೆ.

ಸಂಜು, ಕರುಣ್, ನಿತೀಶ್‌ಗೆ ಜಾಗವಿಲ್ಲ: ಇನ್ನೊಂದೆಡೆ ಭಾರತ ತಂಡದಲ್ಲಿ ಸ್ಥಾನ ಪಡೆಯುವ ನಿರೀಕ್ಷೆಯಲ್ಲಿದ್ದ ಸಂಜು ಸ್ಯಾಮ್ಸನ್,

ಅದ್ಭುತ ಫಾರ್ಮ್‌ಲ್ಲಿರುವ ಕನ್ನಡಿಗ ಕರುಣ್ ನಾಯರ್ ಹಾಗೂ ಆಸ್ಟ್ರೇಲಿಯಾ ವಿರುದ್ಧದ ಟೆಸ್ಟ್ ಸರಣಿಯ ಹೀರೋ ನಿತೀಶ್ ರೆಡ್ಡಿ ತಂಡಕ್ಕೆ ಆಯ್ಕೆಯಾಗಲು ವಿಫಲವಾಗಿದ್ದು ಭಾರೀ ನಿರಾಸೆ ಅನುಭವಿಸಿದ್ದಾರೆ.

'ಅತ್ಯುತ್ತಮ ಪ್ರದರ್ಶನ ನೀಡುತ್ತಿರುವ ಕರುಣ್ ನಾಯರ್ ಬಗ್ಗೆ ಆಯ್ಕೆ ಸಮಿತಿ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಯಿತಾದರೂ ಅವರನ್ನು ಆಯ್ಕೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಅಜಿತ್ ಅಗರ್ಕರ್ ಹೇಳಿದರೆ, ಮೊಹಮ್ಮದ್ ಸಿರಾಜ್ ಪ್ರದರ್ಶನದಲ್ಲಿ ಸ್ವಲ್ಪ ಇಳಿಮುಖವಾಗಿದ್ದು, ಅವರನ್ನು ತಂಡದಿಂದ ಕೈಬಿಡಲೇಬೇಕಾಯಿತು ಎಂದು ನಾಯಕ ರೋಹಿತ್ ಶರ್ಮಾ ಸ್ಪಷ್ಟನೆ ನೀಡಿದರು.

ಭಾರತ ತಂಡದ ವಿವರ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್ (ಉಪನಾಯಕ), ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆಎಲ್ ರಾಹುಲ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ವಾಷಿಂಗ್ಟನ್ ಸುಂದರ್, ಕುಲದೀಪ್ ಯಾದವ್, ಜಸ್ಪ್ರೀತ್ ಬುಮ್ರಾ, ಮೊಹಮ್ಮದ್ ಶಮಿ, ಅರ್ಷದೀಪ್ ಸಿಂಗ್ , ಯಶಸ್ವಿ ಜೈಸ್ವಾಲ್, ರಿಷಭ್ ಪಂತ್ ಹಾಗೂ ರವೀಂದ್ರ ಜಡೇಜಾ.

ರಾಣಾ ಮೀಸಲು ಆಟಗಾರ: ಜಸ್ಪ್ರೀತ್ ಬೂಮ್ರಾ ಫಿಟ್ನೆಸ್ ಬಗ್ಗೆ ಅನುಮಾನಗಳಿದ್ದು, ಇಂಗ್ಲೆಂಡ್ ವಿರುದ್ಧದ ಮೊದಲ ಒಂದೆರಡು ಪಂದ್ಯಗಳಿಗೆ ಅವರು ಲಭ್ಯವಾಗದಿರುವ ಸಾಧ್ಯತೆ ಇದೆ. ಅವರ ಸ್ಥಾನಕ್ಕೆ ಹರ್ಷಿತ್ ರಾಣಾ ಮೀಸಲು ಆಟಗಾರರಾಗಿದ್ದಾರೆ ಎಂದು ಆಯ್ಕೆ ಸಮಿತಿ ಮುಖ್ಯಸ್ಥರು ಅಜಿತ್ ಅಗರ್ಕರ್ ಸ್ಪಷ್ಟಪಡಿಸಿದರು.

> **ಕರುಣ್ ಆಯ್ಕೆಯಾಗದ ಬಗ್ಗೆ ಅಗರ್ಕರ್ ಸ್ಪಷ್ಟನೆ**
>
> **ದೇಶೀ ಕ್ರಿಕೆಟ್‌ನಲ್ಲಿ ರನ್ ಸುರಿಮಳೆ ಗೈಯುತ್ತಿದ್ದರೂ ಚಾಂಪಿಯನ್ಸ್ ಟ್ರೋಫಿಗಾಗಿ ರಾಷ್ಟ್ರೀಯ ತಂಡಕ್ಕೆ ಕರುಣ್ ನಾಯರ್ ಆಯ್ಕೆಯಾಗದ ಪರಿಸ್ಥಿತಿ ಬಗ್ಗೆ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರ್ಕರ್ ಸ್ಪಷ್ಟನೆ ನೀಡಿದ್ದಾರೆ. ವಿಜಯ್ ಹಜಾರೆ ಕೂಡ ಟ್ರೋಫಿಯಲ್ಲಿ ಅವರ ಸಾಧನೆಯನ್ನು ಶ್ಲಾಘಿಸಿದರು. ವಿಜಯ್ ಹಜಾರೆ ಟ್ರೋಫಿಯಲ್ಲಿ ಅವರು ಅದ್ಭುತ ಪ್ರದರ್ಶನ ನೀಡುತ್ತಿದ್ದಾರೆ. ನಾವು ಆತನ ಬಗ್ಗೆ ಚರ್ಚಿಸಿದ್ದೇವೆ. ಒಂದೇ ಋತುವಿನಲ್ಲಿ 700ಕ್ಕೂ ಹೆಚ್ಚು ರನ್ ಗಳಿಸುವುದು ಸಾಮಾನ್ಯ ಸಂಗತಿಯಲ್ಲ. ಆದರೆ ಇದು ಕೇವಲ 15 ಆಟಗಾರರ ತಂಡ. ಹಾಗಾಗಿ ಪ್ರಸ್ತುತ ತಂಡದಲ್ಲಿ ಎಲ್ಲರಿಗೂ ಅವಕಾಶ ಕಷ್ಟ. ಯಾರಾದರೂ ಗಾಯಗೊಂಡರೆ ಕರುಣ್ ನಾಯರ್ ಹೆಸರನ್ನು ಪರಿಶೀಲಿಸುತ್ತೇವೆ ಎಂದು ಅಗರ್ಕರ್ ಸ್ಪಷ್ಟಪಡಿಸಿದರು. ವಿಜಯ್ ಹಜಾರೆಯಲ್ಲಿ ನಾಯರ್ ಅದ್ಭುತ ಬ್ಯಾಟಿಂಗ್ ಸದ್ಯ ನಡೆಯುತ್ತಿರುವ ವಿಜಯ್ ಹಜಾರೆ ಟ್ರೋಫಿ ಪಂದ್ಯಾವಳಿಯಲ್ಲಿ ಕರುಣ್ ನಾಯರ್‌ಅಭೂತಪೂರ್ವ ಪ್ರದರ್ಶನ ನೀಡುತ್ತಿದ್ದಾರೆ. ಏಳು ಇನ್ನಿಂಗ್ಸ್‌ನಲ್ಲಿ 752 ರನ್ ಗಳಿಸಿದ್ದಾರೆ. ನಾಲ್ಕು ಬಾರಿ ಔಟಾಗದೆ ಮೂರು ಶತಕ, ಒಂದು ಅರ್ಧಶತಕ ಗಳಿಸಿದ್ದು, ಒಟ್ಟಾರೆ ಐದು ಶತಕ ಗಳಿಸುವ ಮೂಲಕ ಅದ್ವಿತೀಯ ಸಾಧನೆ ಮೆರೆದಿದ್ದಾರೆ.**

ವಿಟಾಕೀಸ್

ಹೈನ ಟ್ರೇಲರ್ ರಿಲೀಸ್

ವೆಂಕಟ್ ಭಾರದ್ವಾಜ್ ಚಿತ್ರಕಥೆ ಬರೆದು ನಿರ್ದೇಶಿಸಿರುವ ವಿಭಿನ್ನ ಕಥಾಹಂದರ ಹೊಂದಿರುವ ಹೈನ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಸಂಸದ ತೇಜಸ್ವಿ ಸೂರ್ಯ ಹೈನ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ಹೈನ ಚಿತ್ರದಲ್ಲಿ ಸಾಮಾಜಿಕ ಸಂದೇಶವಿದೆ. ಅದರ ಜತೆಗೆ ಪ್ರಚಲಿತ ವಿಷಯ ಮುಂದಿಟ್ಟುಕೊಂಡು ಜನರಲ್ಲಿ ಅರಿವು ಮೂಡಿಸುವ ಪ್ರಯತ್ನ ಕೂಡ ಈ ಚಿತ್ರದಲ್ಲಿದೆ ಎಂದು ತೇಜಸ್ವಿ ಸೂರ್ಯ ಹೇಳಿದರು.

ಹೈನ ಥ್ರಿಲ್ಲರ್ ಸ್ಟೋರಿ ಸಿನಿಮಾವಾಗಿದ್ದು, ರಾಷ್ಟ್ರಭಕ್ತಿಯ ಕಥೆ ಅಡಕವಾಗಿದೆ. ಗುಪ್ತಚರ ಇಲಾಖೆ, ಪೊಲೀಸ್ ಇಲಾಖೆ ಹಾಗೂ ರಕ್ಷಣಾ ಇಲಾಖೆಯ ಕಾರ್ಯವೈಖರಿಯ ಬಗ್ಗೆ ನಮ್ಮ ಚಿತ್ರದಲ್ಲಿ ತೋರಿಸಲಾಗಿದೆ. ನಮ್ಮ ಚಿತ್ರದಲ್ಲಿ ಬೇರೆ ಕೆಲವು ದೇಶಗಳ ಹೆಸರನ್ನು ಬಳಸಿದ್ದೆವು. ಆ ಹೆಸರನ್ನು ಬಳಸದಂತೆ ಸೆನ್ಸಾರ್ ಮಂಡಳಿ ಹೇಳಿದೆ. ಅದು ಸ್ವಲ್ಪ ಬೇಸರತರಿಸಿದೆ. ಉಳಿದಂತೆ ಚಿತ್ರತಂಡದ ಸಹಕಾರದಿಂದ ಹೈನ ಚಿತ್ರ ಚೆನ್ನಾಗಿ ಮೂಡಿಬಂದಿದೆ ಎಂದು ನಿರ್ದೇಶಕ ವೆಂಕಟ್ ಭಾರದ್ವಾಜ್ ತಿಳಿಸಿದರು.

ಹರ್ಷ ಅರ್ಜುನ್, ದಿಗಂತ್ ಸ್ವರೂಪ, ರಾಜ್ ಕಮಲ್, ಲಕ್ಷ್ಮಣ ಶಿವಶಂಕರ್, ನಂದಕಿಶೋರ್, ಲಾರೆನ್ಸ್ ಪ್ರೀತಂ ತಾರಾಗಣದಲ್ಲಿದ್ದಾರೆ. ವೆಂಕಟ್ ಭಾರದ್ವಾಜ್ ಹಾಗೂ ರಾಜ್ ಕಮಲ್ ಜಂಟಿಯಾಗಿ ಚಿತ್ರ ನಿರ್ಮಾಣ ಮಾಡಿದ್ದಾರೆ. ನಿಶಾಂತ್ ನಾಣಿ ಛಾಯಾಗ್ರಹಣ, ಶಮೀಕ್ ಸಂಕಲನ ಈ ಚಿತ್ರಕ್ಕಿದೆ.

ಸಮುದ್ರ ಮಂಥನಕ್ಕೆ ಸಿದ್ಧವಾದ ಸಚಿನ್

ಒಂದು ಶಿಕಾರಿಯ ಕಥೆ ಹೇಳಿ ಪ್ರೇಕ್ಷಕರ ಮನಗೆದ್ದ ಸಚಿನ್, ಈಗ ಸಮುದ್ರ ಮಂಥನಕ್ಕೆ ಸಿದ್ಧವಾಗಿದ್ದಾರೆ. ಹೌದು, ಸಚಿನ್ ಸಮುದ್ರ ಮಂಥನ ಎಂಬ ಕುತೂಹಲಕಾರಿ ಟೈಟಲ್‌ನೊಂದಿಗೆ ಸಸ್ಪೆನ್ಸ್, ಥ್ರಿಲ್ಲರ್ ಕಥೆಯನ್ನು ಹೇಳಲು ಬರುತ್ತಿದ್ದಾರೆ. ಈ ಹಿಂದೆ ವಿಕಿಪೀಡಿಯ ಚಿತ್ರದಲ್ಲಿ ನಟಿಸಿದ್ದ ಯಶವಂತ್ ಕುಮಾರ್ ಈ ಚಿತ್ರದಲ್ಲಿಯೂ ನಾಯಕನಾಗಿ ನಟಿಸುತ್ತಿದ್ದಾರೆ. ಮಂದಾರ ಬಟ್ಟಲಹಳ್ಳಿ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಮಂದಾರ ಬಟ್ಟಲಹಳ್ಳಿ ಕಳೆದ ವರ್ಷ ಬಿಡುಗಡೆಯಾಗಿ ಯಶಸ್ಸು ಕಂಡ ಬ್ಲಿಂಕ್ ಚಿತ್ರದಲ್ಲಿಯೂ ನಾಯಕಿಯಾಗಿ ಅಭಿನಯಿಸಿದ್ದರು. ಸದ್ಯ ಈ ಚಿತ್ರ ಸದ್ಯ ಪ್ರೀ ಪ್ರೊಡಕ್ಷನ್ ಹಂತದಲ್ಲಿದ್ದು ಶೀಘ್ರದಲ್ಲಿಯೇ ಚಿತ್ರತಂಡ ಶೂಟಿಂಗ್‌ಗೆ ಹೊರಡಲಿದೆ. ಇದೊಂದು ಸಸ್ಪೆನ್, ಥ್ರಿಲ್ಲರ್ ಸಿನಿಮಾವಾಗಿದ್ದು ಕರಾವಳಿ ಪ್ರದೇಶದ ಹಿನ್ನೆಲೆಯಲ್ಲಿ ಕಥೆ ಸಾಗಲಿದೆ. ಭಿನ್ನ ನಿರೂಪಣೆಯಲ್ಲಿ ಮೂಡಿಬರಲಿದೆ. ಮನರಂಜನೆಯು ಬೇರೆಯದೆ ಮಜಲು ಪಡೆಯುತ್ತಿರುವ ಇಂದಿನ ಯುಗದಲ್ಲಿ ಪ್ರೇಕ್ಷಕರು ಖಂಡಿತ ಗಾಢವಾದ ಕಥೆಯನ್ನು ಚಿತ್ರದಿಂದ ಅಪೇಕ್ಷಿಸುತ್ತಾರೆ. ಅದನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಸಮೃದ್ಧವಾದ ಕಥೆ, ಚಿತ್ರಕಥೆ ಹೆಣೆದು, ಚಿತ್ರೀಕರಣಕ್ಕೆ ಹೊರಡಲು ಅಣಿಯಾಗಿದ್ದೇವೆ ಎನ್ನುತ್ತಾರೆ ನಿರ್ದೇಶಕ ಸಚಿನ್ ಶೆಟ್ಟಿ, ರಫ್ ಕಟ್ ಪ್ರೊಡಕ್ಷನ್ಸ್, ಎ ಸ್ಕ್ವೇರ್ ಪಿಕ್ಚರ್ಸ್ ಮತ್ತು ಆರುಷ್ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಚಿತ್ರ ನಿರ್ಮಾಣವಾಗುತ್ತಿದೆ.

ಸಲಗನಿಗೆ ಹುಟ್ಟು ಹಬ್ಬದ ಸಂಭ್ರಮ

ಸ್ಯಾಂಡಲ್‌ವುಡ್ ಸಲಗ ದುನಿಯಾ ವಿಜಯ್‌ಗೆ ಹುಟ್ಟುಹಬ್ಬದ ಸಂಭ್ರಮ. ವಿಜಯ್ ಬರ್ತ್‌ಡೇ ಎಂದರೆ ಸಂಭ್ರಮ ಮನೆ ಮಾಡಿರುತ್ತದೆ. ದೂರದೂರಿನಿಂದ ಬರುವ ಅಭಿಮಾನಿಗಳು ತಮ್ಮ ನೆಚ್ಚಿನ ನಟನ ಹುಟ್ಟುಹಬ್ಬಕ್ಕೆ ಶುಭಕೋರಿ ಸಂಭ್ರಮಿಸುತ್ತಾರೆ. ವಿಜಯ್ ತಮ್ಮ ತಂದೆ ತಾಯಿಯ ಸಮಾಧಿ ಸ್ಥಳಕ್ಕೆ ಪೂಜೆ ಸಲ್ಲಿಸುವ ಮೂಲಕ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿದ್ದರು. ಆದರೆ ಈ ಬಾರಿ ಹುಟ್ಟುಹಬ್ಬ ಆಚರಿಸಿಕೊಳ್ಳದಿರಲು ನಿರ್ಧರಿಸಿದ್ದಾರೆ. ಈ ಕುರಿತಂತೆ ಅಭಿಮಾನಿಗಳಿಗೆ ಪತ್ರ ಬರೆದಿರುವ ವಿಜಯ್, ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದಾರೆ.

ನನ್ನ ಪ್ರೀತಿಯ ಅಭಿಮಾನಿಗಳೇ, ಪ್ರತಿ ವರ್ಷವೂ ನನ್ನ ಹುಟ್ಟು ಹಬ್ಬವನ್ನು ನಿಮ್ಮ ಮನೆಯ, ಊರಿನ ಹಬ್ಬವನ್ನಾಗಿ ನೀವುಗಳು ಅಂದರೆ ನನ್ನ ಅಭಿಮಾನಿಗಳು ಆಚರಣೆ ಮಾಡ್ತಿದ್ರಿ. ಈ ಬಾರಿಯೂ ನಿಮ್ಮ ಜತೆ ನಾನು ಹುಟ್ಟು ಹಬ್ಬವನ್ನು ಆಚರಿಸಬೇಕು ಎಂಬ ಆಸೆ ಇತ್ತು. ಆದರೆ ಕೆಲಸ ಎಂಬ ಜವಬ್ದಾರಿ ನನ್ನ ಬೆನ್ನೇರಿದೆ. ತಾವೆಲ್ಲರೂ ನಾನು ಮಾಡುವ ಕೆಲಸಕ್ಕೆ ನನ್ನ ಜತೆ ನಿಂತು ನನ್ನನ್ನು ಈ ಮಟ್ಟಕ್ಕೆ ಬೆಳೆಸಿದ್ದೀರಿ. ಪ್ರತಿ ಬಾರಿಯಂತೆ ಈ ಬಾರಿ ನಾನು ಹುಟ್ಟುಹಬ್ಬದ ದಿನ ನನ್ನ ತಾಯಿ, ತಂದೆ ಸಮಾಧಿ ಬಳಿ ಸಿಗುವುದಿಲ್ಲ. ಅಂದು ಜಡೇಶ್.ಕೆ.ಹಂಪಿ ನಿರ್ದೇಶನ ಮಾಡುತ್ತಿರುವ ವಿಕೆ 29 ಚಿತ್ರೀಕರಣದಲ್ಲಿರುತ್ತೇನೆ. ನಿಮ್ಮ ಪ್ರೀತಿ ಅಭಿಮಾನದ ನಿರೀಕ್ಷೆಯಂತೆ ಅಂದೇ ವಿಕೆ 29 ಚಿತ್ರದ ಫಸ್ಟ್ ಲುಕ್ ನಿಮಗಾಗಿ ಬಿಡುಗಡೆ ಮಾಡುತ್ತಿದ್ದೇವೆ. ದಯವಿಟ್ಟು ಯಾರೂ ಕೂಡ ಮನೆ ಬಳಿ ಬಂದು ಕಾಯಬೇಡಿ ಎಂದು ವಿಜಯ್ ಮನವಿ ಮಾಡಿದ್ದಾರೆ.

ಚಂದನವನದಲ್ಲಿ ಬೇಡಿಕೆಯ ನಟರಾಗಿರುವ ದುನಿಯಾ ವಿಜಯ್, ನಿರ್ದೇಶಕರಾಗಿಯೂ ಗುರುತಿಸಿ ಕೊಂಡಿದ್ದಾರೆ. ಸಲಗ, ಭೀಮ ಚಿತ್ರಗಳನ್ನು ನಿರ್ದೇಶಿಸಿ ಪ್ರಸಿದ್ಧಿ ಪಡೆದಿದ್ದಾರೆ. ಸದ್ಯ ದುನಿಯಾ ವಿಜಯ್ ಸಾಲು ಸಾಲು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ಅದರಲ್ಲಿ ಜಡೇಶ್ ಕುಮಾರ್ ನಿರ್ದೇಶಿಸುತ್ತಿರುವ ಚಿತ್ರದಲ್ಲಿ ನಟಿಸುತ್ತಿದ್ದು ಸಿನಿಮಾದ ಶೂಟಿಂಗ್ ಭರದಿಂದ ಸಾಗುತ್ತಿದೆ. ಇದರ ಜತೆಗೆ ವಿಜಿ ಪರಭಾಷಾ ಸಿನಿಮಾಗಳಲ್ಲಿಯೂ ಅಭಿನಯಿಸುತ್ತಿದ್ದಾರೆ.

ಕಾಡುವ ಕಥೆಯಲ್ಲಿ ನವೀನ್

ಗುಲ್ಟ್ ಖ್ಯಾತಿಯ ನವೀನ್ ಶಂಕರ್, ಈಗ ಕಾಡುವ ಕಥೆಯೊಂದಿಗೆ ತೆರೆಗೆ ಎಂಟ್ರಿಕೊಡುತ್ತಿದ್ದಾರೆ. ಕುಲದೀಪ್ ಸಾರಥ್ಯದ ನೋಡಿದವರು ಏನಂತಾರೆ ಸಿನಿಮಾದಲ್ಲಿ ನವೀನ್ ವಿಭಿನ್ನ ಪಾತ್ರದಲ್ಲಿ ಮಿಂಚಿದ್ದಾರೆ. ಈ ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚಿಸಿದೆ. ಭಾವನಾತ್ಮಕ ಚೌಕಟ್ಟಿನಲ್ಲಿ ಸಾಗುವ ಈ ಚಿತ್ರದಲ್ಲಿ ನವೀನ್ ಶಂಕರ್, ಸಿದ್ದಾರ್ಥ್ ದೇವಯ್ಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದು,ಸಿದ್ದು, ಅಪೂರ್ವಾ ಭಾರದ್ವಾಜ್ ನಾಯಕಿಯಾಗಿ ಸಾಥ್ ಕೊಟ್ಟಿದ್ದಾರೆ. ನಾಗೇಶ್ ಗೋಪಾಲ್ ನಿರ್ಮಾಣದ ಈ ಚಿತ್ರಕ್ಕೆ ಮಯೂರೇಶ್ ಸಂಗೀತ ಒದಗಿಸಿದ್ದು, ಅಶ್ವಿನ್ ಛಾಯಾಗ್ರಹಣ ನಿರ್ವಹಿಸಿದ್ದಾರೆ. ಜಯಂತ್ ಕಾಯ್ಕಿಣಿ ಎರಡು ಹಾಡುಗಳಿಗೆ ಸಾಹಿತ್ಯ ಬರೆದಿದ್ದಾರೆ. ಒಂದು ಹಾಡಿಗೆ ಲೈಲಾ ಪದ ಪೋಣಿಸಿದ್ದಾರೆ. ಸಾಧು ಕೋಕಿಲ, ಅನನ್ಯಾ ಭಟ್ ಮತ್ತು ಕೀರ್ತನ್ ಹೊಳ್ಳ ಹಾಗೂ ಅಮೇರಿಕಾದ ಗಾಯಕ ಜೋರ್ಡನ್ ರಾಬರ್ಟ್ ಕಿರ್ಕ್ ಹಾಡುಗಳಿಗೆ ದನಿಯಾಗಿದ್ದಾರೆ. ಪ್ರೀತಿ, ಸ್ನೇಹ, ತ್ಯಾಗ, ಸೆಂಟಿಮೆಂಟ್, ಎಮೋಷನ್ ಒಳಗೊಂಡಿರುವ ನೋಡಿದವರು ಏನಂತಾರೆ ಸಿನಿಮಾ ಇದೇ ತಿಂಗಳ 31ರಂದು ಬಿಡುಗಡೆಯಾಗಲಿದೆ.

> ನಾನು ಚಿತ್ರದ ಕಥೆಯ ಬರೆಯುವಾಗಲೇ ಇಲ್ಲಿನ ಪಾತ್ರಗಳು ನನ್ನ ಮನಸನ್ನು ಆವರಿಸಿದವು. ಅದೇ ರೀತಿಯ ಪಾತ್ರಧಾರಿಗಳು ಸಿಕ್ಕಿದರು, ಆ ಪಾತ್ರಗಳು ತೆರೆಯಲ್ಲಿ ಹೇಗೆ ಸಾಗಬೇಕು ಎಂದು ಬಯಸಿದ್ದೆನೋ ಅಂತೆಯೇ ಎಲ್ಲರೂ ನಟಿಸಿದ್ದಾರೆ. ಜೀವ ತುಂಬಿದ್ದಾರೆ.
>
> -**ಕುಲದೀಪ್** ನಿರ್ದೇಶಕ

ತಲೈವಾ ಕನ್ನಡಾಭಿಮಾನ

ರಜನಿಕಾಂತ್ ಮೂಲತಃ ಕರ್ನಾಟಕದವರು, ಈಗ ತಮಿಳಿನ ಸೂಪರ್‌ಸ್ಟಾರ್ ಆಗಿ ಹೊರಹೊಮ್ಮಿದ್ದಾರೆ. ತಮಿಳಿನಲ್ಲಿ ಮಿಂಚುತ್ತಿದ್ದರೂ ಕನ್ನಡವನ್ನು ಮರೆತಿಲ್ಲ. ಇಂದಿಗೂ ಕನ್ನಡವನ್ನು ಸ್ಪಷ್ಟವಾಗಿ ಮಾತನಾಡುವ ತಲೈವಾ, ಕನ್ನಡನಾಡಿನ ಬಗ್ಗೆ ಅಪಾರ ಅಭಿಮಾನ ಹೊಂದಿದ್ದಾರೆ. ರಜನಿಕಾಂತ್ ಕನ್ನಡದಲ್ಲಿ ಮಾತಾಡಿರುವ ವಿಡಿಯೊ ಸೋಶಿಯಲ್ ಮಿಡಿಯಾದಲ್ಲಿ ಸಖತ್ ವೈರಲ್ ಆಗಿದೆ. ಬೆಂಗಳೂರಿನ ಎಪಿಎಸ್ ಸ್ಕೂಲ್ ಹಾಗೂ ಕಾಲೇಜಿನ ಬಗ್ಗೆ ನನಗೆ ಹೆಮ್ಮೆ ಇದೆ. ಮೊದಲು ನಾನು ಗವಿಪುರದಲ್ಲಿರುವ ಗಂಗಧಾರೇಶ್ವರ ದೇವಾಲಯದ ಬಳಿ ಇರುವ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ಓದುತ್ತಿದ್ದೆ. ನಾನು ಕ್ಲಾಸ್‌ಗೆ ಫಸ್ಟ್ ಮತ್ತು ಬೆಸ್ಟ್ ಸ್ಟೂಡೆಂಟ್ ಕೂಡ ಆಗಿದ್ದೆ ಎಂದು ರಜನಿಕಾಂತ್ ಶಾಲಾ ದಿನಗಳನ್ನು ನೆನೆದಿದ್ದಾರೆ.

ಶಾಲೆಯಲ್ಲಿ ಓದಿನಲ್ಲಿ ಮುಂದಿದ್ದೆ. ಅಷ್ಟೇ ಅಲ್ಲದೆ ಕ್ಲಾಸ್ ಮಾನಿಟರ್ ಆಗಿದ್ದೆ. ಮಿಡಲ್ ಸ್ಕೂಲ್‌ನಲ್ಲಿ ತೊಂಬತ್ತೆಂಟು ಪರ್ಸೆಂಟ್ ಮಾರ್ಕ್ಸ್ ತೆಗೆದುಕೊಂಡಿದ್ದೇನೆ. ತುಂಬಾ ಒಳ್ಳೆಯ ಮಾರ್ಕ್ಸ್ ಕೂಡ ಆಗಿತ್ತು. ಹೀಗಾಗಿ ನನ್ನ ಅಣ್ಣನೇ ನನ್ನನ್ನು ಎಪಿಎಸ್ ಹೈಸ್ಕೂಲ್ ಇಂಗ್ಲಿಷ್ ಮೀಡಿಯಂಗೆ ಸೇರಿಸಿದ್ದರು. ಆದರೆ ಅಲ್ಲಿ ನಾನು ಡಲ್ ಆಗಿಬಿಟ್ಟೆ ಎಂದಿದ್ದಾರೆ. ಸಮಯ ಸಿಕ್ಕಾಗ ಬೆಂಗಳೂರಿನ ಸ್ನೇಹಿತರ ಮನೆಗೆ ಭೇಟಿ ನೀಡುವ ರಜನಿಕಾಂತ್ ಹಳೆಯ ನೆನಪುಗಳನ್ನು ನೆನೆದು ಖುಷಿ ಪಡುತ್ತಾರೆ. ಸದ್ಯ ತಲೈವಾ ಜೈಲರ್ 2 ಚಿತ್ರದಲ್ಲಿ ನಟಿಸುತ್ತಿದ್ದಾರೆ.


VENUS ENTERRTAINERS
HAPPY BIRTHDAY
SANDALWOOD SALAGA
VIJAYA KUMAR
FROM THE GANG OF
SALAGA & BHEEMA
PRODUCER
SREEKANTH KP
VK 30
RESERVE
storyteller studio
EXECUTIVE PRODUCER
NAGENDRAA
WRITTEN AND DIRECTED BY
RR.VETRI VEL (THAMBI)
PRODUCTION DESIGNER
PUNITH KUMAR

ಲಕ್ಷ್ಮಣಯ್ಯ ಎನ್ನುವ ರಾಗಿಯ ಮೋಹಿ, ರಾಗಿಯ ವಿವಿಧ ತಳಿಗಳ ಕುರಿತು ಸಂಶೋಧನೆ ಮತ್ತು ಕೆಲಸವನ್ನು ಮಾಡದೆ ಹೋಗಿದ್ದಿದ್ದರೆ, ಇವತ್ತು ರಾಗಿ ನಮಗೆ ಇಷ್ಟು ಸುಲಭಕ್ಕೆ ದೊರಕುತ್ತಲೂ ಇರಲಿಲ್ಲ. ಅದರ ಬಳಕೆಯ ಬಗ್ಗೆ ಪೋಷಕಾಂಶಗಳ ಬಗ್ಗೆ ನಮಗೆ ತಿಳುವಳಿಕೆಯೂ ಇರುತ್ತಿರಲಿಲ್ಲ. ರಾಗಿ ಎನ್ನುವ ತೃಣಧಾನ್ಯವು, ಅದರ ತ್ರಿವಿಕ್ರಮ ರೂಪದಲ್ಲಿ ಪ್ರಕಟವಾಗಲಿಕ್ಕೆ ಎಲ್ಲಾ ರೀತಿಯ ಶ್ರಮ ಹಾಕಿದ ಲಕ್ಷ್ಮಣಯ್ಯ ಈ ಹೊತ್ತು ಕೃಷಿ ಜಗತ್ತು ನಮಿಸುತ್ತಿದೆ. ಅವರು ಇಂಡಾಫ್ ತಳಿಯ ಜತೆ ಹಲವು ರಾಗಿಯ ತಳಿಗಳನ್ನು ಅಭಿವೃದ್ಧಿಪಡಿಸಿದ್ದು, ಒಂದು ತಳಿಗೆ ಅವರ ಗೌರವಾರ್ಥ ಹೆಸರಿಡಲಾಗಿದೆ. ಜನಸಾಮಾನ್ಯರಿಗೆ ಇಂದು ಸುಲಭವಾಗಿ ರಾಗಿ ದೊರಕುವಲ್ಲಿ ಲಕ್ಷ್ಮಣಯ್ಯ ಅವರ ಪರಿಶ್ರಮ ಅಪಾರ; ಆದರೂ, ಅವರಿಗೆ ದೊರಕಬೇಕಾದ ಗೌರವ, ಮನ್ನಣೆ ದೊರಕಿಲ್ಲ ಎಂಬುದೂ ಒಂದು ಕಹಿ ಸತ್ಯ. ಪ್ರತಿ ದಿನ ರಾಗಿ ತಿನ್ನುವ ನಮ್ಮ ರಾಜ್ಯದ ಜನರು ಮರೆತಿರುವ ಮಹಾನುಭಾವರು ಇವರು ಎನ್ನಬಹುದು! ಗೋಧಿಯ ತಳಿಗಳಲ್ಲಿ ಸಂಶೋಧನೆ ಮಾಡಿದವರಿಗೆ ನೊಬೆಲ್ ಪ್ರಶಸ್ತಿ ದೊರಕಿದೆ; ಅದೇ ರೀತಿ ರಾಗಿಯ ತಳಿಗಳ ಕುರಿತು ಮೊದಲ ಬಾರಿ ವ್ಯಾಪಕವಾಗಿ ಸಂಶೋಧನೆ ಮಾಡಿದ ಲಕ್ಷ್ಮಣಯ್ಯ ಅವರಿಗೂ ಸೂಕ್ತ ಗೌರವ ದೊರಕಬೇಕಾಗಿತ್ತು; ಇನ್ನಾದರೂ ದೊರಕಲಿ ಎಂಬುದು ರಾಗಿ ಪ್ರಿಯರ ಹಾರೈಕೆ.

ಮರೆತುಹೋದ ಮಹಾನುಭಾವರು ರಾಗಿ ಲಕ್ಷ್ಮಣಯ್ಯ

ರಾಗಿ ತಳಿ ಅಭಿವೃದ್ಧಿಗೆ ಅಪೂರ್ವ ಕೊಡುಗೆ

» ಪಿ. ಚಂದ್ರಿಕಾ

ಕೃಷಿ ವಿಶ್ವವಿದ್ಯಾಲಯದಿಂದ ರಾಷ್ಟ್ರಪತಿಗಳಾಗಿದ್ದ ಎ. ಪಿ. ಜೆ. ಅಬ್ದುಲ್ ಕಲಾಂ ಅವರನ್ನು ಕಾರ್ಯಕ್ರಮಕ್ಕೆ ಕರೆಯಲು ಒಂದು ತಂಡ ದೆಹಲಿಗೆ ಹೋಗಿದ್ದರಂತೆ. ಕೃಷಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ನ್ನು ನೋಡಿದ ಕಲಾಂ ಅವರು, 'ನಿಮ್ಮ ವೆಬ್‌ಸೈಟ್‌ನಲ್ಲಿ ಒಂದು ಲೋಪವಿದೆ; ಅದನ್ನು ತಿದ್ದಿಕೊಂಡರೆ ಮಾತ್ರ ನಾನು ಕಾರ್ಯಕ್ರಮಕ್ಕೆ ಬರುತ್ತೇನೆ' ಎಂದಿದ್ದರು! ಅಲ್ಲಿಗೆ ಹೋದವರಿಗೆ ಅಚ್ಚರಿ 'ಯಾವ ಲೋಪ ನಮ್ಮಲ್ಲಿದೆ?' ಎಂದು ಮಾತಾಡಿಕೊಳ್ಳುವಾಗ ಕಲಾಂ ಅವರು 'ನಿಮ್ಮ ವೆಬ್‌ಸೈಟ್‌ನಲ್ಲಿ ರಾಗಿ ಲಕ್ಷ್ಮಣಯ್ಯ ಅವರ ಬಗ್ಗೆ ವಿವರಗಳು ಯಾಕಿಲ್ಲ? ಅವರು ದೇಶಕ್ಕೆ ಅತ್ಯುನ್ನತ ಕೊಡುಗೆಯನ್ನು ರಾಗಿ ತಳಿಗಳ ಅಭಿವೃದ್ಧಿಯ ಮೂಲಕ ನೀಡಿದ ಪ್ರಾತಃಸ್ಮರಣೀಯರು. ಅವರ ಬಗ್ಗೆ ನಿಮ್ಮ ವೆಬ್‌ಸೈಟ್‌ನಲ್ಲಿ ಸೇರ್ಪಡೆ ಆದರೆ ಮಾತ್ರ ನಾನು ಕಾರ್ಯಕ್ರಮಕ್ಕೆ ಬರುತ್ತೇನೆ' ಎಂದರಂತೆ. ಅವರ ಮಾತನ್ನು ಕೇಳಿದ ಕೃಷಿ ವಿಜ್ಞಾನಿಗಳು ಬೆಂಗಳೂರಿಗೆ ಬಂದ ತಕ್ಷಣ ಕೃಷಿ ವಿವಿಯ ವೆಬ್‌ಸೈಟ್‌ನಲ್ಲಿ ಲಕ್ಷ್ಮಣಯ್ಯ ನವರ ಬಗ್ಗೆ ವಿವರಗಳನ್ನು ಸೇರಿಸಿದ್ದರಂತೆ. ವಿಷಯ ತಿಳಿದ ಅಬ್ದುಲ್ ಕಲಾಂ ತುಂಬ ಖುಷಿಪಟ್ಟರು.

ಒಂದು ಕಾಲಕ್ಕೆ ನೆಲಮಂಗಲದಲ್ಲಿ ಬೆಳೆಯುತ್ತಿದ್ದ ರಾಗಿ ಇಡೀ ಮೈಸೂರು ಸಂಸ್ಥಾನಕ್ಕೆ ಸಾಕಾಗುತ್ತಿತ್ತು. ಅಂಥಾ ಫಸಲು ಬರುತ್ತಿತ್ತು. ಜನಸಂಖ್ಯಾ ಸ್ಫೋಟದ ಹಿನ್ನೆಲೆಯಲ್ಲಿ ಧಾನ್ಯ ಬೆಳೆಯುವ ಪ್ರಮಾಣ ಅನಿವಾರ್ಯವಾಗಿ ಹೆಚ್ಚಾಯಿತು. ಅಕ್ಕಿ, ಗೋಧಿಗಳನ್ನು ಇಟ್ಟುಕೊಂಡು ಅನೇಕ ಪ್ರಯೋಗಗಳು ನಡೆಯುತ್ತಿತ್ತಾದರೂ, ರಾಗಿಯ ಬಗ್ಗೆ ವಿಶೇಷವಾದ ಅಧ್ಯಯನ, ತಳಿಗಳ ಅಭಿವೃದ್ಧಿಯ ಕಾರ್ಯ ನಡೆದಿರಲಿಲ್ಲ. ಇದಕ್ಕೆ ಕಾರಣ ರಾಗಿಯ ಬಗ್ಗೆ ಇದ್ದ ಅವಜ್ಞೆ ಎಂದೇ ಹೇಳಬೇಕು. ರಾಗಿ ಲಕ್ಷ್ಮಣಯ್ಯನವರು ಈ ಕೆಲಸಕ್ಕೆ ಕೈ ಹಾಕದೇ ಹೋಗಿದ್ದಿದ್ದರೆ, ಇವತ್ತು ನಾವು ರಾಗಿಯ ಬೆಳೆಯಲ್ಲಿನ ಇಷ್ಟು ಫಸಲು ತೆಗೆಯಲು ಸಾಧ್ಯವೇ ಇರುತ್ತಿರಲಿಲ್ಲ.

ರಾಗಿಯನ್ನು ಪುರಾತನ ಕಾಲದಿಂದ ಬೆಳೆಯುತ್ತಾ ಬಂದಿದ್ದರೂ, ತಳಿಯ ಅಭಿವೃದ್ಧಿಗಾಗಿ ಹೆಚ್ಚಿನ ಆಸಕ್ತಿ ತೋರದಿದ್ದದ್ದರಿಂದ, ನೈಸರ್ಗಿಕವಾಗಿ ಹೊಂದಿಕೊಂಡು ಬೆಳೆಯಬಲ್ಲ ಈ ಬೆಳೆ ಒಂದು ಪೌಷ್ಟಿಕವಾದ ಧಾನ್ಯ ಎನ್ನುವುದನ್ನು ಮನಗಾಣದೇ ಹೋಗಿದ್ದರು. ರಾಗಿಯಲ್ಲಿ ಪೌಷ್ಟಿಕಾಂಶಗಳ ಪಟ್ಟಿಯನ್ನು ನೋಡಿದರೆ ಇದು ನಮಗೆ ಮನನವಾಗುತ್ತದೆ.



ಕರ್ನಾಟಕದಲ್ಲಿ 1913ರಿಂದ 1950ರ ವರೆಗೆ ಸುಮಾರು 37 ವರ್ಷಗಳ ಕಾಲ ರಾಗಿಯ ತಳಿಗಳ ಸಂಶೋಧನೆಯ ನಿಟ್ಟಿನಲ್ಲಿ ಯಾವ ರೀತಿಯ ಅಭಿವೃದ್ಧಿಯೂ ಕಾಣಲಿಲ್ಲ. 1950ರಲ್ಲಿ, ಅದೂ ರಾಗಿ ಲಕ್ಷ್ಮಣಯ್ಯನವರಿಂದಾಗಿ ರಾಗಿ ಪುನರುಜ್ಜೀವನವನ್ನು ಪಡೆಯಿತು. 1949ರಲ್ಲಿ ಅವರು ಬೀರೂರಿನ ಬೀಜೋತ್ಪಾದನಾ ಕೇಂದ್ರದಿಂದ ವರ್ಗಾವಣೆಯಾಗಿ ಮಂಡ್ಯದ ವಿಶ್ವೇಶ್ವರಯ್ಯ ನಾಲಾ ಕ್ಷೇತ್ರಕ್ಕೆ (ವಿ.ಸಿ. ಫಾರಂ)ಗೆ ಬಂದರು. ಉತ್ತಮ ರಾಗಿಯ ತಳಿಯನ್ನು ಅಭಿವೃದ್ಧಿಪಡಿಸಲು ನಿಸ್ವಾರ್ಥವಾಗಿ ದುಡಿದು ಮಾನವ ಜನಾಂಗದ ಹಸಿವಿನ ಸ್ಥಿತಿಗೆ ಉತ್ತರವನ್ನು ಹುಡುಕಿದರು. ಅದನ್ನು ಬೆಳೆಗಾರರಿಗೆ ತಲುಪಿಸಿ ಹೆಚ್ಚು ಇಳುವರಿಯ ಮೂಲಕ ಆಹಾರ ಉತ್ಪಾದಕ ಶಕ್ತಿಯನ್ನು ಮೇಲಕ್ಕೆತ್ತಿ, ಕರ್ನಾಟಕವನ್ನು, ಭಾರತದಲ್ಲೇ ರಾಗಿ ಬೆಳೆಯಲ್ಲಿ ಅಗ್ರಸ್ಥಾನಕ್ಕೇರುವಂತೆ ಮಾಡುವಲ್ಲಿ ಬಹು ಮುಖ್ಯ ಪಾತ್ರವನ್ನು ವಹಿಸಿದರು.

ರಾಗಿ ಆಯುವ ಕುಟುಂಬ

ಬಡ ದಲಿತ ಕುಟುಂಬವೊಂದರಲ್ಲಿ ಹುಟ್ಟಿದ ಲಕ್ಷ್ಮಣಯ್ಯನವರು, ತಮ್ಮ ಸುತ್ತಲೂ ಹರಡಿದ್ದ ರಾಗಿಯ ಹೊಲವನ್ನು ನೋಡುತ್ತಲೇ ಬೆಳೆದರು. ಬಡತನದ ಕಾರಣಕ್ಕೆ ತಾಯಿಯವರು ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ರಾಗಿಯ ತೆನೆಯನ್ನು ಆಯುವ ಕೆಲಸಕ್ಕೆ ಮಕ್ಕಳಾಗಿದ್ದ ಲಕ್ಷ್ಮಣಯ್ಯನವರು ಹಾಗೂ ಅವರ ತಮ್ಮ ಇಬ್ಬರೂ ಹೋಗುತ್ತಿದ್ದರು. ಆ ಕಾಲಕ್ಕೆ ದಲಿತರಿಗೆ ಭೂಮಿಯ ಕನಸಲ್ಲ, ಹೆಸರನ್ನು ಹೇಳುವುದೂ ಅಸಾಧ್ಯದ ಮಾತಾಗಿತ್ತು. ಅಂಥಾ ಹೊತ್ತಿನಲ್ಲಿ ಹೊಟ್ಟೆ ತುಂಬಿಸಿಕೊಳ್ಳುವ ಸಲುವಾಗಿ ರಾಗಿಯನ್ನು ಆಯುವ ಕೆಲಸ ಮಾಡುತ್ತಿದ್ದರು.

ಮೈಸೂರಿನ ಹಾರೋಹಳ್ಳಿಯಲ್ಲಿ ಹುಟ್ಟಿದ ಲಕ್ಷ್ಮಣಯ್ಯನವರ ತಂದೆ ಚೋಟಯ್ಯ, ತಾಯಿ ಚನ್ನಮ್ಮ. ಹುಟ್ಟೂರಿನಲ್ಲೇ ಪ್ರಾಥಮಿಕ ಶಿಕ್ಷಣ ಪಡೆದ ಅವರು ಮಹಾರಾಜಾ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ಪಾಸಾದರು. ನಂತರ ಸೆಂಟ್ರಲ್ ಕಾಲೇಜಿನಲ್ಲಿ ಬಿಎಸ್ಸಿ ಪದವಿ ಪಡೆದ ಅವರು, ಭಾರತೀಯ ರೈಲ್ವೇ ಇಲಾಖೆಯಲ್ಲಿ ಮಾಡುತ್ತಿದ್ದ ಕೆಲಸಕ್ಕೆ ರಾಜಿನಾಮೆ ಕೊಟ್ಟು, ಬೀರೂರಿನಲ್ಲಿದ್ದ ರಾಜ್ಯ ಕೃಷಿ ಇಲಾಖೆಯ ಬೀಜೋತ್ಪಾದನಾ ಕೇಂದ್ರದಲ್ಲಿ ವ್ಯವಸ್ಥಾಪಕ ಹುದ್ದೆಗೆ ಸೇರಿಕೊಂಡರು. ನಂತರ ಭತ್ತದ ತಳಿಗಳ ಮೇಲೆ ಸಂಶೋಧನಾ ಕೆಲಸವನ್ನು ಮಾಡಿದರೂ, ರಾಗಿಯ ಬಗ್ಗೆ ಅವರಿಗೆ ಇದ್ದ ಆಸಕ್ತಿ ಹೆಚ್ಚುತ್ತಲೇ ಹೋಯಿತು. ಹಲವು ವರ್ಷಗಳ ಕಾಲ ಕೃಷಿ ವಿವಿಯಲ್ಲಿ ಕೆಲಸ ಮಾಡಿ 1982ರಲ್ಲಿ ಅಧಿಕೃತವಾಗಿ ನಿವೃತ್ತರಾದರು. ಆದರೆ, ಅವರ ರಾಗಿಯ ತಳಿಯ ಆವಿಷ್ಕರಣದ ಆಸಕ್ತಿಯಿಂದ ನಿವೃತ್ತಿಯಾಗಿರಲಿಲ್ಲ, ಬದಲಿ ಇನ್ನಷ್ಟು ಆಳದ ಬಂಧಕ್ಕೆ ಕಾರಣವಾಯಿತು.

ಲಕ್ಷ್ಮಣಯ್ಯನವರು ಕೆಲಸಕ್ಕೆ ಸೇರಿದ ಹೊತ್ತಿನಲ್ಲಿ ರಾಗಿಗೆ ಯಾವುದೇ ಪ್ರಾಮುಖ್ಯತೆ ದೊರೆತಿರಲಿಲ್ಲ. ಅದರ ಬಗ್ಗೆ ಅಧ್ಯಯನದ ಮಾತಿರಲಿ, ಆ ಧಾನ್ಯವನ್ನೇ ಯಾರೂ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ತಮ್ಮ ಬಡತನ, ಹಸಿವು, ಮೂಲಭೂತ ಸೌಕರ್ಯಗಳ ಕೊರತೆಯ ನಡುವೆ ತಾನಾಗೇ ತಾಯಿ ತೆನೆಯನ್ನು ಆರಿಸಲು ಕಳಿಸುತ್ತಿದ್ದ ಕಾರಣಗಳು ರಾಗಿಯ ಜೊತೆಗೆ ಲಕ್ಷ್ಮಣಯ್ಯನವರಿಗೆ ಭಾವನಾತ್ಮಕ ನಂಟನ್ನು ಬೆಸೆದಿತ್ತು. ಹೀಗೆ ರಾಗಿಯನ್ನು ತಮ್ಮದನ್ನಾಗಿಸಿಕೊಂಡ ಲಕ್ಷ್ಮಣಯ್ಯನವರು ಅದರ ಗುಣಧರ್ಮಗಳನ್ನು ಅರ್ಥಮಾಡಿಕೊಂಡಿದ್ದರು. ಸ್ವಕೀಯ ಪರಾಗ ಸ್ಪರ್ಷದ ಬೆಳೆಯ ಜೊತೆ ಹೊಸ ಪ್ರಯೋಗಕ್ಕೆ ಇಳಿದರು.

ಭೂಮಿಯೇ ಇಲ್ಲದಿದ್ದ ಲಕ್ಷ್ಮಣಯ್ಯನವರು ಕುಂಡಗಳಲ್ಲಿ ರಾಗಿಯನ್ನು ಬೆಳೆದು ತಮ್ಮ ಕನಸನ್ನು ನನಸು ಮಾಡಿಕೊಳ್ಳಬಯಸಿದ್ದರು. ಓದಿದ್ದು ಬಿಎಸ್ಸಿ ಪದವಿ. ಮಾಡುವ ಕೆಲಸ ಮಾತ್ರ ವಿಜ್ಞಾನಿಯದ್ದು. ಇದು ಹೇಗೆ ಸಾಧ್ಯ? ಎನ್ನುವ ಅವಜ್ಞೆಯ ನಡುವೆಯೇ ಲಕ್ಷ್ಮಣಯ್ಯನವರ ಸಂಶೋಧನಾ



ಇಂಡಾಫ್ ತಳಿ ಜನಕ

ಕಾರ್ಯ ನಡೆಯುತ್ತಿತ್ತು. ಸ್ವಂತ ಆಸಕ್ತಿ ಮತ್ತು ಉತ್ಸಾಹಗಳು ಮಾತ್ರವೇ ಅವರ ಬಂಡವಾಳವಾಗಿತ್ತು.

ಪರಕೀಯ ಪರಾಗ ಸ್ಪರ್ಶ

ಲಕ್ಷ್ಮಣಯ್ಯ ಅವರ ಪದವಿಯ ಬಗ್ಗೆ ಅವಜ್ಞೆ ವ್ಯಕ್ತಪಡಿಸುವವರಿಗೆ ಅವರೊಳಗೆ ಹುದುಗಿದ್ದ ಈ ಇಚ್ಛಾಶಕ್ತಿಯ ನಿರೂಪ ಅರ್ಥವಾಗಲಿಲ್ಲ ಎನ್ನುವುದೂ ಅವರನ್ನು ಕಂಗೆಡಿಸಲಿಲ್ಲ. ನಿರಂತರ ಧ್ಯಾನದ ಹಾಗೆ, ರಾಗಿ ಎಂಬ ಧಾನ್ಯದ ಕುರಿತು ತಮ್ಮ ಕೆಲಸವನ್ನು ಮಾಡುತ್ತಲೇ ಹೋದರು. ಸ್ವಕೀಯ ಪರಾಗಸ್ಪರ್ಶದ ಈ ಧಾನ್ಯಕ್ಕೆ ಪರಕೀಯ ಪರಾಗ ಸ್ಪರ್ಶವನ್ನು ಮಾಡಿ, ಎರಡು ಬಗೆಯ ತಳಿಗಳ ಸಂಕರದಿಂದ ಹೊಸತಳಿಯನ್ನು ತಂದರು. ಇದು ಸಾಧ್ಯವಾಗುತ್ತದೆ ಎನ್ನುವುದು ಅವರ ಅರಿವಿಗೆ ಬಂದ ತಕ್ಷಣ, ಅವರು 'ಇಂಡಾಫ್' ರಾಗಿ ತಳಿಯ ಪ್ರಯೋಗಕ್ಕೆ ಅನುವಾದರು.

ಪದವಿಯಿಲ್ಲದೆ, ಸಂಶೋಧನಾ ಸಾಮಗ್ರಿಗಳಿಲ್ಲದೆ, ಸಹಾಯಕರಿಲ್ಲದೆ, ನಿರಂತರ ಟೀಕೆಯನ್ನು ಎದುರಿಸುತ್ತಾ ಯಾರಿಗೂ ಬೇಡವಾದ ಈ ಕಪ್ಪು ಧಾನ್ಯವನ್ನು ಕನಸಿದವರು ಲಕ್ಷ್ಮಣಯ್ಯ. ಹೀಗೆ ಹೊಸ ದಾರಿಯೊಂದು ಗೋಚರಿಸಿದ ತಕ್ಷಣ ಅವರಲ್ಲಿ ಉತ್ಸಾಹ ಮೂಡಿತು. ಬಿ. ರಾಚಯ್ಯನವರು ಮಂಡ್ಯದ ವಿ.ಸಿ. ಫಾರಂನಲ್ಲಿ ಅವರ ಈ ಪರಿಶ್ರಮವನ್ನು ಕಣ್ಣಾರೆ ಕಂಡಿದ್ದರಿಂದಲೋ ಏನೋ ಲಕ್ಷ್ಮಣಯ್ಯ ನವರ ಪ್ರಯೋಗಕ್ಕೆ ಬೆಂಬಲ ಸೂಚಿಸುವ ಹಾಗೆ, ಅವರಿಗೆ ಒಂದು ಪ್ರತ್ಯೇಕ ಶೆಡ್ ಮತ್ತು ಸಹಾಯಕರನ್ನು ಒದಗಿಸುವಂತೆ ಹೇಳಿದ್ದರು.

ಇಂಡಾಫ್ ತಳಿ ಅಭಿವೃದ್ಧಿ

ರಾಗಿಯ ಮೂಲತಳಿಯ ಹುಡುಕಾಟದಲ್ಲಿದ್ದ ಲಕ್ಷ್ಮಣಯ್ಯನವರಿಗೆ, ರಾಗಿಯ ಮೂಲ ಆಫ್ರಿಕಾ ಎಂದು ಹೊಳೆದ ತಕ್ಷಣ ಅವರು ಆಫ್ರಿಕಾದ ಮೂಲತಳಿಯ ಜೊತೆ ಪ್ರಯೋಗಕ್ಕಿಳಿದರು. ಅಲ್ಲಿಂದಲೇ ಬೀಜಗಳನ್ನು ತರಿಸಿ, 1964ರಲ್ಲಿ ಎರಡು ತಳಿಗಳನ್ನು ಸಂಕರಗೊಳಿಸುವುದರ ಮೂಲಕ 'ಇಂಡಾಫ್' ಎನ್ನುವ ತಳಿಯನ್ನು ಬಿಡುಗಡೆ ಮಾಡಿದರು. ಭಾರತದ 'ಕಡ್ಡಿಮುರುಕ' ರಾಗಿಗೆ ಆಫ್ರಿಕಾದ ರಾಗಿಯನ್ನು ಸಂಕರಗೊಳಿಸಿ ಹೆಚ್ಚು ಇಳುವರಿ ಕೊಡುವ ರಾಗಿಯನ್ನು ರೈತರಿಗೆ ಕೊಟ್ಟರು. ಅಲ್ಲಿಂದ ಮುಂದಕ್ಕೆ ಪ್ರಯೋಗದ ಮೇಲೆ ಪ್ರಯೋಗವನ್ನು ಮಾಡಿದ ಲಕ್ಷ್ಮಣಯ್ಯನವರು ಸಾಲು ಸಾಲಾಗಿ ಹೆಚ್ಚಿನ ಇಳುವರಿ ಕೊಡುವ ರಾಗಿಯ ತಳಿಗಳನ್ನು ಬಿಡುಗಡೆಗೊಳಿಸುತ್ತಲೇ ಬಂದರು. ಅಷ್ಟರವರೆಗೆ ಎಕರೆಗೆ ಎರಡರಿಂದ ಮೂರು ಕ್ವಿಂಟಾಲ್ ಬೆಳೆಯುತ್ತಿದ್ದವರು, ಹೊಸ ತಳಿಯಿಂದಾಗಿ 15 -20 ಕ್ವಿಂಟಾಲ್ ಬೆಳೆಯಲು ಸಾಧ್ಯವಾಯಿತು. ಈಗ ನೀರಾವರಿಯಲ್ಲಾದರೆ 25-30 ಕ್ವಿಂಟಾಲ್ ಕೂಡ ಬೆಳೆದು ತೋರಿಸಿದ ರೈತರಿದ್ದಾರೆ.

1951-64ರ ವರೆಗೆ ಅರುಣಾ, ಉದಯ, ಅನ್ನಪೂರ್ಣ, ಪೂರ್ಣ, ಕಾವೇರಿ, ಶಕ್ತಿ ಮುಂತಾದ ದೇಶೀಯ ತಳಿಗಳನ್ನು ಪರಿಚಯಿಸಿ ರಾಗಿಯ ಬೆಳೆಯಲ್ಲಿ ಶೇ. 50 ರಷ್ಟು ಹೆಚ್ಚಳವನ್ನು ಮಾಡಿದ್ದ ಲಕ್ಷ್ಮಣಯ್ಯನವರು ವಿವಿಧ ಹವಾಮಾನಕ್ಕೆ ಹೊಂದಿಕೊಳ್ಳುವ ಇಂಡಾಫ್ ತಳಿಗಳನ್ನು ಬಿಡುಗಡೆಗೊಳಿಸಿದರು. ಈ ಸಂಕರ ತಳಿಗಳ ಕಾರಣಕ್ಕೆ ಮಹತ್ ಕ್ರಾಂತಿ ಆಗಿ ರಾಗಿಯ ಇತಿಹಾಸದ ಮಜಲುಗಳನ್ನೇ ಬದಲಿಸಿತು.

ಇಷ್ಟಾಗಿಯೂ ಲಕ್ಷ್ಮಣಯ್ಯನವರು ಟೀಕೆಯನ್ನು ಎದುರಿಸದೇ ಹೋಗಲಿಲ್ಲ. ಇದು ಹೈಬ್ರೀಡ್, ಇದಕ್ಕೆ ರುಚಿಯಿಲ್ಲ ಎನ್ನುವ ಮಾತುಗಳನ್ನು ಅವರು ಕೇಳಬೇಕಾಯಿತು. ಆದರೆ ಇದ್ಯಾವುದೂ ಅವರನ್ನು ಕಂಗೆಡಿಸಲಿಲ್ಲ ಮತ್ತು ಅದೆಲ್ಲವೂ ಸುಳ್ಳುಸುದ್ದಿ ಎನ್ನುವುದನ್ನು ರೈತರೇ ಪ್ರಮಾಣಿಸಿದರು. ಅವರಿಗೆ ಸಹಾಯಕರಿರಲಿಲ್ಲ. ಆದರೆ ರೈತರು ಅವರಿಗೆ ತಮ್ಮ ಬೆಳೆಯ ಬಗ್ಗೆ ಮಾಹಿತಿಯನ್ನು ಒದಗಿಸುತ್ತಾ ಅವರ ಸಂಶೋಧನೆಯನ್ನು ಪೂರ್ಣಗೊಳಿಸುತ್ತಿದ್ದರು.

ಈಗ ಲಕ್ಷ್ಮಣಯ್ಯ ನವರ ಗೌರವಾರ್ಥ ಎಲ್-5 ಎಂದು ಒಂದು ರಾಗಿ ತಳಿಗೆ ಹೆಸರಿಡಲಾಗಿದೆ. ಆದರೆ ಈ ರೀತಿ ಒಂದು ಅಕ್ಷರದ ಬದಲು, ಆ ರಾಗಿ ತಳಿಗೆ 'ಲಕ್ಷ್ಮಣಯ್ಯ -5' ಎಂತಲೇ ಹೆಸರಿಡಬಹುದಿತ್ತಲ್ಲ? ಎಂಬ ಅಭಿಪ್ರಾಯವೂ ಕೇಳಿಬಂದಿದೆ. ಇಂತಹ ಹಲವಾರು ಸಮಸ್ಯೆಗಳನ್ನು ಅವರು ತಮ್ಮ ಜೀವಿತಾವಧಿಯಲ್ಲೇ ಎದುರಿಸಿದ್ದರು ಎಂದು ಡಾ ಅ ಶೇಷಾದ್ರಿ ಅಯ್ಯರ್‌ರವರು ಹೇಳುತ್ತಾರೆ. ಇದು ಲಕ್ಷ್ಮಣಯ್ಯನವರಿಗೆ ಹಲವು ಸ್ತರಗಳಲ್ಲಿ ಆಗಿರುವ ಅನ್ಯಾಯವನ್ನು ಹೇಳುವಂಥಾ ಮಾತುಗಳೇ ಆಗಿವೆ.

ನೊಬೆಲ್ ಪುರಸ್ಕಾರಕ್ಕೆ ಅರ್ಹರು!

ಈ ದೇಶದ ದೊಡ್ಡ ದುರಂತ ಎಂದರೆ ಇದೇ. ಸೆಲೆಬ್ರಿಟಿಗಳ ಅಬ್ಬರದ ಮಧ್ಯದಲ್ಲಿ ನಿಜವಾಗಿ ಜನೋಪಯೋಗಿ ಕೆಲಸ ಮಾಡಿದ ಮಹಾನ್ ಜ್ಞಾನಿಗಳನ್ನು ಪಕ್ಕಕ್ಕೆ ಇಡುತ್ತಲೆ ಬಂದಿದೆ. ರಾಗಿಯ ಬಗ್ಗೆ ಅಪಾರವಾಗಿ ಕೆಲಸ ಮಾಡಿ ತಳಿಯನ್ನು ಅಭಿವೃದ್ಧಿಪಡಿಸಿದ ಲಕ್ಷ್ಮಣಯ್ಯ ನವರಿಗೆ ಯಾವುದೇ ಗಮನಾರ್ಹ ಪ್ರಶಸ್ತಿ, ಪುರಸ್ಕಾರಗಳನ್ನು ಸರ್ಕಾರ ಕೊಡಲಿಲ್ಲ. ಸಮಾಜದ ಮನ್ನಣೆಯೂ ಸಿಗಲಿಲ್ಲ. ಜಾತಿಯೆನ್ನುವ ಅಂಧ ಕಣ್ಣುಗಳಿಗೆ ಪ್ರತಿಭೆಯ ಮಹಾಪೂರ ಕಾಣಲೇ ಇಲ್ಲ. ಯಾರಿಂದಲೂ ಮಾಡಲಾಗದ ರಾಗಿಯ ಅಭಿವೃದ್ಧಿಯನ್ನು ಮಾಡಿದ ಲಕ್ಷ್ಮಣಯ್ಯನವರ ಸಾಧನೆಯನ್ನು ಅವರು ಬದುಕಿದ್ದಾಗಲೂ, ಸತ್ತ ನಂತರವೂ ಗುರುತಿಸಲೇ ಇಲ್ಲ.

1968
ಕಾವೇರಿ ರಾಗಿ ತಳಿ ಅಭಿವೃದ್ಧಿಗಾಗಿ ಹರಿ ಖೋಡೆಯವರಿಂದ ಪುರಸ್ಕಾರ

2004
ಮಂಡ್ಯದ ವಿ.ಸಿ.ಫಾರಂ ರಸ್ತೆಗೆ 'ರಾಗಿ ಲಕ್ಷ್ಮಣಯ್ಯ ರಸ್ತೆ' ಮರುನಾಮಕರಣ

ಕೃಷಿ ವಿಶ್ವವಿದ್ಯಾಲಯ ಮತ್ತು ಕ.ರಾ.ಮು.ವಿ.ವಿ.ದಿಂದ ಗೌರವ ಡಾಕ್ಟರೇಟ್

2005
ಬೆಂಗಳೂರು ಕೃಷಿ ವಿ.ವಿ.ಆವರಣದಲ್ಲಿ ಶಿಲಾ ಪ್ರತಿಮೆ ಸ್ಥಾಪನೆ

1968
ರಾಜ್ಯ ಪ್ರಶಸ್ತಿ, ಸಾರ್ವಜನಿಕ ಸೇವಾ ಪ್ರಶಸ್ತಿ

1975
ಇಂದಿರಾ ಗಾಂಧಿಯವರಿಂದ ಪ್ರಶಸ್ತಿ ಪ್ರದಾನ

1982
ರಾಜ್ಯ ಪ್ರಶಸ್ತಿ, ಮುಂತಾದವು

ರಾಗಿಯ ಕ್ರಾಂತಿಯ ಹರಿಕಾರರಾದ ಇವರಿಗೆ ನೊಬೆಲ್ ಬಹುಮಾನ ಬರಬೇಕಿತ್ತು. ಆದರೆ ವಿಪರ್ಯಾಸ ಎಂದರೆ ಬಿಳಿ ಬಣ್ಣದ ಗೋಧಿಯನ್ನು ಕುರಿತಾಗಿ ಸಂಶೋಧನೆ ನಡೆಸಿದ ತಳಿ ವಿಜ್ಞಾನಿ ನಾರ್ಮನ್ ಬೋರ್ಲಾಗ್ ಅವರಿಗೆ ನೊಬೆಲ್ ಪುರಸ್ಕಾರ ದೊರಕಿತು.

ವಿದೇಶಕ್ಕೆ ಹೋಗಲಿಲ್ಲ!

ಇಷ್ಟೆಲ್ಲಾ ತಳಿಗಳನ್ನು ತರಲು ನಿಮಗೆ ಹೇಗೆ ಸಾಧ್ಯವಾಯಿತು? ಎಂದು ಲಕ್ಷ್ಮಣಯ್ಯ ನವರನ್ನು ಕೇಳಿದರೆ ಅವರು ಹೇಳುತ್ತಿದ್ದ ಮಾತು 'ನಾನು ಯಾರ ಮೇಲೂ ಅವಲಂಬಿತನಾಗಿಲ್ಲ' ಎನ್ನುವುದು. ಇವರ ಈ ಬದ್ಧತೆಯನ್ನು ಗುರುತಿಸಿ ಒಮ್ಮೆ ಅವರಿಗೆ ಉನ್ನತ ವ್ಯಾಸಂಗಕ್ಕಾಗಿ ಇಂಗ್ಲೆಂಡ್ ಯೂನಿವರ್ಸಿಟಿಯಿಂದ ಕರೆ ಬಂತು.

» ಮೂರನೇ ಪುಟಕ್ಕೆ



ಈ ಹಿಂದೆ ನಡೆದ ಅರ್ಧ ಕುಂಭಮೇಳದಲ್ಲಿ (2019) ಭಾಗವಹಿಸಿ ಬಂದವರ ಅನುಭವ ಬರಹ.

ಪವಿತ್ರನದಿಗಳಲ್ಲಿ ಮಹಾಮಜ್ಜನ!

» ಮೇಲ್ಗಿರಿ ದಾಸ್ ಚೇಕಲಪರ್ವಿ

ತುಂಗಭದ್ರೆಯನ್ನೂ ದಾಟದ ಬಯಲು ಸೀಮೆಯ ನನ್ನನ್ನು ಆಪೋಷನ ತೆಗೆದುಕೊಂಡು ಬಿಡುವಷ್ಟು ಸಂಗಮದ ಮೈ ಕೊರೆಯುವ ಚಳಿ ಮತ್ತು ಕುಳಿರ್ಗಾಳಿಗೆ ನಸುಕಿಗೆ ಎದ್ದು ಮಹಾ ಶಿವರಾತ್ರಿಯ ಪರ್ವಕಾಲದ ಕಡೆಯ ಶಾಹಿ ಸ್ನಾನಕ್ಕೆಂದು ಒಂದು ಪಂಜೆ ಹಾಗು ಶಲ್ಯ ಹೊದ್ದು ಬರಿಗಾಲಲ್ಲಿ ಹೊರಟಾಗ, ಇದು ನನ್ನ ಜೀವಮಾನದ ಎಂದೂ ಮರೆಯಲಾಗದ ಸ್ನಾನವಾಗುತ್ತದೆ ಎಂದು ನಾನು ಊಹಿಸಿರಲಿಲ್ಲ. ಶಾಹಿ ಸ್ನಾನದ ಪರ್ವದಿನಗಳಲ್ಲಿ ಕುಂಭ ಸ್ನಾನಕ್ಕೆ ಬರುವ ನೀವು ಪ್ರಯಾಗರಾಜದಲ್ಲಿ ಇಳಿದುಕೊಳ್ಳುವ ಯಾವುದೇ ಆಶ್ರಮದ ಅಂಗಳದಿಂದ ಸ್ನಾನಕ್ಕೆಂದು ನಾಲ್ಕು ಹೆಜ್ಜೆ ಇಡಬೇಕಷ್ಟೆ, ಆಸ್ತಿಕತೆಯೇ ಮೂರ್ತಿವೆತ್ತಂಥ ಸಮಸ್ತ ಯಾತ್ರಾರ್ಥಿಗಳ ನಿಬಿಡವಾದ ಗುಂಪಿನ ರಭಸಕ್ಕೆ ಸಿಕ್ಕ ನೀವು ಅನಾಮತ್ತಾಗಿ ಸಂಗಮದ ದಂಡೆಗೇ ಬಂದು ಬಿಟ್ಟಿರುತ್ತೀರಿ. ಆ ದಿನದ ಎಲ್ಲ ಹಾದಿಗಳು ಸಂಗಮದ ಪವಿತ್ರ ಸ್ನಾನದ ಕಡೆಗೆ ಮುಖ ಮಾಡಿರುತ್ತವೆ.

ನಲವತ್ತು ದಿನಗಳ ಕಾಲ ನಡೆಯುವ ಕುಂಭಮೇಳದ ಅಷ್ಟು ದಿನವೂ ನಿದ್ದೆಗೆಟ್ಟ ಪುಟ್ಟ ಶೆಹೆರ ಅಲಹಾಬಾದಿನ (ಇವತ್ತು ಅದು ಪ್ರಯಾಗರಾಜ) ಅಂಗಳದಲ್ಲಿ ತಾತ್ಕಾಲಿಕ ಶೆಡ್ಡುಗಳಿಂದ ನಿರ್ಮಿಸಿದ ವಸತಿ ಪ್ರದೇಶದಲ್ಲಿ ಜನಸ್ತೋಮ ಮುಂಜಾನೆಯಿಂದ ಸಂಜೆಯತನಕ ಹುಣ್ಣಿಮೆಯ ಸಮುದ್ರದ ಅಲೆಗಳಂತೆ ಭೋರ್ಗರೆಯುತ್ತಾ ಗುಂಪು ಗುಂಪಾಗಿ ಬಂದು ಮಾಡುವ ಒಂದು ಏಕೈಕ ಕೆಲಸವೆಂದರೆ ಸ್ನಾನ, ಸ್ನಾನ ಮತ್ತು ಸ್ನಾನ.

ಯಃಕಶ್ಚಿತ್ ಬರೀ ಒಂದು ಸ್ನಾನಕ್ಕೆ ಇಷ್ಟು ಹುಚ್ಚೇ? ಅದರಲ್ಲೂ ದೇಶ ಕಾಲಗಳ ಅರಿವಿಟ್ಟು ಸಂಕಲ್ಪ ಪೂರ್ವಕ ಮಾಡುವ ಸ್ನಾನಕ್ಕೂ ದೈನಂದಿನ ಸ್ನಾನಕ್ಕೂ ಇರುವ ವ್ಯತ್ಯಾಸವಾದರೂ ಏನು? 'ಇದೊಂದು ಉತ್ಪ್ರೇಕ್ಷೆಯ ಪರಾಕಾಷ್ಠೆ' ಎಂದು ಹೇಳುವ ನಾಸ್ತಿಕನ ಜಂಘಾಬಲವನ್ನು ಇಂಚಿಂಚಾಗಿ ಅಲುಗಾಡಿಸುವುದು ಅಲ್ಲಿ ನೆರೆದಿರುವ ಭಕ್ತರ ಭಾವೋದ್ರೇಕದ ನಿರಂತರ ಸ್ರೋತಸ್ಸಾದ ಸನಾತನ ಧರ್ಮದ ಅನರ್ಘ್ಯ ಕಣಜದ ಘಟ್ಟಿ ಕಾಳುಗಳು, ಕಾಲ ದೇಶಗಳನ್ನು ಮೀರಿದ ಒಂದು ಅವಿಚ್ಛಿನ್ನ ಪರಂಪರೆಗೆ ಸಾಕ್ಷಿಯಾದ ಕುಂಭ ಮೇಳ, ಎಲ್ಲರ ಮನಸ್ಸಿನ ಮೇಲೆ ಗಾಢ ಪರಿಣಾಮವನ್ನು ಉಂಟು ಮಾಡುವುದು ನಿಸ್ಸಂದೇಹ.

2019ರಲ್ಲಿಲ ನಡೆದ ಅರ್ಧ ಕುಂಭಕ್ಕೆ ದೂರದ ದಕ್ಷಿಣದಿಂದ ಸಂಗಮಕ್ಕೆ ಹೋಗಬೇಕೆನ್ನುವ ನನ್ನ ಉತ್ಕಟ ಸೆಳೆತದ ಮೂಲ ಸ್ರೋತಸ್ಸ ಯಾವುದು ಎಂದು ಹೇಳುವುದು ಕಷ್ಟ. ಪ್ರಾಯಃ ಈ ಜನನ ಮರಣಗಳ ನಿರಂತರ ನೊಗ ಹೊತ್ತ ಆತ್ಮಕ್ಕೆ ಮೋಕ್ಷ ಕಾಣಿಸಬೇಕೆಂಬ ಹಂಬಲದಿಂದ ಅಲ್ಲಿ ಬಿದ್ದ ಅಮೃತದ ಹುಡುಕಾಟವೋ? ಹಲವಾರು ನಂಬಿಕೆಗಳ ಮಿಶ್ರಣವನ್ನು ತನ್ನೆಡೆಗೆ ಸೆಳೆದು ಒಂದೆಡೆ ಗುಡ್ಡೆ ಹಾಕುವ ಭೂಮಂಡಲದ ಅತ್ಯಂತ ಬೃಹತ್ ಸಂಘಟಿತ ಗೊಂದಲಕ್ಕೆ ಸಾಕ್ಷಿಯಾಗುವುದಕ್ಕೋ? ಅಥವಾ ಭಾರತವನ್ನು ಭಾರತೀಯತೆಯನ್ನು ಅತ್ಯಂತ ನಿಕಟವಾಗಿ ಅನುಭವಿಸುವದಕ್ಕೆ ಬದುಕು ನಮ್ಮ ಆಯುಷ್ಯದಲ್ಲಿ ಒಮ್ಮೆಯಷ್ಟೇ ಕೊಡಮಾಡುವ ಲಜ್ಞಟರಿಯೋ? ಈ ರೀತಿಯ ಪ್ರಶ್ನೆಗಳಿಗೆ ಸಿಗುವ ಉತ್ತರ ನಾವು ಅಲ್ಲಿ ಎಲ್ಲ ಜಾತಿ ಮತ ಪಂಥ ತೊರೆದು ಮಾಡುವ ಒಂದೇ ಒಂದು ಸ್ನಾನದಲ್ಲಿ! ಹರ ಹರ ಮಹಾದೇವ, ಜೈ ಶ್ರೀರಾಮ್ , ಜೈ ಗಂಗಾ ಮೈಯ್ಯಾ ಎಂದು ಮಾರ್ಧವಿಸುವ ಮೊರೆತಕ್ಕೆ.

ಕೇವಲ ಹನ್ನೆರಡು ಲಕ್ಷ ಜನಸಂಖ್ಯೆಯ ಪ್ರಯಾಗ, 2019ರಲ್ಲಿ ನಡೆದ ಅರ್ಧ ಕುಂಭಕ್ಕೆ 24 ಕೋಟಿಗೂ ಅಧಿಕ ಶ್ರದ್ಧಾಳುಗಳ ಆತಿಥ್ಯಕ್ಕೆ ಮೈ ಕೊಡವಿಕೊಂಡು ನಿಂತದ್ದು ಒಂದು ವಿಸ್ಮಯವೇ ಸರಿ. ಕಣ್ಣು ಹರಿದಷ್ಟು ದೂರ ದುದ್ದಕ್ಕೂ ಶೆಡ್ಡುಗಳು, ಅಖಾಡಾಗಳು, ಮಾಂತ್ರಿಕತೆಯನ್ನೂ ನಿಗೂಢವನ್ನೂ ಒಟ್ಟೊಟ್ಟಿಗೆ ಹೊತ್ತು ತರುವ ನಾಗಾ ಸಾಧುಗಳು, ಹಲವಾರು ದಿನಗಳಿಂದ ಶ್ರದ್ಧಾಳುಗಳು ಅಲ್ಲಿ ಮಾಡುವ ಕಲ್ಪವಾಸ ನಮ್ಮನ್ನು ಬೇರೊಂದು ಲೋಕಕ್ಕೆ ಕರೆದುಕೊಂಡು ಹೋಗಿ ಬಿಡುತ್ತದೆ.

ತ್ರಿವೇಣಿ ಶಬ್ದದಲ್ಲಿ ವೇಣಿ ಎಂಬ ಶಬ್ದಕ್ಕೆ ಕನ್ನಡದಲ್ಲಿ ಕೂದಲು ಎಂಬರ್ಥ. ಗಂಗೆ, ಯಮುನೆ ಮತ್ತು ಮೂರನೆಯ ಎಳೆ ಗುಪ್ತಗಾಮಿನಿಯಾದ ಸರಸ್ವತೀ. ಹೀಗಾಗಿ ಇದು ತ್ರಿವೇಣಿ ಸಂಗಮ, ಮೂರು ನದಿಗಳ ಸಂಗಮ, ಎರಡು ನದಿಗಳು ಸೇರುವ ಎಲ್ಲ ನದಿಗಳನ್ನು ಸಾಮಾನ್ಯವಾಗಿ ಪ್ರಯಾಗ ಎಂದು ಕರೆದರೆ ತ್ರಿವೇಣಿ ಸಂಗಮ ಎಲ್ಲ ಸಂಗಮಗಳ ಚಕ್ರವರ್ತಿ, ಹೀಗಾಗಿ ಇದನ್ನು ಪ್ರಯಾಗ ರಾಜ ಎಂದು ಕರೆದಿದ್ದಾರೆ. ಪ್ರಯಾಗದ ಪ್ರಾಚೀನ ವೇಣಿ ಮಾಧವನ ಮಂದಿರ ಹಾಗು ಗಂಗೆಯ ತಟದಲ್ಲಿ ಮಲಗಿದ ಹನುಮಂತ ದೇವರ ಮಂದಿರ ಬಹಳ ಪ್ರಸಿದ್ಧಿಯನ್ನು ಪಡೆದಿವೆ.

ಪುಸ್ತಕ ವಿಮಾನ

ಮುದ್ದಣನ ಸಮಗ್ರ ಕಾವ್ಯಭಂಡಾರ

» ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಹಳೆಗನ್ನಡ ಮತ್ತು ಹೊಸಗನ್ನಡಗಳ ಮಧ್ಯಮಣಿಯಾದ ಮುದ್ದಣ ಕವಿ ಐದು ಕಾವ್ಯಗಳನ್ನು ರಚಿಸಿದವನು. ರತ್ನಾವತೀ ಕಲ್ಯಾಣ, ಕುಮಾರ ವಿಜಯ ಯಕ್ಷಗಾನ ಕೃತಿಗಳಾದರೆ ಶ್ರೀರಾಮಪಟ್ಟಾಭಿಷೇಕಂ ವಾರ್ಧಕ ಷಟ್ಪದಿಯ ಕಾವ್ಯ. ಶ್ರೀರಾಮಾಶ್ವಮೇಧಂ ಮತ್ತು ಅದ್ಭುತ ರಾಮಾಯಣಂಗಳು ಗದ್ಯಕಾವ್ಯಗಳು. ಇವುಗಳೊಂದಿಗೆ 17 ಸಂಪ್ರದಾಯದ ಹಾಡುಗಳು ಮತ್ತು ಜೋಜೋ ಎಂಬ ಲೇಖನವನ್ನು (ಸುವಾಸಿನೀ ಪತ್ರಿಕೆ-1900) ಅವನು ಬರೆದಿದ್ದಾನೆ. ಈ ಎಲ್ಲ ಕೃತಿಗಳೂ ಸೇರಿಕೊಂಡು ಇದೀಗ ಸಮಗ್ರ ಕಾವ್ಯಸಂಪುಟವಾಗಿ ಮುದ್ದಣ ಕೃತಿಕರಜನ ನಮ್ಮ ಮುಂದಿದೆ.

ಮುದ್ದಣನ ಎಲ್ಲಾ ಕಾವ್ಯಗಳನ್ನು ಒಳಗೊಂಡಿರುವ ಈ ಕೃತಿಯಲ್ಲಿ, ಆತನ ಐದೂ ಕಾವ್ಯಗಳಿಗೆ ಪ್ರತ್ಯೇಕವಾದ ಪ್ರಸ್ತಾವನೆ, ಹೊಸಗನ್ನಡದಲ್ಲಿ ಕಥಾಸಾರ ಮತ್ತು ಅರ್ಥಕೋಶಗಳನ್ನು ನೀಡಲಾಗಿದೆ. ಕವಿಯು ಪರ್ಯಾಯಪದಗಳ ಬಳಕೆಯಲ್ಲಿ ತೋರಿದ ಜಾಣ್ಮೆಗೆ ಕನ್ನಡಿ ಹಿಡಿಯುವ ನಾಮಾಂತರಸೂಚಿ, ಆಕರಸೂಚಿ, ಕವಿಯ ಬದುಕಿನ ಮೈಲಿಗಲ್ಲುಗಳು ಮತ್ತು ಅಪೂರ್ವಚಿತ್ರಗಳು ಇದರ ಮೌಲ್ಯವನ್ನು ಹೆಚ್ಚಿಸಿವೆ.

ಇವುಗಳನ್ನು ಬರೆದ ನಂದಳಿಕೆ ಲಕ್ಷ್ಮೀನಾರಾಯಣಯ್ಯ ಉಡುಪಿ-ಕುಂದಾಪುರಗಳ ಪ್ರೌಢಶಾಲೆಗಳಲ್ಲಿ ವ್ಯಾಯಾಮ ಶಿಕ್ಷಕನಾಗಿ, ಕನ್ನಡ ಪಂಡಿತನಾಗಿ ದುಡಿದು ಮೂವತ್ತೊಂದರ ಹರೆಯದಲ್ಲೇ (1870-1901) ವಿಧಿವಶನಾದನು. ತಾನು ರಚಿಸಿದ ಕಾವ್ಯ ಎಂಬುದು ಗೊತ್ತಾದರೆ ಕೃತಿಪ್ರಕಟಣೆ ಕೈಗೂಡದೆಂದು ಭಾವಿಸಿದ ಅವನು ಮುದ್ದಣನೆಂಬ ಮರೆಹೆಸರಿನಿಂದ ಮೈಸೂರಿನ ಕರ್ಣಾಟಕ ಕಾವ್ಯಮಂಜರಿಗೆ ಹಸ್ತಪ್ರತಿಯನ್ನು ಕಳುಹಿಸಿದ ವೃತ್ತಾಂತವು ಕನ್ನಡದ ಗ್ರಂಥಪ್ರಕಾಶನದ ಇತಿಹಾಸವನ್ನೂ ನಮ್ಮ ಮುಂದೆ ತೆರೆದಿಡುತ್ತದೆ.

ಶ್ರೀರಾಮಪಟ್ಟಾಭಿಷೇಕಂ ಮೈಸೂರಿನಿಂದ ಪ್ರಕಟಗೊಂಡ (1897) ಬಳಿಕ ಕರ್ನಾಟಕ ಸರ್ಕಾರದ ಕನ್ನಡ ಸಂಸ್ಕೃತಿ ನಿರ್ದೇಶನಾಲಯವು ಪ್ರೊ.ಜಿ.ವೆಂಕಟಸುಬ್ಬಯ್ಯ ಅವರ ಸಂಪಾದನೆಯಲ್ಲಿ 'ಮುದ್ದಣ ಭಂಡಾರ' ಎಂಬ ಹೆಸರಿನಲ್ಲಿ ಮುದ್ದಣನ ಸಮಗ್ರ ಕೃತಿಗಳನ್ನು (1987) ಪ್ರಕಟಿಸಿತು. ಅದರ ಪ್ರತಿಗಳು ಈಗ ಅಲಭ್ಯವಾಗಿರುವುದರಿಂದ ನಮ್ಮ ನಡುವಿನ ಹಿರಿಯ ವಿದ್ವಾಂಸರಾದ ಪ್ರೊ.ಎ.ವಿ.ನಾವಡ ಅವರು ವೈಯಕ್ತಿಕ ನೆಲೆಯಲ್ಲಿ ಕೈಗೊಂಡ ಈ ಸಾಹಿತ್ಯತಪಸ್ಸು ಗಮನಾರ್ಹವಾದುದು.

ಈ ಗ್ರಂಥದಲ್ಲಿ ಕವಿಮುದ್ದಣನ ಐದೂ ಕಾವ್ಯಗಳಿಗೆ ಪ್ರತ್ಯೇಕವಾದ ಪ್ರಸ್ತಾವನೆ, ಹೊಸಗನ್ನಡದಲ್ಲಿ ಕಥಾಸಾರ ಮತ್ತು ಅರ್ಥಕೋಶಗಳನ್ನು ನೀಡಲಾಗಿದೆ. ಕವಿಯು ಪರ್ಯಾಯ ಪದಗಳ ಬಳಕೆಯಲ್ಲಿ ತೋರಿದ ಜಾಣ್ಮೆಗೆ ಕನ್ನಡಿ ಹಿಡಿಯುವ ನಾಮಾಂತರಸೂಚಿ, ಆಕರಸೂಚಿ, ಕವಿಯ ಬದುಕಿನ ಮೈಲಿಗಲ್ಲುಗಳು ಮತ್ತು ಅಪೂರ್ವಚಿತ್ರಗಳು ಇದರ ಮೌಲ್ಯವನ್ನು ಹೆಚ್ಚಿಸಿವೆ. ಮುದ್ದಣನ ಕುರಿತು ಪ್ರೊ.ಎಸ್.ವಿ.ಪರಮೇಶ್ವರ ಭಟ್ಟರ ಲೇಖನ, 'ಕೃತಿಕರಜನ'ದ ವೈಶಿಷ್ಟ್ಯವನ್ನು ಎತ್ತಿತೋರಿದ ಪ್ರೊ. ಬಸವರಾಜ ಕಲ್ಗುಡಿಯವರ ಮುನ್ನುಡಿ ಮತ್ತು ಸಂಪಾದಕರ ವೈದುಷ್ಯಪೂರ್ಣ ಪ್ರಸ್ತಾವನೆಗಳು ಮುದ್ದಣ ಕಾವ್ಯಾಭ್ಯಾಸಕ್ಕೆ ಕೈದೀವಿಗೆಗಳಾಗಿವೆ. ಮುದ್ದಣನ ಯಕ್ಷಗಾನ ಕೃತಿಗಳಾದ ರತ್ನಾವತೀ ಕಲ್ಯಾಣ ಮತ್ತು ಕುಮಾರ ವಿಜಯಗಳು (1891) ಅವನ ಜೀವಿತಕಾಲದಲ್ಲೇ ಪ್ರಕಟವಾದರೂ, ಅದರಿಂದ ತಾನು ಕೈಸೋತೆನೆಂದು ಹೇಳಿಕೊಂಡಿರುವುದು ಕನ್ನಡ ಪುಸ್ತಕಪ್ರಕಾಶನದ ವಿಷಾದಗೀತೆಯ ಮೊದಲ ಪಲ್ಲವಿಯಾಗಿದೆ. ಆದುದರಿಂದಲೇ ತನ್ನ ಉಳಿದ ಮೂರು ಕಾವ್ಯಗಳನ್ನು ಅನ್ಯಕರ್ತೃಕವೆಂದು ಅವನು ಹೇಳಿಕೊಳ್ಳಬೇಕಾಯಿತು! ಅದ್ಭುತ ರಾಮಾಯಣವನ್ನು ಕಬ್ಬಿಗರ ಮನೆಯೂಳಿಗದನೊರ್ವಂ ಕನ್ನಡಿಗಂ ಎಂದೂ, ಶ್ರೀ ರಾಮಪಟ್ಟಾಭಿಷೇಕವನ್ನು ಚಾವಡಿ ರಂಗಭಟ್ಟನಾತ್ಮಜೆ ಮಹಾಲಕ್ಷ್ಮಿ ಎಂದೂ, ಶ್ರೀ ರಾಮಾಶ್ವಮೇಧವನ್ನು ಮುದ್ದಣ ಕವಿಕೃತಂ ಎಂದೂ ಹೇಳಿಕೊಂಡ!



ಮುದ್ದಣ ಕೃತಿಕರಜನ
ಸಂ: ಪ್ರೊ.ಎ.ವಿ.ನಾವಡ
ಪ್ರ: ಶೋಧನ ಪ್ರಕಾಶನ, ಮಂಗಳೂರು
ಮೊದಲ ಮುದ್ರಣ: 2024
ಪುಟಗಳು: 640
ಬೆಲೆ: ರೂ. 1000/-

ಇವುಗಳಲ್ಲಿ ಅದ್ಭುತ ರಾಮಾಯಣ (1895) ಮತ್ತು ಶ್ರೀರಾಮಪಟ್ಟಾಭಿಷೇಕ (1897)ಗಳು ಕವಿಯ ಜೀವಿತ ಕಾಲದಲ್ಲೇ ಬೆಳಕು ಕಂಡರೂ, ಅವನ ಶ್ರೇಷ್ಠ ಪ್ರಾತಿನಿಧಿಕ ಕೃತಿ ರಾಮಾಶ್ವಮೇಧ ಪ್ರಕಟವಾದಾಗ (1902) ಕವಿಯು ಬದುಕಿರಲಿಲ್ಲ ಎಂಬುದು ನೋವಿನ ಸಂಗತಿ. ಮುದ್ದಣನಿಗೆ ಕಾವ್ಯರಚನಾಕ್ರಮವನ್ನು ಅವನ ಗುರುಗಳಾದ ಮಳಲಿ ಸುಬ್ಬರಾಯರು, ಬವುಳಾಡಿ ವೆಂಕಟರಮಣ ಹೆಬ್ಬಾರರು ಮತ್ತು ಅವರ ತಾಯಿ ಮಹಾಲಕ್ಷ್ಮಿ (ಕವಿಯ ತಾಯಿಯ ಹೆಸರೂ ಮಹಾಲಕ್ಷ್ಮಿಯೇ) ಬೋಧಿಸಿದರೆಂಬ ವಿಚಾರ, ಗೋವಿಂದ ಪೈ, ಬೆನಗಲ್ ರಾಮರಾವ್, ಎಂ.ಎ.ರಾಮಾನುಜೈಯಂಗಾರ್ ಮುಂತಾದ ಮಹನೀಯರು ಕವಿಯ ಕುರಿತು ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಇಲ್ಲಿ ಸಂಗ್ರಹಿಸಲಾಗಿದೆ. ಅಂತೆಯೇ ಅದ್ಭುತರಾಮಾಯಣದ ಕವಿಯ ಕೈಬರೆಹದ ಮೂಲಪ್ರತಿಯ ಶೋಧ ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿರುವ ಕವಿಯ ಸ್ವಹಸ್ತಪ್ರತಿ ರಾಮಾಶ್ವಮೇಧದ ಶಾಸ್ತ್ರೀಯ ಸಂಪಾದನ ಕಾರ್ಯದ ಅಗತ್ಯವನ್ನು ಕನ್ನಡದಲ್ಲಿ ಆಗಬೇಕಾಗಿರುವ ಮಹತ್ವದ ಕೆಲಸಗಳು ಎಂದು ಸಂಪಾದಕರು ಸೂಚಿಸಿರುವುದು ಗಮನಾರ್ಹ. ಮುದ್ದಣಕವಿಯು ಅಸ್ತಂಗತನಾಗಿ 124 ವರ್ಷಗಳು ಕಳೆದರೂ ಅವನ ಕಾವ್ಯದ ಚರ್ಚೆ ಇನ್ನೂ ಮುಗಿದಿಲ್ಲ! ಹಳಗನ್ನಡದ ಬಳಕೆ, ದೇಶೀ ಪ್ರೀತಿ, ಯಕ್ಷಗಾನದಲ್ಲಿ ನೂತನ ಪದ್ಯಬಂಧಗಳ ಸೃಜನೆ, ಗದ್ಯಕಥನದ ಶೈಲಿ, ಸಾಹಿತ್ಯವಿಮರ್ಶನ ದೃಷ್ಟಿ, ಹೊಸ ಆಲೋಚನೆಗಳ ಮಿಂಚು ಮುಂತಾಗಿ ಮುದ್ದಣನ ಕಾವ್ಯ ಕನ್ನಡಿಗರನ್ನು ಎಚ್ಚರಿಸುತ್ತಲೇ ಇದೆ. ಈ ಬಗ್ಗೆ ವಿದ್ವದ್ವಲಯ ಇನ್ನಷ್ಟು ಕೃಷಿಮಾಡಬೇಕೆಂಬ ದಿಸೆಯಲ್ಲಿ ಅಲಭ್ಯವಾದ ಕೃತಿಗಳನ್ನು ಮರುಸಂಪಾದಿಸಿದ ಈ ಕಾರ್ಯ ಪ್ರಶಂಸಾರ್ಹವಾದುದು. ಪ್ರೊ.ಎ.ವಿ.ನಾವಡ ಅವರು ನಮ್ಮ ನಡುವೆ ಕ್ರಿಯಾಶೀಲರಾಗಿರುವ ಹಿರಿಯ ವಿದ್ವಾಂಸರು. ಹಂಪಿಯ ಕನ್ನಡ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ ಮತ್ತು ಭಾಷಾನಿಕಾಯದ ಡೀನ್ ಆಗಿ ನಿವೃತ್ತರು. ಜನಪದ ಸಾಹಿತ್ಯ, ಮಿಷನರಿ ಸಾಹಿತ್ಯ ಮತ್ತು ದಾಸಸಾಹಿತ್ಯದ ಅಧ್ಯಯನಕ್ಕೆ ಹೊಸ ಆಯಾಮಗಳನ್ನು ನೀಡಿದವರು. ಇದೀಗ ಇವರು ಸಂಪಾದಿಸಿದ 'ಕೃತಿಕರಜನ' ಮುದ್ದಣ ಕವಿಯ ಕಾವ್ಯಾಭರಣಗಳ ಹೊಸಭಂಡಾರ ಎನ್ನಬಹುದು.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ನುಡಿಗಳ ಅಳಿವು
(ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ)
ಲೇ: ಕೆ.ವಿ. ನಾರಾಯಣ
ಪ್ರ: ಅಹರ್ನಿಶಿ ಪ್ರಕಾಶನ, ಶಿವಮೊಗ್ಗ
ಬೆಲೆ : ರೂ 125/-

2

ಮುಚ್ಚಿಟ್ಟ ದಲಿತ ಚರಿತ್ರೆ
(ಅಂಬೇಡ್ಕರ್ ಮತ್ತು ಮಂಡಲ್ ಹೇಳಿದ ಸತ್ಯಗಳು)
ಲೇ: ರಾಕೇಶ್ ಶೆಟ್ಟಿ
ಪ್ರ: ನಿಲುಮೆ ಪ್ರಕಾಶನ, ಬೆಂಗಳೂರು
ಬೆಲೆ : ರೂ 150/-

3



ತತ್ರಾಣಿ
(ಗತ ಶತಮಾನದ ಉತ್ಕ್ರಾಂತಿಯ ಕಥೆ - ಕಾದಂಬರಿ)
ಲೇ: ದೀಪಾ ಜೋಶಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 395/-

4



ಪದಮಣಿ ದರ್ಪಣ
(ಜನಪ್ರಿಯ ಅಂಕಣ ಬರಹಗಳು)
ಲೇ: ವಿಶ್ವೇಶ್ವರ ಭಟ್
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 195/-

5



ಕಾಲ್ದಾರಿ
(ಕೃತಿವಿಮರ್ಶೆ - ಲೋಕವಿಮರ್ಶೆ)
ಲೇ: ಅಗ್ರಹಾರ ಕೃಷ್ಣಮೂರ್ತಿ
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ
ಬೆಲೆ : ರೂ 230/-

6



ಬುಕ್ಯಾನನ್ ಪ್ರವಾಸ
(ಮೈಸೂರು, ಕೆನರಾ, ಮಲಬಾರ್ ಪ್ರಯಾಣ)
ಲೇ: ಡಾ। ಫ್ರಾನ್ಸಿಸ್ ಬುಕ್ಯಾನನ್ ಹ್ಯಾಮಿಲ್ಟನ್
ಅನು : ಡಿ.ಎಸ್. ಲಿಂಗರಾಜು
ಪ್ರ: ನವಕರ್ನಾಟಕ ಪ್ರಕಾಶನ, ಬೆಂಗಳೂರು
ಬೆಲೆ : ರೂ 395/-

7



ಪರದೆ
(ಕಥಾ ಸಂಕಲನ)
ಲೇ: ಎ.ಎನ್. ಪ್ರಸನ್ನ
ಪ್ರ: ವೀರಲೋಕ ಪ್ರಕಾಶನ, ಬೆಂಗಳೂರು
ಬೆಲೆ : ರೂ 230/-

8



ಸರ್ವೆ ನಂಬರ್ - 97
(ಕಥೆಗಳು)
ಲೇ: ಅನಿಲ್ ಗುನ್ನಾಪೂರ
ಪ್ರ: ಹೊಂಗಿರಣ ಪ್ರಕಾಶನ, ಹಿರೇಮಸಳಿ
ಬೆಲೆ : ರೂ 120/-

9



ಅನಿರೀಕ್ಷಿತ ಕಥೆಗಳು
(ಸಣ್ಣಕಥೆಗಳು)
ಲೇ: ರೊಆಲ್ಡ್ ಡಾಹ್ಲ್
ಅನು : ಜೆ.ವಿ. ಕಾರ್ಲೊ
ಪ್ರ: ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 230/-

10



ಪೂರ್ಣಚಂದ್ರ ತೇಜಸ್ವಿ
(ಸಂವಾದ- ಸಂದರ್ಶನ - ಪರಿಸರ ಸಂಕಥನ)
ಲೇ: ನರೇಂದ್ರ ರೈ ದೇರ್ಲ
ಪ್ರ: ಕನಸು ಪ್ರಕಾಶನ, ಪುತ್ತೂರು
ಬೆಲೆ : ರೂ 180/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ಅಬ್ಬಕ್ಕಳ ಕುರಿತು ಹೊಸ ಬೆಳಕು

» ಸೀಮಾ ಎಸ್. ಭಟ್

ಅರಣ್ಯಾಧಿಕಾರಿಗಳಾದ ಲಕ್ಷ್ಮಣ ಮೂರ್ತಿ ಅವರ 'ರಾಣಿ ಅಬ್ಬಕ್ಕ ದೇವಿಯ ಜತೆ ಪಯಣ' ಎನ್ನುವ ಪುಸ್ತಕದ ವಿನ್ಯಾಸ ಗಮನ ಸೆಳೆಯುತ್ತದೆ. ಇತಿಹಾಸದ ವಿಶ್ಲೇಷಣೆ, ವಿದೇಶಿಯರು ನಮ್ಮ ದೇಶದವರನ್ನು ಶೋಷಿಸಿದ್ದು, ಅವರ ವಿರುದ್ಧ ಯಶಸ್ವಿಯಾಗಿ ತಿರುಗಿಬಿದ್ದ ಅಪರೂಪದ ಉದಾಹರಣೆ, ಹೊಸ ಸಂಶೋಧನೆಯ ಪ್ರಯತ್ನ, ವಿದ್ಯಮಾನ ನಡೆದ ಪ್ರದೇಶಕ್ಕೆ ಸಮಕಾಲೀನರೊಬ್ಬರ ಭೇಟಿಯ ವಿವರಗಳು - ಇವೆಲ್ಲವೂ ಈ ಪುಸ್ತಕದ ವೈಶಿಷ್ಟ್ಯ ಎನ್ನಬಹುದು.

ಲಕ್ಷ್ಮಣ ಮೂರ್ತಿ ಅವರು ಕನ್ನಡಿಗರಿಗೆ ಈಚೆಗೆ ಪರಿಚಯವಾಗುತ್ತಿರುವ ಹೆಸರು. ಲಕ್ಷ್ಮಣಮೂರ್ತಿ ಅವರು ಐಎಎಸ್ ಆಗಲು ಪರೀಕ್ಷೆ ಬರೆದು, ಪರೀಕ್ಷಾ ಕೊಠಡಿಯಿಂದ ಹೊರಬಂದಾಗ 'ನಾನು ಬರೆದ ರಿಜಿಸ್ಟ್ರೇಷನ್

ಪೋರ್ಚುಗೀಸ್ ಸೇನೆಯನ್ನು ಸೋಲಿಸಿದ ರಾಣಿ ಅಬ್ಬಕ್ಕ ಕುರಿತು ಹೊಸ ವಿಷಯಗಳನ್ನು ಈ ಪುಸ್ತಕ ಚರ್ಚಿಸಿದೆ.

ನಂಬರ್ ಸರಿಯಾಗಿತ್ತಾ ಇಲ್ಲವೋ' ಎಂದು ಸಂದೇಹ ಬಂದು ವಾಪಸ್ ಹೋಗಿ ಕೇಳಿದರೆ ಆ ಮೇಲ್ವಿಚಾರಕರು ಹೇಳಿದರಂತೆ 'ಆ ಉತ್ತರ ಪತ್ರಿಕೆ ಮತ್ತು ನಿನ್ನ ಹಣೆ ಬರಹ ಎರಡೂ ಲಾಕ್ ಆಗಿದೆ' ಎಂದು. ನಂತರ ಅವರು ಉತ್ತಮ ದರ್ಜೆಯಲ್ಲಿ ಪಾಸಾಗಿ ಉತ್ತರ ಪ್ರದೇಶ ಮತ್ತು ಝಾರ್ಖಂಡ್ ರಾಜ್ಯಗಳಲ್ಲಿ ಅರಣ್ಯಾಧಿಕಾರಿಯಾಗಿ ಕೆಲಸ ಮಾಡಿದರು! ನಿವೃತ್ತರಾಗಿ ಬೆಂಗಳೂರಿಗೆ ಬಂದು ವಾಸಿಸಲು ಶುರುವಾದ ಮೇಲೆ ಕಾರ್ಯಕ್ರಮವೊಂದರಲ್ಲಿ ರಾಣಿ ಅಬ್ಬಕ್ಕ ದೇವಿಯ ಬಗೆಗೆ ಪ್ರಸ್ತಾಪವಾಯಿತಂತೆ. ಆಕೆಯ ಕುರಿತು ಕುತೂಹಲ ತಾಳಿ, ತಾವೇ ಅಧ್ಯಯನಕ್ಕೆ ತೊಡಗಿ, ಅದಕ್ಕಾಗಿ ನಡೆಸಿದ ಪ್ರಯಾಣದ ದಾಖಲೆ ಈ ಪುಸ್ತಕ.

ರಾಣಿ ಅಬ್ಬಕ್ಕ ಬಗೆಗೆ ಮೊದಲು ಅಧ್ಯಯನ ಮಾಡಲು ಶಾಂತಕುಮಾರ್ ಅವರು ಸೂಚಿಸಿದ ಹೆಸರು ಇತಿಹಾಸಜ್ಞರಾದ ಎಚ್. ಎಸ್. ಗೋಪಾಲರಾವ್ ಅವರದು. ಅಲ್ಲಿಂದ ಆರಂಭಗೊಂಡ ಅಬ್ಬಕ್ಕನ ಜತೆಗಿನ ಲಕ್ಷ್ಮಣ ಮೂರ್ತಿ ಅವರ ಪ್ರಯಾಣ ಇನ್ನೂ ನಿಂತಿಲ್ಲ. ತುಳುನಾಡಿನ ಸಂಸ್ಕೃತಿಗಳ ಮ್ಯೂಜಿಯಂ ಮಾಡಿ ತಮ್ಮೆಲ್ಲ ತನು-ಮನ-ಧನಗಳ ಮೂಲಕ ಅಬ್ಬಕ್ಕ ರಾಣಿಯಂಥವರನ್ನುಮುಂದಿನ ತಲೆಮಾರಿಗೂ ಪರಿಚಯಿಸಲು ಶ್ರಮ ಪಡುತ್ತಿರುವ ತುಕಾರಾಂ ಪೂಜಾರಿಯವರನ್ನು ಭೇಟಿಯಾಗಿ ಅಬ್ಬಕ್ಕರಾಣಿಯ ಇತಿಹಾಸದ ಹುಡುಕಾಟದ ವೇಗವನ್ನುಹೆಚ್ಚಿಸಿಕೊಂಡರು. ಉಲ್ಲಾಳದ ಮಕ್ಕಚೇರಿ, ಮೋಹನ್ ಆಳ್ವಾ, ಸೇಂಥಿಲ್ ಮುಂತಾದವರೆಲ್ಲರನ್ನು ಭೇಟಿಯಾದ ವಿವರಗಳು, ಉಲ್ಲಾಳದ ಸಮುದ್ರ ತೀರ, ಸಾವಿರ ಕಂಬದ ಬಸದಿ, ಪಾಳುಬಿದ್ದ ಅರಮನೆ, ಕಾಸರಗೋಡು ಮುಂತಾದ ಕಡೆಗಳಲ್ಲಿ ಅವರು ಕಂಡ ಅನುಭವಿಸಿದ ಸಂಗತಿಗಳನ್ನೆಲ್ಲ ಅಕ್ಷರ ಚಿತ್ರಗಳಾಗಿ ವಿವರಿಸಿದ್ದಾರೆ. ಈವರೆಗೆ ಅವರು ಸಂಗ್ರಹಿಸಿದ ಎಲ್ಲ ದಾಖಲೆಗಳನ್ನು, ಫ್ಯಾರಿಸ್‌ನಲ್ಲಿರುವ ರಾಣಿ ಅಬ್ಬಕ್ಕಳ ಅರಮನೆಗೆ ಸಂಬಂಧಿಸಿದ ದಾಖಲೆಗಳು ವಸ್ತುಗಳನ್ನೆಲ್ಲ ಪರಿಶೀಲಿಸಿ ರಾಣಿ ಅಬ್ಬಕ್ಕಳ ಮಸುಕಾಗಿರುವ ಇತಿಹಾಸವನ್ನು ಪುನರ್ ರಚಿಸಲು ಸಹಕಾರಿಯಾಗುತ್ತದೆ ಎನ್ನುವ ನಂಬಿಕೆ ಅವರದು.

ವಿಜಯನಗರದ ಅರಸರ ಕಾಲದಲ್ಲಿದ್ದ, ಮೂಡುಬಿದಿರೆಯ ತಿರುಮಲರಾಯನ ಸೋದರ ಸೊಸೆ ಅಬ್ಬಕ್ಕ. ಚಿಕ್ಕಂದಿನಲ್ಲಿ ತಂದೆ ತಾಯಿಯರನ್ನು ಕಳೆದುಕೊಂಡ ಆಕೆ ಮುಂದೆ ಯುದ್ಧವಿದ್ಯೆಗಳನ್ನು ಕಲಿಯುತ್ತಾಳೆ. ಗಂಡ ಲಕ್ಕಪ್ಪರಸ ಮಂಗಳೂರಿನಲ್ಲಿ ರಾಜನಾದರೆ, 1544ರಲ್ಲಿ ಉಲ್ಲಾಳದ ರಾಣಿಯಾಗುತ್ತಾಳೆ. ಛದ್ಮವೇಷದಿಂದ ಲಕ್ಕಪ್ಪ ಅಳಿಯ ಕಾಮರಾಯ ಅಬ್ಬಕ್ಕಳ ಗಂಡನನ್ನು ಕೊಲ್ಲುತ್ತಾನೆ. ಮುಂದೆ ರಾಣಿ ಪೋರ್ಚುಗೀಸರಿಗೆ ಕೊಡುತ್ತಿದ್ದ ಕಪ್ಪ ಕಾಣಿಕೆಗಳನ್ನು ನಿಲ್ಲಿಸಿ ಅವರ ಕೆಂಗಣ್ಣಿಗೆ ಗುರಿಯಾಗುತ್ತಾಳೆ. ಅವರ ಮೇಲೆ ಯುದ್ಧ ಸಾರಿ ಜಯವನ್ನು ಗಳಿಸುತ್ತಾಳೆ. ಪೋರ್ಚುಗೀಸರು ಕಾಮರಾಯನನ್ನು ಬಳಸಿಕೊಂಡು ರಾಣಿ ಅಬ್ಬಕ್ಕಳನ್ನು ಮುಗಿಸುತ್ತಾರೆ. ಮುಂದೆ ಪೋರ್ಚುಗೀಸರು ತನಗೆ ರಾಜ್ಯಭಾರ ವಹಿಸಬಹುದೆಂಬ ಆಸೆಯಲ್ಲಿದ್ದ ಕಾಮರಾಯನನ್ನು ಪೋರ್ಚುಗೀಸರು ಕೊಲ್ಲುತ್ತಾರೆ. ಅವನ ಮೋಸ ಅವನನ್ನೇ ಬಲಿತೆಗೆದುಕೊಳ್ಳುತ್ತದೆ. ರಾಣಿ ಅಬ್ಬಕ್ಕ ಮೆರೆದ ಸಾಹಸವನ್ನು ದಾಖಲಿಸುವ, ಆಕೆಯ ಕುರಿತು ಹೊಸ ಸಂಶೋಧನೆಗಳನ್ನು ಆಹ್ವಾನಿಸುವ ಪುಸ್ತಕವಿದು.



ರಾಣಿ ಅಬ್ಬಕ್ಕದೇವಿಯ ಜತೆ ಪಯಣ
ಲೇ: ಲಕ್ಷ್ಮಣ ಮೂರ್ತಿ
ಪ್ರ: ಅಭಿನವ ಬೆಂಗಳೂರು
8448804905
ಬೆಲೆ ರು.100/-

ಪ್ಲಾಸ್ಟಿಕ್ಸ್ ಕುರಿತು ಜನಜಾಗೃತಿ

» ಕಗ್ಗೆರೆ ಪ್ರಕಾಶ್

ಜಗತ್ತು ಪ್ಲಾಸ್ಟಿಕ್ಸ್ ಬಳಕೆ ಇಲ್ಲದೆ ಬದುಕಲಾರದ ಸ್ಥಿತಿ ತಲುಪಿದೆ. ಪ್ಲಾಸ್ಟಿಕ್ಸ್ ಸರ್ವಾಂತರ್ಯಾಮಿ. ವಿಶ್ವವ್ಯಾಪಿಯಾಗಿ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡಿದೆ. ಮನುಷ್ಯನ ಆರೋಗ್ಯಕ್ಕೆ ಹಾಗೂ ಮಣ್ಣಿನಲ್ಲಿ ಕರಗದೆ ಪರಿಸರಕ್ಕೆ ಅಪಾರ ಹಾನಿಯಾದರೂ ಪ್ಲಾಸ್ಟಿಕ್ಸ್ ಬಳಸುವುದನ್ನು ನಾವು ಬಿಟ್ಟಿಲ್ಲ. ಎಲ್ಲ ದೇಶಗಳ ಸರ್ಕಾರಗಳು ಒಂದೆಡೆ ಪ್ಲಾಸ್ಟಿಕ್ಸ್ ಬಳಕೆಗೆ ದಂಡ ವಿಧಿಸಿದರೂ ಇನ್ನೊಂದೆಡೆ ಉತ್ಪಾದಿಸುವ ಕಾರ್ಖಾನೆಗಳನ್ನು ರದ್ದು ಮಾಡಿಲ್ಲ. ಇಂಥ ಪ್ಲಾಸ್ಟಿಕ್ಸ್ ಬಳಕೆಯ ಸಾಧಕ-ಬಾಧಕಗಳನ್ನು ವೈಜ್ಞಾನಿಕ ದೃಷ್ಟಿಕೋನದಿಂದ 'ಪ್ಲಾಸ್ಟಿಕ್ಸ್ ಪುರಾಣ' ಎಂಬ ಪುಸ್ತಕವನ್ನು ಬರೆದಿರುವ ಡಾ. ಎಂ.ಎಸ್.ಎಸ್. ಮೂರ್ತಿ ಹಾಗೂ ಬಿ. ತೇಜ್‌ಕುಮಾರ್ ಜನಜಾಗೃತಿ ಮೂಡಿಸುವ ಕೆಲಸ ಮಾಡಿದ್ದಾರೆ. ಪ್ಲಾಸ್ಟಿಕ್ಸ್ ಇತಿಹಾಸ, ಪ್ಲಾಸ್ಟಿಕ್ಸ್ ಉತ್ಪಾದನೆ ಮತ್ತು ವರ್ಗೀಕರಣ, ಬಹು ಉಪಯೋಗಿ ಪ್ಲಾಸ್ಟಿಕ್ಸ್, ಪ್ಲಾಸ್ಟಿಕ್ಸ್ ಮತ್ತು ಪರಿಸರ, ಎಲ್ಲೆಲ್ಲೂ ಪ್ಲಾಸ್ಟಿಕ್ಸ್, ಮೈಕ್ರೋ ಪ್ಲಾಸ್ಟಿಕ್ಸ್, ಪ್ಲಾಸ್ಟಿಕ್ಸ್ ಬಳಕೆಯಲ್ಲಿನ ಸಮಸ್ಯೆಗಳು, ಜೈವಿಕ ಪ್ಲಾಸ್ಟಿಕ್ಸ್, ಪ್ಲಾಸ್ಟಿಕ್ಸ್ ತಿನ್ನುವ ಬ್ಯಾಕ್ಟೀರಿಯ, ಒಮ್ಮೆ ಬಳಸಿ ಬಿಸಾಡುವ ಪ್ಲಾಸ್ಟಿಕ್ಸ್ ವಸ್ತುಗಳ ನಿಷೇಧ, ಪೆಟ್ರೋ ಪ್ಲಾಸ್ಟಿಕ್ಸ್‌ಗೆ ಪರ್ಯಾಯಗಳು ಮತ್ತು ಪರಿಸರ ಪ್ರೇಮಿ, ಸಾಮಾಜಿಕ ಜವಾಬ್ದಾರಿ ಅಧ್ಯಾಯಗಳಲ್ಲಿ ಪ್ಲಾಸ್ಟಿಕ್ಸ್ ದುಷ್ಪರಿಣಾಮಗಳನ್ನು ಸಂಶೋಧನಾತ್ಮಕ ದೃಷ್ಟಿಯಲ್ಲೂ ಜನಸಾಮಾನ್ಯರಿಗೂ ಅರ್ಥವಾಗುವಂತೆ ಸರಳವಾಗಿ ಲೇಖಕರು ಬರೆದಿದ್ದಾರೆ. ವಿಶ್ವವನ್ನೇ ಕಾಡುತ್ತಿರುವ ಪ್ಲಾಸ್ಟಿಕ್ಸ್ ಮುಂಬರುವ ದಿನಗಳಲ್ಲಿ ಮನುಕುಲಕ್ಕೆ ಎಷ್ಟೊಂದು ಭೀಕರವಾಗಲಿದೆ, ಮನುಷ್ಯರಿಗೆ ಎಷ್ಟು ಬಗೆಯ ಕಾಯಿಲೆಗಳು ಮಾರಣಾಂತಿಕವಾಗಲಿವೆ, ಈಗಲಿಂದಲೇ ಪ್ಲಾಸ್ಟಿಕ್ಸ್ ಬಳಕೆಯಲ್ಲಿ ಎಷ್ಟು ಎಚ್ಚರಿಕೆ ವಹಿಸಬೇಕು ಎಂಬಂಥ ವಿಚಾರಗಳನ್ನು ಮನದಟ್ಟು ಮಾಡಲಾಗಿದೆ. ಪ್ಲಾಸ್ಟಿಕ್ಸ್ ಬಳಕೆಯನ್ನು ಕಡಿಮೆ ಮಾಡುವ, ತಡೆಗಟ್ಟುವ ಬಗ್ಗೆ ಪರಿಹಾರಗಳನ್ನೂ ಸೂಚಿಸಲಾಗಿದೆ. ಪ್ಲಾಸ್ಟಿಕ್ ತ್ಯಾಜ್ಯದ ನಿರ್ವಹಣೆ, ಪ್ಲಾಸ್ಟಿಕ್ಸ್‌ಗೆ ಪರ್ಯಾಯಗಳು, ಸಮಸ್ಯೆ-ಸವಾಲಿಗೆ ಆವಿಷ್ಕರಿಸಬೇಕಾದ ಹೊಸ ವಿಧಾನಗಳೇನು ಎಂಬ ವಿಚಾರಗಳನ್ನು ಚರ್ಚಿಸಲಾಗಿದೆ.



ಪ್ಲಾಸ್ಟಿಕ್ಸ್ ಪುರಾಣ
ಲೇ : ಡಾ. ಎಂ.ಎಸ್.ಎಸ್. ಮೂರ್ತಿ, ಬಿ. ತೇಜ್‌ಕುಮಾರ್
ಪ್ರ : ಪಂಚಮಿ ಮೀಡಿಯಾ ಪಬ್ಲಿಕೇಷನ್ಸ್, ಬೆಂಗಳೂರು.
ಬೆಲೆ : 230/-

ನೋವಿಗದ್ದಿದ ಕವನಗಳು

» ದ್ವಾರನಕುಂಟೆ ಪಾತಣ್ಣ

ಗೀತಾಂಜಲಿ ಕವಿತೆಗಳು ಎಂಬ ಕೃತಿಯ ಲೇಖಕಿ 16 ವರ್ಷದ ಬಾಲಕಿ; ಆಕೆ ಅನಾರೋಗ್ಯಕ್ಕೆ ತುತ್ತಾದ ದಾರುಣ ಸಂದರ್ಭದಲ್ಲಿ ಹೊರಬಂದ ಕವಿತೆಗಳು ಇವು; ಅವಳಿಗೆ ಕೊನೆಯ ಹಂತದ ಕ್ಯಾನ್ಸರ್ ಬಂದಿರುವುದು ಪತ್ತೆಯಾಗಿ, ಕೊನೆಯ ತನಕ ಅದರ ನೋವು ನಲಿವು ನರಳಾಟಗಳ ನಡುವೆ ತನ್ನೊಳಗೆ ಅಡಗಿದ್ದ ಸಂಕಟಗಳಿಗೆ ರೆಕ್ಕೆ ಪುಕ್ಕ ಬಂದು ಮನದ ತುಮುಲಗಳನ್ನು ಕವಿತೆಯಾಗಿ ರೂಪಿಸಿದ ಕವನಗಳು ಇಲ್ಲಿವೆ.

ನೋವಿನಲ್ಲಿ ಹುಟ್ಟಿಕೊಂಡ ಈ ಕವಿತೆಗಳು ಜನರು ಓದಲಿ ಎಂದು ಅಥವಾ ಪ್ರಕಟಗೊಳ್ಳಲಿ ಎಂದು ಬಯಕೆ ಇರಲಿಲ್ಲ; ಬದಲಾಗಿ ತಾನು ಅನುಭವಿಸಿದ ಸಂಕಟ ತನ್ನ ಏಕಾಂತವನ್ನು ಮೀರಿ ಚಿಂತಿಸಲು, ಸಾವಿನ ಎದುರು ಚೈತನ್ಯವನ್ನು ಪಡೆಯಲು, ಅದರಿಂದ ಆಗುವ ಒಳಿತು ಕೆಡುಕುಗಳನ್ನು ಪರಂಪರೆ ತನ್ನವರೊಂದಿಗೆ ಮಾತನಾಡಲು ಕವಿತೆಯನ್ನು ಸಾಧನವಾಗಿ ಬಳಸಿಕೊಂಡಳು ಗೀತಾಂಜಲಿ.

'ಕೆಳೆತನಕೆ ಕಾಣಿಕೆ' ಕವನದಲ್ಲಿ ಅವಳ ತುಡಿತ ಮಿಡಿತಗಳ ಸ್ಪರ್ಶ ಈ ರೀತಿಯಾಗಿದೆ. 'ನಮ್ಮ ಕೆಳೆತನಕೆ / ನಿನ್ನ ಕಣ್ಣು ಹನಿಗಳೇ ಕಾಣಿಕೆ / ಸಂತೈಸುವ ಮಾಯಿಸುವ ನಿನ್ನ ಸ್ಪರ್ಶ/ ಬೆಚ್ಚನೆಯ ನೋಟ/ ಸಾವು ಕಣ್ಣೆದುರಿ ಗಿದ್ದರೂ / ಯಾವುದೋ ಭರವಸೆಯು ತುಂಬುತ್ತಿದೆ/ ಸಾವು ಎದುರಗಿದ್ದರೂ ಗೆಳೆತನದ ಕಣ್ನೋಟ, ಯಾವ ಮಾಯೆಯ ಸೆಳೆತವಿದ್ದರೂ/ ಭರವಸೆಯ ಮುನ್ನೋಟಕೆ/ ಓಡುವ ಜಿಂಕೆಯಂತೆ / ಕಾಣಸಿಗದು ಎಂದು ಭ್ರಮಿಸುವಳು /ನನ್ನ ಬಾಳು/ ನೀರೆ ಎಲೆಯ ಹಾಗೆ/ ಈ ಚಣ ಭರವಸೆ ಉಕ್ಕುತ್ತದೆ/ ಮರು ನಿಮಿಷ ಜರ್‍ರನಿಳಿಯುತ್ತದೆ/ ಯಾರು ಹೇಳಿಯಾರು / ಇದೆಂದು ಕೊನೆಗೊಂಡು / ಇಲ್ಲವಾಗುವುದು ಎಂದು? ಈ ಕವನ ಸಂಕಲನದ ಕವನಗಳನ್ನು ಬರೆದ ಗೀತಾಂಜಲಿ ಎಂಬ ಪುಟ್ಟ ಹುಡುಗಿ ಕ್ಯಾನ್ಸರ್‌ಗೆ ಎಳವೆಯಲ್ಲೇ ಬಲಿಯಾದಳು. ತೀವ್ರ ನೋವಿನ ನಡುವೆ ಬರೆದ ಈ ಕವನಗಳಲ್ಲಿ ಯಾತನೆ ಇದೆ ಬಿಡುಗಡೆಯ ತುಡಿತವಿದೆ. ಅವರು ಇಂಗ್ಲಿಷ್‌ನಲ್ಲಿ ಬರೆದ ಕವನಗಳನ್ನು ಡಾ. ಅನುಪಮಾ ಎಚ್ ಎಸ್ ಅವರು ಅಚ್ಚುಕಟ್ಟಾಗಿ ಕನ್ನಡಕ್ಕೆ ಅನುವಾದಿಸಿದ್ದಾರೆ.



ಗೀತಾಂಜಲಿ ಕವಿತೆಗಳು
ಇಂಗ್ಲಿಷ್ ಮೂಲ : ಗೀತಾಂಜಲಿ ಫೈ
ಅನುವಾದ : ಡಾ. ಎಚ್. ಎಸ್.ಅನುಪಮಾ
ಪ್ರ: ಲಡಾಯಿ ಪ್ರಕಾಶನ ಗದಗ
9480286844
ಬೆಲೆ ರು.130/-

ಕವಿತೆಗೆ ಕಾಲುಗಳಿಲ್ಲ, ಆದರೆ ರೆಕ್ಕೆಗಳಿವೆ

» ಹರೀಶ್ ಕೇರ

ಈ ಬದುಕನ್ನು ಇನ್ನಷ್ಟು ಕ್ರಿಯೇಟಿವ್ ಆಗಿ ಪಡೆಯಲು, ನೋಡಲು ಸಾಧ್ಯವೇ ಎಂದು ಗೋವಿಂದ ಹೆಗಡೆ ಅವರು ತಮ್ಮ ಕವಿತೆಗಳ ಮೂಲಕ ಹುಡುಕುತ್ತಿದ್ದಾರೆ ಎಂದು ಈ ಸಂಕಲನ ಓದುವಾಗ ಅನ್ನಿಸಿತು. ಇದು ಗೋಪಾಲಕೃಷ್ಣ ಅಡಿಗರು ಹೇಳಿದ 'ಏನಾದರೂ ಮಾಡುತಿರು ತಮ್ಮ' ಕವನದ ಏನಕೇನ ರೀತಿಯದ್ದಲ್ಲ. ಬದಲಾಗಿ ಕಲೆ ಮತ್ತು ಬದುಕಿಗೆ ಅನುರಕ್ತಿಯನ್ನು ಮತ್ತೆ ಮತ್ತೆ ಸೂಸುವ ಮೂಲಕ. ಅಂಥ ಪದ್ಯಗಳನ್ನು ಇಲ್ಲಿ ನೋಡಬಹುದು.

ಏನಾದರೂ ನಡೆಯಲಿ ಇಲ್ಲಿ
ನಿಷ್ಕ್ರಿಯತೆಯನ್ನು ಹೇಗೆ ಸಹಿಸುವುದು

ಅಂತ ಹೇಳುವ ಕವಿ ಸುಮ್ಮನಿರುವುದು ಶಕ್ಯವಲ್ಲ. ಹೀಗಾಗಿ 'ಬಾಹುಬಲಿ' ಕವಿತೆಯಲ್ಲಿ ಅವರು ಹೇಳುವ

ನಮ್ಮೆಲ್ಲರ ಎದೆಯ ಕೂಪಗಳಿಗೆ
ನಿನ್ನ ಎದೆಯಿಂದ
ಅನುರಾಗದೊಂದು ಕಿರಣ

ಎಂಬ ಆಹವಾಲು ಪ್ರಾಮಾಣಿಕ ಅನಿಸುತ್ತದೆ.

ನಾನು ಕುಳಿತೇ ಇರುತ್ತೇನೆ
ಸುಳಿಯಲ್ಲಿ ಕಣ್ಣುನೆಟ್ಟು
ಕಾಯುತ್ತ ಕಿವಿ ಕೀಲಿಸಿ
ಅಲೆ ಮುರಿವ ಸದ್ದಿಗಾಗಿ

ಎಂಬ ಹಂಬಲದಲ್ಲಿ ಹೆಗಡೆಯವರ ಕವಿತೆಗಳು ಮೂಡುತ್ತವೆ. ಚುಟುಕು; ವಿಸ್ತಾರ ಬಯಸದ ಆಕೃತಿ. ಆಡಿದ ಕೆಲವೇ ಪದಗಳಲ್ಲಿ ಅರ್ಥ ಮತ್ತು ಅಕ್ಕರೆ, ಆಡದೆ ಉಳಿಸಿದ ಪದಗಳು ಇರಬಹುದು ಎಂಬ ಗುಮಾನಿ, ಆ ಗುಮಾನಿಯಲ್ಲಿ ಹೊಮ್ಮುವ ಧ್ವನಿಗಳು ಈ ಕವಿತೆಗಳನ್ನು ಪೊರೆದಿವೆ. ಒಂದರ್ಥದಲ್ಲಿ ಇವು ಯಾರನ್ನೂ ನೋಯಿಸಬಯಸದ ಸುಕೋಮಲ ರಚನೆಗಳು. ಸಂಬಂಧಗಳು ಮುರಿಯುವ ಬಗ್ಗೆ ಬರೆಯುವಾಗಲೂ ಅವರು ಮೃದು. ಹಾಗೇ ಆಗಿಹೋದುದಕ್ಕಿಂತಲೂ ಆಗಲಿರುವುದರ ಬಗ್ಗೆ ಅಪಾರ ವಿಶ್ವಾಸ:

ಏನಾದರೂ ಹೇಳುವವಳೆಂದು
ಕಾದೆ
ಕ್ಷಣ ಕಣ್ಣಲ್ಲಿ ಕಣ್ಣಿಟ್ಟು ನಿರುಕಿಸಿ
ಹೊರಟುಬಿಟ್ಟಳು
ಸೇತುವೆ ತುಯ್ಯುತ್ತಲೇ ಇದೆ
ಅಗೋಚರ
ಅವಳು ಮತ್ತೆ ಬರುವ,
ಬರದಿರುವ ಸಾಧ್ಯತೆಗಳ
ಕಾಯುತ್ತ ಯಾವ ದಡ
ಸೇರುವೆ

ಕವಿತೆಯ ಬಗೆಗೆ ಈ ಕವಿಗೆ ಅಂಥ ಆಶಾವಾದವೇನಿಲ್ಲ:

ಕಾಲಿಲ್ಲದ ಕವಿತೆ ನೆರವಿಯ ಆಚೆಯೇ
ನಿಂತು ಕೈ ಚಾಚುತ್ತದೆ- ಆರ್ತ
ನಡಿಗೆ ಮರೆತು ದೌಡೋಡುವವರ ಕಣ್ಣಲ್ಲಿ
ಯಾವ ಬಿಂಬವೂ ಮೂಡುವುದಿಲ್ಲ.

ಹಾಗಾದರೆ ಯಾಕೆ ಬರೆಯಬೇಕು? ಕವಿ ನಿಂತಿರುವ ನೆಲೆ ಮತ್ತು ನಮಗೆ ತೋರಿಸುತ್ತಿರುವ ಬೆಳಕು ಯಾವುದು?

ಎಲ್ಲದಕ್ಕೂ ಅರ್ಥ
ನೆನಪುಗಳಲ್ಲಿ ಮಾತ್ರ
ಆ ಹಕ್ಕಿಯ ಇಂಪಾದ ಕೂಗು
ಆ ಹೂವಿನ ಮೈಮರೆಸುವ ಗಂಧ
ಅವಳ ಕಮ್ಮನೆಯ ಮೈ ಬಿಸುಪು
ಕವಿತೆ ಬರೆಯುವುದು ಮತ್ತು
ಜೀವಿಸುವುದರ ನಡುವೆ
ಅಂಥ ಫರಕ್ಕೇನೂ ಇಲ್ಲ
ಕ್ರಿಯೆಯ ಹೊರತಾಗಿ

ದಶಕಗಳಿಂದ ಕಾವ್ಯ ಬರೆಯುತ್ತ ಬಂದಿರುವ ಗೋವಿಂದ ಹೆಗಡೆಯವರ ಮೊದಲ ಹಾಗೂ ಕೊನೆಯ ನಿಷ್ಠೆ ಕವಿತೆಯಲ್ಲಿದೆ. ಕಾವ್ಯಕ್ಕಿದು ಕಾಲವಲ್ಲ ಎಂದು ಅವರೇ ಪದ್ಯದಲ್ಲಿ ಹೇಳುತ್ತಾರೆ. ಆದರೆ ಕವಿತೆಗಾಗಿ ಹಾಗೂ ಬದುಕಿನ ಘನತೆಯನ್ನು ಎತ್ತರಿಸುವ ಮಾತಿಗಾಗಿ ನೋನುತ್ತ ಅವರು ಬರೆಯುವ ಅಂಥ ಪದ್ಯಗಳೇ ಇಂದು ಓದುಗನನ್ನು ಪೊರೆಯುವ ಜೀವಾಮೃತ ಎಂಬುದು ಇಲ್ಲಿರುವ ವಿಸ್ಮಯ. ಹೀಗಾಗಿ ಇವರ ಕವಿತೆಗೆ ಕಾಲುಗಳಿಲ್ಲ, ಆದರೆ ಔನ್ನತ್ಯದತ್ತ ಕೊಂಡೊಯ್ಯುವ ರೆಕ್ಕೆಗಳಿವೆ ಅನ್ನಬಹುದು.



ಕವಿತೆಗೆ ಕಾಲುಗಳಿಲ್ಲ (ಕವನ ಸಂಕಲನ)
ಲೇ: ಗೋವಿಂದ ಹೆಗಡೆ
ಪ್ರ: ಸರಸ್ವತಿ ಬುಕ್ ಹೌಸ್
ಬೆಲೆ: ರು.150/-

ಸಿರಿವಂತನಾಗಿ ಮೆರೆದ ಕನ್ನಡ ಕುವರ

ಹೋಗದಿರಿ ಸೋದರರೆ, ಸಿರಿವಂತನಾದರೂ ಕನ್ನಡ ನಾಡಲಿ ಮೆರೆವೆ, ಕನ್ನಡದಾ ರವಿ ಮೂಡಿ ಬಂದ, ಬೆಳೆದಿದೆ ನೋಡ ಬೆಂಗಳೂರು ನಗರ, ನಾನೋಡಿ ನಲಿಯುವ ಕಾರವಾರ – ಈ ರೀತಿಯ ಗೀತಿಗಳನ್ನು ಬರೆದ ಅಪರೂಪದ ಸಾಹಿತಿ.



ಸಿ.ವಿ.ಶಿವಶಂಕರ್ ನಾನು ಕಂಡ ಅಪರೂಪದ ಹಿರಿಯರು. ಅದ್ಭುತವಾದ ಜ್ಞಾಪಕ ಶಕ್ತಿ, ಅಷ್ಟೇ ಅಸದಳ ಕನ್ನಡ ಪ್ರೇಮ, ಕಿರಿಯರ ಬಗ್ಗೆ ಕಾಳಜಿ. 'ಇಂತಹ ಲೇಖನ ಬೇಕು ಸರ್, ಇಂತಹ ವಿಷಯದ ಬಗ್ಗೆ ಮಾತನಾಡಿ ಸರ್..' ಎಂದು ಕೇಳಿದಾಗ ಅವರು ಯಾವತ್ತೂ ಇಲ್ಲ ಎಂದವರಲ್ಲ. 'ಐಸಿ' ಚಾನಲ್ ನಡೆಯುತ್ತಿದ್ದ ಕಾಲ. 'ಭಕ್ತ ಕನಕದಾಸ' ಚಿತ್ರ ಪ್ರಸಾರ ಮಾಡುವಾಗ, ಅವರನ್ನು ಕರೆಯೋಣ ಎನ್ನಿಸಿತು. ಏಕೆಂದರೆ ಈ ಸಿನಿಮಾ ರೂಪುಗೊಳ್ಳಲು ಕಾರಣಕರ್ತರೇ ಅವರು. 'ಮಾತು

ಒಡನಾಟ

» ಎನ್.ಎಸ್.ಶ್ರೀಧರ ಮೂರ್ತಿ

ಸ್ಪಷ್ಟವಿಲ್ಲ' ಎಂದು ಹಿಂಜರಿದರು. 'ಸರ್, ನನಗೆ ಮಾಹಿತಿ ಮುಖ್ಯ. ನೀವಲ್ಲದೆ ಇನ್ಯಾರು ಇದನ್ನು ಹೇಳುತ್ತಾರೆ' ಎಂದು ಒತ್ತಾಯಿಸಿ ಕರೆಸಿದ್ದೆ. ಬಹಳ ಅದ್ಭುತವಾದ ಮಾಹಿತಿಗಳನ್ನು ನೀಡಿದರು. ಆಕಾಶವಾಣಿ ವಿವಿಧ ಭಾರತಿಯ ಸುವರ್ಣ ಚಿತ್ರ ಭಾರತಿಗೆ ಅವರನ್ನು ಮಾತಾಡಿಸುವ ಅದೃಷ್ಟ ಸಿಕ್ಕಿತ್ತು. ಇತಿಹಾಸದ ಹಲವು ಮುಖಗಳನ್ನು ತೆರೆದಿಟ್ಟಿದ್ದರು. ಆಕಾಶವಾಣಿಗಾಗಿ ಅವರು ರೂಪಿಸಿದ 'ಕಂಪನಿ ಕಂಪು ಇಂಪು' ಒಂದು ಮಹತ್ವದ ಕೊಡುಗೆ; ವೃತ್ತಿ ರಂಗಭೂಮಿಯ ಸಂಪೂರ್ಣ ಇತಿಹಾಸವನ್ನು ಇದು ಒಳಗೊಂಡಿತ್ತು.

ತುಮಕೂರು ಜಿಲ್ಲೆಯ ಚಿಟ್ಟನಹಳ್ಳಿಯಲ್ಲಿ ಶಿವಶಂಕರ್ 1935ರ ಮೇ 3ರಂದು ಜನಿಸಿದರು. ತಂದೆ ವೆಂಕಟಕೃಷ್ಣ ಶಾಸ್ತ್ರಿ, ತಾಯಿ ವೆಂಕಟಲಕ್ಷ್ಮಮ್ಮ. ಮೊದಲಿಂದಲೂ ಕಲೆಯ ಕಡೆಗೆ ಸೆಳೆತ. ನೃತ್ಯಾಭ್ಯಾಸಕ್ಕಾಗಿ ಧಾರವಾಡಕ್ಕೆ ಹೊರಟರು. ಅಲ್ಲಿ ಡಾ.ವಿ.ಕೃ. ಗೋಕಾಕರ ವಿಶ್ವಾಸವನ್ನು ಗಳಿಸಿ ಅವರ ಮನೆಯಲ್ಲಿಯೇ ಉಳಿದರು. ಶಿವರಾಮ ಕಾರಂತರ ಬಳಿ ಯಕ್ಷಗಾನ ಕಲಿತಿದ್ದೂ ಆಯಿತು. ನೃತ್ಯದಲ್ಲಿ ಕೊಂಚ ಪರಿಣಿತಿ ಬಂದ ಮೇಲೆ ಮೈಸೂರಿಗೆ ಬಂದು ನೃತ್ಯಶಾಲೆ ತೆಗೆದರು. ಆಗಲೇ ಡಾ.ರಾಜ್ ಕುಮಾರ್ ಅವರ ಪರಿಚಯವಾಗಿ ಅವರ ಮೂಲಕ ಸುಬ್ಬಯ್ಯ ನಾಯ್ಡು ಕಂಪನಿಯನ್ನು ಸೇರಿದರು. ಅಲ್ಲಿ ಅಭಿನಯ ಮತ್ತು ಬರಹ ಎರಡಕ್ಕೂ ಅವಕಾಶ ಸಿಕ್ಕಿತು. ಅಲ್ಲಿಂದಲೇ ಚಿತ್ರರಂಗದ ಪ್ರವೇಶ . ಪಾತ್ರ ಮಾಡುತ್ತಲೇ ಮದ್ರಾಸಿನಲ್ಲಿ ನೆಲೆಸಿದ್ದ ಕನ್ನಡ ಕಲಾವಿದರಿಗೆ ಮಾತ್ರವಲ್ಲ ಅವರ ಮಕ್ಕಳಿಗೆ ಕೂಡ ಕನ್ನಡ ಕಲಿಸಿದ ಮೇಷ್ಟ್ರು ಆದರು . ಹುಣಸೂರು ಕೃಷ್ಣಮೂರ್ತಿಗಳಿಗೆ ಶಿವಶಂಕರ್ ಮಾನಸ ಪುತ್ರರಾದರು. ಹುಣಸೂರರು ಅವರನ್ನು ಮೇಷ್ಟ್ರೇ ಎಂದು ಕರೆಯುತ್ತಿದ್ದರು. ಹುಣಸೂರರ ಸ್ಕ್ರಿಪ್ಟ್ ಅಂತಿಮಗೊಳಿಸುವುದರಿಂದ ಹಿಡಿದು ಅವರಿಗೆ ಸಿಗರೇಟ್ ತಂದು ಕೊಡುವವರೆಗೂ ಶಿವಶಂಕರ್ ಬೇಕಿತ್ತು. ಹುಣಸೂರರ ಕೊನೆಯ ಚಿತ್ರ 'ನಂಜುಂಡೇಶ್ವರ ಮಹಿಮೆ'ಯನ್ನು ಪೂರ್ತಿ ಮಾಡಿದವರೂ ಕೂಡ ಅವರೇ.

ಆ ಕಾಲದ ಎಲ್ಲಾ ನಿರ್ದೇಶಕರಿಗೂ ಶಿವಶಂಕರ್ ಇದ್ದಾರೆ ಎಂದರೆ ಸಾಕು ನೆಮ್ಮದಿ, ಏಕೆಂದರೆ ಚಿತ್ರರಂಗದ ಎಲ್ಲಾ ಮೊಗ್ಗಲುಗಳನ್ನು ಬಲ್ಲವರು ಅವರು. ಆಗಾಗ ಚಿಕ್ಕ ಪಾತ್ರಗಳನ್ನು ನಿರ್ವಹಿಸಿಕೊಂಡೇ ಬಂದ ಶಿವಶಂಕರ್ ತಮ್ಮನ್ನು ಹೆಚ್ಚಾಗಿ ನಿರ್ದೇಶನದ ಕಡೆಗೇ ತೊಡಗಿಸಿಕೊಂಡರು. 'ಶ್ರೀಕೃಷ್ಣ ಗಾರುಡಿ' ಅವರು ಅಭಿನಯಿಸಿದಂತಹ ಮೊದಲ ಚಿತ್ರ. ಮುಂದೆ ರತ್ನಗಿರಿ ರಹಸ್ಯ, ಭಕ್ತ ಕನಕದಾಸ, ಸಂತ ತುಕಾರಂದಂತಹ ಚಿತ್ರಗಳಲ್ಲಿನ ಅವರ ಚಿಕ್ಕದಾದರೂ, ಮಹತ್ವದ ಪಾತ್ರಗಳನ್ನು ಮರೆಯುವುದು ಕಷ್ಟ.

ಮೊದಲ ಪತ್ತೇದಾರಿ ಚಿತ್ರ

ಶಿವಶಂಕರ್ ನಿರ್ದೇಶಿಸಿದ ಚಿತ್ರಗಳು ಒಂದಕ್ಕಿಂತಲೂ ಒಂದು ಭಿನ್ನ. ಜನ್ಮಭೂಮಿಯ ಅಭಿಮಾನ ಹೇಳುವ 'ನಮ್ಮ ಊರು' ಕನ್ನಡದ ಮೊದಲ ಪತ್ತೇದಾರಿ ಚಿತ್ರ. 'ಮಹಡಿ ಮನೆ', ನಾಗರಿಕತೆಯ ಪ್ರಭಾವ ಹೇಳುವ 'ಮನೆ ಕಟ್ಟಿ ನೋಡು', ಐತಿಹಾಸಿಕ ಚಿತ್ರ 'ಹೊಯ್ಸಳ' – ಹೀಗೆ ಶಿವಶಂಕರ್ ಭಿನ್ನ ಹಾದಿಯನ್ನು ತುಳಿದು ಕೊಂಡೇ ಬಂದರು. ಅವರು ನಿರ್ದೇಶಿಸಿದ ಕೊನೆಯ ಚಿತ್ರ 'ಕನ್ನಡ ಕುವರ' ಬಿಡುಗಡೆ ಆಗಲಿಲ್ಲ. ಅವರಿಗೆ ಇದ್ದ ಸಮಾಧಾನವೆಂದರೆ ಮಕ್ಕಳಿಬ್ಬರೂ ಚಿತ್ರರಂಗದ ನಂಟನ್ನು ಹೊಂದಿದ್ದರು. ರಾಷ್ಟ್ರೀಯ ಚಲನಚಿತ್ರ ಆಯ್ಕೆ ಸಮಿತಿ ಸದಸ್ಯರಾಗಿ ಹೊಸದೆಹಲಿಗೆ ಹೋಗಿದ್ದ ಶಿವಶಂಕರ್ ಚಿತ್ರ ವೀಕ್ಷಣೆಯಲ್ಲಿ ತೊಡಗಿದ್ದಾಗಲೇ ಪಾರ್ಶ್ವವಾಯುವಿನ ಹೊಡೆತಕ್ಕೆ ಒಳಗಾದರು. ಸೂಕ್ತ ಚಿಕಿತ್ಸೆಯಿಂದ ಚೇತರಿಸಿ ಕೊಂಡರೂ, ಮಾತು ಸ್ಪಷ್ಟವಿರಲಿಲ್ಲ. ಅದು ಅವರನ್ನು ಬಹಳವಾಗಿ ಕಾಡುತ್ತಿತ್ತು. 'ಸಿರಿವಂತನಾದರೂ ಕನ್ನಡ ನಾಡಲ್ಲಿ ಮೆರೆವೆ' ಎಂಬ ಹಾಡಿನಿಂದ ಸಾಮಾನ್ಯವಾಗಿ ಅವರನ್ನು ಎಲ್ಲರೂ ಗುರುತಿಸುತ್ತಾರೆ. ಈ ಹಾಡು ಇರುವ ಚಿತ್ರ 'ರಾಗಸಂಗಮ' ಬಿಡುಗಡೆಯಾಗದೆ ಹೋದರೂ ಹಾಡು ಇಂದಿಗೂ ಜನಪ್ರಿಯವಾಗಿದೆ. ಇಂತಹ ಹಲವು ಕನ್ನಡ ಹಾಡುಗಳನ್ನು ಅವರು ಬರೆದಿದ್ದಾರೆ. ಕನ್ನಡದ ಕಣ್ಣಾದ ಬೆಂಗಳೂರು ನಗರ (ಮನೆ ಕಟ್ಟಿ ನೋಡು) ಕರ್ನಾಟಕ ಸಾಮ್ರಾಜ್ಯ ಹೊಯ್ಸಳ (ಪದವೀಧರ) ಬೆಳಗಲಿ ಕನ್ನಡ ನಾಡು (ನಮ್ಮ ಊರು) ಮೊದಲಾದ ಅನೇಕ ಕನ್ನಡಪರ ಗೀತೆಗಳನ್ನು ಅವರು ಬರೆದಿದ್ದಾರೆ. ಕರ್ನಾಟಕದ ವೈಭವ ಸಾರುವ ನಾಟಕವನ್ನು ಬರೆದು ನಾಡಿನ ಎಲ್ಲೆಡೆ ಆಡಿ ಮೆಚ್ಚುಗೆಯನ್ನು ಪಡೆದಿದ್ದಾರೆ.

ನಾಡಿನ ಕುರಿತು ಅಪಾರ ಅಭಿಮಾನ

ಶಿವಶಂಕರ್ ಕೇವಲ ಕನ್ನಡಪರ ಗೀತೆಗಳಿಗೇ ಸೀಮಿತರಾದವರಲ್ಲ. ಬೆಂಗಳೂರು ನಗರದ ವಿಸ್ತಾರ ಹೇಳುವ 'ಬೆಳೆದಿದೆ ನೋಡ ಬೆಂಗಳೂರು ನಗರ', ಕಾರವಾರದ ಕುರಿತ 'ನಾ ನೋಡಿ ನಲಿಯುವ ಕಾರವಾರ', ಮಣ್ಣಿನ ಅಭಿಮಾನ ಹೇಳುವ 'ಹೋಗದಿರಿ ಸೋದರರೆ' ಹೀಗೆ ಅವರ ಗೀತೆಗಳಲ್ಲಿ ದೊಡ್ಡ ರೇಂಜ್ ಇದೆ. ಜಾರಿ ಬಿದ್ದೆ ಜಲಕ್ಕೆದಂತಹ ತುಂಟತನದ ಗೀತೆಯನ್ನು ಕೂಡ ಅವರು ಬರೆದಿದ್ದಿದೆ. ಅವರು ಬರೆದ ಗೀತೆಗಳಲ್ಲಿ 'ಬಾಳಿನಲಿ ಒಂದೊಂದು ಹೊಸ ದಿನ' ಎಂಬ ಕಾವ್ಯಾತ್ಮಕ ಗೀತೆ ನನಗೆ ಬಹಳ ಪ್ರಿಯವಾದದ್ದು.

ಅಬ್ಬಾಯಿ ನಾಯ್ಡು ಮೇಷ್ಟ್ರೇ, ಒಂದು ಕನ್ನಡದ ಹಾಡು ಬೇಕು ಎಂದು ತಾಯಿಯ ಮಡಿಲಲ್ಲಿ ಚಿತ್ರಕ್ಕೆ ಕರೆದಾಗ 'ಕನ್ನಡದಾ ರವಿ ಮೂಡಿ ಬಂದ'ದಂತಹ ಸುಂದರ ಗೀತೆಯನ್ನು ಬರೆದು ಕೊಟ್ಟಿದ್ದರು. ಅದಕ್ಕೆ ಸತ್ಯಂ ಕೊಟ್ಟ ಸಂಗೀತ ಒಗ್ಗದಿದ್ದಾಗ ತಾವೇ ಸಂಗೀತ ಕೂಡ ನೀಡಿದ್ದರು. ಗುಬ್ಬಿ ವೀರಣ್ಣನವರ ವ್ಯಕ್ತಿತ್ವ ಹೇಳುವ ಆರದ ನಂದಾದೀಪ ಅವರು ಬರೆದ ಇನ್ನೊಂದು ವಿಶಿಷ್ಟ ಗೀತೆ. ಡಾ.ರಾಜ್ ಕುಮಾರ್ ಅವರೇ ಈ ಗೀತೆಯನ್ನು ಇಷ್ಟಪಟ್ಟು ಹಾಡಿದ್ದರು. ಈ ಹಾಡು ಇರುವ ಚಿತ್ರ ವೀರ ಮಹಾದೇವ ಬಿಡುಗಡೆಯಾಗಲಿಲ್ಲ.

ಶಿವಶಂಕರ್, ಕಲಾವಿದೆ ಮಂಜುಳಾ ಅವರನ್ನು ಚಿತ್ರರಂಗಕ್ಕೆ ಪರಿಚಯಿಸಿದವರು. ನಾನು ಮಂಜುಳಾ ಅವರ ಬಗ್ಗೆ ಪುಸ್ತಕ ಬರೆಯಲು ಅವರದೇ ಪ್ರೇರಣೆ. ಆ ಪುಸ್ತಕವನ್ನು ಬಿಡುಗಡೆ ಮಾಡಿದವರೂ ಕೂಡ ಅವರೇ. ಕಲ್ಪನಾ ಅವರನ್ನು ನಾಯಕಿಯಾಗಿಸಿದ್ದು ಶಿವಶಂಕರ್ ಅವರೇ. ಅಷ್ಟೇ ಅಲ್ಲ ಕಲ್ಪನಾ ಅವರ ಕಷ್ಟದ ದಿನಗಳಲ್ಲಿ ಬೆಂಬಲವಾಗಿ ನಿಂತರು. ಕಲ್ಪನಾ ಅವರ ಬರಹಗಾರ್ತಿ ಮುಖಕ್ಕೆ ಶಿವಶಂಕರ್ ಸ್ಫೂರ್ತಿಯಾಗಿದ್ದರು. ಕಲ್ಪನಾ ಅವರ ಎಷ್ಟೋ ಬರಹಗಳನ್ನು ನನಗೆ ಒದಗಿಸಿಕೊಟ್ಟವರೂ ಕೂಡ ಅವರೇ. ರಾಜೇಶ್ ಅವರನ್ನು ನಾಯಕರನ್ನಾಗಿಸಿದ್ದು ಶಿವಶಂಕರ್ ಅಷ್ಟೇ ಅಲ್ಲ ಆ ಹೆಸರನ್ನು ಕೊಟ್ಟವರೂ ಕೂಡ ಅವರೇ. ವೀರಸಂಕಲ್ಪದ ಮೂಲಕ ದ್ವಾರಕೀಶ್ ಅವರನ್ನು ಚಿತ್ರರಂಗಕ್ಕೆ ಪರಿಚಯ ಮಾಡಿಸಿದ್ದರು. ಆರ್.ರತ್ನ, ಕೆ.ಪಿ.ಸುಖದೇವ್, ಗುಣಸಿಂಗ್ ಅವರಂತಹ ಉತ್ತಮ ಸಂಗೀತ ಸಾಧಕರನ್ನು ತಮ್ಮ ಚಿತ್ರಗಳಲ್ಲಿ ಸಿ.ವಿ.ಶಿವಶಂಕರ್ ತಮ್ಮ ಚಿತ್ರಗಳಲ್ಲಿ ಸಂಗೀತ ನಿರ್ದೇಶಕರಾಗಿಸಿದ್ದರು. 27 ಜೂನ್ 2023ರಲ್ಲಿ ನಮ್ಮನ್ನು ಅಗಲುವರೆಗೂ ಸಕ್ರಿಯರಾಗಿದ್ದರು ಎನ್ನುವುದೂ ವಿಶೇಷ ಸಂಗತಿ. ಆದರೆ ಅವರ ಪ್ರತಿಭೆಯನ್ನು ಚಿತ್ರರಂಗ ಬಳಸಿಕೊಳ್ಳಲಿಲ್ಲ. ಸಾಹಿತ್ಯ ಲೋಕವಂತೂ ಪರಿಗಣಿಸಲೇ ಇಲ್ಲ!

ಮರೆತುಹೋದ ಮಹಾನುಭಾವರು ರಾಗಿ ಲಕ್ಷ್ಮಣಯ್ಯ

◀◀ ಮೊದಲ ಪುಟದಿಂದ

ರಾಗಿಯಲ್ಲದ ಇನ್ನೊಂದು ಧಾನ್ಯವನ್ನು ಕುರಿತ ಸಂಶೋಧನಾವಕಾಶ ಅದಾಗಿತ್ತು. ಆದರೆ ಲಕ್ಷ್ಮಣಯ್ಯ ಅವಕಾಶದ ಹಿಂದೆ ಹೋಗಲಿಲ್ಲ, ಪ್ರಶಸ್ತಿಗಾಗಿ ಹಾತೊರೆಯಲಿಲ್ಲ. 'ನಾನು ರಾಗಿ ಯನ್ನು ಬಿಟ್ಟು ಬೇರೆ ಬೆಳೆಯ ಬಗ್ಗೆ ಅಧ್ಯಯನ ಮಾಡಲಾರೆ' ಎನ್ನುವ ಕಠೋರವಾದ ಬದ್ಧತೆಯನ್ನು ಮೆರೆದರು. ತಮ್ಮ ಗುರಿ ಏನಿದ್ದರೂ ರಾಗಿ ಮಾತ್ರವೇ. ಅದೇ ಪ್ರಶಸ್ತಿ, ಅದೇ ಪದಕ ಎಲ್ಲವೂ ಎಂದು ಅವರು ತೀರ್ಮಾನ ಮಾಡಿಬಿಟ್ಟಿದ್ದರು. ತಮ್ಮ ವೃತ್ತಿ ಜೀವನದಲ್ಲಿ ಅವರಿಗೆ ಮೇಲಧಿಕಾರಿಯಾಗಿ ಬಡ್ತಿ ಬಂದಾಗಲೂ ಅವರು ತಾನು ರಾಗಿ ಸಂಶೋಧನೆಯಲ್ಲಿ ಇರುವ ಹಂಬಲ ವ್ಯಕ್ತಪಡಿಸಿ ಅದನ್ನೂ ತಿರಸ್ಕರಿಸಿದ್ದರು.

ಭವಿಷ್ಯದ ಧಾನ್ಯ ರಾಗಿ ಎನ್ನುವುದನ್ನು ಮನಗಂಡಿದ್ದ ಅವರು, ತೆನೆಗೆ ಬರುವ ಕುತ್ತಿಗೆ ರೋಗ, ಇಳುಕಲು ಒಣಗಿಹೋಗುವುದು, ತೆನೆಯ ಇಳುಕಲುಗಳ ಸಂಖ್ಯೆ ಕಡಿಮೆಯಾಗು ವುದು, ಜೊಳ್ಳಾಗುವುದು, ಸೀಕಲು ಕಾಳು, ರಾಗಿಯ ಗಾತ್ರದಲ್ಲಿ ಕಡಿಮೆಯಾಗುವುದು ಹೀಗೆ ಹತ್ತು ಹಲವು ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು, ಅದರ ಮೂಲಗುಣ ಕೆಡದ ಹಾಗೆ ರಾಗಿಯನ್ನು ಅಭಿವೃದ್ಧಿಗೊಳಿಸಿದರು. ಲಕ್ಷ್ಮಣಯ್ಯ ನವರಿಗೆ ರಾಗಿಯ ಸ್ವಭಾವ ವರ್ತನೆಗಳ ಆಳವಾದ ಅಧ್ಯಯನ ಇದ್ದುದ್ದರಿಂದ ಇದು ಸಾಧ್ಯವಾಯಿತು. ಹೀಗೆ ರಾಗಿಯ ಸಂಶೋಧನೆಯಲ್ಲಿ ಆರಂಭವಾದ ಅವರ ಪಯಣ ರಾಗಿಯ ಧ್ಯಾನದಲ್ಲೇ ಕೊನೆಯಾಗುತ್ತದೆ. ಅವರ ಸಂಸ್ಕಾರದ ಹೊತ್ತಿನಲ್ಲಿ ಅವರ ಎದೆಯ ಮೇಲೆ ಹಿಡಿ ರಾಗಿಯನ್ನು ಹಾಕಿ ಅಂತಿಮ ವಿಧಿಯನ್ನು ನೆರವೇರಿಸಲಾಗುತ್ತದೆ. ಇದು ಲಕ್ಷ್ಮಣಯ್ಯನವರಿಗಿದ್ದ ರಾಗಿಯ ಬಗೆಗಿನ ಬದ್ಧತೆ. ಲಕ್ಷ್ಮಣಯ್ಯ ಎನ್ನುವ ರಾಗಿಯ ಮೋಹಿ ಇಷ್ಟು ಕೆಲಸವನ್ನು ಮಾಡದೆ ಹೋಗಿದ್ದಿದ್ದರೆ ಇವತ್ತು ರಾಗಿ ನಮಗೆ ಇಷ್ಟು ಸುಲಭಕ್ಕೆ ದೊರಕುತ್ತಲೂ ಇರಲಿಲ್ಲ. ಅದರ ಬಳಕೆಯ ಬಗ್ಗೆ ಪೋಷಕಾಂಶಗಳ ಬಗ್ಗೆ ನಮಗೆ ತಿಳುವಳಿಕೆಯೂ ಇರುತ್ತಿರಲಿಲ್ಲ. ರಾಗಿ ಎನ್ನುವ ತೃಣಧಾನ್ಯವು, ಅದರ ತ್ರಿವಿಕ್ರಮ ರೂಪದಲ್ಲಿ ಪ್ರಕಟವಾಗಲಿಕ್ಕೆ ಎಲ್ಲಾ ರೀತಿಯ ಶ್ರಮ ಹಾಕಿದ ಲಕ್ಷ್ಮಣಯ್ಯ ಈ ಹೊತ್ತು ಕೃಷಿ ಜಗತ್ತು ನಮಿಸುತ್ತಿದೆ: ಅದೂ ರಾಗಿಯ ಹೆಸರಿನ ಜೊತೆಗೆ. **(ಇತ್ತೀಚೆಗೆ ಪ್ರಕಟಗೊಂಡ 'ರಾಗಿ ತಂದೇವಾ' ಪುಸ್ತಕದ ಒಂದು ಅಧ್ಯಾಯ.)**

ಸಂಶೋಧನೆಗಾಗಿ ತರಿಸಿದ ಆಫ್ರಿಕಾ ತಳಿ

ಕಿರಿಯ ವಿಜ್ಞಾನಿಯಾಗಿದ್ದ ಇವರು ತಮ್ಮ ತೀವ್ರವಾದ ಆಸಕ್ತಿ, ಅಪರಿಮಿತವಾದ ಶ್ರದ್ಧೆಯಿಂದ ರಾಗಿ ಎನ್ನುವ ಅದ್ಭುತ ಜಗತ್ತನ್ನು ತಮ್ಮದಾಗಿಸಿಕೊಳ್ಳಲು ಮುಂದಾದರು. ಆಫ್ರಿಕಾದಿಂದ ತರಿಸಿದ 900 ತಳಿಗಳನ್ನು ತಮ್ಮ ಪ್ರಯೋಗಕ್ಕೆ ಬಳಸಿಕೊಂಡ ಲಕ್ಷ್ಮಣಯ್ಯ ತಳಿಗಳನ್ನು ಅಭಿವೃದ್ಧಿಗೊಳಿಸುತ್ತಾ ಹೋದರು. ಅವರ ಈ ಕೆಲಸವೇ ಇಂದು ರಾಗಿ ಜಗತ್ತಿನಲ್ಲಿ ಸಂಚಲನ ಮೂಡಿಸಿ, ಅವಜ್ಞೆಗೆ ಗುರಿಯಾದ ಧಾನ್ಯವನ್ನು ಮುಖ್ಯವಾಹಿನಿಗೆ ತಂದರು. ಯಾವ ಬೆಳೆಯೂ ವಾಣಿಜ್ಯೀಕರಣಗೊಳ್ಳದೆ ಉಳಿಯಲಾರದು ಎನ್ನುವುದನ್ನು ಮನಗಂಡ ಅವರು ಹೆಚ್ಚು ಇಳುವರಿಯ ತಳಿಗಳ ಶೋಧನೆಗೆ ಹೊರಟರು. ಅವರು ಕಟ್ಟಿ ಕೊಟ್ಟ ಈ ತಳಿಗಳು ಇವತ್ತು ನಮ್ಮ ರೈತರ ಪಾಲಿಗೆ ಆಶಾದಾಯಕವಾಗಿದೆ. ಏನಿಲ್ಲದಿದ್ದರೂ ರಾಗಿಯನ್ನಾದರೂ ಬೆಳೆದು ಬದುಕಬಲ್ಲೆವು ಎನ್ನುವ ವಿಶ್ವಾಸವನ್ನು ತುಂಬಿದೆ.



ರಾಗಿ ತಂದೇವಾ
ಲೇ: ಪಿ.ಚಂದ್ರಿಕಾ
ಪ್ರ: ಅವನಿ , ಪುಟ್ಟಯ್ಯನಪಾಳ್ಯ ಕುಣಿಗಲ್ ತಾಲ್ಲೂಕು ತುಮಕೂರು ಜಿಲ್ಲೆ
ದೂ 9448804044
ಬೆಲೆ ರು.150/-

ರಾಗಿ ಲಕ್ಷ್ಮಣಯ್ಯ
ಜನನ: 15.5.1921
ನಿಧನ : 14.5.1993
ಜನ್ಮಸ್ಥಳ : ಹಾರೋಹಳ್ಳಿ ಮೈಸೂರು
ಸಾಧನೆ: ಇಂಡಾಫ್ ತಳಿ ಸೇರಿದಂತೆ, ರಾಗಿಯ ವಿವಿಧ ತಳಿಗಳ ಅಭಿವೃದ್ಧಿ, ಸಂಶೋಧನೆ; ರಾಗಿಯ ಇಳುವರಿ ಹೆಚ್ಚಿಸಲು ಅಪೂರ್ವ ಕೊಡುಗೆ

ಪವಿತ್ರನದಿಗಳಲ್ಲಿ ಮಹಾಮಜ್ಜನ!

◀◀ ಮೊದಲ ಪುಟದಿಂದ

ಕುಂಭ ಮೇಳದಲ್ಲಿ ಕಳೆದು ಹೋದವರು ಮತ್ತೆ ಸಿಕ್ಕರು ಎಂಬ ಸಿನಿಮಿಯ ದೃಶ್ಯಗಳು ಅಲ್ಲಿ ನಿಮಗೆ ತೀರಾ ಸಾಮಾನ್ಯವೆನಿಸುತ್ತವೆ. ಅಲ್ಲಲ್ಲಿ ಬೃಹತ್ ಪೆಂಡಾಲುಗಳಲ್ಲಿ ತೆರೆದ ಖೋಯಾ –ಪಾಯಾ ಕೇಂದ್ರಗಳು ಕಳೆದುಕೊಂಡವರನ್ನು ಹುಡುಕಲು ಬಂದ ಆತ್ಮೀಯರಲ್ಲಿ ಮಡುವುಗಟ್ಟಿದ ಆತಂಕ ಹಾಗು ಖೋಯಾ–ಪಾಯಾ ಕೇಂದ್ರಗಳನ್ನು ಗುರುತಿಸಲು ನಭದಲ್ಲಿ ತೇಲುವ ದೊಡ್ಡ ಗಾತ್ರದ ಹೀಲಿಯಮ್ ಬಲೂನುಗಳು ಮತ್ತೊಂದೇ ಜಗತ್ತಿನ ಅನಾವರಣ ಮಾಡುತ್ತವೆ.

ಬ್ರಿಟಿಷರ ಹಾಗು ಮೊಘಲರ ಆಧಿಪತ್ಯಕ್ಕೆ ಒಳಪಟ್ಟ ಅಲಹಾಬಾದ್ (ಇಂದಿನ ಪ್ರಯಾಗ್ ರಾಜ್) ಸ್ವಾತಂತ್ರ್ಯ ಸಂಗ್ರಾಮದಲ್ಲೂ ಮಹತ್ವದ ಕೊಡುಗೆ ನೀಡಿದೆ. ಬ್ರಿಟಿಷ್ ರಾಜ್ ನೆನಪಿಸುವ ಹಳೆ ಕಾಲದ ಸಿವಿಲ್ ಲೈನ್ಸ್, ಕಂಪನಿ ಬಾಗ್, ಚಂದ್ರಶೇಖರ್ ಅಜಾದ್ ಪಾರ್ಕ್(ಅವರು ಹುತಾತ್ಮರಾದ ಸ್ಥಳ) ಹಾಗು ಆನಂದ್ ಭವನಕ್ಕೆ ಭೇಟಿ ಕೊಡಬಹುದು. ಭಾರಧ್ವಾಜ ಮುನಿಗಳ ಆಶ್ರಮ ಹಾಗು ಈಗ ನಮ್ಮ ಸೈನ್ಯದ ಛಾವಣಿಯಾಗಿ ಮಾರ್ಪಾಟಾದ ಯಮುನೆಯ ತಟದಲ್ಲಿ ಅಕ್ಬರ ಕಟ್ಟಿಸಿದ್ದು ಎನ್ನಲಾದ ಬೃಹತ್ ಕೋಟೆಯ ಒಳಗೆ ಇತಿಹಾಸ ಪ್ರಸಿದ್ಧ ಅಕ್ಷಯ ವಟ್ ವೃಕ್ಷ ಹಾಗು ಸರಸ್ವತಿ ಕೂಪ ನೋಡಲೇಬೇಕಾದ ಸ್ಥಳಗಳು. ಪ್ರಯಾಗದಲ್ಲಿ ರುಚಿಕರವಾದ ಉತ್ತರ ಭಾರತೀಯರ ದೈನಂದಿನ ಆಹಾರ ಪೂಡಿ –ಕಚೋಡಿ, ಜಿಲೇಬಿ ಸವಿಯುವಂಥದ್ದು. ಅಲ್ಲಿ ವಿಶೇಷವಾಗಿ ಸಿಗುವ ಥಂಡಾಯಿಯ ಮತ್ತಿನ ಗಮ್ಮತ್ತು ಅಲ್ಲಿ ಹೋಗಿಯೇ ಅನುಭವಿಸಬೇಕು.

ಗಂಗೆ, ಯಮುನೆ ಹಾಗು ಸರಸ್ವತೀ ನದಿಯ ಪವಿತ್ರ ತ್ರಿವೇಣಿ ಸಂಗಮದಲ್ಲಿ ಕುಂಭ ಸ್ನಾನಕ್ಕೆಂದು ಆಗಮಿಸುವ ಅವಿರತ ನಿರಂತರ ಚೈತನ್ಯತೆಯ ವಿಹಂಗಮ ದೃಶ್ಯ ನಮ್ಮ ಭಾರತದ ಅಸ್ಮಿತೆಯನ್ನು, ಅಂತಃಸತ್ವವನ್ನು ಅರಿಯಲು ನಿಮ್ಮ ಜೀವಮಾನದಲ್ಲಿ ಬದುಕು ನಿಮಗೆ ಕೊಟ್ಟ ಏಕೈಕ ದೊಡ್ಡ ದೃಶ್ಯಕಾವ್ಯದ ಉಡುಗೊರೆ. 2025 ರ ಮಹಾ ಕುಂಭ ಮೇಳ, 144 ವರ್ಷದ ಬಳಿಕ ಮತ್ತೆ ಬಂದಿರುವುದು ಈಗಿನ ಪೀಳಿಗೆಯ ಜೀವಿತದ ಅವಧಿಯಲ್ಲಿ ನೋಡಬಹುದಾದ ವಿಶ್ವದ ಅತ್ಯಂದ ದೊಡ್ಡ ಮಜ್ಜನ ಸಂಕ್ರಮಣ. ಸುಮಾರು 40 ಕೋಟಿ ಜನರು ಭಾಗವಹಿಸಲಿರುವ ಒಂದು ತಿಂಗಳಿನ ಮಜ್ಜನ ಜಾತ್ರೆಯಲ್ಲಿ ಪಾಲ್ಗೊಳ್ಳುವ ಪುಳಕ ಅಸದ್ರಶ. ಅವಕಾಶವಿದ್ದರೆ, ಶಕ್ತಿಯಿದ್ದರೆ ಹೋಗಿ ಬನ್ನಿ!

ಮರಗಳು ಕರೆಯುತ್ತಿವೆ!

ಕವಿ ಕಣ

ಮರಗಳು ಕರೆಯುತ್ತಿವೆ ಬನ್ನಿ ಬನ್ನಿ
ತಂಪಾದ ನಮ್ಮ ಮಡಿಲಲ್ಲಿ
ತಲೆಯಿಟ್ಟು ಮಲಗಬನ್ನಿ
ಇಂಪಾದ ಗಾಳಿಯ ರಾಗಕ್ಕೆ
ತಲೆದೂಗಬನ್ನಿ

ಹರಿವ ನದಿಯ ಕಲರವವ ಕೇಳುತ್ತಾ,
ಬಿಸಿಲ ಬೇಗೆಗೆ ಏದುಸಿರು ಬಿಡುತ್ತಾ,
ಹಸಿಯ ತಂಗಾಳಿಗೆ ಮೈಯೊಡ್ಡಿ ನಸುನಗುತ,
ಹುಸಿಯನಾಡದೆ, ಪಿಸುಮಾತಲ್ಲೇ
ನೆಮ್ಮದಿಯ ಜೀವನಕ್ಕೆ
ಬನ್ನಿ ಬನ್ನಿ!

ಕಷ್ಟ ಕಾರ್ಪಣ್ಯಗಳ ಮಾತೇಕೆ ನಿಮಗೆ
ಇಲ್ಲಿರದು ಬೇಸರವು, ಎಲ್ಲಾ ಗೌಣ!
ಹೊಟ್ಟೆಹೊರೆಯುವ ಕಾಯಕವು,
ನಿತ್ಯವಿಧಿ ಎಂದರಿತು, ತಾಳಿ ಮೌನ
ಹೆದರಿಕೆಯ ಮಾತಿಲ್ಲ, ಬೇಧಭಾವಗಳಿಲ್ಲ!
ತರತರದ ಬಳ್ಳಿ, ಮರ ಜೊತೆಗೂಡ ಬನ್ನಿ
ನಾವು ಬದುಕುವೆವು ನಿಮಗಾಗಿ
ನೀಡುವೆವು ಶುದ್ಧಗಾಳಿ ನಿಮಗಾಗಿ
ಜೀವವಾಯುವನ್ನು ಕೊಡುವೆವು ಬನ್ನಿ

ನಿಮ್ಮಂತಲ್ಲ ನಾವು ನೋಡಿ
ನಮ್ಮಂತಲ್ಲ ನೀವು ಕೂಡ
ತಂಪು ಸೀಮೆಯ ಸೊಂಪು ಲೋಕಕೆ
ಬನ್ನಿ ಬನ್ನಿ ಜಯಕಾರವೆನ್ನಿ!

» ಪಿ. ಎನ್. ಕೃಷ್ಣ ಭಟ್

ಹೆಂಡ್ತಿ ಮುಖ ಎಷ್ಟೊತ್ತು ನೋಡ್ತಿ?

ಅಕಸ್ಮಾತ್ ಗಂಡನು ತನ್ನ ಹೆಂಡತಿಯ ಮುಖ ನೋಡುತ್ತಾ ಕುಳಿತರೆ ಹೆಂಡತಿಯೇ ಸುಮ್ಮನಿರುವುದಿಲ್ಲ, 'ನನ್ನ ಮುಖದಲ್ಲೇನು ಕೋತಿ ಕುಣೀತಿದೀಯ? ಎದ್ ಹೋಗಿ ಕೆಲಸ ನೋಡ್ರಿ! ರಾಶಿರಾಶಿ ಪಾತ್ರೆ, ಮಣಗಟ್ಟಲೆ ಬಟ್ಟೆ ಬಿದ್ದಿದೆ. ನನ್ ಮುಖ ನೋಡ್ತಾ ಕೂತ್ರೆ ಕೆಲ್ಸ ಮಾಡೋರು ಯಾರು?' ಎಂದು ಉಗಿದು ಓಡಿಸುತ್ತಾಳೆ.

ಸನ್ಮಾನ್ಯ ಉದ್ಯಮಿಗಳೇ, ಹೆಂಡತಿಯ ಮುಖ ಎಷ್ಟೊತ್ತು ನೋಡ್ತೀರಿ? ಎಂದು ಪ್ರಶ್ನಿಸಿದ್ದೀರಿ. ನಾನು ನನ್ನ ಹೆಂಡತಿಯ ಮುಖ ನೋಡಲಾಗದೆ ಈ ಪತ್ರವನ್ನು ನನ್ನಂತಹ ಹಲವು ಕಾಮ್‌ಚೋರ್ ಎಂದು ನೀವು ಭಾವಿಸಿರುವ ಗಂಡಂದಿರ ಪರವಾಗಿ ಬರೆಯುತ್ತಿದ್ದೇನೆ. ಹೆಂಡತಿಯ ಮುಖ ಏಕೆ

ಲಹರಿ

» ತುರುವೇಕೆರೆ ಪ್ರಸಾದ್

ನೋಡಲಾಗುತ್ತಿಲ್ಲ? ಎಂದು ನೀವು ಕೇಳಬಹುದು. ತಮ್ಮ ಘನವೆತ್ತ ಹೇಳಿಕೆಯಿಂದ ಬಹುತೇಕ ಹೆಂಗಸರಂತೆಯೇ ನನ್ನ ಹೆಂಡತಿಯೂ ಮುಖ ಊದಿಸಿ ಕೂತಿದ್ದಾಳೆ.ನಿಮ್ಮ ಮೇಲಿನ ಸಿಟ್ಟನ್ನು ನನ್ನ ಮೇಲೆ ತೀರಿಸಿ ನಮಗೆ ಎಲ್ ಅಂಡ್ ಟಿ (ಲಟ್ಟಣಿಗೆ ಅಂಡ್ ತುರೆಮಣೆ) ಸೇವೆ ಮಾಡಲು ಹೊರಟಿದ್ದಾಳೆ. ಹಾಗಾಗಿ ಮುಖ ನೋಡುವ ಧೈರ್ಯವಿಲ್ಲ, ಇರಲಿ ಬಿಡಿ, ಅದನ್ನು ಹೇಗೋ ನಿಭಾಯಿಸುತ್ತೇನೆ.

ಹೆಂಡತಿಯೊಬ್ಬಳು ಹತ್ತಿರವಿದ್ದರೆ ನಾನು ಒಬ್ಬ ಸಿಪಾಯಿ ಎಂದು ಕೆ.ಎಸ್.ನರಸಿಂಹಸ್ವಾಮಿಯವರು ಕವಿತೆ ಬರೆದಿದ್ದಾರೆ. ಎಲ್ಲಾ ಗಂಡಂದಿರಿಗೂ ಇದು ಖಂಡಿತಾ ಅನ್ವಯವಾಗುತ್ತದೆ. ಸಿಪಾಯಿಯಾದವನು ಮನೆಗೆಲಸವನ್ನು ನಿರಂತರವಾಗಿ, ಶ್ರಾದ್ಧ ಆಗುವವರೆಗೆ ಶ್ರದ್ಧಾಪೂರ್ವಕವಾಗಿ ಮಾಡುತ್ತಿರಬೇಕೇ ಹೊರತು ಹೆಂಡತಿಯ ಮುಖ ನೋಡಿಕೊಂಡು ಕೂರಲಾಗುವುದಿಲ್ಲ. ಹೆಂಗಸರ ಹದಿಬದೆಯ ಧರ್ಮದಂತೆ ಇದು ಗಂಡಸರ ಹದ್ದುಬಸ್ತು ಮೀರಲಾಗದ ಕರ್ಮ. ಇನ್ನು ನೀವು ಹೇಳುವುದು ಕೇಳಿದರೆ ನರಸಿಂಹಸ್ವಾಮಿಯರು ಹಾಗೂ ದ. ರಾ.ಬೇಂದ್ರೆಯವರು ದಾಂಪತ್ಯಗೀತೆ ಬರೆದಿದ್ದೇ ವೇಸ್ಟು ಎನ್ನುವಂತಾಗಿದೆ.

ಕಾಮಾಕ್ಷಿಯ ಸಂಬೋಧನೆ

ಯಾಕೆಂದರೆ ಸಖೀಗೀತದ ಪ್ರತಿ ಪುಟವೂ ಕೊನೆಯಾಗುವುದು ಕಾಮಾಕ್ಷಿ ಎನ್ನುವ ಸಂಬೋಧನೆಯೊಂದಿಗೆ! ಕಾಮಾಕ್ಷಿ ಎಂದರೆ ಸುಂದರ ಕಂಗಳ ಚೆಲುವೆ ಎಂದು. ಅಂತಹ ಚೆಲುವೆಯ ಮುಖವನ್ನು ನೋಡದೆಯೇ ಅವಳು ಅವನ ಬಯಕೆಗಳಿಗೆ ಅಕ್ಷಿಯಾಗುವುದು ಹೇಗೆ? ನೋಡುವುದೇ ಅಲರ್ಜಿಯಾಗಿ ಅಕ್ಷಿ ಎಂದು ಸೀನಿಬಿಟ್ಟರೆ ದಾಂಪತ್ಯಕ್ಕೆ ಏನಿದೆ ಅರ್ಥ? ಮುಖವೇ ನೋಡದೆ ಸ್ಮೃತಿಗಳ ಬಿಚ್ಚಿ ಹಾಯಿ ಬೀಸುವುದು ಹೇಗೆ? ಬೀಸೋಣ, ಈಸೋಣ ತೇಲೋಣ ಮುತ್ತಿನತವರ್ಮನೆ ಮುಟ್ಟನು ಮುಳಗೋಣ ಬಾ ಎಂದು ಹೆಂಡತಿಗೆ ಆಹ್ವಾನ ನೀಡುವುದು ಹೇಗೆ? ನಿನ್ನ ಮುಖ ನೋಡಿ ಸುಪ್ರಭಾತ ಹಾಡಿ ಮುಂಜಾನೆಯನ್ನು ಸ್ವಾಗತಿಸೋ ಆಸೆ ಎನ್ನುವ ಜಯಂತ್ ಕಾಯ್ಕಿಣಿ ಹಾಡು, ನಿನ್ನ ಮುಖ ನೋಡುವೆ ನನ್ನೇ ನಾನು ಮರೆಯುವೆ ಎಂಬ ಸಿನಿಮಾ ಹಾಡು, ನಮ್ಮ ಕಾಲದ ಮೊಲಿನ್ ಮತ್ತು ಮೇಕಾಲೆಯ ಆಲ್ ಐ ಸೀ ಈಸ್ ಯುವರ್ ಫೇಸ್ ಎನ್ನುವ ಹಾಡು ಇವಕ್ಕೆಲ್ಲಾ ಅರ್ಥವೇ ಇಲ್ಲವಾಗಿಬಿಡುತ್ತದೆ.

ಮುಖ್ಯ ವಿಷಯವೆಂದರೆ ಹೆಂಡತಿಯ ಮುಖವನ್ನು ಎಷ್ಟೊತ್ತು ನೋಡ್ತಾ ಕುಳಿತಿರುತ್ತೀರಿ ? ಎಂಬ ಪ್ರಶ್ನೆಗೆ ಸಂಬಂಧಿಸಿದ್ದು. ನೀವು ಮಾಡೋ ಕೆಲಸ ಬಿಟ್ಟು ಎಷ್ಟೊತ್ತು ನಿಮ್ಮ ಹೆಂಡತಿಯ ಮುಖವನ್ನು ನೋಡುತ್ತಾ ಕುಳಿತಿರುತ್ತೀರೋ ಗೊತ್ತಿಲ್ಲ. ಅಥವಾ ಹಾಗೆ ಮುಖ ನೋಡುತ್ತಾ ಕೂರುವ ಗಂಡ ಹೆಂಡತಿಯರನ್ನು ನೀವು ಎಲ್ಲಿ ಕದ್ದು ನೋಡಿದಿರೋ ಗೊತ್ತಿಲ್ಲ. ಸಾಮಾನ್ಯವಾಗಿ ಗಂಡ ಹೆಂಡತಿಯರು ಹೀಗೆ ಮುಖ ನೋಡುತ್ತಾ ಕೂರುವುದಿಲ್ಲ. ಪ್ರೇಮಿಗಳು ಮಾತ್ರ ಹೀಗೆ ಮುಖ ನೋಡುತ್ತಾ ಕೂರುವುದನ್ನು ನಾವು ಪಾರ್ಕುಗಳಲ್ಲಿ, ಹಾಗೂ ಉಪೇಂದ್ರ ಸಿನಿಮಾಗಳಲ್ಲಿ ನೋಡಿದ್ದೇವೆ. ಅದು ಬಿಟ್ಟರೆ ಗಂಡ ಹೆಂಡತಿಯ ಮುಖ ನೋಡುತ್ತಾ ಕೂರುತ್ತಾರೆನ್ನುವುದು ತೀರಾ ಅಸಂಬದ್ಧ.

ಫೇಸ್‌ಬುಕ್ ನೋಡಲೇ ಸಮಯವಿಲ್ಲ!

ತುಂಬಾ ಜನ ಗಂಡಸರು ಹೆಂಡತಿಯ ಮುಖವನ್ನು ನೋಡಲಾಗದ ಕೆಲಸ ಮಾಡಿಕೊಂಡು ಬಿಟ್ಟಿರುತ್ತಾರೆ. ಇನ್ನು ಕೆಲವು ಹೆಂಡತಿಯರಿಗೆ ಗಂಡನ ಮುಖ ನೋಡುವುದೇ ಅಪಶಕುನ ಎನಿಸುವುದರಿಂದ ಅವರು ಗಂಡನ ಕಡೆ ಮುಖಾರವಿಂದ ಹಾಕುವುದೇ ಇಲ್ಲ. ಇನ್ನು ನೋಡುತ್ತಾ ಕೂರುವುದೆಲ್ಲಿಂದ ಬಂತು? (ತೀರಾ ವಯಸ್ಸಾದ ಮೇಲೆ ಹೆಂಡತಿಗೆ ನಾಲಗೆ ಬಿದ್ದ ಮೇಲೆ, ಗಂಡನಿಗೆ ಕೈಗೆ ಲಕ್ವ ಹೊಡೆದ ಮೇಲೆ ಇದು ನಡೆಯಬಹುದೇನೋ?) ಅದರಲ್ಲೂ ಮೊಬೈಲು ಬಂದ ಮೇಲೆ ಫೇಸ್‌ಬುಕ್ ಪೋಸ್ಟ್ ಹಾಕಲು, ರೀಲ್ಸ್ ನೋಡಲು ಪುರಸೊತ್ತಿಲ್ಲದಿರುವಾಗ ಗಂಡ ಹೆಂಡತಿ ಮುಖ ನೋಡಿಕೊಂಡು ಕೂರುವುದಾದರೂ ಹೇಗೆ? ಹಾಗೊಂದು ವೇಳೆ ಯಾವಾನಾದರೂ ಗಂಡ ಅಕಸ್ಮಾತ್ ಏನೋ ಏಮಾರಿ ಹೆಂಡತಿಯ ಮುಖ ನೋಡುತ್ತಾ ಕುಳಿತರೆ ಹೆಂಡತಿಯೇ ಸುಮ್ಮನಿರುವುದಿಲ್ಲ, 'ನನ್ನ ಮುಖದಲ್ಲೇನು ಕೋತಿ ಕುಣೀತಿದೀಯ? ಎದ್ ಹೋಗಿ ಕೆಲಸ ನೋಡ್ರಿ! ರಾಶಿರಾಶಿ ಪಾತ್ರೆ, ಮಣಗಟ್ಟಲೆ ಬಟ್ಟೆ ಬಿದ್ದಿದೆ. ನನ್ ಮುಖ ನೋಡ್ತಾ ಕೂತ್ರೆ ಕೆಲ್ಸ ಮಾಡೋರು ಯಾರು?' ಎಂದು ಉಗಿದು ಓಡಿಸುತ್ತಾಳೆ. ಹಾಗಾಗಿ ನಿಮ್ಮ ಹೇಳಿಕೆಯನ್ನು ಯಾವ ನಿಜವಾದ ಗಂಡನೂ ಒಪ್ಪಲಾರನು.

ಇನ್ನು ವಾರಕ್ಕೆ 90 ಗಂಟೆಗಳ ಕೆಲಸಕ್ಕೆ ಬರೋಣ. ಕೆಲವು ಸಂಬಳಸಹಿತ ಕೆಲಸಗಳಿರುತ್ತವೆ. ಕೆಲವು ಸಂಬಳರಹಿತ ಕೆಲಸಗಳಿರುತ್ತವೆ. ಸಂಸಾರ ಎಂದ ಮೇಲೆ ಸಂಬಳ ಸಹಿತ ಕೆಲಸಕ್ಕೆ ಕೊಟ್ಟಷ್ಟೇ ಅಥವಾ ಇನ್ನೂ ಸ್ವಲ್ಪ ಹೆಚ್ಚೇ ಮಹತ್ವವನ್ನು ಸಂಬಳ ರಹಿತ ಕೆಲಸಕ್ಕೂ ನೀಡಬೇಕಾಗುತ್ತದೆ. ಹಾಗಿದ್ದರೇ ಕಾಲ ಬರುವುದು. ಕಸ ಗುಡಿಸುವುದು, ಬಟ್ಟೆ ಒಗೆಯುವುದು, ಅಡುಗೆ ಮಾಡುವುದು ಹೀಗೆ ವೈವಿಧ್ಯಮಯ ಕೆಲಸಗಳನ್ನು ಗಂಡಸರು ಲೀಲಾಜಾಲವಾಗಿ ಮಾಡುತ್ತಾರೆ.

ಇದಕ್ಕೆಲ್ಲ ವ್ಯಯಿಸುವ ಗಂಟೆಯನ್ನು, ಮ್ಯಾನ್ ಪವರ್ ಅಂಡ್ ಅವರ್‌ಗಳನ್ನು ಬಯೋಮೆಟ್ರಿಕ್ ಹಾಕಿ ಅಳೆಯಲು ಸಾಧ್ಯವಿಲ್ಲ, ಅದೆಲ್ಲಾ ಹೆಂಡತಿಯ ಬಯ್ಯೋಮೆಟ್ರಿಕ್ ಪ್ರಭಾವದಿಂದ ಆಗುವಂತಹವುಗಳು. ಹೀಗೆ ವರ್ಕ್ ಇನ್ ಆಫೀಸ್, ವರ್ಕ್ ಫ್ರಂ ಹೋಂ ಮತ್ತು ವರ್ಕ್ ಇನ್ ಹೋಮ್ ಇಷ್ಟೂ ಸೇರಿದರೆ ಗಂಡಸರು ಈಗಾಗಲೇ 90 ಗಂಟೆ ಮೀರಿಯೇ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಕನ್ನಡಿಯಲ್ಲಿ ಸ್ವಂತ ಮುಖನೋಡಿಕೊಂಡು ಚೌರ(ಶೇವ್) ಮಾಡಿಕೊಳ್ಳಲೂ ಪುರಸೊತ್ತಿರುವುದಿಲ್ಲ.

ಇನ್ನು ಆಫೀಸಿನಲ್ಲೇ 90 ಗಂಟೆ ಕೆಲಸ ಮಾಡಿದರೆ ಮನೆಗೆಲಸಕ್ಕೆ ತೊಂದರೆಯಾಗಿ ಸಂಸಾರ ಏರುಪೇರಾಗುವ ಲಕ್ಷಣಗಳಿರುತ್ತವೆ. ಮುಖ ನೋಡುವುದು ಹಾಳಾಗಲಿ, ಮುಖ ತಪ್ಪಿಸಿ ಓಡಾಡಬೇಕಾದ ಪರಿಸ್ಥಿತಿ ಬಂದುಬಿಡುತ್ತದೆ. ಇದು ಗಂಡಂದಿರನ್ನು ಮನೆಗೆಲಸಗಳಿಂದ ವಿಮುಖರಾಗಿಸುವ ಸ್ತ್ರೀ ವಿರೋಧಿ ಹುನ್ನಾರ ಎಂದೇ ಶೇ.99 ಹೆಂಗಸರು ಭಾವಿಸಿದ್ದಾರೆ. ಒಂದು ವೇಳೆ ಯಾರಾದರೂ ಲೇಡಿ ಬಾಸು 'ಎಷ್ಟೊತ್ತು ನಿಮ್ಮ ಗಂಡಂದಿರ ಮುಖ ನೋಡ್ಕೊಂಡು ಕೂತಿರ್ತೀರ? ಆಫೀಸಿಗೆ ಬಂದು ಕೆಲಸ ಮಾಡಿ' ಎಂದು ಬಿಟ್ಟರೆ ಗಂಡಸರ ಗತಿಯೇನು? ಗಂಡಂದಿರು ದೂರದಿಂದ ಅಕ್ಕ ಪಕ್ಕದವರ ಹೆಂಡತಿಯ ಮುಖ ನೋಡಿಕೊಂಡು ಕೆಲಸ, ಸ್ವಂತ ಹೆಂಡತಿ ಎರಡನ್ನೂ ಮರೆತು ಕೂರಬೇಕಾಗತ್ತದೆ. ಆಮೇಲೆ ಹೆಂಡತಿಯ ಇನ್ನೊಂದು ಮುಖವನ್ನು ನೋಡಲೇಬೇಕಾಗುತ್ತದೆ.



ಶಂಕರ ಪೂಜಿತೇ

» ಕಾರ್ತಿಕ್ ಕೃಷ್ಣ

ಸಂಕ್ರಾಂತಿ ಹಬ್ಬದ ಸಂಜೆ ಮಗಳಿಗೆ 'ಫಲ ಎರೆಯುವ ಶಾಸ್ತ್ರ' ಮಾಡಬೇಕು ಎಂದು ಮಡದಿ ಹೇಳಿದ್ದೇ, ಕೃಷ್ಣರಾಜ ಮಾರುಕಟ್ಟೆಯಲ್ಲಿ ಬೇಕಾದ ಫಲ-ಪುಷ್ಪಗಳನ್ನು ಕೊಂಡು, ಮರಳಿ ಮನೆಯ ದಾರಿ ಹಿಡಿಯಲು ಅಣಿಯಾಗಿದ್ದೆವು. ಅದಾಗಲೇ ಸಮಯ ಐದೂವರೆಯಾಗಿತ್ತು. ಸಂಜೆಯ ಕಾಫಿ ಶಾಸ್ತ್ರ ಕೂಡ ಸಂಪನ್ನವಾಗಿರಲಿಲ್ಲ.

ಸುತ್ತಲೂ ಕಣ್ಣಾಡಿಸಿದಾಗ ಮಾರುಕಟ್ಟೆಗೆ ಹೊಂದಿಕೊಂಡು, ಮುಖ್ಯ ರಸ್ತೆಗೆ ಮುಖ ಮಾಡಿದ್ದ ಒಂದು ಅಂಗಡಿಯ ಮೇಲೆ ಮೈಸೂರು ಫಿಲ್ಟರ್ ಕಾಫಿ - 10 ರು. ಎಂದು ಬರೆದಿದ್ದ ಬೋರ್ಡು ಕಣ್ಣಿಗೆ ಬಿತ್ತು. ಕಣ್ಣು ಇಷ್ಟಗಲ ಅರಳಿ, ಅಂಗಡಿಯ ಮುಂದೆ ಬಂದು ನಿಂತಾಗಲೇ ಗೊತ್ತಾದದ್ದು, ಅದೊಂದು ಹಳೆಯ ಸಿಡಿ, ಡಿವಿಡಿ, ಟೇಪ್ ರೆಕಾರ್ಡರ್ ರಿಪೇರಿಯ ಅಂಗಡಿಯೆಂದು. ಅದೇ ಅಂಗಡಿಯ ಮೂಲೆಯಲ್ಲಿ ಚಿಕ್ಕ ಸ್ಟೌವ್ ಇಟ್ಟುಕೊಂಡು, ಹಾಲು ಕಾಯಿಸಿ ಫಿಲ್ಟರ್ ಕಾಫಿ ಮಾಡುತ್ತಿದ್ದರು. ಒಂದೊಳ್ಳೆ ಕಾಫಿ ಸವಿಯಲು ದೊಡ್ಡ ಅಂಗಡಿಯೇ ಆಗಿರಬೇಕೆಂದಿಲ್ಲ ಅಲ್ಲವೇ, ಒಟ್ನಲ್ಲಿ ಕಾಫಿ ರುಚಿಯಾಗಿದ್ದರಷ್ಟೇ ಸಾಕು. ಸರಿ, ಎರಡು ಕಪ್ ಕಾಫಿ ಹೇಳಿ ಅಂಗಡಿಯ ಒಳಗೆ ಕಣ್ಣುಹಾಯಿಸುತ್ತಾ ಬೆಂಚಿನ ಮೇಲೆ ಕೂತೆವು.

ಶಂಕರ ಪೂಜಿತೇ ಎಂಬ ಹಾಡನ್ನು ರಿಂಗ್ಟೋನ್ ಆಗಿ ಇಟ್ಟರೂ, ಫೋನ್ ಬಂದಾಗ ಮಾತ್ರ ಗಂಡಸಿನ ದನಿಯೊಂದು, ಕರೆಮಾಡಿದವರ ನಂಬರನ್ನು 98785... ಎಂದು ಓದುತ್ತಿತ್ತೇ ಹೊರತು ಶಂಕರ ಪೂಜಿತೇ ಗೀತೆ ಹೊರಹೊಮ್ಮುತ್ತಿರಲಿಲ್ಲ.

ಸಾಕಷ್ಟು ಸಿಡಿಗಳು ಶಿಲಾಯುಗದ ಪಳಯುಳಿಕೆಯಂತೆ ಶೆಲ್ಫಿನ ಮೇಲೆ ಕೂತಿದ್ದವು. ಹಳೆಯ ಟೇಪ್ ರೆಕಾರ್ಡರೊಂದು ತನ್ನಷ್ಟೇ ಹಳೆಯ ಹಿಂದಿ ಗೀತೆಯೊಂದನ್ನು ಗುನುಗುತ್ತಿತ್ತು. 'ಸಾರ್..ಎಷ್ಟು ವರ್ಷದಿಂದ ಈ ಬಿಸಿನೆಸ್ ನಲ್ಲಿದ್ದೀರ..' ಕಾಫಿ ಕಾಯಿಸುತ್ತಿದ್ದ ಅಂಗಡಿ ಮಾಲೀಕರನ್ನು ಮಾತಿಗೆಳೆದೆ. ವರುಷಗಳನ್ನು ಕೂಡಿಸಿ ಕಳೆದು ನಲುವತ್ತೂರು ವರ್ಷ ಸಾರ್ ಎಂಬ ಉತ್ತರವೊಂದು ಅವರಿಂದ ಬಂದಿತ್ತು. ಟೇಪ್ ರೆಕಾರ್ಡ್‌ಗಳ ಸುವರ್ಣಕಾಲದಿಂದ ಶುರುವಾಗಿ ಅವುಗಳು ಏನೆಂದು ಗೊತ್ತಿಲ್ಲದ ಜನರೇಷನ್ ವರೆಗೆ ಹರಿದುಬಂದಿದ್ದ ಅವರ ಅನುಭವ ನನ್ನಲ್ಲಿ ಅಚ್ಚರಿ ಮೂಡಿಸಿತು. ಹಾಗೆಯೇ ಜನರಿಗೆ ಹೊಸ ಹೊಸ ಸಿಡಿ, ಡಿವಿಡಿಗಳನ್ನು ಮಾರುತ್ತಿದ್ದ ಕೈಗಳಿಂದು ಫಿಲ್ಟರ್ ಕಾಫಿ ಮಾರುತ್ತಿದ್ದದ್ದು ಕಂಡು ನನ್ನನ್ನು ಇನ್ನಷ್ಟು ಕುಗ್ಗಿಸಿತು. ಹಾಲು ಕುದಿಯುತ್ತಿದ್ದಾಗ, ಮಡದಿ ಪಕ್ಕದಲ್ಲಿದ್ದ ಇಂತದ್ದೇ ಅಂಗಡಿಗೆ ಹೋಗಿದ್ದಳು. ಅದು ಅವಳು ಕಾಲೇಜಿನಲ್ಲಿ ಓದುತ್ತಿದ್ದಾಗ ಹಾಡುಗಳ ಸಿಡಿಗಳನ್ನು ಕೊಳ್ಳುತ್ತಿದ್ದ ಅಂಗಡಿಯಂತೆ. ವಾಪಸ್ಸು ಬಂದವಳೇ 'ಕಾರ್ತೀ.. ಒಂದು ರೇಡಿಯೋ ಇದೇ..ನೋಡಿ' ಒಮ್ಮೆ ಎನ್ನುತ್ತಾ ತನ್ನ ಪಾಲಿನ ಕಾಫಿಯನ್ನು ಗಟಗಟನೆ ಹೀರಿ ನನ್ನ ಉತ್ತರಕ್ಕೆ ಕಾದಳು. ಮರುಘಳಿಗೆಯಲ್ಲೇ ಪಕ್ಕದ ಅಂಗಡಿಯಲ್ಲಿದ್ದೆವು.

ರೇಡಿಯೋ ಚೆನ್ನಾಗಿಯೇ ಇತ್ತು. ಅದನ್ನು ಬ್ಲೂಟೂತ್, ರೇಡಿಯೋ, ಯುಎಸ್ಬಿ ಕಂಪ್ಯಾಟಿಬಿಲಿಟಿ ಇರುವ ಪುಟ್ಟ ಸ್ಪೀಕರ್ ಎಂದರೆ ಸರಿಯೇನೋ. ಅಂಗಡಿಯಾತ ನಮಗೆ ಆ ರೇಡಿಯೋವನ್ನು ತೋರಿಸುತ್ತಾ ಪಕ್ಕದಲ್ಲೇ ನಿಂತಿದ್ದ ಒಬ್ಬರು ವಯಸ್ಕರನ್ನೂ ಮಾತನಾಡಿಸುತ್ತಿದ್ದರು. ಹರಿಣಿ ಸುಮ್ಮನೆ ನಿಂತಿದ್ದವಳು, 'ಸಾರ್ ಏನಾದ್ರೂ ಸಮಸ್ಯೆನಾ? ಆಗಿಂದ ಏನೋ ನೋಡ್ತಿದ್ದಿರಲ್ಲಾ' ಎಂದು ಕೇಳಿದಳು. 'ಇವರ ಫೋನ್ ರಿಂಗ್ಟೋನ್ ಸೆಟ್ ಆಗ್ತಿಲ್ಲ ಮೇಡಂ..ಆಗಿಂದ ಟ್ರೈ ಮಾಡ್ತಾ ಇದ್ದೀನಿ' ಎನ್ನುತ್ತಾ ಆ ವಯಸ್ಕರ ಫೋನನ್ನು ಕುಟ್ಟತೊಡಗಿದರು.

ಟಚ್ ಸ್ಕ್ರೀನ್ ಜಮಾನದ ನಂಟೇ ಇಲ್ಲದೆ, ಬದುಕಿನಲ್ಲಿ ಶಾಂತಿ ನೆಲೆಸಿದ್ದ ದಿನಗಳಲ್ಲಿ ನಾವೆಲ್ಲ ಬಳಸುತ್ತಿದ್ದ ಕೀಲಿಮಣೆ ಫೋನದು. 'ಎಲ್ಲಿ ಕೊಡಿ ಒಮ್ಮೆ..ನಾನು ಚೆಕ್ ಮಾಡ್ತೀನಿ' ಎಂದು ಹರಿಣಿ ಹೇಳಿದ್ದೇ ಅಂಗಡಿಯಾತ ಆ ಫೋನನ್ನು ಅವಳ ಕೈಗಿತ್ತ. ಐಟೆಲ್ ಕಂಪನಿಯ ಫೋನದು. ಅದರ ಆಪರೇಟಿಂಗ್ ಸಿಸ್ಟಮ್ ಯಾವುದೋ ಹಳೆಯ ಡಿಸೇಲ್ ಎಂಜಿನನ್ನು ಆಪರೇಟ್ ಮಾಡಿದಷ್ಟೇ ತ್ರಾಸದಾಯಕವೆನಿಸಿದರೂ ಒಂದೆರಡು ನಿಮಿಷಗಳಲ್ಲಿ ಬೆರಳುಗಳು ಅದಕ್ಕೆ ಒಗ್ಗಿಕೊಂಡವು. ತುಂಬಾ ಟೆನ್ಷನ್‌ನಲ್ಲಿದ್ದ ಆ ವಯಸ್ಕರು ಹೇಳಿದ್ದೇನೆಂದರೆ, ಅವರಿಗೆ ಬೇಕಾದ ಶಂಕರ ಪೂಜಿತೆ.. ಎಂಬ ಹಾಡನ್ನು ರಿಂಗ್ಟೋನ್ ಆಗಿ ಇಟ್ಟರೂ, ಫೋನ್ ಬಂದಾಗ ಮಾತ್ರ ಗಂಡಸಿನ ದನಿಯೊಂದು, ಕರೆಮಾಡಿದವರ ನಂಬರನ್ನು 9....8..... ಎಂದು ಓದುತ್ತಿತ್ತೇ ಹೊರತು ಶಂಕರ ಪೂಜಿತೆ ಗೀತೆ ಹೊರಹೊಮ್ಮುತ್ತಿರಲಿಲ್ಲ.

ನಾನೂ ಹರಿಣಿ ಕೈ ಬದಲಾಯಿಸಿಕೊಂಡು, ಫೋನನ್ನು ಜಾಲಾಡಿ, ಯೂಟ್ಯೂಬ್ ನೋಡಿ, ಹೇಗೋ ಆ ಗಂಡಸಿನ ದನಿಯನ್ನು ಹೋಗಲಾಡಿಸಿ ಶಂಕರ ಪೂಜಿತೇ.... ಎಂಬ ಸುಶ್ರಾವ್ಯ ಗೀತೆ ಹೊಮ್ಮುವಂತೆ ಮಾಡಿದಾಗ ಅವರ ಮುಖದಲ್ಲಿ ಹುಟ್ಟಿದ ಆ ನಗುವನ್ನು ಮರೆಯಲಾಸಾಧ್ಯ. ಯಾವ ಕಾರ್ಯ ಸಾಧ್ಯವೇ ಇಲ್ಲವೆಂದು, ಇನ್ನೇನು ಕೈಚೆಲ್ಲಿ ಮನೆಗೆ ಮರಳಿ ಅಣಿಯಾಗುತ್ತಿದ್ದ ಜೀವಕ್ಕೆ ಅದೆಷ್ಟು ನೆಮ್ಮದಿ ಸಿಕ್ಕಿತೋ! ನಮ್ಮನ್ನು ಮನಸಾರೆ ಹರಸಿ, ಅವರು ಮನೆಯ ದಾರಿ ಹಿಡಿದರು. ರೇಡಿಯೋ ಕೊಂಡು ಮನೆಗೆ ಮರಳುವ ಹಾದಿಯಲ್ಲಿ, ಆ ವಯಸ್ಕರ ನಗು ನಮ್ಮ ಜೊತೆಯಾಗಿತ್ತು. ನಮ್ಮಿಬ್ಬರ ಸಂಕ್ರಾತಿ, ಹೀಗೊಂದು ನಗುವಿನ ಹುಟ್ಟಿನಲ್ಲಿ ಸಂಪನ್ನವಾಗಿತ್ತು.

ಕುಂಭಮೇಳದಲ್ಲಿ ಮೊನಾಲಿಸಾ!

ತನ್ನ ಕಣ್ಣುಗಳ ಚೆಲುವಿನಿಂದ, ಮೆಲುಮಾತಿನ ದನಿಯಿಂದ ಜನರ ಗಮನ ಸೆಳೆದು, ಅವರಿಗೆ ರುದ್ರಾಕ್ಷಿ ಸರ, ಸ್ಫಟಿಕ ಮಾಲೆಗಳನ್ನು ಮಾರುತ್ತಿರುವ ಈ ಚೆಲುವೆಯು ಕ್ಯಾಮೆರಾ ಕಣ್ಣಿಗೆ ಸಿಕ್ಕಿದ್ದು ಮಹಾಕುಂಭಮೇಳದಲ್ಲಿ!

» ಎಂ.ಎಸ್.ಹೆಬ್ಬಾರ್

ನಿಜ, ಈಕೆಯ ಹೆಸರು ಮೊನಾಲಿಸಾ! ಆದರೆ, ಹದಿನಾರನೆಯ ಶತಮಾನದ ಪ್ರಖ್ಯಾತ ಪೇಂಟಿಂಗ್‌ನಲ್ಲಿರುವವಳು ಅಲ್ಲ! ಬದಲಿಗೆ, ಈಗ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಓಡಾಡುತ್ತಿರುವ ಹದಿನಾರು ವರ್ಷದ ಯುವತಿ. ಅವಳು ತನ್ನ ತಂದೆ, ತಾಯಿ ಜತೆ ಕುಂಭಮೇಳಕ್ಕೆ ಬಂದು, ತಮ್ಮ ಕುಟುಂಬದ ವೃತ್ತಿಯಾದ ಮಣಿಸರಗಳನ್ನು ಮಾರುತ್ತಿದ್ದಳು. ಕುಂಭಮೇಳಕ್ಕೆ ಬಂದಿದ್ದ ಯು ಟ್ಯೂಬರ್‌ಗಳು, ರೀಲ್ಸ್ ಮಾಡುವವರು ಇವಳನ್ನು ಚಿತ್ರಿಸಿ, ಅಂತರ್ಜಾಲದಲ್ಲಿ ತೇಲಿಬಿಟ್ಟರು.

ಅಷ್ಟೇ; ಒಮ್ಮೆಗೇ ಇವಳ ಚಿತ್ರಗಳು, ಇವಳು ಮಣಿಸರಗಳನ್ನು ಮಾರುವ ದೃಶ್ಯಗಳು ವೈರಲ್ ಆದವು! ಇಂದಿನ ಅಂತರ್ಜಾಲ ಯುಗದಲ್ಲಿ ರಾತ್ರೋರಾತ್ರಿ ಕೆಲವರು ಪ್ರಖ್ಯಾತಿಯನ್ನು ಪಡೆಯುತ್ತಾರಂತೆ! ಈಗ ವೈರಲ್ ಆಗಿರುವ ಮೊನಾಲಿಸಾಳು, ಕುಂಭಮೇಳದಲ್ಲಿ ಪ್ರಖ್ಯಾತಳಾಗಿದ್ದಾಳೆ. ಮೊಬೈಲ್ ಹಿಡಿದ ಯುವಕರು ಇವಳ ಫೋಟೋ ತೆಗೆಯಲು ಕಾತುರರಾಗಿದ್ದಾರೆ; ಇವಳನ್ನು ಅನುಸರಿಸಿ ಹೋಗಿ, ಮಾತಿಗೆಳೆದು, 'ನಿಮ್ಮ ಕಂಗಳು ಬಲು ಚೆಲುವು' ಎಂದು ಹೊಗಳಿ, ವಿಡಿಯೋ ತೆಗೆದಿದ್ದಾರೆ. ಎಷ್ಟರ ಮಟ್ಟಿಗೆ ಎಂದರೆ, 'ಈ ರೀತಿ ಫೋಟೋ ತೆಗೆಯುವವರ ಕಾಟದಿಂದ ತಾನು ರೋಸಿ ಹೋಗಿದ್ದೇನೆ; ಎಲ್ಲರೂ ಫೋಟೋ ತೆಗೆಯುವುದು ನನಗಿಷ್ಟವಿಲ್ಲ' ಎಂದು ಹೇಳಿದ್ದಾಳೆ. ಆಕೆಯ ಈ ಮಾತುಗಳು ಸಹ ವೈರಲ್ ಆಗಿವೆ!



ಕುಂಭಮೇಳ ಎಂದಾಕ್ಷಣ, ಸಾವಿರಾರು ಸಾಧು ಸನ್ಯಾಸಿಯರು, ಆಸ್ತಿಕರು ಭಾಗವಹಿಸುವ ಸ್ಥಳ; ನಮ್ಮ ದೇಶದ ವಿವಿಧ ಭಾಗಗಳಲ್ಲಿ ನಡೆಯುವ ಅರ್ಧ ಕುಂಭಮೇಳ, ಜಾತ್ರೆ, ಸಾಧು ಸಂತರು ಸೇರುವ ಸ್ಥಳ ಮೊದಲಾದ ಜಾಗಗಳಿಗೆ ಹೋಗಿ, ರುದ್ರಾಕ್ಷಿ ಮಾಲೆ, ಸ್ಫಟಿಕ ಮಾಲೆಗಳನ್ನು ಮಾರುವುದು ಮೊನಾಲಿಸಾ ಮತ್ತು ಅವಳ ಕುಟುಂಬದವರ ಕೆಲಸ. ಈ ರೀತಿ ಮಣಿ ಸರಗಳನ್ನು ಮಾರುವ ನೂರಾರು ಮಂದಿ ಈಗ ಪ್ರಯಾಗರಾಜ್‌ನ ಕುಂಭ ಮೇಳದಲ್ಲಿ ಠಿಕಾಣಿ ಹೂಡಿದ್ದಾರೆ; ಕೈಯಲ್ಲಿ ಸರಗಳನ್ನು ಹಿಡಿದು, ಆಸಕ್ತರಿಗೆ ಮಾರುತ್ತಿದ್ದಾರೆ.

ಅವರೆಲ್ಲರ ಪೈಕಿ, ಮೊನಾಲಿಸಾ ಮಾತ್ರ ವೈರಲ್ ಆಗಿದ್ದಾಳೆ! ಏಕೆ? ವಿಡಿಯೋ ಮಾಡಿ, ರೀಲ್ಸ್ ಮಾಡಿ ಅಂತರ್ಜಾಲಕ್ಕೆ ಬಿಟ್ಟವರ ಅಭಿಪ್ರಾಯದಂತೆ, ಆಕೆಯ ಕಂಗಳು ಬಹು ಸುಂದರ! ಮೆಲು ದನಿಯಲ್ಲಿ ಮಾತನಾಡುವ ಶೈಲಿ, ನಸುನಗೆಯಿಂದಲೇ ಪ್ರಶ್ನೆಗಳಿಗೆ ಉತ್ತರಿಸುವ ರೀತಿ, ಆಗಾಗ ತನ್ನ ತಲೆಕೂದಲನ್ನು ಸರಿಸುತ್ತಾ, ನಗುವ ಕಂಗಳಿಂದಲೇ ಮಣಿ ಸರಗಳನ್ನು ಮಾರುವ ಚಾಕಚಕ್ಯತೆ - ಇವೆಲ್ಲವೂ ಮೊನಾಲಿಸಾಳ ವಿಶೇಷತೆ. ಆಕೆ ತನ್ನ ನಗು ಮತ್ತು ಮಾತುಗಳಿಂದಲೇ ಕುಂಭ ಮೇಳಕ್ಕೆ ಬಂದಿರುವವರ ಗಮನ ಸೆಳೆದಿದ್ದಾಳೆ.

ಹದಿನಾರರ ಹರೆಯದ ಈಕೆ, ಹೆಚ್ಚು ಓದಿದವಳಲ್ಲ. ಇಂಗ್ಲಿಷ್‌ನ ಕೆಲವು ಪದಗಳು ಗೊತ್ತು; ಅದರ ಸಹಾಯದಿಂದ ವಿದೇಶಿ ಪ್ರವಾಸಿಗರ ಜತೆ ಇಂಗ್ಲಿಷ್‌ನಲ್ಲಿ ವ್ಯವಹರಿಸಿ ರುದ್ರಾಕ್ಷಿ ಸರದ ವಿಶೇಷತೆಯನ್ನು ವಿವರಿಸಿ, ಅವರಿಗೆ ಸರವನ್ನು ಮಾರಬಲ್ಲಳು! 'ನೀವೇಕೆ ಜಾಸ್ತಿ ವಿದ್ಯಾಭ್ಯಾಸ ಮಾಡಿಲ್ಲ' ಎಂದು ಕೇಳಿದ್ದಕ್ಕೆ 'ಹೆಚ್ಚು ಓದಿದ ಯುವಕರು ತಮ್ಮ ತಂದೆ ತಾಯಿಯರನ್ನು ಊರಲ್ಲೇ ಬಿಟ್ಟು ದೂರದೂರಿಗೆ ಹೊರಟುಹೋಗಿಬಿಡುತ್ತಾರೆ!' ಎಂದುತ್ತರಿಸಿದಳು ಈ ಬಾಲೆ! ಕುಂಭಮೇಳದ ನಾನಾ ವಿಸ್ಮಯಗಳ ನಡುವೆ ಮೊನಾಲಿಸಾ ಎಂಬ ಮಣಿ ಸರ ಮಾರುವ ಹುಡುಗಿಯ ಈ ಉತ್ತರವು ಎಷ್ಟೊಂದು ಅರ್ಥಗರ್ಭಿತ! ಅಲ್ಲವೆ?

(ಚಿತ್ರಕೃಪೆ: ಅಂತರ್ಜಾಲ)

ಸರಕಾರಿ ಕೆಲಸಕ್ಕೆ ಸೇರಲೇ ಅಥವಾ ಪತ್ರಿಕೋದ್ಯಮದ ಹಾದಿ ಹಿಡಿಯಲೇ?

Ask the Editor

● ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಹಣಮಂತ ಕಾಂಬಳೆ, ಬಾಗಲಕೋಟೆ

● **ಭಟ್ರೇ, ನಾನು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಪದವಿ ಪೂರೈಸುವ ಮುನ್ನವೇ ಕೆಸೆಟ್ ಪರೀಕ್ಷೆ ಪಾಸ್ ಮಾಡಿದ್ದೆ. ಈಗ ಮನೆಯ ಪರಿಸ್ಥಿತಿಯಿಂದಾಗಿ ವಾರ್ತಾ ಇಲಾಖೆಯಲ್ಲಿ ಅಪ್ರೆಂಟಿಸ್ ಆಗಿ ಕೆಲಸ ಮಾಡುತ್ತಿದ್ದೇನೆ. ಬರವಣಿಗೆ ಎಂದರೆ ಬಹಳ ಇಷ್ಟ, ಒಳ್ಳೆಯ ಹಿಡಿತವೂ ಇದೆ. ಗುಲ್ಜಾರ್, ರೂಮಿ, ಗಿಬ್ರಾನ್, ಗಾಲಿಬ್, ಕುವೆಂಪು, ತೇಜಸ್ವಿ, ಅಂಬೇಡ್ಕರ್ ಸೇರಿದಂತೆ ಹಲವರ ಬರಹಗಳನ್ನು ಓದಿಕೊಂಡಿದ್ದೇನೆ. ಬರವಣಿಗೆಗೆ ಹಲವು ಕಡೆಯಿಂದ ಅವಕಾಶಗಳು ಬರುತ್ತಿವೆ. ಈಗ ನನ್ನ ಗೊಂದಲ ಏನೆಂದರೆ, ಕೆಸೆಟ್ ಪರೀಕ್ಷೆ ತೇರ್ಗಡೆಯಾದ ಕಾರಣ ನಾನೀಗ ಶಿಕ್ಷಕ ವೃತ್ತಿಗೆ ಹೋಗಲೋ, ಬರವಣಿಗೆಯಲ್ಲೇ ನನ್ನನ್ನು ಗುರುತಿಸಿಕೊಳ್ಳಲೋ ಅಥವಾ ಈ ಹಿಂದೆ ಸ್ಪರ್ಧಾತ್ಮಕ ಪರೀಕ್ಷಾ ತಯಾರಿ ನಡೆಸಿದ್ದ ನಾನು, ದೊಡ್ಡ ಸರಕಾರಿ ಹುದ್ದೆಗಳಿಗೆ ತಯಾರಾಗಲೋ...? ನೀವೇ ಒಂದು ಸಲಹೆ ನೀಡಿ.**

- ಹಣಮಂತ ಅವರೇ, ನಿಮ್ಮ ದ್ವಂದ್ವವನ್ನು ಅರ್ಥ ಮಾಡಿಕೊಳ್ಳಬಹುದು. ಈ ರೀತಿಯ ಗೊಂದಲಗಳನ್ನು ನಾನೂ ಎದುರಿಸಿದ್ದೇನೆ. ನನಗೆ ನಮ್ಮ ತಂದೆ ಎಂಜಿನಿಯರಿಂಗ್ ಓದು ಎಂದು ಬಲವಂತ ಮಾಡುತ್ತಿದ್ದರು. ಎಂಜಿನಿಯರಿಂಗ್ ಸೀಟ್ ಸಿಕ್ಕರೂ ಅನ್ಯ ಕಾರಣಗಳಿಂದ ಅದು ಕೈತಪ್ಪಿ ಹೋಯಿತು. ನಾನು ನಂತರ ಒಲ್ಲದ ಮನಸ್ಸಿನಿಂದ ಜಿಯಾಲಜಿ ಓದಿದೆ. ಪದವಿ ಮುಗಿದ ನಂತರವಾದರೂ ಬೇರೆ ವಿಷಯ ತೆಗೆದುಕೊಳ್ಳಬಹುದಿತ್ತು. ಆದರೂ ಎಮ್ಮೆಸ್ಸಿಯಲ್ಲಿ ಜಿಯಾಲಜಿಯಲ್ಲಿ ತೆಗೆದುಕೊಂಡೆ. ಆದರೆ ವಿಷಯದಲ್ಲಿ ಇದ್ದ ಸ್ವಲ್ಪ ಸ್ವಲ್ಪವೂ ಹೊರಟು ಹೋಗಿತ್ತು. ನನ್ನ ಆಸಕ್ತಿ ಬರವಣಿಗೆ ಮತ್ತು ಪತ್ರಿಕೋದ್ಯಮದ ಕಡೆಗೆ ಇತ್ತು. ಎಮ್ಮೆಸ್ಸಿ ಓದಿದ್ದು ದಂಡವಾಗುತ್ತದಲ್ಲ ಎಂದು ಸ್ನೇಹಿತರು ಹೇಳುತ್ತಿದ್ದರು. ಆದರೆ ನನಗೆ ಒಂದು ದಿನ ಕೂಡ ಕ್ಲಾಸಿಗೆ ಹೋಗುವುದು ಸಾಧ್ಯವಿಲ್ಲ ಎನಿಸುತ್ತಿತ್ತು. 'ಯಾವ ಕಾರಣಕ್ಕೂ ಎಮ್ಮೆಸ್ಸಿ ಬಿಡಬೇಡ, ಬಿಟ್ಟರೆ ಇಲ್ಲಿ ತನಕ ಓದಿದ್ದು ವ್ಯರ್ಥವಾಗುತ್ತದೆ, ಒಂದು ವೇಳೆ ಬಿಟ್ಟರೆ ನಿನಗೆ ಇನ್ನು ಮುಂದೆ ತಿಂಗಳಿಗೆ ಹಣ ಕಳಿಸುವುದಿಲ್ಲ' ಎಂದು ಅಪ್ಪ ಹೇಳಿದರೂ ಕೇಳದೇ, ಒಂದು ದಿನ ಕ್ಲಾಸಿನ ಕಡೆ ಬೆನ್ನು ತಿರುಗಿಸಿಬಿಟ್ಟೆ. ಪತ್ರಿಕೋದ್ಯಮದ ದಾರಿ ನನಗೆ ಸ್ಪಷ್ಟವಾಗಿ ಗೋಚರಿಸುತ್ತಿತ್ತು. ಆ ದಾರಿಯನ್ನು ಹಿಡಿದೆ. ನನ್ನ ಬದುಕು ಬದಲಾಯಿತು.

ಇನ್ನು ನಿಮ್ಮ ವಿಷಯ. ಹಣಮಂತ ಅವರೇ, ಪ್ರತಿಯೊಬ್ಬರಿಗೂ ಒಂದು ಒಳ ಮನಸ್ಸು ಅಥವಾ ಅಂತರಂಗ ಎಂಬುದಿರುತ್ತದೆ. ಅದು ನಮ್ಮನ್ನು ಯಾವತ್ತೂ ತಪ್ಪು ದಾರಿಗೆ ಹೋಗಲು ಬಿಡುವುದಿಲ್ಲ. ಆದರೆ ನಾವು ಅನೇಕ ಸಲ ಒಳಮನಸ್ಸು ಹೇಳುವುದನ್ನು ಕೇಳುವುದಿಲ್ಲ. ಅದು ನಮ್ಮೊಂದಿಗೆ ಮಾತ್ರ ಮಾತಾಡುತ್ತದೆ ಮತ್ತು ಅದು ಯಾವತ್ತೂ ನಮ್ಮ ಪರವಾಗಿ ಮಾತ್ರ ಯೋಚಿಸುತ್ತಿರುತ್ತದೆ. ಅದಕ್ಕೆ ನಮ್ಮ ಹಿತಾಸಕ್ತಿಯೇ ಪರಮೋಚ್ಚ. ನಾನು ದ್ವಂದ್ವದಲ್ಲಿದ್ದಾಗ, ಯಾವತ್ತೂ ನನ್ನ ಒಳಮನಸ್ಸಿಗೆ ಕಿವಿಯಾಗುತ್ತೇನೆ. ಅದು ಯಾವತ್ತೂ ನನ್ನ ದಾರಿ ತಪ್ಪಿಸಿಲ್ಲ. ಸರಿಯಾದ ಮಾರ್ಗವನ್ನು ತೋರಿಸಿದೆ.

ನೀವೂ ಈಗ ಅದನ್ನೇ ಮಾಡಿ. ಬೇರೆಯವರು ಏನೇ ಹೇಳಲಿ, ಪರಿಸ್ಥಿತಿ ಏನೇ ಇರಲಿ. ನಿಮ್ಮ ಒಳಮನಸ್ಸು ಏನು ಹೇಳುತ್ತದೆ ಎಂದು ಕೇಳಿ. ನಿಮ್ಮ ಮುಂದಿನ ಆಯ್ಕೆಯ ಬಗ್ಗೆ ಯಾವುದು ಹೆಚ್ಚು ತೂಗುವುದೋ, ಅದನ್ನೇ ಆಯ್ಕೆ ಮಾಡಿಕೊಳ್ಳಿ. ಯಾವತ್ತೂ ಎರಡು ದಾರಿಗಳಲ್ಲಿ ಏಕಕಾಲಕ್ಕೆ ಸಾಗುವುದು ಸಾಧ್ಯವಿಲ್ಲ. ಒಂದನ್ನು ಆಯ್ಕೆ ಮಾಡಿಕೊಳ್ಳಲೇಬೇಕು. ಅದು ನಿಮ್ಮ ಬದುಕನ್ನು ಸರಿ ದಿಕ್ಕಿಗೆ ಕರೆದುಕೊಂಡು ಹೋಗುವ ದಾರಿಯಾಗಬೇಕು. The best way to find out whether you are on the right path or not is to stop looking at the path. ಬಹುತೇಕ ದಾರಿಗಳು ನಮ್ಮ ಮನಸ್ಸಿನಲ್ಲಿಯೇ ಇರುತ್ತವೆ.

ಇನ್ನೊಂದು ಮಾತನ್ನು ನಿಮಗೆ ಹೇಳುತ್ತೇನೆ - Some beautiful paths can't be discovered without getting lost. ಕೆಲವು ಸಲ ದಾರಿ ತಪ್ಪಿದಾಗಲೇ ನಮಗೆ ಬೇಕಾದ ಸರಿ ದಾರಿಯನ್ನು ಕಂಡುಕೊಳ್ಳಲು ಸಾಧ್ಯ. ಇನ್ನು ಕೆಲವು ಸಲ ನಾವು ಸರಿಯಾದ ಮಾರ್ಗದಲ್ಲಿ ಕ್ರಮಿಸುತ್ತಿದ್ದೇವೆ ಎಂದು ಅನಿಸುತ್ತದೆ. ಆದರೆ ಕ್ರಮಿಸಿದ ಸ್ವಲ್ಪ ಹೊತ್ತಿನಲ್ಲಿ ದಾರಿ ತಪ್ಪಿದ್ದು ಗೊತ್ತಾಗುತ್ತದೆ. ಆಗ ತಕ್ಷಣ ಹಿಂದಕ್ಕೆ ಬಂದು ಸರಿ ದಾರಿಗೆ ಹೊರಳುವುದು ಜಾಣತನ. It feels good to be lost in the right directಶಿಜಿಟ್ಟ! ಈಗ ನಿಮಗೆ ಸರಿ ದಾರಿ ಕಂಡುಕೊಳ್ಳುವುದು ಹೇಗೆ ಎಂಬುದು ಗೊತ್ತಾಗಿರಬಹುದು. ಒಳ್ಳೆಯದಾಗಲಿ.

★★★

ಉಮೇಶ ಬಾವಿಕಟ್ಟಿ, ದಾವಣಗೆರೆ

● **ಸಂಪಾದಕರೇ, ನನಗೆ ನನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ಹತ್ತು ಲಕ್ಷ ರುಪಾಯಿ ಅಗತ್ಯವಿದೆ. ನನ್ನ ಸ್ನೇಹಿತನ ಬಳಿ ನನಗೆ ಸಹಾಯ ಮಾಡುವಷ್ಟು ಹಣವಿದೆ. ಆದರೆ ಅವನಿಗೆ ಹೇಗೆ ಹೇಳುವುದು? ಆತ ನನಗೆ ಸಹಾಯ ಮಾಡುವಂತೆ ಅವನಿಗೆ ಮನವರಿಕೆ ಮಾಡಿಕೊಡುವುದು ಹೇಗೆ? ಸ್ವಲ್ಪ ಐಡಿಯಾ ಕೊಡಿ.**

- ಉಮೇಶ ಅವರೇ, ಮೊದಲನೆಯದಾಗಿ, ನಿಮ್ಮ ವ್ಯವಹಾರದ ಪೂರ್ಣ ಮಾಹಿತಿ ನಿಮಗೆ ಸ್ಪಷ್ಟವಾಗಿರಬೇಕು. ನಿಮ್ಮ ಗೆಳೆಯನೊಂದಿಗೆ ಮಾತನಾಡುವಾಗ, ಹೂಡಿಕೆಯಿಂದ ಏನು ಮಾಡಬಹುದು ಮತ್ತು ಅದರ ಫಲಿತಾಂಶ ಏನು ಎಂಬುದನ್ನು ಮನದಟ್ಟು ಮಾಡಿಕೊಡಬೇಕು. ನಿಮ್ಮ ವ್ಯವಹಾರದ ಉದ್ದೇಶ, ಲಾಭದ ಸಮೀಕ್ಷೆ, ತಂತ್ರಗಳು ಮತ್ತು ಖರ್ಚು ಮಾಪನಗಳು ಎಲ್ಲವೂ ತಯಾರಾಗಿರಬೇಕು. ನೀವು ನಿಮ್ಮ ಸ್ನೇಹಿತನ ನಂಬಿಕೆ ಗೆಲ್ಲಬೇಕು. ನಿಮ್ಮ ಸ್ನೇಹಿತನಿಗೆ ನೀವು ಪ್ರಾಮಾಣಿಕನಾಗಿರುವುದನ್ನು ಮನದಟ್ಟು ಮಾಡಿಕೊಡಬೇಕು. ನೀವು ತೆಗೆದುಕೊಳ್ಳುವ ಹೂಡಿಕೆ ಅವನಿಗೆ ಲಾಭಕರವಾಗಿರಲು ನೀವು ಯಾವ ಕ್ರಮವನ್ನು ಅನುಸರಿಸುತ್ತೀರಿ ಎಂಬುದನ್ನು ವಿವರಿಸಬೇಕು.

ಉದಾಹರಣೆಗೆ, 1. ಹೂಡಿಕೆಯ ಬಂಡವಾಳವನ್ನು ಹೇಗೆ ಬಳಸಲಾಗುತ್ತದೆ? 2. ಅವನಿಗೆ ಎಷ್ಟು ಸಮಯದಲ್ಲಿ ಲಾಭದ ಪ್ರಮಾಣ ತಲುಪುತ್ತದೆ ? 3. ಹೂಡಿಕೆಯ ಸವಾಲುಗಳೇನು ಮತ್ತು ನೀವು ಅವುಗಳನ್ನು ನಿಭಾಯಿಸುವ ಪರಿ ಎಂತು?

ಇವೆಲ್ಲಕ್ಕಿಂತ ಮುಖ್ಯವಾಗಿ, ನಿಮ್ಮ ವ್ಯವಹಾರದಲ್ಲಿ ಹಣ ಹೂಡುವುದರಿಂದ ಅವನಿಗೆ ಏನು ಲಾಭವಾಗುತ್ತದೆ ಎಂಬುದನ್ನು ತಿಳಿಸಿಕೊಡಬೇಕು. ಇದು ಬಹಳ ಮುಖ್ಯ. ಯಾರೂ ತಮ್ಮ ಲಾಭವಿಲ್ಲದೇ ಹಣಕಾಸು ನೆರವು ನೀಡುವುದಿಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ನಿಮ್ಮ ಸ್ನೇಹಿತನಿಗೆ ಹೂಡಿಕೆ ಮೇಲೆ ಲಾಭ ತಲುಪಿಸಲು ನೀವು ನಿಗದಿಪಡಿಸಿರುವ ಸಮಯದ ಆಧಾರವನ್ನು ವಿವರಿಸಬೇಕು. ಸಮಯಕ್ಕೆ ಸರಿಯಾಗಿ ಹಣ ಹಿಂತಿರುಗಿಸಲಾಗುವುದು ಎಂಬುದನ್ನು ಖಚಿತಪಡಿಸಬೇಕು.

ನಿಮ್ಮ ಸ್ನೇಹಿತನಿಗೆ ನಂಬಿಕೆ ಬರುವಂತೆ ಮಾಡಲು ಸರಿಯಾದ ಬಿಸಿನೆಸ್ ಪ್ರಪೋಸಲ್ ಸಿದ್ಧಪಡಿಸುವುದು ಮುಖ್ಯ. ಅದರಲ್ಲಿ ಬಿಸಿನೆಸ್‌ನ ಹೆಸರು ಮತ್ತು ಉದ್ದೇಶ, ಪ್ರಸ್ತುತ ವ್ಯಾಪಾರ ಪರಿಸ್ಥಿತಿ ಮತ್ತು ಆರ್ಥಿಕ ಮಾಹಿತಿ, ನಿಮ್ಮ ಯೋಜನೆ ಯಶಸ್ವಿಯಾಗಲು ನಿಮ್ಮ ತಂತ್ರಗಳು, ಲಾಭದ ನಿರೀಕ್ಷಿತ ಪ್ರಮಾಣ ಮತ್ತು ಅವಧಿ... ಈ ಎಲ್ಲ ಮಾಹಿತಿ ಇರಲಿ. ನೀವು ಈ ಯೋಜನೆಗೆ ಹಣ ಹೂಡಿದರೆ, ಲಾಭದಲ್ಲಿ ನಿಮ್ಮ ಪಾಲು ಈ ಪ್ರಮಾಣದಲ್ಲಿ ಇರುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳಿ.

ಇದಾದ ಬಳಿಕ, ನಿಮ್ಮ ಸ್ನೇಹಿತನಿಗೆ ಯೋಚಿಸಲು ಸ್ವಲ್ಪ ಕಾಲಾವಕಾಶ ಕೊಡಿ. ಅವನ ಮನಸ್ಸಿನ ಅಭಿಪ್ರಾಯವನ್ನು ಆಲಿಸಿ. ಅವನ ಪ್ರಶ್ನೆಗಳಿಗೆ ಉತ್ತರಿಸಿ ಮತ್ತು ಅವನ ಶಂಕೆಗಳನ್ನು ದೂರ ಮಾಡಿ. ಈ ವಿಧಾನವನ್ನು ಅನುಸರಿಸಿದರೆ, ನೀವು ನಿಮ್ಮ ಗೆಳೆಯನಿಗೆ ಹತ್ತು ಲಕ್ಷ ರುಪಾಯಿ ಹೂಡಿಕೆ ಮಾಡಲು ಒಪ್ಪಿಸಲು ಸಾಧ್ಯವಾಗಬಹುದು.

ರವಿಕುಮಾರ, (ಇಮೇಲ್ ಮೂಲಕ)

● **ಭಟ್ರೇ, ನಾನು ಒಬ್ಬಳನ್ನು ಒಂದು ವರ್ಷದಿಂದ ಪ್ರೀತಿಸುತ್ತಿದ್ದೆ. ಆದರೆ ಈಗ ಅವಳ ಸ್ವಭಾವ ಸರಿ ಬರುತ್ತಿಲ್ಲ. ಅವಳನ್ನು ಮದುವೆಯಾಗಿ ನೆಮ್ಮದಿ ಬದುಕು ಸಾಗಿಸುವುದು ಸಾಧ್ಯವಿಲ್ಲ ಎಂಬುದು ಮನವರಿಕೆಯಾಗಿದೆ. ಅವಳೊಂದಿಗೆ ಮುಖ ಕೆಡಿಸಿಕೊಳ್ಳದೇ, ಸಂಬಂಧವನ್ನು ಕಡಿದುಕೊಳ್ಳಬೇಕು ಎಂದು ನಿರ್ಧರಿಸಿದ್ದೇನೆ. ನಾನು ಮಾಡುತ್ತಿರುವುದು ಸರಿಯಾ?**

- ರವಿಕುಮಾರ ಅವರೇ, ಈ ವಿಷಯದಲ್ಲಿ ನೀವು ಪ್ರೀತಿಸುವ ಹುಡುಗಿಯ ಅಭಿಪ್ರಾಯ ಕೇಳದೇ ನಿರ್ಧಾರಕ್ಕೆ ಬರುವುದು ಕಷ್ಟ. ಅವಳದೂ ಇದೇ ಅಭಿಪ್ರಾಯವಾಗಿದ್ದರೆ, ನೀವಿಬ್ಬರೂ ದೂರವಾಗುವುದು ವಿಹಿತ ಎಂದು ಹೇಳಬಹುದಿತ್ತು. ಒಂದು ವೇಳೆ ಆಕೆ, 'ಇಷ್ಟು ದಿನ ನನ್ನ ಜತೆ ಮಜಾ ಮಾಡಿ, ಈಗ ಬೇರೊಬ್ಬಳ ಹಿಂದೆ ಬಿದ್ದಿದ್ದಾನೆ' ಎಂದು ನಿಮ್ಮ ಬಗ್ಗೆ ಪುಕಾರು ಹೇಳಿದರೆ, ಏನು ಮಾಡುವುದು? ಇಂಥ ವಿಷಯದಲ್ಲಿ ಇಬ್ಬರ ಅಭಿಪ್ರಾಯವನ್ನು ಪಡೆಯದೇ ಏಕಪಕ್ಷೀಯ ತೀರ್ಪು ಕೊಡುವುದು ಸಮಂಜಸ ಅಲ್ಲ.

ನೀವು ಪ್ರೀತಿಸಿದ ಹುಡುಗಿಯನ್ನು ಕೇಳಿದರೆ ನಿಮ್ಮ ಬಗ್ಗೆ ದೊಡ್ಡ ಕತೆಯನ್ನೇ ಹೇಳಬಹುದು ಅಥವಾ ಒಳ್ಳೆಯ ಅಭಿಪ್ರಾಯವನ್ನೂ ಕೊಡಬಹುದು. ಆಗ ನಿಮ್ಮ ನಿರ್ಧಾರದಲ್ಲಿಯೇ ಏನೋ ಐಬು ಇದೆ ಎಂದು ಭಾವಿಸಬೇಕಾಗುತ್ತದೆ.

ಇಷ್ಟಾಗಿಯೂ ನಿಮ್ಮ ಮಾತುಗಳನ್ನು ನಿಜ ಎಂದು ನಂಬೋಣ. ಅವಳ ಸ್ವಭಾವ ಸರಿ ಬರುತ್ತಿಲ್ಲ ಮತ್ತು ಅವಳೊಂದಿಗೆ ವಿವಾಹವಾದರೆ ನೆಮ್ಮದಿಯ ದಾಂಪತ್ಯ ಸಾಧ್ಯವಾಗುವುದಿಲ್ಲ ಎಂದು ಅನಿಸಿದರೆ, ಈ ಹಂತದಲ್ಲಿಯೇ ಪರಸ್ಪರ ದೂರವಾಗುವುದರಲ್ಲಿ ತಪ್ಪೇನೂ ಇಲ್ಲ. ಮದುವೆಯಾಗಿ ತಾಪತ್ರಯ, ಹಿಂಸೆ ಅನುಭವಿಸುವ ಬದಲು, ಅದಕ್ಕೂ ಮೊದಲೇ ದೂರವಾಗಿ, ಮುಖ ಕೆಡಿಸಿಕೊಳ್ಳದೇ ಇರುವುದು ವಾಸಿ. ಇದರಲ್ಲಿ ಯಾವ ತಪ್ಪೂ ಇಲ್ಲ. ಅಷ್ಟೇ ಅಲ್ಲ, ಎರಡೂ ಕಡೆಗಳ ಹಿರಿಯರಿಗೆ, ಇದರಿಂದ ಮುಜುಗರವಾಗುವುದು ತಪ್ಪಿದಂತಾಗುತ್ತದೆ. ಅನೇಕರಿಗೆ ಮದುವೆ ನಂತರ ಜ್ಞಾನೋದಯ ಆಗುತ್ತದೆ. ಆದರೆ ನಿಮಗೆ ಅದಕ್ಕಿಂತ ಮೊದಲೇ ಆಗಿದೆ. ಮದುವೆಯಾಗದಿದ್ದರೇನಂತೆ ಪರಸ್ಪರ ಸ್ನೇಹಿತರ ಹಾಗೆ ಇರುವುದು ಸಾಧ್ಯವಿದೆ.

ನಾವು ಪತ್ರಿಕೆಯಲ್ಲಿ ಆಗಾಗ 'ತಪ್ಪಿದ ಭಾರಿ ಅನಾಹುತ' ಅಂತ ಹೆಡ್ ಲೈನ್ ಹಾಕುತ್ತೇವೆ. ನೀವೂ ಹಾಗೆ ಅಂದುಕೊಂಡು ಸಮಾಧಾನಪಟ್ಟುಕೊಳ್ಳಬಹುದು.

★★★

ಜಿ.ಗಂಗಾಧರ, ಬೆಂಗಳೂರು

● **ಭಟ್ರೇ, ನಾನು ಖಾಸಗಿ ಕಂಪನಿಯೊಂದರಲ್ಲಿ ಕಳೆದ ಹದಿನೆಂಟು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಇನ್ನು ಆರು ತಿಂಗಳಲ್ಲಿ ನಿವೃತ್ತನಾಗುತ್ತಿದೇನೆ. ಆದರೆ ನನಗೆ ನಿವೃತ್ತಿಯ ನಂತರವೂ ಕೆಲಸ ಮಾಡುವುದು ಅನಿವಾರ್ಯವಾಗಿದೆ. ನನ್ನ ನೌಕರಿಯನ್ನು ಮುಂದುವರಿಸುವಂತೆ ಬಾಸ್‌ನ ಮನಪರಿವರ್ತನೆ ಮಾಡುವುದು ಹೇಗೆ ? ಈ ವಿಷಯದಲ್ಲಿ ನನಗೆ ನಿಮ್ಮ ಟಿಪ್ಸ್ ಬೇಕು.**

- ಗಂಗಾಧರ ಅವರೇ, ಹೆಂಡತಿಯ ಮನಸ್ಸನ್ನು ಗೆಲ್ಲುವುದು ಹೇಗೆ, ಬಾಸ್ ಮನಸ್ಸನ್ನು ಗೆಲ್ಲುವುದು ಹೇಗೆ ಎಂಬುದನ್ನು ಬೇರೆಯವರಿಂದ ಕಲಿಯಬಾರದು. ಇದಕ್ಕೆ ಬೇರೆಯವರು ಕೊಡುವ ಸಲಹೆಗಳು ಒಮ್ಮೊಮ್ಮೆ ವರ್ಕ್ ಆಗದೇ ಹೋಗಬಹುದು. ಅದನ್ನು ನಾವೇ ಕಂಡುಕೊಳ್ಳಬೇಕು. ಆದರೂ ನೀವು ಕೇಳಿದ್ದೀರಿ ಎಂದು ಹೇಳುತ್ತೇನೆ. ಹದಿನೆಂಟು ವರ್ಷಗಳಾದರೂ ನೀವು ಬಾಸ್‌ನ ಮನಸ್ಸನ್ನು ಅರ್ಥ ಮಾಡಿಕೊಳ್ಳದಿದ್ದರೆ ಹೇಗೆ? ನೀವು ಉತ್ತಮ ಕೆಲಸಗಾರ ಎಂದೆನಿಸಿಕೊಳ್ಳಬೇಕಿದ್ದರೆ, ಬಾಸ್‌ನ ಮನಸ್ಸನ್ನು ಗೆಲ್ಲಬೇಕು. ಅದು ಒಂದು ಅದ್ಭುತ ಕಲೆ. ಆದರೆ ಆ ಕಲೆಯ ರಹಸ್ಯವನ್ನು ನೀವೇ ಕಂಡುಕೊಳ್ಳಬೇಕು. ಇರಲಿ.

ಒಂದೇ ಕಚೇರಿಯಲ್ಲಿ ಇಪ್ಪತ್ತೊಂಬತ್ತು ವರ್ಷ ಕೆಲಸ ಮಾಡಿದ ನನ್ನ ಸ್ನೇಹಿತರೊಬ್ಬರು ತಮ್ಮ ಅನುಭವದ ಮಾತನ್ನು ಹೇಳುತ್ತಿದ್ದರು - 'ನಾನು ಅಷ್ಟು ವರ್ಷ ಒಂದೇ ಆಫೀಸಿನಲ್ಲಿ ಕೆಲಸ ಮಾಡಲು ಸಾಧ್ಯವಾಗಿದ್ದರೆ, ನಾನು ಎರಡು ನಿಯಮಗಳನ್ನು ತಪ್ಪದೇ ಪಾಲಿಸಿದ್ದು. ಮೊದಲನೆಯದು, ಯಾವತ್ತೂ ಬಾಸ್ ಸರಿ ಎಂದು ಭಾವಿಸಿದ್ದು ಮತ್ತು ಎರಡನೆಯದು, ನಾನು ಕೆಲಸ ಮಾಡುತ್ತಿರುವುದು ಬಾಸ್‌ಗಾಗಿ ಎಂದು ತಿಳಿದಿದ್ದು. ಈ ನಿಯಮಪಾಲನೆಯಲ್ಲಿ ಸ್ವಲ್ಪ ಲೋಪವಾದರೂ ನಿಮ್ಮ ಸ್ಥಾನ ಅಲುಗಾಡಬಹುದು. ಏನೇ ಆದರೂ ದೇವರಿದ್ದಾನೆ ಅಂತೀವಲ್ಲ, ಹಾಗೆ ನಾನು ಯಾವತ್ತೂ ಬಾಸ್ ಇದ್ದಾನೆ ಬಿಡು ಅಂತ ಭಾವಿಸಿದ್ದೆ. ಅದರಿಂದ ನನಗೆ ಅಷ್ಟು ವರ್ಷ ಒಂದೇ ಆಫೀಸಿನಲ್ಲಿ ಇರಲು ಸಾಧ್ಯವಾಯಿತು.'

'ಬಾಸ್ ನನ್ನು ಎಂದೂ ತಪ್ಪಾಗಿ ಭಾವಿಸಬಾರದು. ಆತನಿಗೆ ಬುದ್ಧಿಯಿಲ್ಲ ಎಂದು ಹೇಳಲೇಬಾರದು. ಒಂದು ವೇಳೆ ಬುದ್ಧಿ ಇದ್ದಿದ್ದರೆ ನನ್ನನ್ನು ಕೆಲಸಕ್ಕೆ ಇಟ್ಟುಕೊಳ್ಳುತ್ತಿದ್ದನಾ ಎಂದು ಕೇಳಿಕೊಳ್ಳಬೇಕು' ಎಂದು ಆ ಸ್ನೇಹಿತರು ಸದಾ ಚಟಾಕಿ ಹಾರಿಸುತ್ತಿದ್ದರು.

'ಹೈಕಮಾಂಡ್ ಆಶೀರ್ವಾದ ಇರುವ ತನಕ ನನ್ನನ್ನು ಯಾರೂ ಅಲ್ಲಾಡಿಸಲು ಸಾಧ್ಯವಿಲ್ಲ' ಎಂದು ರಾಜಕಾರಣಿಗಳು ಹೇಳುವಂತೆ, 'ಎಲ್ಲಿ ತನಕ ಬಾಸ್ ನ ಆಶೀರ್ವಾದ ಇರುವುದೋ, ಆಫೀಸಿನಲ್ಲಿ ನಿಮ್ಮ ಸ್ಥಾನ ಭದ್ರ' ಎಂಬುದು ಗೊತ್ತಿರಲಿ. ಬಾಸ್‌ನ ವಿಶ್ವಾಸಕ್ಕೆ ಪಾತ್ರವಾಗದೇ ಆಫೀಸಿನಲ್ಲಿ ಹೆಚ್ಚು ಕಾಲ ಇರಲು ಸಾಧ್ಯವಿಲ್ಲ. ಹೈಕಮಾಂಡ್ ವಿಶ್ವಾಸ ಕಳೆದುಕೊಂಡ ನಂತರ ಕಾಂಗ್ರೆಸ್ ಮುಖ್ಯಮಂತ್ರಿ ಅಧಿಕಾರದಲ್ಲಿರಲು ಸಾಧ್ಯವಾ ಹೇಳಿ?

ಬಾಸ್‌ಗೆ ಬೆಣ್ಣೆ ಹಚ್ಚುವುದೊಂದು ಕಲೆ. ನೀವು ಹದಿನೆಂಟು ವರ್ಷ ಇದ್ದೂ ಅದರಲ್ಲಿ ಕರಗತವಾಗಿಲ್ಲ ಅಂತ ಕಾಣುತ್ತದೆ. ಆಗಿದ್ದಿದ್ದರೆ ಒಂದೆರಡು ವರ್ಷ extension ಗಿಟ್ಟಿಸುವುದು ಕಷ್ಟವೇನೂ ಅಲ್ಲ. ಇನ್ನೂ ಕಾಲ ಮಿಂಚಿಲ್ಲ, ಹೇಗಿದ್ದರೂ ಆರು ತಿಂಗಳು ಕಾಲಾವಕಾಶವಿದೆ. ಚೆನ್ನಾಗಿ ಬೆಣ್ಣೆ ಹಚ್ಚುವುದನ್ನು ಅಭ್ಯಾಸ ಮಾಡಿಕೊಳ್ಳಿ.

ಈ ಭೂಮಿ ಮೇಲೆ 'ಕರಗದ ಬೆಣ್ಣೆ ಮತ್ತು ಬೆಣ್ಣೆಗೆ ಕರಗದ ಬಾಸ್' ಇಲ್ಲ! ಹಾಂ... ಗೊತ್ತಿರಲಿ.

★★★

ಸುಧೀರ, ಊರು ಬೇಡ

● **ಭಟ್ರೇ, ನನಗೆ ಪ್ರಾಣಿಗಳ ಹಾಗೆ ಕೂಗುತ್ತಾ ಮನುಷ್ಯರ ಜತೆ ಕಮ್ಯುನಿಕೇಟ್ ಮಾಡಬೇಕು ಎಂಬ ಆಸೆ. ಯಾವ ಪ್ರಾಣಿಯ ಧ್ವನಿಯನ್ನು ಅನುಕರಿಸಿದರೆ ಮನುಷ್ಯರಿಗೆ ಅರ್ಥವಾಗುತ್ತದೆ? ದಯವಿಟ್ಟು ನನ್ನ ಪ್ರಶ್ನೆಯನ್ನು ನಿರ್ಲಕ್ಷಿಸಬೇಡಿ. ಪ್ರಾಣಿಗಳನ್ನು ಕಂಡರೆ ನನಗೆ ಬಹಳ ಇಷ್ಟ. ಮನುಷ್ಯನಾಗಿ ಪ್ರಾಣಿಗಳ ದೃಷ್ಟಿಕೋನದಿಂದ ಮನುಷ್ಯರನ್ನು ಅರ್ಥ ಮಾಡಿಕೊಳ್ಳಲು ಬಯಸುತ್ತೇನೆ. ಪ್ಲೀಸ್ ಸರ್.**

- ಸುಧೀರ ಅವರೇ, ಮನುಷ್ಯ ಉಳಿದೆಲ್ಲ ಪ್ರಾಣಿಗಳಿಗಿಂತ ಭಿನ್ನ, ಯಾಕೆಂದರೆ ಆತ ಮಾತಾಡುತ್ತಾನೆ ಮತ್ತು ಕಮ್ಯುನಿಕೇಟ್ ಮಾಡುತ್ತಾನೆ. ರವಾಂಡದಲ್ಲಿರುವ ಮೌಂಟನ್ ಗೊರಿಲ್ಲಾಗಳಿಗೆ ಮಾತು ಬರುವುದಿಲ್ಲ ಎಂಬುದನ್ನು ಬಿಟ್ಟರೆ, ಅವುಗಳಿಗೂ, ಮನುಷ್ಯರಿಗೂ ಹೆಚ್ಚು ವ್ಯತ್ಯಾಸವಿಲ್ಲ. ಇರಲಿ.

ಮನುಷ್ಯನಿಗೆ ಸಿಕ್ಕಿರುವ ಅತಿ ದೊಡ್ಡ ಅಸ್ತ್ರ ಅಂದರೆ ಮಾತು. ಅದನ್ನು ಬಿಟ್ಟು ನಿಮಗೆ ಪ್ರಾಣಿಗಳ ರೀತಿ ಕಮ್ಯುನಿಕೇಟ್ ಮಾಡುವ ತಲುಬು ಯಾಕೆ ಬಂತೋ ತಿಳಿಯದು. ಪ್ರಾಣಿಗಳ ಮೇಲೆ ಪ್ರೀತಿ ಇದ್ದ ಮಾತ್ರಕ್ಕೆ ಮನುಷ್ಯರೊಂದಿಗೆ ಪ್ರಾಣಿಗಳಂತೆ ಕೂಗಿ ಯಾಕೆ ವ್ಯವಹರಿಸಬೇಕು? ಅರ್ಥವಾಗುತ್ತಿಲ್ಲ. ಪ್ರಾಣಿಗಳ ಹಾಗೆ ಧ್ವನಿ ಅನುಕರಿಸಿದರೆ, ನೀವು ಹೆಚ್ಚೆಂದರೆ ಒಬ್ಬ ಒಳ್ಳೆಯ ಮಿಮಿಕ್ರಿ ಆರ್ಟಿಸ್ಟ್ ಎಂದು ಕರೆಯಿಸಿಕೊಳ್ಳಬಹುದು. ಆಗಲೂ ನಿಮಗೆ ಪ್ರಾಣಿಗಳ ಬಗ್ಗೆ ಅನುಕಂಪವಿದೆ ಎಂದು ಯಾರೂ ಹೇಳುವುದಿಲ್ಲ. ನಗುವವರ ಮುಂದೆ ಎಡವಿ ಬೀಳುತ್ತೀರಿ ಅಷ್ಟೇ.

ಅಷ್ಟಾಗಿಯೂ ನೀವು ಕೇಳಿದ್ದಕ್ಕೆ ಹೇಳುವೆ. ಯಾವ ಪ್ರಾಣಿಯ ಧ್ವನಿಯನ್ನು ಅನುಕರಿಸಿದರೆ ಮನುಷ್ಯರಿಗೆ ಅರ್ಥವಾಗುತ್ತದೆ ಎಂದು ಕೇಳಿದ್ದೀರಿ. ಕತ್ತೆಯ ಧ್ವನಿಯನ್ನು ಅನುಕರಿಸಿದರೆ ಮನುಷ್ಯರಿಗೆ ಸುಲಭವಾಗಿ ಗೊತ್ತಾದೀತು. ಅದು ಸಾಧ್ಯವಾಗದಿದ್ದರೆ ಮಮತಾ ಬ್ಯಾನರ್ಜಿ, ಕೇಜ್ರಿವಾಲ ಅವರ ಧ್ವನಿಯನ್ನು ಅನುಕರಿಸಿದರೂ ಸಾಕು. ಯಾವುದೋ ಪ್ರಾಣಿ ಮಾತಾಡಿದಂತೆ ಕೇಳಿಸುತ್ತದೆ.